ಕೆಂದಾವರೆ

(ಕಂದಾವರ ರಘುರಾಮ ಶೆಟ್ಟಿ ಜೀವನ – ಸಾಧನೆ – ಚಿಂತನೆ)



ಪ್ರಕಾಶಕರು :

ಕಂದಾವರ ರಘುರಾಮ ಶೆಟ್ಟಿ ಅಭಿನಂದನಾ ಸಮಿತಿ, ಬಸ್ರೂರು

ಕೆಂದಾವರೆ

(ಕಂದಾವರ ರಘುರಾಮ ಶೆಟ್ಟಿಯವರ ಜೀವನ, ಸಾಧನೆ, ಚಿಂತನೆ)

ಪ್ರಧಾನ ಸಂಪಾದಕರು :

ಶ್ರೀ ತಾರಾನಾಥ ವರ್ಕಾಡಿ

ಪ್ರಕಾಶಕರು :

ಕಂದಾವರ ರಘುರಾಮ ಶೆಟ್ಟಿ ಅಭಿನಂದನಾ ಸಮಿತಿ,

ಬಸ್ರೂರು

"Kendavare" A collection of Articles by various authors dedicated to Sri Kandavara Raghurama Shetty Published by Kandavara Raghurama Shetty Abhinandana Samithi, Basrur, Edited by: Sri Taranatha, Vorkady

ಮೊದಲ ಮುದ್ರಣ : 2015

ಪ್ರತಿಗಳು : 500

ಪುಟಗಳು : 12 + 251

ಡಿ.ಟಿ.ಪಿ. ಮತ್ತು
ರಕ್ಷಾಪುಟ ವಿನ್ಯಾಸ : ಶ್ರೀನಿಧಿ ಗ್ರಾಫಿಕ್ಸ್, ಬಸ್ರೂರು
ವರ್ಣಚಿತ್ರಗಳು : ಸಂಗ್ರಹ
ಮುದ್ರಣ : ನವೀನ್ ಆಫ್‌ಸೆಟ್ ಪ್ರಿಂಟರ್ಸ್,
"ಸಮೃದ್ಧಿ" ಪಂಚಾಯತ್ ರಸ್ತೆ, ಬಸ್ರೂರು




ಕಂದಾವರ ಕುಂಜ್ಞಾಡಿಮನೆ
ಶ್ರೀ ಗೋಪಾಲಕೃಷ್ಣ ದೇವರು

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ
ಪೂಜ್ಯ ಡಾ। ಡಿ. ವೀರೇಂದ್ರ ಹೆಗ್ಗಡೆಯವರ
ಪೂರ್ಣಾಶೀರ್ವಾದದೊಂದಿಗೆ



"ತೀರ್ಥರೂಪರು"



ತಂದೆಯವರಾದ ಕರ್ಕಿ ಸದಿಯಣ್ಣ ಶೆಟ್ಟಿಯವರು


“ಗುರುಭ್ಯೋ ನಮಃ”



ಗುರುಗಳಾದ ಬಸ್ರೂರು ರಮಾನಾಥ ವೈ. ನಾಯಕ್



ಶ್ರೀ ಕಂದಾವರ ರಘುರಾಮ ಶೆಟ್ಟಿ ಮತ್ತು ಶ್ರೀಮತಿ ದೇವಕಿ ಶೆಟ್ಟಿ



ಕಂದಾವರ ದಂಪತಿಗಳು, ಮಕ್ಕಳು, ಮೊಮ್ಮಕ್ಕಳು

ಪರಿವಿಡಿ

ಸಂಪಾದಕೀಯ

ಯಕ್ಷಕವಿ ಕಂದಾವರ ರಘುರಾಮ ಶೆಟ್ಟಿ ಅವರು ಬಹುಮುಖ ಪ್ರತಿಭೆಯ ಶ್ರೇಷ್ಠ ಪ್ರಸಂಗಕರ್ತ. ಬಡಗಿನ ಡೇರೆಮೇಳಗಳಿಗೆ ಪ್ರತೀ ವರುಷವೂ ಹೊಸ ಹೊಸ ಪ್ರಸಂಗಗಳನ್ನು ಸೃಷ್ಟಿಸುತ್ತಿದ್ದ ಸೃಜನಶೀಲ ಕವಿ. ಪ್ರತೀ ವರುಷವೂ ಇವರ ಪ್ರಸಂಗಗಳು ಬಹುಸಂಖ್ಯೆಯಲ್ಲಿ ಪ್ರದರ್ಶನಗೊಂಡು ಜನಪ್ರಿಯತೆ ಗಳಿಸುವುದು ಕಂದಾವರದವರ ಸೃಷ್ಟಿಶೀಲತೆಗೆ ಸಾಕ್ಷಿ. ಕೇವಲ ಕಾಲ್ಪನಿಕ ಪ್ರಸಂಗಗಳನ್ನು ರಚಿಸಿ ಹೆಸರು ಗಳಿಸಿದವರು ಕಂದಾವರದವರಲ್ಲ. ಪುರಾಣ ಕಥೆಗಳಿಗೂ ಹೊಸ ರೂಪ ಕೊಟ್ಟು ಪ್ರಸಂಗ ರಚಿಸಿದವರಿವರು. ಸಾಮಾನ್ಯ ಪ್ರೇಕ್ಷಕನೂ ಆಸ್ವಾದಿಸಿ ಖುಷಿ ಪಡುವಂತಹ ಕೆಲವು ಪೌರಾಣಿಕ ಪ್ರಸಂಗಗಳನ್ನೂ ಇವರು ಬರೆದಿದ್ದಾರೆ. ಪೌರಾಣಿಕ ಪ್ರಸಂಗಗಳು ಯಾರಿಗೆಬೇಕು ಎಂಬ ಕಾಲದಲ್ಲೂ ಎಲ್ಲರಿಗೂ ಬೇಕಾಗುವಂತೆ ಪುರಾಣ ಪ್ರಸಂಗ ಬರೆದಿದ್ದಾರೆ.

ಪ್ರಖರ ಪ್ರಸಂಗಗಳಿಗೆ ಹೆಸರಾದ ಕಂದಾವರ ರಘುರಾಮ ಶೆಟ್ಟರು ನಿಜಜೀವನದಲ್ಲಿ ತುಂಬಾ ಮುಗ್ಧರು. ಸಾತ್ವಿಕ ಪ್ರವೃತ್ತಿಯವರಾದ ಇವರ ವ್ಯಕ್ತಿತ್ವ ಬಹಳ ಉತ್ಕೃಷ್ಟವಾದುದು. ನಡೆ–ನುಡಿಗಳಲ್ಲಿ ಸರಳತೆ–ನಿರಾಡಂಬರ ಇವರಲ್ಲಿ ಎದ್ದು ತೋರುವ ಗುಣ. ಸಾತ್ವಿಕತೆಯಿಂದಲೇ ಸರ್ವರ ಹೃದಯ ಗೆದ್ದ ಕಂದಾವರದವರು ಆಪ್ತ ವಲಯದವರಿಗೆ ನೆಚ್ಚಿನ ರಘುಮಾಸ್ಟ್ರು. ಆದುದರಿಂದಲೇ ಮಾಸ್ಟ್ರಿಗೊಂದು ಸಂಮಾನ ಮಾಡುವ ಎಂದಾಗ ಎಲ್ಲರೂ ಎಲ್ಲಿಲ್ಲದ ಉತ್ಸಾಹದಿಂದ ಮುಂದೆ ಬಂದಿದ್ದಾರೆ. ಅವರ ಅಭಿಮಾನಿಗಳ, ಬಂಧುಗಳ, ನಾಡ ನಾಗರಿಕರ ಪ್ರೀತಿ–ಗೌರವಗಳ ದ್ಯೋತಕವಾಗಿ ಮೂಡಿಬಂದ ಅಭಿನಂದನಾ ಗ್ರಂಥವೇ ಈ ಕೆಂದಾವರೆ.

ನಾನಿಲ್ಲಿ .ನಿಮಿತ್ತ ಮಾತ್ರ. ಕಂದಾವರದವರ ಆಪ್ತರ ಅಕ್ಷರಮೇಳದಿಂದ 'ಕೆಂದಾವರೆ' ಸೊಗಸಾಗಿ ಅರಳಿ ನಿಂತಿದೆ. ಸಾಧಾರಣ ಐದಾರು ದಶಕಗಳ ಕಲಾಸೇವೆಗೆ ಸಂದ ಸರಿಯಾದ ಗೌರವವಿದು. ಪ್ರಸಂಗ ಬರೆಯುತ್ತಾ, ತಾಳಮದ್ದಳೆಗಳಲ್ಲಿ ಅರ್ಥ ಹೇಳುತ್ತಾ, ಬರಹ–ಭಾಷಣಗಳಲ್ಲಿ ಭಾಗವಹಿಸುತ್ತಾ ನಿದ್ದೆ ಬಿಟ್ಟು ಆಟಗಳನ್ನು ನೋಡುತ್ತಾ ದೂರದೂರ ತಿರುಗಾಟ ಮಾಡಿ ಯಕ್ಷಲೋಕ ವಿಹಾರದಲ್ಲೇ ಮೂರ್ಲೋಕಗಳ

ವಿಹಾರದ ಸುಖವನ್ನು ಅನುಭವಿಸುತ್ತಾ ಸಾರ್ಥಕ ಎಂಭತ್ತು ಸಂವತ್ಸರಗಳ ಸುದೀರ್ಘ ಜೀವನ ಯಾತ್ರೆಯ ಪಯಣಿಗರಾಗಿರುವ ಆ ಹಿರಿಯ ಜೀವಕ್ಕೆ ಕಲಾಭಿಮಾನಿಗಳ ಈ ಅಕ್ಷರ ಕಾಣಿಕೆ ಖಂಡಿತಾ ಅರ್ಥಪೂರ್ಣವಾಗಿದೆ.

ಕಂದಾವರದವರ ಬದುಕು ಬರಹಗಳನ್ನು ತೆರೆದಿಡುವ ಲೇಖನಗಳು; ಅವರ ಆತ್ಮಕಥನ ಮುಂತಾದವುಗಳಿಂದ ಸಮೃದ್ಧವಾಗಿರುವ ಈ ಅಭಿನಂದನಾ ಗ್ರಂಥ ಅಧ್ಯಯನಶೀಲರಿಗೆ ಆಕರದಂತಿದೆ. ಇಂತಹ ಒಂದು ಸಾರಸ್ವತ ಸಂಪುಟಕ್ಕೆ ನನ್ನನ್ನು ಸಂಪಾದಕನನ್ನಾಗಿಸಿದ ಶ್ರೀ ಕಂದಾವರ ರಘುರಾಮ ಶೆಟ್ಟಿ ಅಭಿನಂದನಾ ಸಮಿತಿಯ ಅಧ್ಯಕ್ಷರಿಗೂ ಸರ್ವ ಪದಾಧಿಕಾರಿಗಳಿಗೂ ನಾನು ಆಭಾರಿಯಾಗಿದ್ದೇನೆ. ನನ್ನ ನಿಡುಗಾಲದ ಹಿರಿಯ ಮಿತ್ರರೂ ಪೂಜ್ಯರು ಆದ ಕಂದಾವರದವರ ಸ್ನೇಹ ಸಂಬಂಧ ಅಕ್ಷರ ರೂಪದಲ್ಲಿ ಅಮರವಾದುದಕ್ಕೆ ಆನಂದದಿಂದ ಬೀಗುತ್ತೇನೆ.

ಪ್ರೀತಿಯಿಂದ ಲೇಖನಗಳನ್ನು ಕಳುಹಿಸಿ ಸಹಕರಿಸಿದ ಕಂದಾವರದವರ ಹಿತೈಷಿ ಬಂಧುಗಳಿಗೂ ಅಂದವಾಗಿ ಕ್ಲಪ್ತ ಸಮಯಕ್ಕೆ ಮುದ್ರಿಸಿಕೊಟ್ಟು ಉಪಕರಿಸಿದ ಬಸ್ರೂರು ನವೀನ್ ಆಫ್‌ಸೆಟ್ ಪ್ರಿಂಟರ್ಸ್‌ನ ಮ್ಹಾಲಕರಾದ ಸುರೇಂದ್ರ ಕಿಣಿಯವರಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ಹಾರ್ದಿಕ ಕೃತಜ್ಞತೆಗಳು. ಹಂಸಕ್ಷೀರ ನ್ಯಾಯದಂತೆ ಈ ಹೊತ್ತಗೆಯನ್ನು ಓದಬೇಕೆಂದು ಪ್ರಾರ್ಥಿಸುತ್ತಾ, ಕಂದಾವರದವರ ಕಾವ್ಯ ಪ್ರತಿಭಾ ವಿಲಾಸ ಅವರ ಪೀಳಿಗೆಯಲ್ಲೂ ಹರಿದು ಬರಲಿ ಎಂದು ಹಾರೈಸುತ್ತಾ ಐಶ್ವರ್ಯ, ಆರೋಗ್ಯ, ಸೌಭಾಗ್ಯಗಳಿಂದ ನೂರ್ಕಾಲ ಬಾಳುತ್ತಾ ಇನ್ನೂ ಹೆಚ್ಚಿನ ಪ್ರಸಂಗ ಸಾಹಿತ್ಯಗಳನ್ನು ಕಂದಾವರದವರು ರಚಿಸುವಂತಾಗಲಿ ಎಂದು ಶ್ರೀ ದೇವರಲ್ಲಿ ಪ್ರಾರ್ಥಿಸುತ್ತಾ ಧನ್ಯತೆಯ ಸಂತೋಷದಿಂದ ವಿರಮಿಸುತ್ತೇನೆ.

– ತಾರಾನಾಥ ವರ್ಕಾಡಿ

ಸ್ವಗತಕ್ಕೆ ಸ್ವಾಗತ

ಆತ್ಮೀಯ ಬಂಧುಗಳೇ,

ನನ್ನ ಕುರಿತಾಗಿ ಅಭಿನಂದನಾ ಗ್ರಂಥ ಸಿದ್ಧಗೊಳ್ಳುವ ಸಂದರ್ಭದಲ್ಲಿ ಪ್ರಧಾನ ಸಂಪಾದಕರಾದ ತಾರಾನಾಥ ವರ್ಕಾಡಿಯವರು ನನ್ನಿಂದ ನನ್ನ ಆತ್ಮ ಕಥನವನ್ನು ಬಯಸಿದರು. ಅದು ಅನಿವಾರ್ಯವೇ ಎಂದು ಕೇಳಿಕೊಂಡಾಗ ಸಕಾರಣ ನೀಡಿ ಸಮರ್ಥಿಸಿಕೊಂಡರು. ಹೀಗಾಗಿ ಬರೆಯುಲು ಒಪ್ಪಿಕೊಳ್ಳಲೇ ಬೇಕಾಯಿತು. ಆದರೆ ೮೦ರ ಇಳಿವಯಸ್ಸಿನಲ್ಲಿರುವ ನಾನು ಸಹಜವಾಗಿಯೇ ಮರೆವೆಗೆ ಒಳಗಾಗಿದ್ದೇನೆ. ಆತ್ಮಕಥನವೆಂದರೆ ಬಾಲ್ಯದಿಂದ ಇದು ತನಕದ ವೃತ್ತಾಂತ ಒಳಗೊಳ್ಳ ಬೇಕಾಗಿದೆ. ಆದರೆ ಇದರಲ್ಲಿ ಬರಲೇಬೇಕಾದ ಎಷ್ಟೋ ವಿಚಾರಗಳು ಬಾರದಿರಬಹುದು. ಅದೆಷ್ಟೋ ಅನಗತ್ಯ ವಿಚಾರಗಳು ನುಸುಳಿರಬಹುದು. ತೋಚಿದಷ್ಟು ಗೀಚಿದ್ದೇನೆ. ಹಂಸಕ್ಷೀರನ್ಯಾಯದಂತೆ ನೀವಿದನ್ನು ಸ್ವೀಕರಿಸಬೇಕಾಗಿ ವಿನಯದಿಂದ ವಿನಂತಿಸಿಕೊಳ್ಳುತ್ತೇನೆ.

ನನ್ನ ಕಲಿಕೆ ಬಹಳ ಕಷ್ಟದಿಂದಲೇ ಸಾಗಿತ್ತು. ಆದರೆ ನನಗಿಷ್ಟವಾದ ವೃತ್ತಿ ನನಗೆ ದೊರಕಿತ್ತು. ಸಾಹಿತ್ಯ ಕಲೆಗಳು ಚಿಕ್ಕಂದಿನಲ್ಲೇ ನನ್ನನ್ನು ಆವರಿಸಿದ್ದುವು. ಆತ್ಮಾನಂದಕ್ಕಾಗಿ ಅವುಗಳನ್ನು ಅಪ್ಪಿಕೊಂಡಿದ್ದೇನೆ. ಶ್ರದ್ಧೆಯಿಂದ ಪ್ರಾಮಾಣಿಕವಾಗಿ ಸಾಗಿದ್ದೇನೆ. ನಿಮ್ಮೆಲ್ಲರ ಪ್ರೀತಿ ವಿಶ್ವಾಸದಿಂದ ಧನ್ಯತೆಯನ್ನು ಹೊಂದಿದ್ದೇನೆ. ಮುಂದಕ್ಕೂ ಕೂಡಾ ನಿಮ್ಮ ಸಲಹೆ, ಸಹಕಾರ ಬಯಸುತ್ತೇನೆ. ಆತ್ಮಕಥನವನ್ನು ಸ್ವಗತವೆಂದು ಕರೆದಿದ್ದೇನೆ. ಸ್ವಗತ ನಿಮ್ಮ ಮುಂದಿದೆ. ಓದಲು ಸ್ವಾಗತ ನೀಡುತಿದ್ದೇನೆ. ಇನ್ನೇಕೆ ತಡ................

ಇಂತು

ಎಂದೆಂದೂ ನಿಮ್ಮವನೇ ಆದ

ಕಂದಾವರ ರಘುರಾಮ ಶೆಟ್ಟಿ

ಸ್ವಗತ

1. ಕಲಿಕೆಯ ಹಾದಿಯಲ್ಲಿ

"ತಾಯಿಗಿಂತ ಬಂಧುವಿಲ್ಲ ; ಉಪ್ಪಿಗಿಂತ ರುಚಿಯಿಲ್ಲ" ಎಂಬುದು ಗಾದೆಯ ಮಾತಾದರೂ ಅದು ವೇದಕ್ಕೆ ಸಮನಾದುದು. ಒಂಬತ್ತು ತಿಂಗಳು ಹೊಟ್ಟೆಯಲ್ಲಿ ಹೊತ್ತು ಅನಂತರ ಅಸಾಧ್ಯ ಪ್ರಸವವೇದನೆಯಿಂದ ಹೆತ್ತು, ಕಾಲಕಾಲಕ್ಕೆ ಬೇಕಾದ ತುತ್ತನ್ನಿತ್ತು, ಹಗಲಿರುಳೆನ್ನದೆ ನಿದ್ರಾಹಾರ ತೊರೆದು ಕಾಹಿಲೆ, ಕಸಾಲೆಗಳಿಂದ ತನ್ನ ಮಗುವನ್ನು ಕಾಪಾಡಿಕೊಳ್ಳುವ ತಾಯಿಯ ಬೇನೆ, ಬೇಸರಿಕೆ ವರ್ಣಿಸಲಸಾಧ್ಯವಾದುದು. ಇದು ಎಲ್ಲಾ ತಾಯಂದಿರಿಗೂ ಅನ್ವಯಿಸುವ ಮಾತಾಗಿದೆ. ಆದರೆ ನನ್ನ ತಾಯಿ ಇಷ್ಟಕ್ಕೇ ಸೀಮಿತಳಾದವಳಲ್ಲ. ತನ್ನ ಈ ಘನತರವಾದ ಜವಾಬ್ದಾರಿಯೊಂದಿಗೆ ತನ್ನ ಕಂದಮ್ಮನ ವಿದ್ಯೆ ಹಾಗೂ ಉದ್ಯೋಗದ ಕಡೆಗೂ ಅತೀವ ಕಾಳಜಿವಹಿಸಿ ಶ್ರಮ ಪಟ್ಟಾಕೆ ಹಾಗಾಗಿ ಅವಳು ನನ್ನ ಪಾಲಿಗೆ ಕೇವಲ ತಾಯಿ ಮಾತ್ರವಾಗಿರದೆ "ಮಹಾತಾಯಿ" ಯಾಗಿದ್ದಾಳೆ.

ನಾನು ಹೊಟ್ಟೆಯಲ್ಲಿರುವಾಗಲೇ ಆಕೆಯ ಸಂಕಟ ಆರಂಭವಾಗಿತ್ತು. ಕಾರಣ ನನಗಿಂತ ಮೊದಲು ಎರಡು ಮಕ್ಕಳನ್ನು ಹೆತ್ತ ಒಂದೆರಡು ತಿಂಗಳುಗಳಲ್ಲೇ ಮಣ್ಣಿಗಿಕ್ಕಿ ಕಣ್ಣೀರು ಸುರಿಸಿದ್ದಾಳೆ. "ಎರಡಾದದ್ದು ಮೂರಾದೀತು" ಎಂಬ ಗಾದೆಯ ಮಾತು ನೆನಪಾದಾಗಲೆಲ್ಲಾ ತನಗೂ ಹಾಗಾದೀತೇ? ಎಂಬ ಭಯ ಒಂದು ಕಡೆಯಾದರೆ ಇದಾದರೂ ಬದುಕಿ ಉಳಿದು ತನ್ನ ತಾಯ್ತನವನ್ನು ಸಾರ್ಥಕ ಪಡಿಸೀತೆ ? ಎಂಬ ಭರವಸೆ ಇನ್ನೊಂದು ಕಡೆ. ಹೀಗೆ ಭಯ, ಭರವಸೆಗಳ ತೂಗುಯ್ಯಾಲೆಯಲ್ಲಿ ಒಂಬತ್ತು ತಿಂಗಳು ಕಳೆದು ಹೆರಿಗೆಯ ದಿನ ಸಮೀಪಿಸುತ್ತಿರುವಾಗ ತನ್ನ ಅಕ್ಕನ ಮೂರನೇ ಮಗುವನ್ನು ಉಳಿಸಿಕೊಂಡ ಪವಾಡ ಸದೃಶವಾದ "ನೆತ್ತರ ಕೊಡಿಗೆ" ಎಂಬ ಆಚರಣೆಯ ವಿಷಯ ತಿಳಿದು ದೂರದಲ್ಲೊಂದು ಆಶಾಕಿರಣ ಗೋಚರಿಸಿದಂತಾಗಿ, ಒಂದು ದಿನ ರಾತ್ರಿ ಆ ವಿಷಯದ ಕುರಿತು ತನ್ನ ಗಂಡನೊಡನೆ ಪ್ರಸ್ತಾಪಿಸುತ್ತಾಳೆ. ಅವರಿಗೂ ಕೂಡಾ ಅದರ ಕುರಿತು ಭರವಸೆ ಮೂಡಿ ಸಮ್ಮತಿಸುತ್ತಾರೆ.

ಕ್ರಿ.ಶ. 1936 ನವಂಬರ 15ನೇ ತಾರೀಕಿಗೆ ಸಲುವ ಧಾತ್ರನಾಮ ಸಂವತ್ಸರದ ತುಲಾ ಮಾಸದ ಹುಣ್ಣಿಮೆಯ ರವಿವಾರ ಸೂರ್ಯೋದಯಕ್ಕೆ ಸರಿಯಾಗಿ ಮಗುವಿನ (ನನ್ನ) ಜನನವಾಯಿತು. 'ಹುಟ್ಟಿದ ಗಳಿಗೆ ಚೆನ್ನಾಗಿದೆ' ಎಂದು ಜ್ಯೋತಿಷ್ಯರು ಹೇಳಿದಾಗ ಏನೋ ಒಂದು ತರದ ಅವ್ಯಕ್ತ ಆನಂದ ತಂದೆ ತಾಯಿಯವರಿಗೆ. ಹನ್ನೊಂದನೆಯ ದಿನ ಮಗುವನ್ನು ತೊಟ್ಟಿಲಿಗೆ ಹಾಕುವ ಶಾಸ್ತ್ರ ಆ ದಿನ ಹತ್ತಿರದಲ್ಲಿರುವ ಪರಿಶಿಷ್ಟ ಜಾತಿಯ ಬಾಣಂತಿ ಹೆಂಗಸೊಬ್ಬಳಿಗೆ ಜಳಕಮಾಡಿ, ಹೊಸ ಬಟ್ಟೆ ಧರಿಸಿ ಬರುವಂತೆ ಮೊದಲೇ ತಿಳಿಸಿದಂತೆ ಆಕೆ ಸಮಯಕ್ಕೆ ಸರಿಯಾಗಿ ಬಂದಿದ್ದಾಳೆ. ಹೆತ್ತಾಕೆ ಮಗುವಿಗೆ ಎಣ್ಣೆ ಉಜ್ಜಿ, ಸ್ನಾನ ಮಾಡಿಸಿ, ಹೊಸ ಬಟ್ಟೆ ತೊಡಿಸಿ, ಮೊದಲೇ ತೋಡಿಟ್ಟ ಚಿಕ್ಕ ಹೊಂಡದಲ್ಲಿ ಮಗುವನ್ನು ಮಲಗಿಸಿ, ಸಾಂಕೇತಿಕವಾಗಿ ಸ್ವಲ್ಪ ಮಣ್ಣು, ಕಲ್ಲು, ಮುಳ್ಳನ್ನು ಮಗುವಿನ ಮೇಲಿಟ್ಟು ಮೇಲೆ ಬರುತ್ತಾಳೆ. ಬಳಿಕ ಪರಿಶಿಷ್ಟ ಜಾತಿಯ ಹೆಂಗಸು ಆ ಮಗುವನ್ನೆತ್ತಿಕೊಂಡು, ಅದಕ್ಕೆ ತನ್ನ ಎದೆ ಹಾಲನ್ನಿತ್ತು ಮೂಗಿಗೆ ಒಂದು ಚಿಕ್ಕ ಉಂಗುರ (ಕೊಡಿಗೆ) ಸುರಿದು, ಮಗುವಿಗೆ ತನ್ನ ಜಾತಿಗೆ ಸಂಬಂಧಿಸಿದ ಹೆಸರನ್ನಿಟ್ಟು, ಹಡೆದ ತಾಯಿಯ ಕೈಗಿಡುತ್ತಾ " ಇದು ನನ್ನ ಮಗು ಇದನ್ನು ಸಾಕಲು ನಿಮಗೆ ಕೊಡುತಿದ್ದೇನೆ. ಚೆನ್ನಾಗಿ ಸಾಕಿ ದೊಡ್ಡವನನ್ನಾಗಿ ಮಾಡಿ. ನಾನು ಬಂದು ಕೇಳಿದಾಗ ನನಗೆ ಕೊಡಬೇಕು" ಎಂದು ಹೇಳಿ ಮಗುವನ್ನು ಹೆತ್ತ ತಾಯಿಯ ಕೈಗಿಡುತ್ತಾಳೆ. ಇದಕ್ಕೆ ಪ್ರತಿಯಾಗಿ ಆಕೆಗೆ ಹೊಸಬಟ್ಟೆ ನಗದು ಹಣ, ರುಚಿಕಟ್ಟಾದ ಊಟವನ್ನಿತ್ತು ಉಪಚರಿಸಿ ಕಳುಹಿಸಿ ಕೊಡುತ್ತಾಳೆ. ಇನ್ನು ತನ್ನ ಮಗುವಿಗೆ ಮರಣದ ಭಯವಿಲ್ಲವೆಂಬ ಭರವಸೆಯಿಂದ ತಾಯಿ ಮಗುವನ್ನು ಸಲಹುತ್ತಾಳೆ. ಪರಿಶಿಷ್ಠ ಜಾತಿಯ ಹೆಂಗಸು ತನ್ನದೆನ್ನುವ ಈ ಮಗುವಿಗೆ (ನನಗೆ) ಕೂಸು ಎಂಬ ಹೆಸರನ್ನಿಟ್ಟಿರುತ್ತಾಳೆ.

ಹುಟ್ಟಿದ ಮಗುವಿಗೆ ದಿನನಿತ್ಯವೆಂಬಂತೆ ಕಾಯಿಲೆ, ಕಸಾಲೆ. ದೈವಭಕ್ತೆಯಾದ ತಾಯಿ ದೇವರ ದರ್ಶನ ಮಾಡಿಸಿ, ಚೀಟಿ, ನೂಲು ಕಟ್ಟಿಸಿ, ಕೆಂಪು ಹಾನ ನಿವಾಳಿಸಿ ಉಪಚರಿಸುತ್ತಾಳೆ. ತಂದೆಯಾದರೋ ಅಕ್ಷರಸ್ಥರಾದುದರಿಂದ ಬಸ್ರೂರಿನ ರಾಮ ನಂಬಿಯಾರರಿಂದ ಔಷದೋಪಚಾರ ಮಾಡಿಸುತ್ತಾರೆ. ಅಂತೂ ಮಗು ನರಳಾಡುತ್ತಾ, ಹೊರಳಾಡುತ್ತಾ ಆರು ವರ್ಷ ಉತ್ತರಿಸುತ್ತದೆ.

ನನ್ನ ತಾಯಿ ತನ್ನ ಮುಂದಿನ ಹೆರಿಗೆಗಾಗಿ ತನ್ನ ತವರೂರಾದ ಕಂದಾವರಕ್ಕೆ ಬರುತ್ತಾಳೆ. ತನ್ನ ಅಕ್ಕನ ಮಗ ಶಾಲೆಗೆ ಹೋಗಿ ಬರುವ ವಿಚಾರ ತಿಳಿದ ಆಕೆ ತನ್ನ ಮಗನ ವಿದ್ಯಾಭ್ಯಾಸದ ಬಗ್ಗೆ ಎಚ್ಚರಗೊಳ್ಳುತ್ತಾಳೆ. ಆಕೆ ಅನಕ್ಷರಸ್ಥಳಾದರೂ ತನ್ನ ಮಗ ವಿದ್ಯಾವಂತನಾಗಬೇಕು, ಉತ್ತಮ ಉದ್ಯೋಗ ಹಿಡಿದು ಸಮಾಜದಲ್ಲಿ

ಗಣ್ಯವ್ಯಕ್ತಿಯಾಗಿ ಬದುಕಬೇಕೆಂಬ ಹೆಬ್ಬಯಕೆ ಆಕೆಯದು. ಒಂದು ದಿನ ಆಕೆ ತನ್ನ ತಂದೆಯೊಡನೆ "ಅಪ್ಪಯ್ಯ, ನನ್ನ ಮಗನು ಯಾವಾಗಲೂ ಕಾಯಿಲೆಯಿಂದ ನರಳುತ್ತಿರುವವನಾದುದರಿಂದ ಈ ವರೆಗೆ ಶಾಲೆಗೆ ಸೇರಿಸಲಾಗಲಿಲ್ಲ. ಆತನಿಗೆ ಈಗ ಆರು ವರ್ಷ, ಇಲ್ಲೇ ಹತ್ತಿರದಲ್ಲಿರುವ ಶಾಲೆಗೆ ಅವನನ್ನು ಸೇರಿಸಿ ಬಿಡಿ" ಎಂದು ಕೇಳಿಕೊಂಡಳು. ಅವರಿಗೂ ಅದು ಸರಿಯಾಗಿ ಕಂಡಿತು. ಮರುದಿನ ನನ್ನನ್ನು ಕರೆದುಕೊಂಡು ಶಾಲೆಗೆ ಹೊರಟಾಗ ನನ್ನ ತಾಯಿಯೊಡನೆ "ಕೂಸು ಎಂಬ ಹೆಸರು ಬರೆಸಲು ಸರಿ ಕಾಣುವುದಿಲ್ಲ ಬೇರೆ ಏನು ಹೆಸರಿಡಲಿ?" ಎಂದು ಕೇಳಿದರು. ಅದಕ್ಕೆ ನನ್ನ ತಾಯಿ " ನಿಮ್ಮ ಹೆಸರೇ ಇಡಿ, ರಾಮ ಎಂದೇ ಬರೆಸಿ ಬಿಡಿ" ಎಂದಳು. ಆಗ ಹತ್ತಿರದಲ್ಲಿ ಕುಳಿತಿದ್ದ ನಮ್ಮ ಅಜ್ಜಿ " ಬೇಡಪ್ಪಾ ಆ ಹೆಸರನ್ನಿಟ್ಟರೆ ನನಗೆ ಕರೆಯಲು ಆಗುವುದಿಲ್ಲ, ಬೇರೆ ಇಡಿ" ಎಂದು ಆಕ್ಷೇಪಿಸಿದಳು. ಹೀಗೆ ಹೆಸರಿನ ಬಗ್ಗೆ ಚರ್ಚೆ ನಡೆಯುತ್ತಿರುವಾಗ ನನ್ನ ಮಾವ ಅಣ್ಣಪ್ಪ ಶೆಟ್ರು " ಅಜ್ಜನ ಹೆಸರು ಬಿಡುವುದು ಬೇಡ ಆ ಹೆಸರು ಕರೆಯಲು ಆಗದ ಅಜ್ಜಿ ರಘು ಎಂದು ಕರೆಯಲಿ. ಅದಕ್ಕಾಗಿ ಶಾಲೆಯಲ್ಲಿ ರಘುರಾಮ ಎಂದು ಬರೆಯಿಸಿ ಬಿಡಿ" ಎಂದು ಸೂಕ್ತ ಸೂಚನೆಯನ್ನಿತ್ತರು.

ನಮ್ಮ ಮನೆಗೆ ಅನತಿ ದೂರದಲ್ಲಿ ನನ್ನ ಮಾವನೇ ಸ್ಥಾಪಿಸಿದ ಶಾಲೆಗೆ ನನ್ನನ್ನು ಅಜ್ಜ ಸೇರಿಸಿದರು. ಹುಟ್ಟಿದ ದಿನಾಂಕವನ್ನು ಅಂದಾಜಿನ ಮೇಲೆ 12-3-1936 ಎಂದು ಬರೆಸಿದರು. ಇದರಿಂದಾಗಿ ಶಾಲೆಯಲ್ಲಿ ನನ್ನ ಪ್ರಾಯ ಆರು ತಿಂಗಳು ಹೆಚ್ಚಾಗಿಯೇ ದಾಖಲಾಯಿತು. ಅದು ಏಕೋಪಾಧ್ಯಾಯ ಶಾಲೆ. ನಮ್ಮ ಊರಿನವರೇ ಆದ ಪುಟ್ಟಯ್ಯ ಎನ್ನುವವರು ಅಧ್ಯಾಪಕರಾಗಿದ್ದರು. ಆರಂಭದ ಅಕ್ಷರಾಭ್ಯಾಸ ಅಲ್ಲಿಯೇ ನಡೆಯಿತು. ಶಾಲೆಗೆ ಸೇರಿ ಆರು ತಿಂಗಳಾಗುವಾಗ ನನ್ನಮ್ಮ ಮಗುವನ್ನು ಹಡೆದು 5 ತಿಂಗಳಾಗುತ್ತಾ ಬಂತು. ಆಕೆ ತೊಟ್ಟಿಲ ಮಗುವನ್ನು ತೆಗೆದುಕೊಂಡು ತನ್ನ ಗಂಡನ ಊರಾದ ಕರ್ಕಿಗೆ ಹೊರಟಾಗ ಅವಳೊಂದಿಗೆ ನಾನು ಕೂಡಾ ಹೊರಟು ತಂದೆಯ ಮನೆ ಸೇರಿದೆ.

ಮರುದಿನವೇ ನನ್ನ ತಾಯಿಯ ಒತ್ತಾಯದಿಂದ ತಂದೆಯವರು ನನ್ನನ್ನು ಕರೆದುಕೊಂಡು ಹತ್ತಿರದಲ್ಲಿರುವ ಹಟ್ಟಿಯಂಗಡಿ ಶಾಲೆಗೆ ಸೇರಿಸಲು ಹೊರಟರು. ಅದು ಕೂಡಾ ಏಕೋಪಾಧ್ಯಾಯ ಶಾಲೆಯಾಗಿತ್ತು. ಸ್ಥಳೀಯರಾದ ಶಿವಭಟ್ ಎನ್ನುವವರು ಅಧ್ಯಾಪಕರು. ಅವರು ಶಿಸ್ತಿನ ಅಧ್ಯಾಪಕರಾಗಿದ್ದು ಉತ್ತಮ ಶಿಕ್ಷಣ ನೀಡುತ್ತಿದ್ದರು. ತಂದೆಯವರು ಅವರೊಡನೆ ಶಾಲೆಗೆ ಸೇರಿಸಿಕೊಳ್ಳಲು ವಿನಂತಿಸಿಕೊಂಡಾಗ ಅವರು

ಒಂದನೇ ತರಗತಿಯ ಕನ್ನಡ ಪಠ್ಯದ ಕೊನೆಯ ಪಾಠವನ್ನು ಓದಲು ಹೇಳಿದರು. ಸರಿಯಾಗಿಯೇ ಓದಿದೆ. ಒಂದೆರಡು ಬಾಯಿಲೆಕ್ಕ ಹಾಕಿದರು. ಅದನ್ನೂ ಸರಿಯಾಗಿಯೇ ಉತ್ತರಿಸಿದೆ. ಆಗ ಅವರು ನನ್ನ ತಂದೆಯೊಡನೆ " ನೋಡಿ ಸದಿಯಣ್ಣ ಶೆಟ್ಟರೇ, ಹುಡುಗ ಚುರುಕಾಗಿದ್ದಾನೆ. ಇವನನ್ನು ಎರಡನೇ ತರಗತಿಗೆ ಸೇರಿಸುತ್ತೇನೆ " ಎಂದಾಗ ನನ್ನ ತಂದೆಯ ಸಂತೋಷಕ್ಕೆ ಪಾರವೇ ಇಲ್ಲ. ಏಕೆಂದರೆ ಹಿಂದಿನ ಶಾಲೆಯಲ್ಲಿ ಪ್ರಾಯ 6 ತಿಂಗಳು ಹೆಚ್ಚಾಗಿ ಬಿದ್ದರೂ ಇಲ್ಲಿ ಒಂದೇ ವರುಷದಲ್ಲಿ 2 ತರಗತಿ ಪೂರೈಸುವಂತಾಯಿತಲ್ಲಾ ಎಂಬ ಸಂತೋಷ ಅವರಿಗೆ. ಆ ವರ್ಷದ ಕೊನೆಯಲ್ಲಿ 2 ರಿಂದ ತೇರ್ಗಡೆ ಹೊಂದಿ 3ನೇ ತರಗತಿಗೆ ಸೇರಿಸಲ್ಪಟ್ಟೆ.

ಈ ಶಾಲೆಯಲ್ಲಿ 5ನೇ ತರಗತಿಯ ವರೆಗೆ ನನ್ನ ವಿದ್ಯಾಭ್ಯಾಸ ಸಾಗಿತು. ಮುಖ್ಯವಾಗಿ ಓದು, ಬರೆಹ, ಲೆಕ್ಕ (ಒಬಲೆ) ಪಾಠಕ್ಕೆ ಇಲ್ಲಿ ಪ್ರಾಮುಖ್ಯತೆ ನೀಡುತ್ತಿದ್ದರು. ಪ್ರತಿ ದಿನ ಕೋಪಿ, ಮಗ್ಗಿ ಬರೆಯಬೇಕಾಗಿತ್ತು. ನನ್ನ ಕನ್ನಡ ಬರಹ ಉತ್ತಮಗೊಳ್ಳಲು ಈ ಶಾಲೆಯ ಶಿಕ್ಷಣವೆ ಕಾರಣವಾಗಿತ್ತು. ಇದು ಏಕೋಪಾಧ್ಯಾಯ ಶಾಲೆ ಆದುದರಿಂದ 5ನೇ ತರಗತಿಯಲ್ಲಿ ಆರಂಭಿಸಬೇಕಾಗಿದ್ದ ಇಂಗ್ಲೀಷ್ ಕಲಿಸುತ್ತಿರಲಿಲ್ಲ. 5ನೇ ತರಗತಿಗೆ ವಿದ್ಯಾಭ್ಯಾಸ ಮುಗಿಸುವ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆ ಇರಲಿಲ್ಲ. ಆದರೆ ವಿದ್ಯಾಭ್ಯಾಸ ಮುಂದುವರಿಸುವವರಿಗೆ ತೊಡಕಾಗುತಿತ್ತು. ಇದನ್ನರಿತ ನನ್ನ ತಂದೆಯವರು ನಾರಾಯಣ ಪುರಾಣಿಕ ಎನ್ನುವವರಿಂದ ನನಗೆ ಇಂಗ್ಲೀಷ್ ಟ್ಯೂಶನ್ ಕೊಡಿಸಿದರು. 5ನೇ ತರಗತಿಯಿಂದ ತೇರ್ಗಡೆ ಹೊಂದಿದ ನನ್ನನ್ನು ಬಸ್ರೂರು ಹಿಂದೂ ಹಿರಿಯ ಪ್ರಾಥಮಿಕ ಶಾಲೆಗೆ ಸೇರಿಸಿದರು. ಆಗ ಅಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ನಾರಾಯಣ ರಾವ್ ಎನ್ನುವವರು ಬಾಯ್ದಾರೆಯಾಗಿ ಇಂಗ್ಲೀಷ್‌ನಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದರು. ಅದನ್ನು ಸರಿಯಾಗಿ ಉತ್ತರಿಸಿದೆ. ಹಾಗಾಗಿ 6ನೇ ತರಗತಿಗೆ ಸೇರಿಸಿಕೊಂಡರು.

ಈ ಶಾಲೆಯಲ್ಲಿ 1ರಿಂದ 8ನೇ ತರಗತಿ ವರೆಗಿದ್ದು, ಕೆಲವು ತರಗತಿಗಳಲ್ಲಿ ಡಿವಿಜನ್‌ಗಳು ಇದ್ದುವು ಸಾಮಾನ್ಯ 20ಕ್ಕೂ ಮಿಕ್ಕಿ ಅಧ್ಯಾಪಕರಿದ್ದರು. ಶಂಕರ ರಾವ್ ದಾಸಪ್ಪ ಉಪಾಧ್ಯ, ಶ್ರೀನಿವಾಸ ಪ್ರಭು, ಲಕ್ಷ್ಮೀನಾರಾಯಣ ಮಧ್ಯಸ್ಥ, ಅಣ್ಣಪ್ಪ ಶೆಟ್ಟಿ, ರಮಾನಾಥ ನಾಯಕ್ ಮೊದಲಾದ ಪ್ರತಿಭಾವಂತ ಅಧ್ಯಾಪಕರಿದ್ದು ಪಾಠ ಪ್ರವಚನಗಳು ಶಿಸ್ತು ಬದ್ಧವಾಗಿ ಉತ್ತಮ ರೀತಿಯಲ್ಲಿ ನಡೆಯುತಿತ್ತು. ಮಾತ್ರವಲ್ಲ ಆ ಶಾಲೆ ಆಸುಪಾಸಿನಲ್ಲಿ ತುಂಬಾ ಪ್ರಸಿದ್ಧಿಯನ್ನೂ ಪಡೆದಿತ್ತು.

ನಾನು ಪ್ರತಿದಿನ ಬೆಳಿಗ್ಗೆ ಊಟ ಮಾಡಿಕೊಂಡು, ಮಧ್ಯಾಹ್ನ ಊಟಕ್ಕೆ ಬುತ್ತಿಯನ್ನು ತೆಗೆದುಕೊಂಡು ಇಬ್ಬರು ಸಹಪಾಠಿಗಳೊಂದಿಗೆ ಶಾಲೆಗೆ ಹೋಗುತಿದ್ದೆ. ದಾರಿಯಲ್ಲಿ ಹಟ್ಟಿಯಂಗಡಿ ಮತ್ತು ಮಂಡಿಬಾಗಿಲು ಹೊಳೆಗಳನ್ನು ಉತ್ತರಿಸಬೇಕಿತ್ತು. ಅದರಲ್ಲೂ ಹಟ್ಟಿಯಂಗಡಿ ಹೊಳೆ ವೈಶಾಖದಲ್ಲಿ ನೀರು ಕಡಿಮೆಯಾಗುತಿದ್ದುದರಿಂದ ದೋಣಿ ಸಹಾ ಇರುತ್ತಿರಲಿಲ್ಲ. ಹಾಗಾಗಿ ಉಬ್ಬರ ಇಳಿತ ನೋಡಿಕೊಂಡು, ಆಳ, ಬೆಟ್ಟುಗಳನ್ನು ಗುರುತಿಸಿಕೊಂಡು ಜಾಗೃತೆಯಲ್ಲಿ ದಾಟಬೇಕಿತ್ತು. ಹೀಗಾಗಿ ಪ್ರತಿದಿನ ಶಾಲೆಗೆ ಹೋಗಿ ಬರುವುದು ತುಸು ಪ್ರಯಾಸದ ಕೆಲಸವೇ ಆಗುತಿತ್ತು. ಆದರೆ ಈ ಮಧ್ಯೆ ವರ್ಷದಲ್ಲಿ ಸಾಧಾರಣ 2 ತಿಂಗಳುಗಳ ಕಾಲ ಮಧ್ಯದಲ್ಲಿ ನಾವು ಹಾದು ಹೋಗುವ ಹಟ್ಟಿಕುದ್ರು ಎನ್ನುವ ಊರಿನ ಜನರು ನಮ್ಮ ಹಸಿವು ಮತ್ತು ಬಾಯಾರಿಕೆಯನ್ನು ನೀಗಿಸುತ್ತಿದ್ದರು.

ಹಟ್ಟಿಕುದ್ರುವಿನಲ್ಲಿ ಮುಖ್ಯ ಬೆಳೆ ಕಬ್ಬು ಸಾಮಾನ್ಯವಾಗಿ ವರ್ಷದಲ್ಲಿ 2 ತಿಂಗಳಿಗೂ ಹೆಚ್ಚು ಸಮಯ ಅಲ್ಲಿಯ ಜನರು ಗಾಣದಲ್ಲಿ ಕಬ್ಬನ್ನು ಅರೆದು ಬೆಲ್ಲಮಾಡುತ್ತಿದ್ದರು. ನಾವು ಶಾಲೆಯಿಂದ ಬರುವಾಗ ಕಬ್ಬು ಕಡಿಯುವ ಗದ್ದೆಯಲ್ಲಿ ಬಂದು ನಿಲ್ಲುತಿದ್ದೆವು. ನಮ್ಮನ್ನು ಕಂಡ ಕೂಡಲೆ ಒಂದೆರಡು ಕಬ್ಬಿನ ಕೋಲನ್ನು ಕೊಟ್ಟು ಕಳಿಸುತ್ತಿದ್ದರು. ನಮ್ಮ ತಂದೆಯವರ ಪರಿಚಯದ ಮನೆಯವರಾದರೆ ಕಬ್ಬಿನ ಹಾಲು, ಬೆಲ್ಲವನ್ನು ಕೊಟ್ಟು ಉಪಚರಿಸುತಿದ್ದರು. ಹೀಗಾಗಿ ಕಬ್ಬು ಅರೆಯುವ ಆ ಕಾಲದಲ್ಲಿ ನಮಗೆ ಶಾಲೆಗೆ ಹೋಗಿ ಬರುವುದು ಅಷ್ಟೇನೂ ಪ್ರಯಾಸವಾಗಿ ತೋರುತ್ತಿರಲಿಲ್ಲ. ಈಗಲೂ ಕೂಡಾ ಹಟ್ಟಿಕುದ್ರು ಜನರ ಪ್ರೀತಿಯ ಉಪಚಾರ ನೆನಪಿಗೆ ಬರುತ್ತಾ ಇದೆ.

ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಎರಡು ಬಾರಿ ಶಾಸಕರಾಗಿದ್ದ, ಈಗ ಬಸ್ರೂರಿನ ಶ್ರೀ ಮಹಾಲಿಂಗೇಶ್ವರ ದೇವಳದ ಆಡಳ್ತೆ ಮುಕ್ತೇಸರರಾದ, ಊರಿನ ಶ್ರೇಷ್ಠ ಪಂಚಾಯಿತುದಾರರಾದ ಶ್ರೀ ಬಿ. ಅಪ್ಪಣ್ಣ ಹೆಗ್ಡೆಯವರು ನನ್ನ ಸಹಪಾಠಿಗಳಾಗಿದ್ದ ನೆನಪು ಈಗಲೂ ಹಸುರಾಗಿಯೇ ಉಳಿದಿದೆ. ಅಲ್ಲದೆ ತಾನು ಹೋಟೆಲಿಗೆ ಹೋಗುವಾಗಲೆಲ್ಲಾ ನನ್ನನ್ನು ಪ್ರೀತಿಯಿಂದ ಕರೆದುಕೊಂಡು ಹೋಗಿ ತಿಂಡಿ, ಕಾಫಿ ಕೊಡಿಸುತ್ತಿದ್ದ ಹಟ್ಟಿಯಂಗಡಿ ವಿಶ್ವೇಶ್ವರ ಭಟ್ ಎನ್ನುವ ಮಿತ್ರನ ನೆನಪು ಚಿತ್ತ ಭಿತ್ತಿಯಲ್ಲಿ ಸ್ಥಿರವಾಗಿ ನಿಂತಿದೆ. ಆತ 8ನೇ ತರಗತಿಗೆ ವಿದ್ಯಾಭ್ಯಾಸ ಮುಗಿಸಿ ಉದ್ಯೋಗ ನಿಮಿತ್ತ ದೂರದೂರಿಗೆ ಹೋದವನು. ಆಮೇಲೆ ನನಗೆ ಸಿಗಲೇ ಇಲ್ಲ. ಆದರೂ ಆತನ ಅಂದಿನ ಪ್ರೀತಿ, ವಾತ್ಸಲ್ಯ ಆಗಾಗ ನೆನಪಾಗುತ್ತಿದೆ. ಇನ್ನು 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರಕಿದಾಗ ಮೆರವಣಿಗೆ ಮಾಡಿ ಸಿಹಿ ತಿಂಡಿ ತಿಂದ

ಆ ಸಂಭ್ರಮದ ದಿನ, ಆರೇ ತಿಂಗಳುಗಳಲ್ಲಿ ಭಾರತದ ಭಾಗ್ಯ ವಿಧಾತರಾದ ಬಾಪೂಜಿಯವರನ್ನು ಕಳೆದುಕೊಂಡ ಕಹಿ ದಿನ ಈಗಲೂ ನೆನಪಿನಲ್ಲಿ ಉಳಿದಿದೆ. ಮಾತ್ರವಲ್ಲ ನನ್ನ ಕಲಾರಂಗ ಪ್ರವೇಶಕ್ಕೆ ಭದ್ರ ಬುನಾದಿ ಈ ವಿದ್ಯಾಮಂದಿರದಲ್ಲಿ ಕಲಿಯುತ್ತಿರುವಾಗಲೆ ನಡೆಯಿತೆಂದು ಸಂತೋಷದಿಂದ ತಿಳಿಸ ಬಯಸುತ್ತೇನೆ. ಅದರ ವಿವರವನ್ನು ಮುಂದಿನ ಅಧ್ಯಾಯಗಳಲ್ಲಿ ತಿಳಿಸಲಿದ್ದೇನೆ.

6 ಮತ್ತು 7ನೇ ತರಗತಿಗಳಲ್ಲಿ ಸಾಧಾರಣ ಮಾರ್ಕುಗಳಿಂದ ತೇರ್ಗಡೆ ಹೊಂದಿ 8ನೇ ತರಗತಿಗೆ ಸೇರಿದೆ ಆ ವರ್ಷ ನಡೆದ ಪಬ್ಲಿಕ್ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಂದ ಉತ್ತೀರ್ಣನಾದೆ. ಅಂಕದ ಪಟ್ಟಿಯನ್ನೂ, ಇತರ ದಾಖಲೆ ಪತ್ರಗಳನ್ನು ತೆಗೆದುಕೊಂಡು, ಕಲಿಸಿದ ಅಧ್ಯಾಪಕರ ಆಶೀರ್ವಾದ ಪಡೆದು, ಇನ್ನು ಈ ಶಾಲೆಯ ವಿದ್ಯೆ ಮುಗಿಯಿತೆಂಬ ಸಮಾಧಾನದಿಂದ ಶಾಲೆಯಿಂದ ಹೊರಟೆ. ಮನೆ ಸೇರಿ ತಾಯಿಗೆ ಅಂಕಪಟ್ಟಿ ತೋರಿಸಿ ಸಂತೋಷ ಪಟ್ಟೆ. ಓದು ಬರಹ ತಿಳಿಯದ ಆಕೆ ಅದನ್ನು ನೋಡುತ್ತಾ, ಸಂತೋಷದ ಕಣ್ಣೀರನ್ನು ಸುರಿಸುತ್ತಾ, ನನ್ನನ್ನು ಅಪ್ಪಿಕೊಂಡು ಖುಷಿ ಪಟ್ಟಳು. ಅದೇ ಹೊತ್ತಿಗೆ ನೆರೆಮನೆಯ ಶೀನಪ್ಪ ಶೆಟ್ರು ಬಂದು ಅಂಕಪಟ್ಟಿ ನೋಡಿ, "ಇದೇನು ರಘು, ಇಂಗ್ಲೀಷಿನ ಮಾರ್ಕ್ ಹಾಕಿಲ್ಲವಲ್ಲ ?" ಎಂದು ಆಶ್ಚರ್ಯದಿಂದ ಕೇಳಿದಾಗ ನನ್ನ ತಾಯಿ ತಬ್ಬಿಬ್ಬಾದಳು. ಆಗ ನಾನು "ಎಂಟನೇ ತರಗತಿಯ ಸರ್ಟಿಫಿಕೇಟಿಗೆ ಇಂಗ್ಲೀಷಿನ ಅಗತ್ಯವಿಲ್ಲವಂತೆ. ಅದಕ್ಕಾಗಿ ಅದರಲ್ಲಿ ಹಿಂದಿದ್ದ ನನ್ನನ್ನು ಇಂಗ್ಲೀಷಿಗೆ ಕುಳಿತುಕೊಳ್ಳುವುದು ಬೇಡವೆಂದು ಮುಖ್ಯೋಪಾಧ್ಯಾಯರು ಹೇಳಿದರು. ಈ ವಿಚಾರ ತಂದೆಯವರೊಡನೆ ಕೂಡಾ ಹೇಳಿದ್ದರಂತೆ" ಎಂದು ಸಮಜಾಯಿಸಿಕೊಟ್ಟೆ ಆ ಸಮಯಕ್ಕೆ ಮನೆಗೆ ಬಂದ ತಂದೆಯವರು ವಿಷಯ ಕೇಳಿ "ಇಲ್ಲ ಈ ವಿಷಯ ನನ್ನಲ್ಲಿ ಹೇಳಲೇ ಇಲ್ಲ. ಶಾಲೆಗೆ ಉತ್ತಮ ಫಲಿತಾಂಶ ತರುವ ಉದ್ದೇಶದಿಂದ ಅವರು ಹಾಗೆ ಮಾಡಿರಬೇಕು" ಎಂದು ಹೇಳಿದಾಗ ನನ್ನ ತಾಯಿ ಶೀನಪ್ಪ ಶೆಟ್ರಲ್ಲಿ " ಮುಂದೇನು ಮಾಡಬೇಕು" ಎಂದು ಆತುರದಿಂದಲೇ ಕೇಳಿದರು. ಅದಕ್ಕೆ ಶೀನಪ್ಪ ಶೆಟ್ರು " ಮುಂದೆ ಹೈಸ್ಕೂಲಿಗೆ ಹೋಗುವುದಾದರೆ ಎಂಟನೇ ತರಗತಿಯಲ್ಲಿ ಇಂಗ್ಲಿಷ್ ಪಾಸಾಗಿಯೇ ಹೋಗಬೇಕಾಗುತ್ತದೆ. ಆದ್ದರಿಂದ ಇವನನ್ನು ಪುನಃ ಬಸ್ರೂರು ಶಾಲೆಯಲ್ಲಿ 8ನೇ ತರಗತಿಗೆ ಸೇರಿಸಿರಿ. ಆತ ಪ್ರಯತ್ನ ಪಟ್ಟು ಅಭ್ಯಾಸ ಮಾಡಿ ಇಂಗ್ಲಿಷ್‌ನಲ್ಲಿ ಪಾಸುಮಾಡಿಕೊಂಡು ಹೈಸ್ಕೂಲ್ ಸೇರಲಿ ಎಂದು ಮುಂದಿನ ದಾರಿ ತೋರಿಸಿದರು. ಪುನಃ 8ನೇ ತರಗತಿಗೆ ಸೇರಿಸುವಂತೆ ಅಮ್ಮ ತಂದೆಯವರಲ್ಲಿ ಕೇಳಿಕೊಂಡಳು

ಅವರು ಒಪ್ಪಿ "ಶಾಲೆ ಆರಂಭ ಆಗುವ ಹೊತ್ತಿಗೆ ಸೇರಿಸುತ್ತೇನೆ" ಎಂದು ಹೇಳಿದ ಮೇಲೆ ತಾಯಿ ಸಮಾಧಾನದ ಉಸಿರು ಬಿಟ್ಟಳು. ಆರಂಭದಲ್ಲಿ ಒಂದೇ ವರ್ಷದಲ್ಲಿ 2 ತರಗತಿಗಳನ್ನು ಪೂರೈಸಿದ ನಾನು ಈಗ ಒಂದೇ ತರಗತಿಯಲ್ಲಿ 2 ವರ್ಷ ಕಳೆಯುವಂತಾಯಿತಲ್ಲಾ ಎಂದು ಪರಿತಪಿಸಿಕೊಳ್ಳುವಂತಾಯಿತು.

ಶಾಲಾರಂಭದ ಹೊತ್ತಿಗೆ ತಂದೆಯವರು ನನ್ನನ್ನು ಪುನಃ ಬಸ್ರೂರು ಶಾಲೆಯಲ್ಲಿ 8ನೇ ತರಗತಿಗೆ ಸೇರಿಸಿ, ಮುಖ್ಯೋಪಾಧ್ಯಾಯರಾದ ಶಂಕರರಾಯರಿಂದ ಇಂಗ್ಲೀಷಿನಲ್ಲಿ ಟ್ಯೂಶನ್ ಕೊಡಿಸುವ ವ್ಯವಸ್ಥೆ ಮಾಡಿದರು. ನಾನು ಶ್ರಮ ಪಟ್ಟು ಅಭ್ಯಾಸ ಮಾಡಿದೆ. ಆ ವರ್ಷ ಜರಗಿದ ಪಬ್ಲಿಕ್ ಪರೀಕ್ಷೆಯಲ್ಲಿ ಇಂಗ್ಲೀಷ್ ಸಹಿತ ಸಾಧಾರಣ ಅಂಕಗಳನ್ನು ಪಡೆದು, ಪಾಸಾಗಿ ಸಮಾಧಾನದ ಉಸಿರುಬಿಟ್ಟೆ. ತಾಯಿ ಸಿಹಿ ಊಟ ತಯಾರಿಸಿ ಉಣಬಡಿಸಿ ಸಂಭ್ರಮಪಟ್ಟಳು. ಹೈಸ್ಕೂಲು ಸೇರುವ ಕನಸು ಕಾಣುತ್ತ ರಜಾದ ಮಜಾ ಅನುಭವಿಸಲು ಸಿದ್ಧನಾಗಿ ಕುಳಿತೆ.

ಈ ಮಧ್ಯೆ ನನ್ನ ಬಾಲ್ಯದಲ್ಲಿ ನನ್ನ ಅಚಾತುರ್ಯದಿಂದ ಸಂಭವಿಸಿದ ಅವಾಂತರದಿಂದ ನಾನು ಪಾರಾದ 2 ಘಟನೆಗಳ ಕುರಿತು ಸಂಕ್ಷಿಪ್ತವಾಗಿ ಹೇಳ ಬಯಸುತ್ತೇನೆ. ನನ್ನ ತಂದೆಯ ತಮ್ಮ ಮಂಜಯ್ಯ ಶೆಟ್ಟಿ ಎನ್ನುವವರು 8ನೇ ತರಗತಿಗೆ ತನ್ನ ವಿದ್ಯಾಭ್ಯಾಸ ನಿಲ್ಲಿಸಿ ಮನೆಯಲ್ಲೇ ಇದ್ದು ವ್ಯವಸಾಯದಲ್ಲಿ ತನ್ನ ಅಣ್ಣನಿಗೆ ಸಹಾಯಕರಾಗಿ ದುಡಿಯುತಿದ್ದರು. ಅವರು ತರಗೆಲೆ, ಸೊಪ್ಪು ತರಲು ಹತ್ತಿರದ ಕಾಡಿಗೆ ಹೋಗುತ್ತಿದ್ದರು. ಬೇಸಿಗೆಯ ನಮ್ಮ ರಜಾ ಸಮಯ ಹಣ್ಣುಗಳ ಸುಗ್ಗಿಯ ಕಾಲ. ಆ ಸಮಯದಲ್ಲಿ ಕಾಡಿನಲ್ಲಿ ತುಂಬಾ ಹೆಬ್ಬೆಲಸಿನ ಹಣ್ಣುಗಳು ಮರದಲ್ಲಿ ತೂಗಾಡುತ್ತಿದ್ದುವು. ಆ ಹಣ್ಣುಗಳನ್ನು ತಿನ್ನುವ ಆಸೆಯಿಂದ ನನ್ನ ಚಿಕ್ಕಪ್ಪನ ಜೊತೆಯಲ್ಲಿ ಆ ದಿನ ಕಾಡಿಗೆ ಹೋಗಿದ್ದೆ. ಅವರು ತರಗೆಲೆ ಒಟ್ಟು ಮಾಡುತ್ತಿರುವ ಸಮಯದಲ್ಲಿ ನಾನು ಹಣ್ಣುಗಳಿರುವ ಒಂದು ದೊಡ್ಡ ಮರವನ್ನೇರಿದೆ. ಎತ್ತರದಲ್ಲಿ ತುಂಬಾ ಹಣ್ಣುಗಳಿದ್ದುದರಿಂದ 4-6 ಆಳೆತ್ತರಕ್ಕೆ ಏರಿದ್ದೆ. ಒಂದು ಕೊಂಬೆಯ ಮೇಲೆ ಆಧರಿಸಿ ಕುಳಿತು ಹಣ್ಣು ತಿನ್ನಲು ಆರಂಭಿಸಿದೆ. ಅದು ಒಣಗಿದ ಕೊಂಬೆ ಆಗಿರಬೇಕು. ತುಂಡಾಗಿ ನಾನು ಕೆಳಕ್ಕೆ ಬಿದ್ದೆ. ಆ ಹೊತ್ತಿಗೆ ಸರಿಯಾಗಿ ಚಿಕ್ಕಪ್ಪ ತನ್ನ ಕೆಲಸ ಮುಗಿಸಿಕೊಂಡು ಮರದ ಕೆಳಗೆ ಬಂದು ನಿಂತಿದ್ದರು. ನಾನು ಬೀಳುವಾಗ ಯಾವುದೇ ಕೊಂಬೆ, ರೆಂಬೆಗೆ ತಾಗದೆ ನೇರವಾಗಿ ಚಿಕ್ಕಪ್ಪನ ತಲೆ ಮತ್ತು ಭುಜದ

ಮೇಲೆ ಬಿದ್ದೆ. ಅವರು ಫಕ್ಕನೆ ನನ್ನನ್ನು ಆಧರಿಸಿ ಹಿಡಿದುಕೊಂಡು ಬಿಟ್ಟರು. ಅವರು ಅಲ್ಲಿ ನಿಲ್ಲದೇ ಹೋಗಿದ್ದರೆ ನಾನು ಗಟ್ಟಿಯಾದ ನೆಲದ ಮೇಲೆ ಬಿದ್ದು ತಲೆವೊಡೆದು ಸಾಯುತಿದ್ದೆ ಅಥವಾ ತಲೆಗೆ ಪೆಟ್ಟಾಗಿ ನರಳಬೇಕಿತ್ತು. ಈ ಎಲ್ಲಾ ಅವಾಂತರಗಳು ನನ್ನ ಚಿಕ್ಕಪ್ಪನಿಂದಾಗಿ ತಪ್ಪಿ, ಅಪಾಯದಿಂದ ಪಾರಾದೆ. ಮುಂದೆ ಈ ಚಿಕ್ಕಪ್ಪ ತನ್ನ ಮದುವೆ ಆದ ಮೇಲೆ ಮಾಯಿಪಾಡಿಯಲ್ಲಿ ಶಿಕ್ಷಕ ತರಬೇತಿ ಪಡೆದು ಗುಲ್ವಾಡಿ ಸರ್ವೋದಯ ಶಾಲೆಯಲ್ಲಿ ಅಧ್ಯಾಪಕರಾದರು ಅಂದು ನನ್ನ ಸಾವನ್ನೋ, ನೋವನ್ನೋ ತಪ್ಪಿಸಿದ ಆ ನನ್ನ ಚಿಕ್ಕಪ್ಪನನ್ನು ನಾನು ಮರೆವುದೆಂತು?

ನಮ್ಮ ಮನೆಯಲ್ಲಿ ಬೋಳ ಎಂಬ ಪರಿಶಿಷ್ಠ ಜಾತಿಯ ಒಬ್ಬ ಆಳು ಮಗನಿದ್ದ. ಆತ ನಿಷ್ಠಾವಂತನಾಗಿ ಹಲವು ವರ್ಷಗಳಿಂದ ನಮ್ಮ ಮನೆಯಲ್ಲಿ ದುಡಿಯುತ್ತಿದ್ದ. ಒಮ್ಮೆ ಅವನು ಉಳುಮೆ ಮಾಡಲು ಹೊರಟಾಗ ನಾನು ಅವನೊಂದಿಗೆ ಹೊರಟೆ. ಅವನು ಉಳುತ್ತಿರುವಾಗ ನಾನು ಹತ್ತಿರದಲ್ಲಿರುವ ಹೊಳೆಯಲ್ಲಿ ಈಜಾಡುತ್ತಾ ಮುಂದೆ ಮುಂದೆ ಸಾಗಿದಾಗ, ಆಳದ ಗುಂಡಿಗೆ ಜಾರಿಬಿಟ್ಟಿದ್ದೆ. ನೀರು ಕುಡಿಯುತ್ತಾ ಮುಳುಗುತೇಳುತ್ತಾ ಕೂಗಿಕೊಂಡೆ. ಇದನ್ನು ಉಳುತ್ತಿರುವ ಬೋಳ ಕೇಳಿ, ಓಡಿಬಂದು ನೀರಿಗೆ ದುಮುಕಿ, ನನ್ನನ್ನು ಎತ್ತಿ ಮೇಲಕ್ಕೆ ತಂದು, ತಲೆಯ ಮೇಲಿಟ್ಟುಕೊಂಡು ತಿರುಗಿಸಿ, ನೀರು ಕಾರಿಸಿ ಸ್ವಸ್ಥಗೊಳಿಸಿದ. ಅಂದು ಆತನಿಲ್ಲದಿರುತಿದ್ದರೆ ಇಂದು ಇದನ್ನು ಬರೆದು ತಿಳಿಸಲು ನಾನಿರುತ್ತಿರಲಿಲ್ಲ. ಆತನ ಉಪಕಾರವನ್ನು ನೆನಪಿನಲ್ಲಿಟ್ಟುಕೊಂಡು ನಾನು ಶಿಕ್ಷಕ ವೃತ್ತಿಗೆ ಸೇರಿದ ಮೇಲೆ ಒಂದು ಜೊತೆ ಹೊಸ ಬಟ್ಟೆ ತಂದು ಕೊಟ್ಟು ಋಣಭಾರ ಕಡಿಮೆಮಾಡಿಕೊಂಡೆ. ಅಂದು ನನ್ನನ್ನು ಉಳಿಸಿದ ಆ ನಿಷ್ಠಾವಂತ ಮುಗ್ಧ ಸೇವಕನನ್ನು ನಾನು ಮರೆಯಲುಂಟೆ ?

ಹೈಸ್ಕೂಲು ಸೇರುವ ಅರ್ಹತೆಯೇನೋ ಪಡೆದೆ. ಆದರೆ ಸೇರುವುದು ಮಾತ್ರ ಅಷ್ಟೇನೂ ಸುಲಭವಾಗಿರಲಿಲ್ಲ ಕಾರಣ ಆಗ ನಮಗೆ ಹತ್ತಿರದ ಹೈಸ್ಕೂಲ್ ಅಂದರೆ ಕುಂದಾಪುರದ ಬೋರ್ಡ್ ಹೈಸ್ಕೂಲು. ದಿನನಿತ್ಯ ಹೋಗಿ ಬರುವ ಹಾಗಿಲ್ಲ. ಆ ಕಾಲದಲ್ಲಿ ಕಲಿಯುವ ಮಕ್ಕಳಿಗೆ ಈಗಿನಂತೆ ಸರಕಾರದ ಯಾವ ಸವಲತ್ತು ಇರಲಿಲ್ಲ. ಪ್ರತಿ ತಿಂಗಳು ಶಾಲಾ ಫೀಸು ಕಟ್ಟಬೇಕು. ಪುಸ್ತಕ ವಗೈರೆ ಶಾಲೆಗೆ ಬೇಕಾಗುವ ಎಲ್ಲಾ ವಸ್ತುಗಳನ್ನು ವಿಕ್ರಯಿಸಬೇಕು. ಹಾಸ್ಟೇಲಿನಲ್ಲಿ ಅಥವಾ ಹೋಟೇಲಿನಲ್ಲಿ ನಿಲ್ಲಬೇಕು.

ಈ ಎಲ್ಲಾ ಖರ್ಚುಗಳು ತುಂಬಾ ದುಬಾರಿಯಾಗಿದ್ದವು. ಇದನ್ನು ಸರಿದೂಗಿಸಲು ತಂದೆಯವರ ಆರ್ಥಿಕ ಸ್ಥಿತಿ ಆ ಕಾಲಕ್ಕೆ ಅಷ್ಟೇನೂ ಉತ್ತಮವಿರಲಿಲ್ಲ. ಆದರೆ ನನ್ನ ತಾಯಿಗೆ ಹೈಸ್ಕೂಲಿಗೆ ಸೇರಿಸಲೇಬೇಕೆಂಬ ಛಲವಿತ್ತು. ಹಾಗಾಗಿ ಆಕೆ ಬೇರೆ ದಾರಿ ಕಾಣದೆ ತನ್ನ ತಂದೆಯ ಬಳಿಗೆ ಹೋಗಿ ಸ್ವಲ್ಪ ಮಟ್ಟಿನ ಆರ್ಥಿಕ ಸಹಾಯ ಪಡೆದು ಬಂದಳು. ಕಷ್ಟ ಕಾಲಕ್ಕೆ ಬೇಕಾಗಬಹುದೆಂದು ಉಳಿಸಿಕೊಂಡು ಬಂದ ಹಣವನ್ನು ಕೊಟ್ಟು ಹೈಸ್ಕೂಲು ಸೇರಲು ಸಹಾಯಕಳಾದಳು. ಬಂಟ್ಸ್ ಹಾಸ್ಟೆಲಿಗೆ ಸೇರಿ ವ್ಯಾಸಂಗದಲ್ಲಿ ನಿರತನಾದೆ.

ಹೈಸ್ಕೂಲ್ ಸೇರಿದ ಪ್ರಥಮ ದಿನ ನಡೆದ ಒಂದು ವಿನೋದ ಘಟನೆಯನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಆ ದಿನ ತರಗತಿಗೆ ನಾನು ಸ್ವಲ್ಪ ಬೇಗ ಹೋಗಿದ್ದೆ. ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ಬಂದು ಅವರವರ ಸ್ಥಾನದಲ್ಲಿ ಕುಳಿತುಕೊಳ್ಳುತ್ತಿದ್ದರು. ಆಗ ಒಬ್ಬ ವಿಚಿತ್ರ ವ್ಯಕ್ತಿ ಚಿಕ್ಕ ಚಿಕ್ಕ ಹೆಜ್ಜೆಯಿಡುತ್ತಾ ಆನೆ ಮರಿ ಉರುಳುತ್ತಾ ಬರುವಂತೆ ತರಗತಿಯ ಒಳಗೆ ಬಂದು ನನ್ನ ಹತ್ತಿರದ ಸೀಟಿನಲ್ಲಿ ಕುಳಿತುಕೊಂಡರು. ಸಾಧಾರಣ 4 ಅಡಿಗಳಷ್ಟು ಎತ್ತರ. ಆದರೆ ಉಬ್ಬಿದ ಎದೆ, ದುಂಡು ದುಂಡಾದ ತೋಳುಗಳು ಮತ್ತು ಅಗಲ ಮುಖದ ಆ ವ್ಯಕ್ತಿಯನ್ನು ನಾನು ಪ್ರಥಮ ಕಾಣುತ್ತಿರುವುದರಿಂದ ತಡೆಯಲಾರದೆ ನಕ್ಕು ಬಿಟ್ಟೆ. ಇದನ್ನು ಗಮನಿಸಿದ ಆವ್ಯಕ್ತಿ ನನ್ನ ಹತ್ತಿರಕ್ಕೆ ಬಂದು ಕಣ್ಣು ಕೆಂಪಗೆ ಮಾಡಿಕೊಂಡು "ಏನು ! ಯಾಕೆ ನಗುತ್ತಿರುವೆ ? ನನ್ನ ಮುಖದಲ್ಲಿ ಗೊಂಬೆ ಕುಣಿಯುತ್ತಿರುವುದೇನು? " ಎಂದು ಕೆಕ್ಕರಿಸಿ ನುಡಿದರು. ಅವರ ಅಬ್ಬರಕ್ಕೆ ನಾನು ಹೆದರಿ ಕಂಗಾಲಾಗಿ ಬಿಟ್ಟೆ " ತಪ್ಪಾಯ್ತು ಕ್ಷಮಿಸಿ" ಎಂದು ಕೈಮುಗಿದೆ. "ಹುಶ್ಯಾರ್" ಎಂದ ಅವರು ನಗಾಡುತ್ತಾ ನನ್ನ ಬೆನ್ನು ತಟ್ಟುತ್ತಾ "ತಮಾಷೆಗೆ ಹಾಗೆ ನುಡಿದೆ, ಬೇಸರಿಸಬೇಡ ತಮ್ಮಾ" ಎಂದು ಹೇಳಿ ತಮ್ಮ ಸ್ಥಾನದಲ್ಲಿ ಹೋಗಿ ಕುಳಿತರು. ಆಮೇಲೆ ತಿಳಿಯಿತು ಅವರು ಬಾಲಕೃಷ್ಣ ಪೈ ಎಂದು. ಕುಳ್ಳಗಿದ್ದ ಅವರನ್ನು ತರಗತಿಯವರೆಲ್ಲಾ ಕುಳ್ಳಪ್ಪು ಎಂತಲೇ ಕರೆಯುತಿದ್ದರು. ಮುಂದೆ ಅವರು ತಮ್ಮ "ಆಕಸ್ಮಿಕ" ಎಂಬ ಚಲನಚಿತ್ರಕ್ಕೆ ನಮ್ಮ ಶಾಲೆಯುಲ್ಲಿ ಚಿತ್ರೀಕರಣ ಇಟ್ಟುಕೊಂಡಾಗ ಸಹಪಾಠಿ ಎಂಬ ವಾತ್ಸಲ್ಯದಿಂದ ನನಗೊಂದು ಚಿಕ್ಕ ಪಾತ್ರ ನೀಡಿದ್ದರು. ನಿರ್ದೇಶಕರ ಸೂಚನೆಯಂತೆ ಚೆನ್ನಾಗಿ ನಟಿಸಿದ್ದೆ ಕೂಡಾ. ಆದರೆ ನನಗೆ ಚಿತ್ರನಟನಾಗುವ ಯೋಗವಿಲ್ಲವೋ, ಕುಳ್ಳಪ್ಪುಗೆ ನಿರ್ಮಾಪಕನಾಗುವ ಭಾಗ್ಯ ಇಲ್ಲವೋ ಆ ಚಿತ್ರ ಬಿಡುಗಡೆಯಾಗದೆ ಡಬ್ಬದಲ್ಲೇ

ಉಳಿಯುವಂತಾಯಿತು. ಆಕಸ್ಮಿಕವಾಗಿ ದೊರೆತ ಅವಕಾಶವೊಂದು ಬಂದಂತೆ ಮಾಯವಾಯಿತು.

ಹೈಸ್ಕೂಲ್ ಸೇರಿ ಒಂದು ತಿಂಗಳು ಪಾಠ ನಡೆದರೂ ನನಗೆ ಇಂಗ್ಲೀಷ್ ಪಾಠ ಏನೇನೂ ಅರ್ಥವಾಗುತ್ತಿರಲಿಲ್ಲ. ಕಾರಣ ಇಂಗ್ಲೀಷ್ ಪಾಠ ಮಾಡುತ್ತಿದ್ದ ಯು. ಎನ್. ಐತಾಳ ಎನ್ನುವವರು ಒಂದೂ ಕನ್ನಡ ಶಬ್ಧ ಉಪಯೋಗಿಸದೆ ಕೇವಲ ಇಂಗ್ಲೀಷಿನಲ್ಲಿಯೇ ಪಾಠ ವಿವರಿಸುತ್ತಿದ್ದರು. ಕಠಿಣ ಶಬ್ಧದ ಅರ್ಥವನ್ನೂ ಕೂಡಾ ಇಂಗ್ಲೀಷಿನಲ್ಲಿಯೇ ಹೇಳುತಿದ್ದರು. ಏನೂ ಅರ್ಥವಾಗದೆ ನಾನು ಕಂಗಾಲಾದೆ. ಒಂದು ದಿನ ಪಾಠದ ಅವಧಿ ಮುಗಿದ ಮೇಲೆ ಯು. ಎನ್. ಐತಾಳರಲ್ಲಿ ಹೋಗಿ ಕಣ್ಣೀರಿಡುತ್ತಾ "ಸರ್, ನನಗೆ ಇಂಗ್ಲೀಷ್ ಪಾಠ ಏನೇನೂ ತಿಳಿಯುತ್ತಿಲ್ಲ, ನನ್ನನ್ನು ಪುನಃ 8ನೇ ತರಗತಿಗೆ ಸೇರಿಸಿಕೊಳ್ಳುವಂತೆ ಮುಖ್ಯೋಪಾಧ್ಯಾಯರಿಗೆ ತಿಳಿಸಿ ಉಪಕಾರ ಮಾಡಿ. ಅಲ್ಲಿ ಒಂದು ವರ್ಷ ಅಭ್ಯಾಸ ಮಾಡಿ ಇಂಗ್ಲೀಷಿನಲ್ಲಿ ಅನುಭವ ಹೆಚ್ಚಿಸಿಕೊಳ್ಳುತ್ತೇನೆ" ಎಂದಾಗ ಅದುವರೆಗೆ ನಗುವನ್ನೇ ಕಾಣದ ಅವರ ಮುಖದಲ್ಲಿ ನಗೆ ಮಿನುಗಿತು. ನನ್ನನ್ನು ಹತ್ತಿರಕ್ಕೆ ಎಳೆದುಕೊಂಡು ಬೆನ್ನು ಸವರುತ್ತಾ" ಹೆದರಬೇಡಪ್ಪಾ. ಎಲಿಮೆಂಟರಿ ಶಾಲೆಯಿಂದ ಬಂದ ಎಲ್ಲಾ ವಿದ್ಯಾರ್ಥಿಗಳ ಪಾಡು ಇದೆಯೇ. ಮುಂದೆ ಎಲ್ಲವೂ ಸರಿ ಹೋಗುತ್ತದೆ. ನೀನೊಂದು ಇಂಗ್ಲಿಷ್ ಕನ್ನಡ ನಿಘಂಟನ್ನು ತೆಗೆದುಕೊಂಡು ಕಠಿಣ ಶಬ್ಧದ ಅರ್ಥ ಬರೆದುಕೊಳ್ಳು, ವ್ಯಾಕರಣ ಪಾಠ ಮಾಡುವಾಗ ಗಮನಕೊಟ್ಟು ಕೇಳು. ಏನೂ ಅರ್ಥವಾಗದ ವಿಷಯವಿದ್ದರೆ ಬಂದು ನನ್ನಲ್ಲಿ ಕೇಳಿ ತಿಳಿದುಕೋ ನಿನ್ನನ್ನು ಇಂಗ್ಲಿಷಿನಲ್ಲಿ ಪಾಸಾಗುವಂತೆ ಮಾಡುವ ಜವಾಬ್ದಾರಿ ನನ್ನದು" ಎಂದು ಧೈರ್ಯ ತುಂಬಿಸಿ ಕಳಿಸಿದರು. ಅವರೆಂದಂತೆ ನಡೆದುಕೊಂಡೆ ಪ್ರಥಮ ಪರೀಕ್ಷೆಯಲ್ಲಿ ನಪಾಸಾದ ನಾನು 2ನೇ ಪರೀಕ್ಷೆಯಲ್ಲಿ ಸಾಮಾನ್ಯ ಅಂಕ ಪಡೆದು ಉತ್ತೀರ್ಣನಾದೆ ಮುಂದೆ ಎಂದೂ ಇಂಗ್ಲೀಷಿನಲ್ಲಿ ಫೇಲಾದುದೇ ಇಲ್ಲ. ಆ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿ ತೇರ್ಗಡೆ ಹೊಂದಿ 10ನೇ ತರಗತಿಗೆ ಸೇರಿದೆ.

2ನೇ ವರ್ಷದಲ್ಲಿ ಇನ್ನೊಂದು ಸಮಸ್ಯೆ ನನ್ನನ್ನು ಕಾಡಿತು. ಹಾಸ್ಟೇಲಿನ ಊಟ, ಅಲ್ಲಿ ಇರುವವರ ಒಡನಾಟ, ನನಗೆ ಏಕೋ ಹಿಡಿಸಲಿಲ್ಲ. ಹಾಗಾಗಿ ಹಾಸ್ಟೇಲು ಬಿಟ್ಟೆ. ಪ್ರತಿ ದಿನ ನನ್ನ ತವರೂರಾದ ಕಂದಾವರದಿಂದ ಬಸ್ರೂರು ಆನಗಳ್ಳಿ ಮಾರ್ಗವಾಗಿ ಹೈಸ್ಕೂಲಿಗೆ ಬಂದು ಹೋಗಲು ಆರಂಭಿಸಿದೆ. ಬೆಳಿಗ್ಗೆ ಮನೆಯಲ್ಲಿ ಊಟ ಮಾಡಿ,

ಮಧ್ಯಾಹ್ನ ಹೋಟೇಲಿನಲ್ಲಿ ಊಟ ಮಾಡುತ್ತಿದ್ದೆ. ಸಂಜೆ ಶಾಲೆ ಬಿಟ್ಟೊಡನೆ ನೇರವಾಗಿ ಮನೆಗೆ ಬರುತ್ತಿದ್ದೆ. ದಿನಕ್ಕೆ ಸಾಧಾರಣ 19–20 ಕಿ.ಮೀ. ನಡೆಯಬೇಕಿತ್ತು. ಹೋಗಿ ಬರುವುದರೊಳಗೆ ಸುಸ್ತಾಗಿ ಬಿಡುತಿದ್ದೆ. ಓದಲು, ಬರೆಯಲು ಕುಳಿತರೆ ಆಯಾಸದಿಂದ ನಿದ್ರೆಗೆ ಜಾರುತಿದ್ದೆ. ಶಾಲೆಯಿಂದ ಮನೆಗೆ ಬರುವಾಗಲೇ ಕತ್ತಲಾಗುತಿತ್ತು. ಮನೆಯಲ್ಲಿ ಅಜ್ಜ, ಅಜ್ಜಿ ಮಾತ್ರ ಇದ್ದುದರಿಂದ ಸಂಜೆ ಕಾಫಿ, ತಿಂಡಿ ವ್ಯವಸ್ಥೆ ಇರುತ್ತಿರಲಿಲ್ಲ. ಶಾಲೆ ಬಿಟ್ಟೊಡನೆ ಹೊರಡಬೇಕಾದುದರಿಂದ ಹೋಟೇಲಿನಲ್ಲಿ ಕಾಫಿ ಕುಡಿಯಲು ಸಮಯ ಸಿಗುತ್ತಿರಲಿಲ್ಲ. ಸಿಕ್ಕಿದರೂ ಕಿಸೆಯ ಭಾರವು ಅಷ್ಟಕಷ್ಟೇ.

ಇಂತಹ ಸಂದರ್ಭದಲ್ಲಿ ಅದೃಷ್ಟವಶಾತ್ ನೆರಮನೆಯ ಒಬ್ಬಾಕೆ ನನಗೆ ತಾಯಿಯಂತೆ ಉಪಚರಿಸಲು ದೊರೆತಳು. ಆಕೆ ನನ್ನ ಕುಟುಂಬದವಳೇ ಆಗಿದ್ದು ಸಂಬಂಧದಲ್ಲಿ ಅಕ್ಕನಾಗಬೇಕು. ಹೆಸರಿಗೆ ತಕ್ಕಂತೆ ಆಕೆ ಶೀಲವತಿಯೇ ಆಗಿದ್ದಳು. ಮನೆಯಲ್ಲಿ ನನಗೆ ತಿಂಡಿ ಕಾಫಿ ವ್ಯವಸ್ಥೆ ಇಲ್ಲದುದನ್ನು ತಿಳಿದ ಆಕೆ ತನ್ನ ಮನೆಯಲ್ಲಿ ಮಾಡಿದ್ದ ತಿಂಡಿಯನ್ನು ನನಗಾಗಿ ತೆಗೆದಿಟ್ಟು, ನಾನು ಶಾಲೆಯಿಂದ ಬಂದೊಡನೆ ಕರೆದುಕೊಡುತ್ತಿದ್ದಳು. ರಜಾ ದಿನಗಳಲ್ಲಿ ಅವಳ ಮನೆಯಲ್ಲಿ ಏನಾದರೂ ವಿಶೇಷ ಊಟವಿದ್ದರೆ ನನ್ನನ್ನು ಕರೆದು ಉಣ–ಬಡಿಸುತಿದ್ದಳು. ಏನೂ ತಿಂಡಿಮಾಡದ ದಿನ ಹಪ್ಪಳವನ್ನೋ ಸುಟ್ಟ ಗೇರು ಬೀಜವನ್ನೋ ಕೊಟ್ಟು ನನ್ನ ಹಸಿವನ್ನು ತಣಿಸುತ್ತಿದ್ದಳು. ಅಲ್ಲಿರುವ ಒಂದು ವರ್ಷ ಪರಿಯಂತ ಹೆತ್ತಮ್ಮನಂತೆ ನನ್ನನ್ನು ಉಪಚರಿಸಿದಳು. ವಾತ್ಸಲ್ಯದಿಂದ ಕಂಡುಕೊಂಡಳು. ಕೆಲವೊಮ್ಮೆ ಕೊಳಕಾದ ನನ್ನ ಬಟ್ಟೆಯನ್ನೂ ತೊಳೆದು ಕೊಟ್ಟುದುಂಟು. ಈಗ ಆಕೆ ತನ್ನ ಗಂಟು ನೋವಿನಿಂದ ಕುಂಟುತ್ತಾ ನಡೆಯುವುದನ್ನು ಕಂಡಾಗ ಹೃದಯ ಹಿಂಡಿದ ಅನುಭವವಾಗುತ್ತದೆ. ಆಕೆಯು ಅಂದು ಮಾಡಿದ ಉಪಚಾರವನ್ನು ಸ್ಮರಿಸುತ್ತಾ ಆಕೆಯ ಕಾಲಿಗೆರಗುತ್ತೇನೆ. ಅಂತಹ ನೋವಿನಲ್ಲೂ ಕೃತಕ ನಗೆಯಾಡುತ್ತಾ, ಬೆನ್ನು ಸವರುತ್ತಾ ಹರಸುತ್ತಾಳೆ ಆ ಮಹಾತಾಯಿ.

10ನೇ ತರಗತಿಯಿಂದ ಉತ್ತಮ ಅಂಕಗಳಿಸಿ 11ನೇ ತರಗತಿಗೆ ತೇರ್ಗಡೆ ಹೊಂದಿದೆ. ಆ ವರ್ಷ ಪಬ್ಲಿಕ್ ಪರೀಕ್ಷೆ. ಓದಲು ಬರೆಯಲು ತುಂಬಾ ಇರುವುದರಿಂದ ಮನೆಗೆ ಹೋಗಿ ಬರುವುದು ಅಸಾಧ್ಯವಾಯಿತು. ಕುಂದಾಪುರದಲ್ಲೇ ಒಂದು ಕೋಣೆಯನ್ನು ಬಾಡಿಗೆ ಪಡೆದು, ಸೋಮ ಶೆಟ್ಟರ ಹೋಟೇಲಿನಲ್ಲಿ ಊಟದ ವ್ಯವಸ್ಥೆ ಮಾಡಿಕೊಂಡೆ. ನನ್ನ ಬಾಡಿಗೆ ಕೋಣೆಗೆ ಪ್ರತಿಭಾವಂತ ವಿದ್ಯಾರ್ಥಿ ಅಣ್ಣಯ್ಯ ಶೆಟ್ಟಿ ಎಂಬವನು ಬಂದು ಸೇರಿಕೊಂಡ. ಅವನ ಸೇರ್ಪಡೆಯಿಂದ ನನಗೆ 2 ರೀತಿಯ

ಲಾಭವಾಯಿತು. ಕೋಣೆಯ ಬಾಡಿಗೆಗೆ ಪಾಲುದಾರನಾದ; ವ್ಯಾಸಂಗದಲ್ಲಿ ತುಂಭಾ ಸಹಾಯಕನಾದ ಆತನ ಸಂಪರ್ಕದಿಂದ ಪಬ್ಲಿಕ್ ಪರೀಕ್ಷೆಯಲ್ಲಿ ನಾನು ಉತ್ತಮ ಅಂಕಗಳಿಸಲು ಸಾಧ್ಯವಾಯಿತು. ಆತನು ಶಾಲೆಗೆ 2ನೇ ಸ್ಥಾನದಲ್ಲಿ ನಾನು 3ನೇ ಸ್ಥಾನದಲ್ಲಿ ತೇರ್ಗಡೆ ಹೊಂದಿದೆವು. ಪ್ರತಿಭಾವಂತನಾದ ಆತ ಮುಂದೆ ಟೆಕ್ಸ್‌ಟೈಲ್ ಇಂಜೀನಿಯರ್ ಆಗಿ ತುಂಬಾ ಕೀರ್ತಿಗಳಿಸಿದ.

2 ತಿಂಗಳು ರಜೆಯಾದುದರಿಂದ ಹತ್ತಿರದಲ್ಲಾಗುತಿದ್ದ ಬಯಲಾಟ ನೋಡುತ್ತ, ಓಣಿಯ ಮಕ್ಕಳೊಡನೆ ಆಟವಾಡುತ್ತಾ, ಅಮ್ಮನ ರುಚಿಕಟ್ಟಾದ ಊಟ ಮೆಲ್ಲುತ್ತಾ ಸಂತೋಷದಿಂದ ಕಾಲ ಕಳೆದೆ. ಇಂತಹ ಸಮಯದಲ್ಲಿ ಒಂದು ದಿನ ನನ್ನ ದೊಡ್ಡಮ್ಮನ ಮಗ ಕೊರಗಯ್ಯ ಎಂಬಾತ ನಮ್ಮಲ್ಲಿಗೆ ಬಂದ. ಆತನು ಕೂಡಾ ಎಸ್.ಎಸ್.ಎಲ್.ಸಿ. ಪಾಸಾಗಿ ರಜೆಯಲ್ಲಿದ್ದುದರಿಂದ ಚಿಕ್ಕಮ್ಮನನ್ನು ಕಂಡು ಮಾತಾಡಿ ಹೋಗಲು ಬಂದಿದ್ದ. ಆತ ತುಂಬ ಗುಣವಂತ, ತಾಯಿ, ಚಿಕ್ಕ ತಾಯಿ ಎಂಬ ಭೇದವಿಲ್ಲದೆ ಎಲ್ಲರನ್ನು ಸಮಭಾವನೆಯಿಂದ ಕಾಣುವ ಉದಾರ ಹೃದಯಿ ಎಲ್ಲರ ಕಷ್ಟಕ್ಕೆ ಸ್ಪಂಧಿಸುವ ದೊಡ್ಡಗುಣ. ನಮ್ಮ ಕುಟುಂಬದಲ್ಲಿ ಎಲ್ಲರಿಗೂ ಈತನ ಬಗೆಗೆ ತುಂಬಾ ಪ್ರೀತಿ. ಆತನು ಬಂದುದನ್ನು ಕಂಡು ನನ್ನ ತಂದೆ, ತಾಯಿಯರಿಗೆ ತುಂಬಾ ಆನಂದವಾಯಿತು. ಆತ ನನ್ನನ್ನು ಕಂಡು ಪ್ರೀತಿಯಿಂದ ಮಾತಾಡಿಸಿದ ನನ್ನ ಅಂಕದ ಪಟ್ಟಿಯನ್ನು ಕಂಡು ಖುಷಿಪಟ್ಟ. ಆತನು 4-6 ದಿನವಿದ್ದು ಹೊರಡಲು ಅನುವಾದಾಗ ನನ್ನ ತಾಯಿ ಆತನೊಡನೆ "ನೋಡು ಮಗ, ನಿನ್ನ ಚಿಕ್ಕಪ್ಪ ಹಣಮಾಡಿಕೊಂಡವರಲ್ಲ. ಕಷ್ಟದಿಂದಲಾದರೂ ರಘುವನ್ನು ಸಾಧ್ಯವಾದಷ್ಟು ಓದಿಸಬೇಕೆಂಬ ಆಸೆಯಲ್ಲಿದ್ದೇವೆ. ನೀನು ಎಲ್ಲಿಯವರೆಗೆ ಓದುವಿಯೋ ಅಲ್ಲಿಯವರೆಗೆ ಇವನನ್ನು ಓದಿಸಬೇಕೆಂಬ ಸಂಕಲ್ಪ ನಮ್ಮದು. ನೀನು ಯಾವ ಉದ್ಯೋಗಕ್ಕೆ ಸೇರುವಿಯೋ ಅದೇ ಉದ್ಯೋಗಕ್ಕೆ ಆತನನ್ನು ಸೇರಿಸುವ ಬಯಕೆ ನನ್ನದು, ಈತನನ್ನು ನಿನ್ನ ಚಿಕ್ಕಮ್ಮನ ಮಗನೆಂದು ತಿಳಿಯದೆ ಒಡಹುಟ್ಟಿದ ತಮ್ಮನಂತೆ ನೀನು ನೋಡಿಕೊಳ್ಳಬೇಕು. ನೀವಿಬ್ಬರೂ ರಾಮಲಕ್ಷ್ಮಣರಂತೆ ಅನ್ಯೋನ್ಯತೆಯಿಂದ ಬಾಳಬೇಕೆಂಬುದು ನನ್ನ ಹಿರಿದಾದ ಆಸೆ. ಈ ವಿಚಾರದಲ್ಲಿ ನಿನ್ನಿಂದ ಸಾಧ್ಯವಾದ ಸಹಾಯ ನೀಡಿ ಸಹಕರಿಸಬೇಕು " ಎಂದು ಕೇಳಿಕೊಂಡಳು. ಹಾಗೆ ಕೇಳಿಕೊಳ್ಳುವಾಗ ಆಕೆಯ ಕಣ್ಣಿನಲ್ಲಿ ನೀರಿಳಿಯುವುದನ್ನು ಕಂಡ ಆತ "ಅಳುವಂತಹದು ಏನು ಬಂತು ಚಿಕ್ಕಮ್ಮ ಈತನ ಬಗ್ಗೆ ನನ್ನಿಂದ ಆಗಬಹುದಾದ ಸಹಾಯ ಖಂಡಿತ ಮಾಡುತ್ತೇನೆ. ನೀನೇನೂ ಯೋಚಿಸದೆ ಸಮಾಧಾನದಿಂದಿರು"

ಎಂದು ಸಾಂತ್ವನದ ಮಾತಾಡಿ ಹೊರಟುಹೋದ. ಆತನ ಅಭಯದ ಮಾತಿನಿಂದ ಅಮ್ಮನಿಗೆ ಎಷ್ಟೋ ಸಮಾಧಾನ ಆದಂತಿತ್ತು. ಇಂದಿಗೂ ಆ ದೃಶ್ಯ ನನ್ನ ಕಣ್ಣಿಗೆ ಕಟ್ಟಿದಂತಿದೆ. ಕುಂತಿದೇವಿ ತನ್ನ ಮಕ್ಕಳ ರಕ್ಷಣೆಯ ಭಾರವನ್ನು ಶ್ರೀ ಕೃಷ್ಣನಿಗೆ ಒಪ್ಪಿಸಿದಂತಿತ್ತು ಆ ದಿನದ ಆ ಸಂದರ್ಭ.

ಎಸ್.ಎಸ್.ಎಲ್.ಸಿ. ಯ ಸರ್ಟಿಫಿಕೇಟಿನೊಂದಿಗೆ ಹೈಸ್ಕೂಲಿನಿಂದ ಬಿಡುಗಡೆಗೊಂಡು ಊರಿಗೆ ಹೊರಟ ನಾನು ಚಿಕ್ಕನಸಾಲು ಕಡವಿನದೋಣಿಯನ್ನೇರಿದಾಗ ಅದೇ ದೋಣಿ ಹತ್ತಿದ ಹಿರಿಯರೊಬ್ಬರು ನನ್ನ ಸರ್ಟಿಫಿಕೇಟಿನ ಅಂಕಗಳನ್ನು ನೋಡಿ ಸಂತೋಷ ಪಟ್ಟು ಬೆನ್ನು ತಟ್ಟಿದರು. ನನ್ನ ಪರಿಚಯ ಕೇಳಿದ ಅವರು "ನೀನು ನನ್ನ ಸಂಬಂಧಿಯಪ್ಪ. ನಿನ್ನ ತಂದೆಯ ಪರಿಚಯ ನನಗಿದೆ. ಇಷು ಒಳ್ಳೆಯ ಮಾರ್ಕ್ ಇರುವಾಗ ಕಾಲೇಜಿಗೆ ಸೇರಲೇಬೇಕು. ನಾನು ಇಲ್ಲೇ ಆನಗಳ್ಳಿಯಲ್ಲಿ ಇದ್ದೇನೆ. ನನ್ನ ಹೆಸರು ಶೀನಪ್ಪ ಶೆಟ್ಟಿ (ಕೊತ್ತಾಡಿ) ಎಂದು. ನಿನ್ನ ತಂದೆಯವರನ್ನು ನನ್ನಲ್ಲಿ ಕಳುಹಿಸಿಕೊಡು. ಅವರಿಗೆ ನಾನು ಹೇಳುತ್ತೇನೆ" ಎನ್ನುವ ಆಶ್ವಾಸನೆ ನೀಡಿ ನನಗೆ ಕಾಲೇಜಿನ ಭ್ರಾಂತಿ ಹಿಡಿಸಿದರು. ಎಷ್ಟೇ ಕಷ್ಟವಾಗಲೀ ಕಾಲೇಜಿಗೆ ಸೇರಲೇಬೇಕು ಎಂಬ ಉತ್ಕಟ ಅಭಿಲಾಷೆ ನನ್ನಲ್ಲಿ ನೆಲೆಯೂರಿತು.

ಅದೇ ಸಮಯ ನನ್ನ ತಂಗಿಯಾದ ಶ್ರೀಮತಿಯ ಮದುವೆಯಾಯಿತು. ತಂದೆಯವರಲ್ಲಿರುವ ಹಣವೆಲ್ಲಾ ಖರ್ಚಾಗಿ ಸಾಲದ ಭಾರವೂ ಹೆಗಲೇರಿತು. ಆಗ ನಮಗೆ ಉತ್ತಿರದ ಕಾಲೇಜೆಂದರೆ ಮಂಗಳೂರು. "ಈ ಪರಿಸ್ಥಿತಿಯಲ್ಲಿ ನನಗೆ ಕಾಲೇಜಿಗೆ ಸೇರಿಸಲು ಸಾಧ್ಯವಿಲ್ಲ, ಮುಂದಿನ ವರ್ಷಕ್ಕಾದರೆ ಯಾರನ್ನಾದರೂ ಹಿಡಿದು ಕಾಲೇಜಿಗೆ ಸೇರಿಸಲು ಪ್ರಯತ್ನಿಸುತ್ತೇನೆ" ಎಂದು ತಂದೆ ತಿಳಿಸಿದರು. ಅದೇ ಸಮಯ ವಿಜಯ ಬ್ಯಾಂಕಿಗೆ ಸೇರುವ ಒಂದು ಅವಕಾಶ ಬಂದರೂ ಕಾಲೇಜಿನ ಆಸೆಯಿಂದ ಅದನ್ನು ಬಿಟ್ಟು ಮುಂದಿನ ವರ್ಷಕ್ಕಾಗಿ ಕಾಯುತ್ತಾ ಕುಳಿತೆ.

ಒಂದು ದಿನ ಸಂಜೆಯ ಹೊತ್ತು ಕೊರಗಣ್ಣನು ಒಳ್ಳೆಯ ಉಡುಪು ಧರಿಸಿಕೊಂಡು ಕೈಯಲ್ಲಿ ಒಂದು ಬ್ಯಾಗ್ ಹಿಡಿದುಕೊಂಡು ಮನೆಯ ಒಳಗೆ ಪ್ರವೇಶಿಸಿದ. ಮುನ್ಸೂಚನೆಯಿಲ್ಲದೆ ದಿಡೀರಾಗಿ ಬಂದ ಆತನನ್ನು ಕಂಡು ನಮಗೆಲ್ಲಾ ಆಶ್ಚರ್ಯವಾಯಿತು. ಆಗ ಆತನೇ "ಗಾಬರಿಯಾಗಬೇಡಿ ನನಗೆ ಮಂಗಳೂರು ಬೇಸಿಕ್ ಶಿಕ್ಷಕರ ತರಬೇತಿ ಶಾಲೆಯಿಂದ ಇಂಟರ್‌ವ್ಯೂ ಕಾರ್ಡ್ ಬಂದಿದೆ. ನಾಳೆಯೇ ಇಂಟರ್‌ವ್ಯೂ ಹಾಗೆ ಹೊರಟವನಿಗೆ ರಘು ನೆನಪಾದ. ಅವನ ಕತೆಯೇನು?

ಕೇಳಿ ಹೋಗೋಣ ಎಂದು ನೇರವಾಗಿ ಇಲ್ಲಿಗೆ ಬಂದೆ" ಎಂದಾಗ ನನ್ನ ತಂದೆ "ಆತನಿಗೆ ಕಾಲೇಜಿನ ಗಿರ ಹತ್ತಿದೆ. ಯಾರೋ ಕಡವು ದಾಟುವಾಗ ಇವನಿಗೆ ಹೇಳಿದ್ದರಂತೆ, ಕಾಲೇಜಿಗೆ ಸೇರು ಅಂತ. ಆ ಮೇಲೆ ಅವರ ಸುದ್ಧಿಯೇ ಇಲ್ಲ. ನಾನಂತೂ ಮಗಳ ಮುದುವೆಯಿಂದಾಗಿ ಕೈ ಖಾಲಿ ಮಾಡಿಕೊಂಡು ಕುಳಿತಿದ್ದೇನೆ. ಇವನನ್ನು ಕಾಲೇಜಿಗೆ ಕಳುಹಿಸುವುದು ಮುಂದಾದರೂ ಸುಲಭವಾ ಮಗ! ನೀನೇ ಅವನಿಗೆ ಬುದ್ಧಿ ಹೇಳು" ಎಂದರು. ಅದಕ್ಕೆ ಕೊರಗುವಣ್ಣ ದುಬಾರಿಯಾಗಿದ್ದ ಕಾಲೇಜಿನ ವಿದ್ಯಾಭ್ಯಾಸದ ಕುರಿತು ವಿವರಿಸುತ್ತಾ "ರಘೂ, ಅದು ಸಾಧ್ಯವಾಗುವ ಮಾತಲ್ಲ, ನನ್ನೊಡನೆ ನಾಳಿನ ಇಂಟರ್‌ವ್ಯೂಗೆ ಬಾ, ನಿನ್ನ ಮಾರ್ಕ್ಸ್ ಒಳ್ಳೆಯದಿರುವುದರಿಂದ ಸಿಲೆಕ್ಟ ಆಗುವುದು ಕಷ್ಟವಲ್ಲ" ಎಂದು ಭರವಸೆಯ ಮಾತಾಡಿದ. ಆಗ ನಾನು "ಶಿಕ್ಷಕರ ತರಬೇತಿಗೆ ನಾನು ಅರ್ಜಿಯೇ ಹಾಕಿಲ್ಲ, ಅಂದ ಮೇಲೆ ಇಂಟರ್‌ವ್ಯೂಗೆ ಹೇಗೆ ಬರಲಿ ?" ಎಂದಾಗ ಕೊರಗುವಣ್ಣ" ಅರ್ಜಿ ಹಾಕಿ ಇಂಟರ್‌ವ್ಯೂ ಕಾರ್ಡ್ ತಲಪದವರು ಬರಬಹುದೆಂದು ಪತ್ರಿಕೆಯಲ್ಲಿ ಪ್ರಕಟಣೆ ಹಾಕಿದ್ದಾರೆ. ಹಾಗಾಗಿ ಅಲ್ಲಿ "ನಾನು ಅರ್ಜಿ ಹಾಕಿದ್ದೆ. ಇಂಟರ್‌ವ್ಯೂಗೆ ಕಾರ್ಡು ಬಂದಿಲ್ಲ" ಎಂದು ಒಂದು ಸುಳ್ಳು ಹೇಳಿದರಾಯಿತು. ನನ್ನೊಂದಿಗೆ ಹೊರಡು" ಎಂದಾಗ ನನ್ನ ತಾಯಿ" ಅಲ್ಲಿಗೆ ಹೋಗಿ ಬರಲು ಸಾಕಾಗುವಷ್ಟು ಹಣ ಈಗ ಇಲ್ಲವಲ್ಲ? " ಎಂದಾಗ ಕೊರಗುವಣ್ಣನು " ನಾನು ಸ್ವಲ್ಪ ಹೆಚ್ಚು ಹಣ ತಂದಿದ್ದೇನೆ ಅನುಕೂಲ ಇದ್ದಷ್ಟು ಕೊಡಿ, ಸುಧಾರಿಸುವಾ" ಎಂಬ ಭರವಸೆಯೊಂದಿಗೆ ನಾನು ಆತನೊಂದಿಗೆ ಹೊರಡುವುದೆಂದು ನಿರ್ಧಾರವಾಯಿತು. ಇದ್ದ ಬಟ್ಟೆ ಎಲ್ಲಾ ಕೊಳಕಾದುದರಿಂದ ಒಂದು ಜೊತೆ ಬಟ್ಟೆಯನ್ನು ಕತ್ತಲೆಯಲ್ಲೇ ತೊಳೆದು ಒಣಗಿಸಲಾಯಿತು. ಮರುದಿನ ಬೆಳಿಗ್ಗೆ ನಸುಕಿನಲ್ಲೇ ಸರಿಯಾಗಿ ಒಣಗದೆ ಒದ್ದೆಯಾಗಿರುವ ಬಟ್ಟೆಯನ್ನೇ ತೊಟ್ಟುಕೊಂಡು ಸರ್ಟಿಫಿಕೇಟು ಸಮೇತ ಆತನೊಂದಿಗೆ ಮಂಗಳೂರಿಗೆ ಹೊರಟೆ.

ಇಂಟರ್‌ವ್ಯೂಗೆ ಕರೆದವರನ್ನೆಲ್ಲಾ ಒಬ್ಬೊಬ್ಬರಾಗಿ ಕರೆದು ಅವರ ಸರ್ಟಿಫಿಕೇಟುಗಳ ತಪಾಸಣೆ ಮುಗಿದ ಮೇಲೆ, ಒಬ್ಬ ಪೇದೆ ಹೊರಗೆ ಬಂದು "ಅರ್ಜಿ ಕಳುಹಿಸಿ ಇಂಟರ್‌ವ್ಯೂ ಕಾರ್ಡ್ ಬಾರದ ಅಭ್ಯರ್ಥಿಗಳಿದ್ದರೆ ಬರಬಹುದು" ಎಂದಾಗ ಕೊರಗುವಣ್ಣನು ನನ್ನನ್ನು ಒಳಗೆ ದಬ್ಬಿದ. ನನ್ನ ಮಾರ್ಕ್ಸ ಕಾರ್ಡ್ ತಪಾಸಣೆ ಮಾಡಿ ಬರೆದುಕೊಂಡು ಒಂದು ಅರ್ಜಿ ಫಾರ್ಮ್‌ನ್ನು ನನ್ನ ಕೈಗಿತ್ತು ಅದನ್ನು ಭರ್ತಿ ಮಾಡಿಕೊಡುವಂತೆ ಸೂಚಿಸಿದರು. ಅವರೆಂದಂತೆ ಭರ್ತಿಮಾಡಿ ಆಫೀಸಿಗೆ

ಕೊಟ್ಟೆ "ಮಧ್ಯಾಹ್ನ 3 ಗಂಟೆಗೆ ಆಯ್ಕೆ ಆದವರ ಹೆಸರು ಪ್ರಕಟಿಸುತ್ತೇವೆ" ಎಂದು ತಿಳಿಸಿ ನಮ್ಮನ್ನೆಲ್ಲಾ ಊಟಕ್ಕೆ ಕಳುಹಿಸಿದರು. ಊಟ ಮಾಡಿ ಬಂದು ಆಯ್ಕೆ ಆದವರ ಪಟ್ಟಿ ನೋಡುವಾಗ ಕೊರಗುವಣ್ಣನ ಹೆಸರು ನಾಪತ್ತೆ. ಆದರೆ ನನ್ನ ಹೆಸರು ಆಯ್ಕೆ ಪಟ್ಟಿಯಲ್ಲಿ ಪ್ರಕಟವಾಗಿತ್ತು. ಪಟ್ಟಿ ನೋಡಿದ ನನಗೆ ಆಘಾತವಾದಂತಾಯ್ತು. ಇಷ್ಟೊಂದು ಮುತುವರ್ಜಿಯಿಂದ ನನ್ನನ್ನು ಕರೆದುಕೊಂಡು ಬಂದವನೇ ಆಯ್ಕೆಯಾಗಲಿಲ್ಲ ಎಂದು ಖಿನ್ನನಾದಾಗ "ಚಿಂತೆ ಮಾಡಬೇಡ ರಘು ನಾನು ಮಾಯಿಪಾಡಿಗೂ ಅರ್ಜಿ ಹಾಕಿದ್ದೆ ಅಲ್ಲಿಗೆ ಹೋಗುತ್ತೇನೆ, ಅಲ್ಲಿ ಆಯ್ಕೆ ಆಗಬಹುದು. ನೀನಂತೂ ಆಯ್ಕೆ ಆದೆಯಲ್ಲಾ ಅದೇ ಸಂತೋಷ" ಎಂದು ಸಮಾಧಾನಪಡಿಸಿದ ಅದೇ ದಿನ ಹೊರಟು ಊರಿಗೆ ಬಂದೆವು. ದುರಾದೃಷ್ಟವಶಾತ್ ಮಾಯಿಪಾಡಿಯಲ್ಲೂ ಆ ವರ್ಷ ಆತ ಆಯ್ಕೆಯಾಗಿಲ್ಲ. ಹಾಗಾಗಿ ಆತನ ಶಿಕ್ಷಕ ತರಬೇತಿ ಒಂದು ವರ್ಷ ವಿಳಂಬವಾಯ್ತು.

ಶಿಕ್ಷಕರ ತರಬೇತಿಗೆ ಆಯ್ಕೆ ಆಯಿತು ಆದರೆ ಹಣದ ವ್ಯವಸ್ಥೆಗೆ ದಾರಿ ತೋರದಾಯಿತು ತಂದೆಯವರು ಮಗಳಿಗೆ ಲಗ್ನ ಮಾಡಿ ಕೈ ಬರಿದಾಗಿತ್ತು. ಬೇರೆ ಏನೂ ದಾರಿ ಕಾಣದೆ ನನ್ನ ತಂಗಿಯ ಗಂಡ (ಭಾವ) ರಘುರಾಮ ಶೆಟ್ರಲ್ಲಿ ಪ್ರಸ್ತಾಪಿಸಿದಾಗ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಒಪ್ಪಿದರು. ಶಾಲೆಗೆ ಸೇರಲು ಬೇಕಾಗುವಷ್ಟು ಹಣ ಕೊಟ್ಟು ಕಳುಹಿಸಿದರು. 6 ತಿಂಗಳವರೆಗೆ ಖರ್ಚಿಗೆ ಬೇಕಾಗುವಷ್ಟು ಹಣ ಕಳುಹಿಸಿದರು. ಆಮೇಲೆ ಅವರಿಂದ ಹಣ ಕಳುಹಿಸಲು ಸಾಧ್ಯವಾಗಲಿಲ್ಲ. ಮುಂದೆ ಯಾವ ಮಾರ್ಗವೂ ಕಾಣದೆ ನನ್ನ ತಾಯಿ ತನ್ನ ಚಿನ್ನದ ಒಡವೆಗಳನ್ನು ಬ್ಯಾಂಕಿನಲ್ಲಿ ಅಡವಿಟ್ಟು ಹಣ ಕಳುಹಿಸುವ ವ್ಯವಸ್ಥೆ ಮಾಡಿದಳು. ಅಂತೂ ಕಷ್ಟದಲ್ಲಿ ಒಂದು ವರ್ಷ ಪೂರೈಸಿದೆ.

2ನೇ ವರ್ಷಕ್ಕೆ ಮತ್ತೆ ಹಣಕ್ಕಾಗಿ ಪರದಾಡಬೇಕಾಯಿತು ಆಗ ನನ್ನ ತಾಯಿ ತನ್ನ ಅಣ್ಣ ಮೋನಪ್ಪ ಶೆಟ್ರಲ್ಲಿಗೆ ಹೋಗಿ ಅವರಮನವೊಲಿಸಿ ತಿಂಗಳು ತಿಂಗಳು ಹಣ ಕಳುಹಿಸುವ ವ್ಯವಸ್ಥೆ ಮಾಡಿದಳು. ತಾಯಿ, ಭಾವ, ಮಾವ ಈ ಮೂವರ ಸಹಾಯದಿಂದ ಶಿಕ್ಷಕರ ತರಬೇತಿ ಮುಗಿಸಿದಂತಾಯ್ತು. ಈ ಮಧ್ಯೆ ಶಿಕ್ಷಕ ತರಬೇತಿ ಅವಧಿಯಲ್ಲಿ ನಡೆದುಹೋದ ಒಂದು ಆಘಾತಕಾರಿ ಘಟನೆಯ ಕುರಿತು ನಿಮ್ಮಲ್ಲಿ ಹಂಚಿಕೊಳ್ಳಬಯಸುತ್ತೇನೆ.

ಬುನಾದಿ ತರಬೇತಿ ಶಾಲೆಯಲ್ಲಿ ನಮ್ಮ ಎಲ್ಲಾ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕಿತ್ತು. ಒಂದೊಂದು ವಿಭಾಗಕ್ಕೆ ಪ್ರತಿ ತಿಂಗಳು ಒಬ್ಬೊಬ್ಬ ಮಂತ್ರಿಯನ್ನು ಆರಿಸಿ ಜವಾಬ್ದಾರಿ ವಹಿಸುತ್ತಿದ್ದರು. ಒಂದು ತಿಂಗಳಲ್ಲಿ ನಾನು ಉಗ್ರಾಣ ಮಂತ್ರಿಯಾಗಿದ್ದೆ. ಆ ತಿಂಗಳಲ್ಲಿ ಹಾಸ್ಟೆಲಿಗೆ ಬೇಕಾದ ಅಂಗಡಿ ಸಾಮಾನು, ತರಕಾರಿ ತರುವ, ಅದರ ಲೆಕ್ಕ ಇಡುವ, ಪ್ರತಿ ದಿನ ಅಡಿಗೆಗೆ ಬೇಕಾಗುವ ಸಾಮಾಗ್ರಿಯನ್ನು ಕೊಡುವ ಜವಾಬ್ದಾರಿ ನನ್ನದಾಗಿತ್ತು. ಒಂದು ದಿನ ಹಾಸ್ಟೆಲ್ ಓರ್ಡನ್ನರು ಅಂಗಡಿಗೆ ಕೊಡಲು ದೊಡ್ಡ ಮೊತ್ತದ ಹಣ (ಸಾಧಾರಣ 10 ಸಾವಿರ ಇರಬಹುದು) ನನ್ನಲ್ಲಿ ಕೊಟ್ಟಿದ್ದರು ಮಧ್ಯಾಹ್ನ ಪಾಠ ಮುಗಿದ ಮೇಲೆ ಸ್ನಾನ ಮಾಡಿ, ಬಟ್ಟೆ ಧರಿಸಿ, ಹಣ ಮತ್ತು ಸಾಮಾನು ಪಟ್ಟಿಯನ್ನು ತೆಗೆದುಕೊಂಡು ಗಡಿಬಿಡಿಯಲ್ಲಿ ಹೊರಟೆ. ಅಂಗಡಿಯಲ್ಲಿ ಸಾಮಾನು ಪಟ್ಟಿ ಕೊಟ್ಟು, ಕಾಫಿ ಕುಡಿದು ಬರಲು ಪಕ್ಕದಲ್ಲಿದ್ದ ಹೋಟೇಲಿಗೆ ಹೋದೆ. ಕಾಫಿ ಕುಡಿದು ಹಣಕೊಡಬೇಕೆಂದು ಪರ್ಸಿಗೆ ಕೈಹಾಕುವಾಗ ಪರ್ಸು ನಾಪತ್ತೆ, ಆಕಾಶ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. ಕಾರಣ ಆ ಕಾಲಕ್ಕೆ ಅದು ದೊಡ್ಡ ಮೊತ್ತವೇ ಆಗಿತ್ತು. ಕಳೆದುಹೋಯಿತೆಂದರೆ ಯಾರೂ ನಂಬಲಾರರು. ಕೊಟ್ಟು ತೀರಿಸಲು ಸಾಧ್ಯವಾಗದ ಮೊತ್ತ. ಸುಳ್ಳುಗಾರ ಎಂಬ ಅಪವಾದ ಬರುವುದು ಖಂಡಿತ. ಹೀಗೆಲ್ಲಾ ಯೋಚನೆ ಬಂದು ಮೈಯೆಲ್ಲಾ ಬೆವರ ತೊಡಗಿತು. ಹೋಟೇಲಿನವರಲ್ಲಿ ಪರ್ಸ್ ಕಳೆದು ಹೋಯ್ತು. ಹಾಸ್ಟೆಲಿಗೆ ಹೋಗಿ ಹಣ ತಂದು ಕೊಡುತ್ತೇನೆ. ಎಂದು ಹೇಳಿ ಸಾಮಾನು ಅಂಗಡಿಗೆ ಬಂದೆ. ಅಲ್ಲಿ ಎಲ್ಲಿಯಾದರು ಬಿದ್ದಿರಬಹುದುದೆಂಬ ಅನುಮಾನದಿಂದ ಹುಡುಕಾಡಿದೆ. ಇಲ್ಲ, ದಾರಿಯಲ್ಲಿ ಎಲ್ಲಿಯಾದರೂ ಬಿದ್ದು ಯಾರ ಕಣ್ಣಿಗೂ ಬೀಳದೆ ಇದ್ದರೆ ಸಿಗಬಹುದೆಂಬ ಭ್ರಾಂತಿಯಿಂದ ಅಂಗಡಿ ಸಾಹುಕಾರರಲ್ಲಿ ಕಣ್ಣೀರಿಳಿಸುತ್ತಾ ಪರ್ಸ ಕಳೆದುಹೋದ ವಿಚಾರ ತಿಳಿಸಿ, ಅಲ್ಲಿಂದ ಹೊರಡಲನುವಾದೆ ನನ್ನ ನಡುಗುವ ಸ್ವರ, ಕಣ್ಣಿನಲ್ಲಿ ಇಳಿಯುವ ನೀರು ಕಂಡು ಸಾಹುಕಾರರು "ಕುಳಿತುಕೊಳ್ಳಿ, ಸುಧಾರಿಸಿಕೊಳ್ಳಿ, ಪರ್ಸ ಸಿಕ್ಕಿದೆ" ಎಂದಾಗ "ಎಲ್ಲಿ" ? ಎಂದು ಕೇಳಿದೆ. ನೀವು ನಮ್ಮ ಅಂಗಡಿಗೆ ಹೊಕ್ಕುವ ಮೊದಲು ಅಂಗಡಿಯ ಎದುರಿಗೆ ಬಿದ್ದಿತ್ತು. ಆ ಕೂಡಲೇ ಕಂಡ ನಾನು ಓಡಿ ಹೋಗಿ ತೆಗೆದುಕೊಂಡು ಬಂದೆ" ಎಂದು ಪರ್ಸನ್ನು ನನ್ನ ಕೈಗಿತ್ತರು. ಆಗ ಉಂಟಾದ ಸಂತೋಷ ನನ್ನ ಜೀವನದಲ್ಲಿ ಹಿಂದೆಂದೂ ಆಗಿರಲಿಲ್ಲ. "ನನ್ನ ಜೀವ ಉಳಿಸಿದಿರಿ" ಎಂದು ಅವರ ಕಾಲಿಗೆರಗಲು ಹೋದಾಗ ಎತ್ತಿ ಕುಳ್ಳಿರಿಸಿದರು. ದಾರಿ ಮಧ್ಯದಲ್ಲಿ ಎಲ್ಲಿಯೂ ಬೀಳದೆ ಅಲ್ಲಿಯೇ ಬೀಳಲು ಕಾರಣವೇನೆಂದರೆ

ಯಾವಾಗಲೂ ನಾನು ಬನಿಯನ್ ಹಾಕಿದ ಮೇಲೆ ಪಂಚೆ ಉಡುತಿದ್ದೆ. ಆ ದಿನ ಗಡಿಬಿಡಿಯಲಿ ಪಂಚೆ ಉಟ್ಟ ಮೇಲೆ ಬನಿಯನ್ ಹಾಕಿದ್ದೆ ಆಮೇಲೆ ಪಂಚೆಯನ್ನು ಎತ್ತಿ ಕಟ್ಟಿದ್ದೆ. ಹೀಗಾಗಿ ಬನಿಯನ್ ಒಳಗೆ ಹಾಕಿದ ಪರ್ಸು ಪಂಚೆಯಿಂದಾಗಿ ತಡೆದು ನಿಂತಿತ್ತು. ಅಂಗಡಿ ಹತ್ತಿರ ಬಂದಾಗ ಪಂಚೆಯನ್ನು ಕೆಳಗೆ ಬಿಟ್ಟಿದ್ದೆ. ಹಾಗಾಗಿ ಅಲ್ಲಿಯವರೆಗೆ ತಡೆ ಹಿಡಿದ ಪರ್ಸು ಕೆಳಗೆ ಜಾರಿ ಬಿತ್ತು. ಕೂಡಲೇ ಸಾಹುಕಾರರ ಕಣ್ಣಿಗೆ ಬಿತ್ತು. ಅಂತೂ ಸಾಹುಕಾರರಿಂದಾಗಿ ತಪ್ಪಿಹೋಗಿತ್ತು ಪ್ರಾಣಕ್ಕೆ ಬಂದ ಕುತ್ತು.

ಶಿಕ್ಷಕರ ತರಬೇತಿ ಮುಗಿಸಿ ನಾವೆಲ್ಲಾ ಹೊರಡುವ ತರಾತುರಿಯಲ್ಲಿರುವಾಗ ಶಾಲೆಯ ಪೇದೆ ಬಂದು "ರಘುರಾಮ ಶೆಟ್ಟಿಯನ್ನು ಮುಖ್ಯೋಪಾಧ್ಯಾಯರು ಆಫೀಸಿಗೆ ಬರಹೇಳಿದ್ದಾರೆ" ಎಂದು ಹೇಳಿದಾಗ ನಾನು ಕಕ್ಕಾಬಿಕ್ಕಿಯಾದೆ. ಯಾರನ್ನೂ ಕರೆಯದೆ ನನ್ನೊಬ್ಬನನ್ನೇ ಕರೆಯಲು ಏನು ಕಾರಣ? ಯಾವ ಗಂಡಾಂತರಕಾದಿದೆಯೇ ಎಂದು ಹೆದರುತ್ತಾ ಮುಖ್ಯೋಪಾಧ್ಯಾಯರ ಎದುರಿಗೆ ಬಂದು ನಡುಗುತ್ತಾ ನಿಂತೆ. ಆಗ ಅವರು ನನ್ನನ್ನು ನೋಡಿ ನಗುತ್ತಾ "ಯಾಕೆ ನಡುಗುತ್ತಾ ಇರುವೇ ? ಯಾವ ಅಪರಾಧವು ನಿನ್ನಿಂದ ಆಗಿಲ್ಲ. ನಿನಗೆ ಎರಡು ಬುದ್ಧಿಯ ಮಾತನ್ನು ಹೇಳಲು ಕರೆದಿದ್ದೇನೆ. ಅಷ್ಟೇ" ಎಂದರೂ ನನ್ನ ಹೆದರಿಕೆ ಕಡಿಮೆಯಾಗಲಿಲ್ಲ. ಬುದ್ಧಿಯ ಮಾತನ್ನು ಎಲ್ಲರಿಗೂ ಸಾಮೂಹಿಕವಾಗಿ ಬೀಳ್ಕೊಡುವಾಗ ಹೇಳಿರುತ್ತಾ ಈಗ ಹೇಳುವಂತಹದೇನಪ್ಪಾ ಎಂದು ಭಯ. ಆಗ ಅವರು "ನೋಡಪ್ಪಾ ನಿನಗೆ ದೇವರು ತುಂಬಾ ಪ್ರತಿಭೆ ನೀಡಿದ್ದಾನೆ. ಅದರ ಸದುಪಯೋಗ ನೀನು ಮಾಡಿಕೊಳ್ಳಬೇಕು. ಅಧ್ಯಾಪಕ ವೃತ್ತಿ ಹಣಗಳಿಕೆಯ ವೃತ್ತಿಯಲ್ಲ, ಉತ್ತಮ ಮನುಷ್ಯರನ್ನು ಸೃಷ್ಟಿಸುವ ಪುಣ್ಯ ಕಾರ್ಯ. ಆದ್ದರಿಂದ ನಿಷ್ಠೆಯಿಂದ ನಿನ್ನ ಕರ್ತವ್ಯ ಮಾಡಿ ಧನ್ಯನಾಗುವುದರೊಂದಿಗೆ ಅವರ ಜೀವನವನ್ನು ಉತ್ತಮಗೊಳಿಸಿ, ವೃತ್ತಿಗೆ ಗೌರವ ತಂದು ಕೊಡಬೇಕು. ನನ್ನ ಮಾತನ್ನು ಸದಾ ನೆನಪಿನಲ್ಲಿಟ್ಟುಕೊಂಡು ಮುನ್ನಡೆ. ದೇವರು ನಿನಗೆ ಒಳ್ಳೆಯದು ಮಾಡಲಿ" ಎಂದು ತಲೆಮುಟ್ಟಿ ಆಶೀರ್ವಾದ ಮಾಡಿದರು "ನಿಮ್ಮ ಮಾತನ್ನು ನಡೆಸುತ್ತೇನೆ ಗುರು" ಎಂದು ಹೇಳಿ. ಅವರ ಪಾದ ಮುಟ್ಟಿ ನಮಸ್ಕರಿಸಿ ಸಮಾಧಾನದಿಂದ ಹೊರಬಂದೆ. ಅಂದಿನ ಆ ಸಂದರ್ಭ ಶ್ರೀರಾಮನು ಕಪಿಗಳನ್ನು ಸೀತಾನ್ವೇಷಣೆಗೆ ಕಳುಹಿಸುವಾಗ ಹನುಮಂತನನ್ನು ಪ್ರತ್ಯೇಕ ಕರೆದು

ಉಂಗುರ ಕೊಟ್ಟು ಕಳುಹಿಸಿದ ಘಟನೆ ನೆನಪಾಗಿ ಈಗಲೂ ಆ ಗುರು ದೇವನ ಮಾತು ಪ್ರತಿಧ್ವನಿಸುತ್ತಿರುತ್ತದೆ.

ಅಮ್ಮನ ಮಹದಾಸೆಯಂತೆ ಅಧ್ಯಾಪಕ ತರಬೇತಿಯನ್ನು ಪೂರೈಸಿ ಮನೆಗೆ ಬರುತ್ತಿರುವ ನನ್ನನ್ನು ಸಂಭ್ರಮದಿಂದ ಸ್ವಾಗತಿಸಬಹುದೆಂಬ ಎಣಿಕೆಯಲ್ಲಿ ಸಂತೋಷದಿಂದ ಮನೆಗೆ ಆಗಮಿಸಿದೆ. ಆದರೆ ಇಲ್ಲಿ ನಾನು ಕಂಡ ದೃಶ್ಯ ಒಂದು ಕ್ಷಣ ನನ್ನನ್ನು ದಂಗು ಪಡಿಸಿತು ಲವಲವಿಕೆಯಿಂದ ಓಡಾಡುವ ನನ್ನ ಅಮ್ಮ ನಡೆಯಲಾಗದೆ ಗೋಡೆ ಹಿಡಿದುಕೊಂಡು ಕುಂಟುತ್ತಾ ಹೆಜ್ಜೆ ಇಡುತಿದ್ದಳು. ಆಕೆಯ ದಮನೀಯ ಸ್ಥಿತಿಯನ್ನು ನೋಡಿ ನನಗೆ ಕಣ್ಣೀರು ಬಂತು. ಆಕೆ ವಾತ ಕಾಯಿಲೆಯಿಂದ ನರಳುತಿದ್ದಳು. ನನ್ನನ್ನು ಕಂಡಾಗ ಆ ನೋವಿನಲ್ಲೂ ಕೃತಕ ನಗೆಬೀರಿ ಸಂತೈಸಿದಳು. "ಬಸ್ರೂರು ವೈದ್ಯರ ಔಷಧ ನಡೆಯುತ್ತಿದೆ. ನಿಧಾನವಾಗಿ ಗುಣವಾಗುತ್ತದೆ" ಎಂಬ ಸಮಾಧಾನದ ಮಾತುಗಳನ್ನಾಡಿದಳು. ಕಲಿಯುತ್ತಿರುವ ನನಗೆ ವಿಷಯ ತಿಳಿಸಿದರೆ ವ್ಯಥೆಯಿಂದ ವಿದ್ಯಾಭ್ಯಾಸ ಕುಂಠಿತವಾಗಬಹುದೆಂಬ ಭಯದಿಂದ ತಿಳಿಸಬಾರದೆಂದು ತಾನೇ ಹೇಳಿದ್ದೆ ಎಂದಳು. ನನ್ನಮ್ಮನ ದಮನೀಯ ಸ್ಥಿತಿಯನ್ನು ನೆನಪಿಸಿಕೊಳ್ಳುತ್ತಾ ನಿದ್ರೆ ಇಲ್ಲದೆ ಆ ರಾತ್ರಿ ಕಳೆದೆ. ಬೆಳಿಗ್ಗೆ ಹೊಸ ಜೀವನಕ್ಕೆ ನಾಂದಿ ಹಾಡಬೇಕಿತ್ತು. ತನಗಾಗಿ ಮೀಸಲಾಗಿರಿಸಿದ ಕಂಡ್ಲೂರು ನೇತಾಜಿ ಶಾಲೆಗೆ ಸೇರುವಂತೆ ಕೊರಗುವಣ್ಣನು ಮೊದಲೇ ಸೂಚಿಸಿದ್ದ. ಎದ್ದವನೆ ನಿತ್ಯವಿಧಿ ಪೂರೈಸಿ, ದೇವರಿಗೆ ಕೈ ಮುಗಿದು, ತಂದೆ ತಾಯಿಯರ ಪಾದ ಮುಟ್ಟಿ ನಮಸ್ಕರಿಸಿ ಶಾಲೆಗೆ ಹೊರಟೆ.

2. ಶಿಕ್ಷಕ ವೃತ್ತಿಯಲ್ಲಿ

ಶಾಲೆಯ ಮುಖ್ಯೋಪಾಧ್ಯಾಯರಾದ ಬಿ. ಸುಬ್ರಾಯ ಉಡುಪರು ಹಂಗಾಮಿಯಾಗಿ ಸೇರಿಸಿಕೊಂಡಿದ್ದ, ಶಿಕ್ಷಕ ತರಬೇತಿಯಾಗದ, ಹಟ್ಟಿಯಂಗಡಿ ಗಣಪತಿ ಪುರಾಣಿಕರನ್ನು ಬಿಡುಗಡೆಗೊಳಿಸಿ ದಿನಾಂಕ 2-4-1956ರಂದು ನನ್ನನ್ನು ಶಾಲೆಗೆ ಸೇರಿಸಿಕೊಂಡು, ತರಗತಿಗೆ ಕರೆದುಕೊಂಡು ಹೋಗಿ ವಿದ್ಯಾರ್ಥಿಗಳಿಗೆ ಪರಿಚಯಿಸಿದರು. ಅಧ್ಯಾಪಕನಾಗಿ ನನ್ನ ಪ್ರಥಮ ದಿನದ ದಿನಚರಿ ಆರಂಭಿಸಿದೆ. ಆ ಶಾಲೆಯಲ್ಲಿ ಆಗ ಇದ್ದದು 6,7,8ನೇ ತರಗತಿಗಳು ಮಾತ್ರ. 8ನೇ ತರಗತಿ ಪಬ್ಲಿಕ್ ಪರೀಕ್ಷೆ ಆದಾಗಲೇ ಮುಗಿದುದರಿಂದ 6,7 ತರಗತಿಗಳು ಮಾತ್ರ ಇದ್ದವು. ಆಗ 7ನೇ ತರಗತಿಯಲ್ಲಿ ಈಗ ಪ್ರಸಿದ್ಧ ಸರ್ಜನ್ನರಾಗಿದ್ದ ಅಂಪಾರು ವಸಂತಕುಮಾರ ಶೆಟ್ಟಿ (ಎ.ವಿ.ಶೆಟ್ಟಿ) ಇದ್ದ ನೆನಪು. ಮುಂದಿನ ವರ್ಷದಲ್ಲಿ ಸಹಾಯಕ ಅಧ್ಯಾಪಕರಾದ ಅನಂತ ಗಾಣಿಗರು ತಮ್ಮ ಊರಿನ ಹತ್ತಿರದಲ್ಲಿ ಅವಕಾಶ ಸಿಕ್ಕಿದ್ದರಿಂದ ಇಲ್ಲಿಂದ ಬಿಡುಗಡೆಗೊಂಡು ಹೊರಟು ಹೋದರು. ಅವರ ಸ್ಥಾನದಲ್ಲಿ ತರಬೇತಾಗದ ಎಮ್.ಟಿ. ನಾರಾಯಣ ಶೆಟ್ಟಿ ಎನ್ನುವವರು ಸೇರ್ಪಡೆಗೊಂಡರು. ಹೀಗೆ ನಾವು 3 ಮಂದಿಗಳು 3 ತರಗತಿಗೆ ಪಾಠಗಳನ್ನು ಹಂಚಿಕೊಂಡು ವ್ಯವಸ್ಥಿತವಾಗಿ ಅಧ್ಯಾಪನ ನಡೆಸುತಿದ್ದೆವು.

ಆ ವರ್ಷ 2ನೇ ಮಹಾಚುನಾವಣೆ (1957) ನನಗೂ ಹಾಗೂ ಎಮ್.ಟಿ.ನಾರಾಯಣ ಶೆಟ್ರಿಗೂ ಒಟ್ಟಾಗಿ ಶಿವಪುರಕ್ಕೆ ಚುನಾವಣಾ ಅಧಿಕಾರಿಗಳಾಗಿ ನೇಮಕ ಮಾಡಿದ್ದರು. ಆ ಸಮಯದಲ್ಲಿ ನಡೆದ ಒಂದು ಅತಿ ಪ್ರಯಾಸದ ಪ್ರವಾಸವೊಂದರ ಅನುಭವವೊಂದನ್ನು ನಿಮ್ಮೊಡನೆ ಹಂಚಿಕೊಳ್ಳ ಬಯಸುತ್ತೇನೆ.

ಚುನಾವಣಾ ಕಾರ್ಯಮುಗಿದ ಮೇಲೆ ನಮ್ಮನ್ನು ಹೆಬ್ರಿಗೆ ಕರೆದುಕೊಂಡು ಬಂದು, ಊಟ ಹಾಗೂ ವಸತಿಯ ವ್ಯವಸ್ಥೆ ಮಾಡಿ ಇಲಾಖೆಯವರು ಹೊರಟು ಹೋದರು. ಮರುದಿನ ಬೆಳಿಗ್ಗೆ ಉಪಹಾರ ಪೂರೈಸಿಕೊಂಡು ಕುಂದಾಪುರಕ್ಕೆ ಟಿಕೇಟು ಮಾಡಿಕೊಂಡು ಬಸ್ಸನ್ನೇರಿದೆವು. ಆ ಬಸ್ಸಿನವರು ಸೋಮೇಶ್ವರದಲ್ಲಿ ನಮ್ಮನ್ನು ಇನ್ನೊಂದು ಬಸ್ಸಿಗೆ ಸ್ಥಳಾಂತರಿಸಬೇಕಿತ್ತು. ಆದರೆ ಆ ಸಮಯಕ್ಕೆ ಸೋಮೇಶ್ವರದಿಂದ ಹೊರಡುವ ಬಸ್ಸು ಹಾಳಾದುದರಿಂದ ಸಮಯಕ್ಕೆ ಸರಿಯಾಗಿ ಬಂದಿರಲಿಲ್ಲ. ಬಸ್ಸಿನವರು ನಮ್ಮನ್ನು ಸೋಮೇಶ್ವರದಲ್ಲೆ ಇಳಿಸಿ, ಅವರು ಹೊರಟುಹೋದರು. ಎಷ್ಟು ಹೊತ್ತು ಕಾದರೂ ಆ ಬಸ್ಸು ಬರಲೇ ಇಲ್ಲ. ಬೇರೆ ಬಸ್ಸಿನಲ್ಲಿ ಟಿಕೇಟು ಮಾಡಿ ಹೊರಡಲು ನಮ್ಮಲ್ಲಿ ಏನೂ ಉಳಿದಿರಲಿಲ್ಲ. ಆವರೆಗೆ ಗುಟ್ಟು ಬಿಡದ ನಾವು ನಮ್ಮಲ್ಲಿರುವ ಹಣದ ತಪಾಸಣೆ ಮಾಡಿಕೊಂಡಾಗ ಉಳಿದಿರುವುದು ಕೇವಲ ಮೂರೋ, ನಾಲ್ಕೋ

ಆಣೆಗಳು ಮಾತ್ರ. ಪರಿಚಯದವರಾರೂ ಅಲ್ಲಿ ಸಿಗಲಿಲ್ಲ. ಬೇರೆ ದಾರಿ ಕಾಣದೆ 1 ಕಟ್ಟು ಬೀಡಿ 1 ಬೆಂಕಿ ಪೆಟ್ಟಿಗೆ ತೆಗೆದುಕೊಂಡು ಸಾಧಾರಣ 10 ಗಂಟೆಗೆ ಸೋಮೇಶ್ವರದಿಂದ ನಡೆದುಕೊಂಡೇ ಹೊರಟೆವು.

ಉರಿಬಿಸಿಲಿನಲ್ಲಿ ನಡೆದುಕೊಂಡು ಹೊರಟಾಗ ಅಸಾಧ್ಯ ಬಾಯಾರಿಕೆ ಆಗುತಿತ್ತು. ಆಗ ಕಾಣಸಿಕ್ಕುವ ಹೋಟೇಲಿಗೆ ಹೋಗಿ ನೀರು ಕುಡಿದು ಕೊಂಡು ಮತ್ತೆ ಪ್ರಯಾಣ. ಹಸಿವೆಯಿಂದ ಬಳಲಿಕೆ ಬಂದಾಗ ಮತ್ತೆ ನೀರು ಕುಡಿದು ಪ್ರಯಾಣ. ನಮ್ಮ ದುರಾದೃಷ್ಟಕ್ಕೆ ಮಾರ್ಗದಲ್ಲಿ ಪರಿಚಿತರ್ಯಾರು ನಮಗೆ ಸಿಕ್ಕಿರಲಿಲ್ಲ. ಅಂತೂ ಆರ್ಡಿ, ಬೆಳ್ವೆ, ಹಾಲಾಡಿ ಮುಂತಾದ ಊರುಗಳನ್ನು ಕಾಲ್ನಡಿಗೆಯಿಂದಲೇ ಕ್ರಮಿಸಿ ಸಾಧಾರಣ ಸಂಜೆ 5ಗಂಟೆ ಹೊತ್ತಿಗೆ ಬಿದ್ಕಲ್‌ಕಟ್ಟೆಗೆ ಸೇರಿದೆವು. ಅಲ್ಲಿಗೆ ಹತ್ತಿರದ ಗಾವಳಿಯಲ್ಲಿ ನಮ್ಮ ಪರಿಚಿತ ಅಧ್ಯಾಪಕರೊಬ್ಬರಿರುವುದು ನೆನಪಾಗಿ ಅಲ್ಲಿಗೆ ಹೋಗಿ ಅವರಲ್ಲಿ ಹಣಕ್ಕಾಗಿ ಬೇಡಿಕೆಯಿಟ್ಟೆವು ಅವರಲ್ಲೂ ಹೆಚ್ಚಿಗೆ ಹಣ ಇಲ್ಲದುದರಿಂದ ಕುಂದಾಪುರಕ್ಕೆ ಹೋಗಲು ಬೇಕಾಗುವಷ್ಟು ಬಸ್ಸು ಚಾರ್ಜು ಹಾಗೂ ಇಬ್ಬರಿಗೆ ಊಟಕ್ಕೆ ಬೇಕಾಗುವಷ್ಟು ಹಣವನ್ನಿತ್ತು ಉಪಕರಿಸಿದರು. ಕುಂದಾಪುರಕ್ಕೆ ಬಸ್ಸಿನಲ್ಲಿ ಬಂದು ಹಸಿವಿನಿಂದ ತತ್ತರಿಸುತಿದ್ದ ನಾವು ಊಟ ಮಾಡಿ ಸುಧಾರಿಸಿಕೊಂಡೆವು. ಹಣವೇನೂ ಉಳಿಯದಿರುವುದರಿಂದ ಚಂದ್ರನ ಬೆಳಕಿನಲ್ಲಿ ಆನಗಳ್ಳಿ ಬಸ್ರೂರು ಮಾರ್ಗವಾಗಿ ನಡೆದುಕೊಂಡೇ ಕಂಡ್ಲೂರಿಗೆ ಸಾಧಾರಣ ರಾತ್ರಿ 12 ಗಂಟೆಗೆ ತಲುಪಿದೆವು. ಕೇಳಿದಿರಲ್ಲಾ ಚುನಾವಣಾಧಿಕಾರಿಗಳ ಅವಸ್ಥೆ!

ಈ ಮಧ್ಯೆ ಕೊರಗುವಣ್ಣನು ಶಿಕ್ಷಕ ತರಬೇತಿ ಮುಗಿಸಿ ಬಂದ. ಆಗ ಎಮ್.ಟಿ. ನಾರಾಯಣ ಶೆಟ್ರನ್ನು ಬಿಡುಗಡೆಗೊಳಿಸಿ ಆ ಸ್ಥಾನಕ್ಕೆ ಕೊರಗುವಣ್ಣನು ನೇಮಕಗೊಂಡ. ಆ ಸಮಯದಲ್ಲಿ ನಾನು ಬೇರೆ ಕಡೆಗಳಲ್ಲಿ ಕೆಲವು ನಾಟಕಗಳಲ್ಲಿ ಹಾಸ್ಯ ನಟನಾಗಿ ಹೆಸರು ಮಾಡಿದ್ದೆ. ಈ ವಿಚಾರ ತಿಳಿದ ಮುಖ್ಯೋಪಾಧ್ಯಾಯರು ವರ್ಧಂತ್ಯುತ್ಸವ ಜರಗಿಸಲು ನಿರ್ಧರಿಸಿದರು. ವಿದ್ಯಾರ್ಥಿಗಳಿಗಾಗಿ ಭಾರ್ಗವ ವಿಜಯ ಎನ್ನುವ ನಾಟಕ ನಾನೇ ರಚಿಸಿ ತರಬೇತಿಗೆ ಆರಂಭಿಸಿದೆ. ಆದರೆ ಯಕ್ಷಗಾನದಲ್ಲಿ ನನಗೆ ಪರಿಶ್ರಮವಿರುವ ವಿಚಾರ ತಿಳಿದ ಕೆಲವು ಮಿತ್ರರು ವಿದ್ಯಾರ್ಥಿಗಳಿಂದ ಯಕ್ಷಗಾನ ಮಾಡಿಸುವಂತೆ ಒತ್ತಾಯಪಡಿಸಿದರು. ಕೊನೆಗೆ ನಾನು ಆ ನಾಟಕವನ್ನೇ ಯಕ್ಷಗಾನವಾಗಿ ಪರಿವರ್ತಿಸಿ ಮಕ್ಕಳನ್ನು ತರಬೇತುಗೊಳಿಸಿದೆ. ತರಬೇತಿಯಲ್ಲಿ ನಾನೇ ಪದ್ಯಗಳನ್ನು ಹೇಳುತಿದ್ದೆ.

ನಾಟಕದ ದಿನ ವಿದ್ಯಾರ್ಥಿಗಳ ವೇಷಗಳೆಲ್ಲಾ ಸಿದ್ಧವಾಗಿದ್ದವು. ಆರಂಭಿಸುವ ಮುನ್ನ ಒಮ್ಮೆ ನೋಡಿ ಬರುವ ಎಂದು ಗ್ರೀನ್ ರೂಮಿಗೆ ಹೋದೆ ಅಲ್ಲಿ ಒಂದು ವಿಸ್ಮಯ ನನಗಾಗಿ ಕಾದಿತ್ತು. ವನಪಾಲಕನ ವೇಷದಲ್ಲಿದ್ದ ಜೇಫ್ರಿ ಎನ್ನುವ ವಿದ್ಯಾರ್ಥಿಯನ್ನು ಕೆಲವು ಹುಡುಗರು ಬಂದು, ವೇಷವನ್ನು ಕಳಚಿ ಹಾಕಿ, ಎತ್ತಿಕೊಂಡು ಹೋದ ವಿಚಾರವನ್ನು ಅಲ್ಲಿರುವ ವಿದ್ಯಾರ್ಥಿಗಳು ತಿಳಿಸಿದರು. ಆಗ ಬೇರೆ ದಾರಿ ಕಾಣದೆ, ಸಬ್ಲಾಡಿ ಭುಜಂಗ ಶೆಟ್ರಲ್ಲಿ ನೀವು ಪದ್ಯ ಹೇಳಿ ಎಂದು ಪದ್ಯದ ಪುಸ್ತಕವನ್ನು ಅವರ ಕೈಗಿತ್ತು ನಾನೇ ವನಪಾಲಕನ ಪಾತ್ರ ಮಾಡಲು ವೇಷಕ್ಕೆ ಕುಳಿತೆ. ಇದನ್ನು ನೋಡಿದೆ ಶಶಿಕಾಂತ ಶೆಟ್ಟಿ ಎಂಬ ವಿದ್ಯಾರ್ಥಿ ತಾನು ತರಬೇತಿ ಕಾಲದಲ್ಲಿ ಅದನ್ನು ನೋಡಿದ್ದೇನೆ. ಮಾತುಗಳು ಬಾಯಿ ಪಾಠ ಬರುತ್ತದೆಂದು ತಿಳಿಸಿ ಆ ಪಾತ್ರ ಮಾಡಲು ಸಿದ್ಧನಾದ. ಅದನ್ನು ಚೆನ್ನಾಗಿಯೇ ನಿರ್ವಹಿಸಿದ ಕೂಡಾ. ನಾನು ಪದ್ಯವನ್ನೇ ಹೇಳಿ ಯಕ್ಷಗಾನ ಯಶಸ್ವಿಯಾಯಿತು. ಹೆದರಿಕೊಂಡು ಆ ವಿದ್ಯಾರ್ಥಿ ಕೆಲವು ದಿನ ಶಾಲೆಗೇ ಬಂದಿಲ್ಲ. ಆ ಮೇಲೆ ಒಂದು ದಿನ ಅವನ ಹೆತ್ತವರೊಂದಿಗೆ ಬಂದು, ತಪ್ಪಿಗಾಗಿ ಕ್ಷಮೆ ಯಾಚಿಸಿದ ಅನಂತರ ನಾಟಕ, ಯಕ್ಷಗಾನದಲ್ಲಿ ಆ ಮತಸ್ಥರಿಗೆ ಪಾತ್ರ ಕೊಡಬಾರದೆಂದು ಮನಸ್ಸಿನಲ್ಲೇ ನಿರ್ಧರಿಸಿದೆ. ಆದರೆ ಮುಂದೊಂದು ದಿನ ಅಬು ಮಹ್ಮದ್ ಎಂಬ ವಿದ್ಯಾರ್ಥಿ ತನಗೆ ಪ್ರಾಣಭಯ ಒಡ್ಡಿದರೂ ತಾನು ಪಾತ್ರ ಮಾಡಿಯೇ ಮಾಡುತ್ತೇನೆಂಬುದಾಗಿ ಭರವಸೆ ನೀಡಿದ್ದರಿಂದ ಪುರಂದರದಾಸ ಎಂಬ ನಾಟಕದಲ್ಲಿ ಒಂದು ಪಾತ್ರ ನೀಡಿದೆ. ಅದನ್ನು ಆತ ಯಶಸ್ವಿಯಾಗಿಯೇ ನಿರ್ವಹಿಸಿದ.

ನಾವು ಮೂವರು ಅಧ್ಯಾಪಕರು ಒಂದೇ ಊರಿನವರು ಪರಸ್ಪರ ಒಬ್ಬರನೊಬ್ಬರು ಅರಿತವರು. ಹೀಗಾಗಿ ಒಂದಾಗಿ, ಚಂದವಾಗಿ ಮೂರು ತರಗತಿಗಳನ್ನು ನಡೆಯಿಸಿಕೊಂಡು ಬಂದೆವು. ಆದರೆ ಈ ಮಧ್ಯೆ ಇಲಾಖೆಯ ಕಾನೂನಿನಂತೆ ನಮ್ಮಲ್ಲಿರುವ 8ನೇ ತರಗತಿ ರದ್ದಾಯಿತು. ಉಳಿದದ್ದು 6,7 ಎರಡೇ ತರಗತಿಗಳು ಒರ್ವ ಅಧ್ಯಾಪಕರು ಹೆಚ್ಚುವರಿಯಾಗಿ ಶಾಲೆಯಿಂದ ಬಿಡುಗಡೆ ಹೊಂದಬೇಕಾಯಿತು. ಆಗ ಕೆಳಗಿನ ಅಂದರೆ 1ರಿಂದ 5 ತರಗತಿ ಮಂಜೂರು ಮಾಡುವಂತೆ ಇಲಾಖೆಗೆ ಬರೆದುಕೊಂಡೆವು. ಹತ್ತಿರದ ಶಾಲೆಗಳಿಂದ ಆಕ್ಷೇಪಣೆ ಬಂದುದರಿಂದ ತರಗತಿ ಮಂಜೂರಾಗಲಿಲ್ಲ. ಕೊನೆಗೆ ಆಗ ಶಾಸಕರಾಗಿದ್ದ ಯಡ್ತರೆ ಮಂಜಯ್ಯ ಶೆಟ್ರಲ್ಲಿ ನಮ್ಮ ತೊಂದರೆಯನ್ನು ನಿವೇದಿಸಿಕೊಂಡೆವು. ಅವರ ಪರಿಶ್ರಮದಿಂದ ಕೊನೆಗೂ 1ನೇ ತರಗತಿ ತೆರೆಯಲು ಒಪ್ಪಿಗೆ ದೊರೆಯಿತು.

1ನೇ ತರಗತಿಗೆ ಪ್ರಥಮ ವಿದ್ಯಾರ್ಥಿಯಾಗಿ ಈಗ ಜನಪ್ರಿಯ ವೈದ್ಯನಾಗಿರುವ ಸುರೇಶ್ ಶೆಟ್ಟಿ (ಕೈಲ್ಕೇರೆ ಸಂಜೀವ ಶೆಟ್ರ ಮಗ) ದಾಖಲಾದ. ಆ ತರಗತಿಗೆ ನಾನೇ ಪಾಠಮಾಡಬೇಕಾಗಿ ಬಂತು. ಇತರ ತರಗತಿಗಳಂತೆ ಒಂದನೇ ತರಗತಿಗೆ ಪಾಠ ಮಾಡುವುದು ಸುಲಭದ ಕೆಲಸವಲ್ಲ. ಸಾಕಷ್ಟು ತಾಳ್ಮೆ ಬೇಕು. ಮಕ್ಕಳೊಂದಿಗೆ ಮಗುವಿನಂತೆ ವರ್ತಿಸಬೇಕು. ಹಾಡಬೇಕಿತ್ತು. ಕುಣಿಯಬೇಕಿತ್ತು. ಅಂತೂ ಒಂದು ವರ್ಷ ಕಷ್ಟದಿಂದ ನಿಭಾಯಿಸಿದೆ. ಮುಂದೆ ಕ್ರಮವಾಗಿ 2,3,4,5ನೇ ತರಗತಿಗಳು ಮಂಜೂರಾಗಿ, ಸುಲೋಚನಾ ಶೆಡ್ತಿ, ಜುಲಿಯಾನ ಡಿ'ಲೀಮಾ, ಚಂದ್ರಶೇಖರ ಶೆಟ್ಟಿ ಸೇರ್ಪಡೆಗೊಂಡರು. ನಾವು 6 ಮಂದಿ ಅಧ್ಯಾಪಕರು, ಪರಸ್ಪರ ಸಹಮತದಿಂದ ಪಾಠಗಳನ್ನು ಹಂಚಿಕೊಂಡು 7 ತರಗತಿಗಳನ್ನು ನಡೆಸಿಕೊಂಡು ಬಂದೆವು.

ನಾನು ಬಸ್ರೂರು ಶಾಲೆಯಲ್ಲಿ ಕಲಿಯುತ್ತಿರುವಾಗ ಸ್ಕೌಟಿಗೆ ಸೇರಿದ್ದೆ. ಅದರ ಉಪಯೋಗ ತಿಳಿದಿದ್ದೆ. ಹಾಗಾಗಿ ಸ್ಕೌಟ್ ತರಬೇತಿ ಹೊಂದಬೇಕೆಂಬ ಬಯಕೆ ಉಂಟಾಯಿತು. ಆ ವರ್ಷ ಅನಂತಾಡಿ ಎಂಬಲ್ಲಿ ನಡೆದ ಸ್ಕೌಟ್ ತರಬೇತಿಗೆ ಹಾಜರಾಗಿ 10 ದಿನಗಳ ತರಬೇತಿ ಪಡೆದು ಬಂದು, ಶಾಲೆಯಲ್ಲಿ ತರಗತಿ ಆರಂಭಿಸಿದೆ. ಒಂದೆರಡು ವರ್ಷ ಚೆನ್ನಾಗಿಯೇ ಸಾಗಿತು. ಆದರೆ ಮುಂದೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದುದರಿಂದ ಸ್ಕೌಟ್ ತರಗತಿ ರದ್ದಾಯಿತೆಂದು ಬೇಸರ ಪೂರ್ವಕವಾಗಿ ಹೇಳಬೇಕಾಗಿದೆ.

ಈ ಮಧ್ಯೆ ಒಂದು ವರ್ಷ ಪಬ್ಲಿಕ್ ಪರೀಕ್ಷೆಯಲ್ಲಿ ನಮ್ಮ ಶಾಲೆಗೆ ತುಂಬಾ ಕೆಟ್ಟ ಫಲಿತಾಂಶ ಬಂದಿತ್ತು. ಆ ಸಮಯ ನನಗೆ ಶಿಕ್ಷಕ ತರಬೇತಿಯಲ್ಲಿ ಅಧ್ಯಾಪಕರಾಗಿದ್ದ ಎಚ್.ವಿ. ಗಡಿಯಾರ್ ಎನ್ನುವವರು ಸಹಾಯಕ ವಿದ್ಯಾಧಿಕಾರಿಗಳಾಗಿ ನೇಮಕಗೊಂಡಿದ್ದರು. ಅವರು ಶಾಲಾರಂಭಕ್ಕೆ ನಮ್ಮ ಶಾಲೆಗೆ ಆಕಸ್ಮಿಕ ಭೇಟಿ ನೀಡಿದರು. ಪಬ್ಲಿಕ್ ಪರೀಕ್ಷೆಯ ಫಲಿತಾಂಶ ನೋಡಿ ಅಚ್ಚರಿಗೊಂಡರು. ಅದರಲ್ಲೂ ನಪಾಸಾದ ಎಲ್ಲಾ ವಿದ್ಯಾರ್ಥಿಗಳು ಗಣಿತದಲ್ಲೇ ಅನುತ್ತೀರ್ಣರಾಗಿದ್ದರು. ಆಗ ವಿದ್ಯಾಧಿಕಾರಿಗಳು ಅಧ್ಯಾಪಕರನ್ನೆಲ್ಲಾ ಆಫೀಸಿಗೆ ಕರೆಸಿಕೊಂಡು ಫಲಿತಾಂಶದ ಬಗ್ಗೆ ತಮ್ಮ ಅಸಮಧಾನ ಸೂಚಿಸಿದರು ಮಾತ್ರವಲ್ಲ, ನನ್ನನ್ನು ಕರೆದು "ಏನು ರಘುರಾಮ ಶೆಟ್ಟರೇ, ತರಬೇತಿ ಕಾಲದಲ್ಲಿ ನೀವು ತುಂಬಾ ಪ್ರತಿಭಾವಂತರಾಗಿ ಹೊರಹೊಮ್ಮಿದ್ದೀರಿ. ಈಗ ನಿಮ್ಮ ಶಾಲೆಯ ಫಲಿತಾಂಶ ಇಷ್ಟು ಕೆಟ್ಟದಾಗಿ ಬಂದುದಕ್ಕೆ ನಿಮಗೆ ಬೇಸರವಿಲ್ಲವೇ ? ಈ ವರ್ಷ ನೀವೇ ಆ ತರಗತಿಗೆ ಗಣಿತ ಪಾಠ ಮಾಡಿ ನಿಮ್ಮ ಪ್ರತಿಭೆಯನ್ನು ಸಾಬೀತು

ಪಡಿಸಿನೋಡುವಾ" ಎಂದು ಹೇಳಿ ತೆರಳಿದರು. ಅದುವರೆಗೆ ನಾನು ಆ ತರಗತಿಗೆ ಗಣಿತ ಪಾಠ ಮಾಡಿರಲಿಲ್ಲ. ಆದರೆ ಆಧಿಕಾರಿಗಳು ಹೇಳಿದಂತೆ ನಡೆಯದಿರಲು ಸಾಧ್ಯವೆ ? ಗುರುವಿನ ಆಶಯದಂತೆ ಅತೀವ ಶ್ರಮಪಟ್ಟು ಗಣಿತ ಪಾಠ ಮಾಡಿದೆ. ದೇವರು ಪರಿಶ್ರಮಕ್ಕೆ ತಕ್ಕ ಫಲವನ್ನು ನೀಡಿದ. ಆ ವರ್ಷ ಉತ್ತಮ ಫಲಿತಾಂಶ ಬರುವುದರ ಜೊತೆಗೆ ಗಣಿತದಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದರು. ಮುಂದೊಂದು ದಿನ ಶಾಲೆಗೆ ಭೇಟಿ ನೀಡಿದ ಗಡಿಯಾರರು ಫಲಿತಾಂಶ ನೋಡಿ ನಮ್ಮೊಡನೆ " ಅಧ್ಯಾಪಕರು ಪ್ರತಿಭಾವಂತರಾಗಿರಬೇಕಿಲ್ಲ. ಶ್ರಮಪಟ್ಟು ಕೆಲಸಮಾಡಿದರೆ ಸಾಮಾನ್ಯ ಅಧ್ಯಾಪಕನೂ ಉತ್ತಮ ಶಿಕ್ಷಕನಾಗಬಲ್ಲ. ಉತ್ತಮ ಫಲಿತಾಂಶ ತರಬಲ್ಲ. ಇದಕ್ಕೆ ಈ ವರ್ಷದ ಫಲಿತಾಂಶವೇ ಸಾಕ್ಷಿ" ಎಂದು ಸಮಾಧಾನಪಟ್ಟು ವರದಿ ಪುಸ್ತಕದಲ್ಲಿ ಶಾಲೆಯ ಬಗ್ಗೆ, ಅಧ್ಯಾಪಕರ ಬಗ್ಗೆ ಒಳ್ಳೆಯ ಅಭಿಪ್ರಾಯ ಸೂಚಿಸಿ ತೆರಳಿದರು. ಗುರುವನ್ನು ಮೆಚ್ಚಿಸಿದ ಸಂತೃಪ್ತ ಭಾವದಿಂದ ಸಮಾಧಾನದ ನಿಟ್ಟುಸಿರು ಬಿಟ್ಟೆ.

ನನ್ನ ಊರಾದ ಬಳ್ಳೂರಿನಲ್ಲಿ ಒಂದು ವಯಸ್ಕರ ಶಿಕ್ಷಣಕೇಂದ್ರವನ್ನು ತೆರೆಯುವ ಬಗ್ಗೆ ಅಲ್ಲಿಯ ಶಾಲಾ ಅಧ್ಯಾಪಕರನ್ನು ಇಲಾಖೆಯವರು ಕೇಳಿಕೊಂಡಾಗ ದೂರದೂರದವರಾದ ಅವರಿಗೆ ಅನನುಕೂಲವಾದುದರಿಂದ ಅವರು ಒಪ್ಪಲಿಲ್ಲ. ಈ ಕಾರಣದಿಂದ ಇಲಾಖೆಯವರು ಆ ಯೋಜನೆಯನ್ನೇ ಕೈಬಿಡಲು ನಿರ್ಧರಿಸಿದರು. ಈ ವಿಚಾರ ತಿಳಿದ ನಾನು ಊರಿನ ಜನರ ಹಿತದೃಷ್ಟಿಯಿಂದ ಅದನ್ನು ನಡೆಸಲು ಮುಂದಾದೆ. 2 ತಂಡದ ಸುಮಾರು 50 ಮಂದಿ ಇದರಿಂದ ಅಕ್ಷರಸ್ಥರಾದರು. ಓದಲು, ಬರೆಯಲು ಹಾಗೂ ದಿನನಿತ್ಯದ ಖರ್ಚುವೆಚ್ಚಗಳ ಲೆಕ್ಕ ಇಡಲು ಸಮರ್ಥರಾದರು. ಆದರೆ ಅದರ ಅನುದಾನ ಸಮರ್ಪಕವಾಗಿ ಬಾರದಿರಲು ಆ ಮೇಲೆ ಕೇಂದ್ರವನ್ನು ಮುಚ್ಚಲಾಯಿತು. ಅಂದು ಅಕ್ಷರಜ್ಞಾನ ಪಡೆದ ಹಲವು ಹಿರಿಯರು ನನ್ನನ್ನು ಕಂಡಾಗ " ನಮ್ಮ ಗುರುಗಳು" ಎಂದು ಗೌರವದಿಂದ ಅಭಿನಂದಿಸುವಾಗ ಅತೀ ಆನಂದವಾಗುತ್ತದೆ. ನನ್ನ ಊರ ಹಿರಿಯರಿಗೆ ಇಷ್ಟಾದರೂ ನನ್ನಿಂದ ಸಲ್ಲುವಂತಾಯಿತಲ್ಲಾ ಎಂಬ ತೃಪ್ತಿ ನನ್ನದಾಯಿತು.

1972 ನೇ ಇಸವಿಗೆ ನಮ್ಮ ಶಾಲೆ ಸ್ಥಾಪನೆಯಾಗಿ 25ನೇ ವರ್ಷಕ್ಕೆ ಕಾಲಿಡುತ್ತದೆ. ಈ ಶಾಲೆಯನ್ನು ಶಾಲೆಯ ಮೆನೇಜರರಾದ ಕೊಳ್ಕೆಬೈಲು ಮಹಾಬಲ ಶೆಟ್ರು ತನ್ನ ಸಹಪಾಠಿ ಮಿತ್ರ ಆನಂದ ಎನ್ನುವವರಿಗಾಗಿಯೇ ಸ್ಥಾಪಿಸಿದ್ದರಂತೆ. ಶಾಲೆಯ ರಜತಮಹೋತ್ಸವವನ್ನು ಆಚರಿಸಬೇಕೆಂದು ಮೆನೇಜರರು, ಅಧ್ಯಾಪಕ ವೃಂದದವರು ಹಾಗೂ ಮಕ್ಕಳ ಹೆತ್ತವರು ಅಪೇಕ್ಷೆಪಟ್ಟರು. ಉತ್ಸವವನ್ನು 2 ದಿನಗಳ ಕಾರ್ಯಕ್ರಮವಿಟ್ಟುಕೊಂಡು ಮಾಡುವುದೆಂದು ನಿಶ್ಚಯಿಸಲಾಯಿತು. ಪ್ರಥಮ ದಿನ ಶಾಲಾವಾರ್ಷಿಕೋತ್ಸವ, ಎರಡನೇ ದಿನ ರಜತಮಹೋತ್ಸವ. ಪ್ರಥಮ ದಿನ ಬಾಲಕರ ಹಾಗೂ ಬಾಲಕಿಯರ ನಾಟಕಗಳು, ಎರಡನೇಯ ದಿನ ಹಳೆ ವಿದ್ಯಾರ್ಥಿಗಳ ಹಾಗೂ ಯುವಕರ ನಾಟಕವೆಂದು ತೀರ್ಮಾನವಾಗಿ ವಿದ್ಯಾರ್ಥಿಗಳಿಂದ ನಾನು ರಚಿಸಿದ ನಾಗಾನಂದ ಹಾಗೂ ನಿಜಗಲ್ಲು ಗಿರಿಜವ್ವ ಹಾಗೂ ಯುವಕರಿಂದ ರಕ್ತರಾತ್ರಿ ನಾಟಕವಾಡುವುದೆಂದು ತೀರ್ಮಾವಾಗಿ ತರಬೇತಿಗೆ ಆರಂಭಿಸಿದೆವು. ರಜತೋತ್ಸವಕ್ಕೆ ನಾಡಿನ ಕವಿ ಶ್ರೇಷ್ಠರಾದ ನಾಡೋಜ ಕವಿ ಕಯ್ಯಾರರನ್ನು ಆಹ್ವಾನಿಸಿದೆವು. ಅಂದು ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ 1 ತಾಸಿಗೂ ಮಿಕ್ಕಿ ಜನಾಕರ್ಷಕವಾದ ಭಾಷಣವನ್ನಿತ್ತರು. ಪ್ರೇಕ್ಷಕರ ಅಪೇಕ್ಷೆಯಂತೆ ತಾವೇ ರಚಿಸಿದ ಒಂದೆರಡು ಕವಿತೆಗಳನ್ನೂ ಭಾವಪ್ರದವಾಗಿ ಹಾಡಿ ಪ್ರೇಕ್ಷಕರನ್ನು ಖುಷಿಗೊಳಿಸಿದರು ಲೇಜಿಮ್ ತಂಡದವರಿಂದ ನಾನು ರಚಿಸಿದ "ಕಾಸರಗೋಡು ಕರ್ಣಾಟಕಕ್ಕೆ ಎಂದು?" ಎಂಬ ಪದ್ಯವನ್ನು ಹಾಡಿಸಿದ್ದೆ ಆ ದಿನಕ್ಕಾಗಿಯೇ ಹಂಬಲಿಸುತಿದ್ದ ಕವಿ ಕಯ್ಯಾರರಿಗೆ ಅಮಿತಾನಂದವಾಗಿ ರಚನೆ ಮಾಡಿದ ನನ್ನನ್ನು ಬಳಿಗೆ ಕರೆದು ಬೆನ್ನುತಟ್ಟಿ ಆಶೀರ್ವದಿಸಿದರು.

ಎರಡೂ ದಿನಗಳ ಕಾರ್ಯಕ್ರಮಗಳು ಯಶಸ್ವಿಯಾಗಿಯೇ ಜರಗಿದುವು. ಯುವಕರು ಅಭಿನಯಿಸಿದ ರಕ್ತ ರಾತ್ರಿ ನಾಟಕದ ಕೃಷ್ಣನ ಪಾತ್ರಕ್ಕೆ ಮುದ್ದುಮೊಗದ ನಟನನ್ನೇ ಆರಿಸಿದ್ದೆ. ಆದರೆ ಅದೇನು ಕಾರಣವೋ ತಿಳಿಯದು ಆತನು ಒಂದೆರಡು ತರಬೇತಿಗೆ ಬಂದು ಆಮೇಲೆ ತನ್ನಿಂದ ಸಾಧ್ಯವಿಲ್ಲವೆಂದು ತೆಪ್ಪಗೆ ಕುಳಿತ, ಬೇರೆ ದಾರಿ ಕಾಣದೆ ಆ ಪಾತ್ರವನ್ನು ನಾನೇ ನಿರ್ವಹಿಸಿದೆ. ಯಾವಾಗಲೂ ಹಾಸ್ಯ ಪಾತ್ರಗಳನ್ನೇ ಮಾಡುತ್ತಿದ್ದ ನನಗೆ ಈ ಪಾತ್ರದಲ್ಲಿ ಅಷ್ಟೇನೂ ಯಶಸ್ಸು ಸಿಗಲಿಲ್ಲ. ಆದರೆ ಕೊರಗುವಣ್ಣನು ಮಾಡಿದ ದ್ರೌಪದಿ, ಕೆಂಚನೂರು ಶಿವರಾಮ ಶೆಟ್ಟಿ (ನಿವೃತ್ತ ವಿಜಯ ಬ್ಯಾಂಕ್ ಆಫೀಸರ್) ಮಾಡಿದ ಉತ್ತರೆಯ ಪಾತ್ರ ಅತ್ಯುತ್ತಮವಾಗಿ ಮೂಡಿ ಬಂದು ಪ್ರೇಕ್ಷಕರ ಸ್ಮೃತಿಯಲ್ಲಿ ಬಹಳ ಕಾಲ ಉಳಿಯುವಂತಾಯಿತು. ಅದರಲ್ಲೂ ನಾಟಕದ

ಮರುದಿನವೇ ಬೆಂಗಳೂರಿಗೆ ಬ್ಯಾಂಕಿನ ಇಂಟರ್‌ವ್ಯೂಗೆ ಹೋಗಬೇಕಾಗಿದ್ದ ಶಿವರಾಮ ಶೆಟ್ಟರು ಧೈರ್ಯದಿಂದ ಭಾಗವಹಿಸಿದ್ದು ಅವರ ಜವಾಬ್ದಾರಿಯ ನಿರ್ವಹಣೆಗೆ ಸಾಕ್ಷಿಯಾಗಿದೆ.

ನಾನು ಹೆಚ್ಚಾಗಿ ಕನ್ನಡ ಮತ್ತು ಸಾಮಾಜಿಕ ಅಧ್ಯಯನ ಪಾಠ ಮಾಡುತಿದ್ದೆ. ಸಂದರ್ಭಾನುಸಾರ ಇತರ ಪಾಠಗಳನ್ನು ಮಾಡಬೇಕಿತ್ತು ; ಮಾಡಿದ್ದೆ. ಹಿಂದೆ ತಿಳಿಸಿದಂತೆ ಅನಿವಾರ್ಯ ಪರಿಸ್ಥಿತಿಯಲ್ಲಿ ಗಣಿತವನ್ನೂ ಮಾಡಿದ್ದೆ. ಮುಖ್ಯೋಪಾಧ್ಯಾಯನಾದ ಮೇಲೆ 7ನೇ ತರಗತಿಗೆ ಇಂಗ್ಲೀಷ್ ಪಾಠವನ್ನೂ ಮಾಡಿದೆ. ನನ್ನ ಪಾಲಿಗೆ ಯಾವ ಪಾಠವೇ ಬರಲಿ. ಅದರ ಬಗ್ಗೆ ಸಾಕಷ್ಟು ತಯಾರಿ ಮಾಡಿಕೊಂಡೇ ತರಗತಿಗೆ ಹೋಗುತಿದ್ದೆ. ಅದರಲ್ಲೂ ನನ್ನ ಕನ್ನಡ ಪಾಠವನ್ನು ವಿದ್ಯಾರ್ಥಿಗಳು ಬಹಳವಾಗಿ ಮೆಚ್ಚಿಕೊಂಡಿದ್ದರು. ಆ ಪಾಠ ಕೇಳಲು ಉತ್ಸುಕರಾಗುತಿದ್ದರು. ನಾನು ತರಗತಿಗೆ ಹೋಗುವುದು ಸ್ವಲ್ಪ ತಡವಾದರೂ ಅಧ್ಯಾಪಕರ ಕೊಠಡಿಗೆ ಬಂದು ನನ್ನನ್ನು ಕರೆದುಕೊಂಡು ಹೋಗಿ ಪಾಠ ಕೇಳಿದ್ದೂ ಇದೆ. ಹಾಗೆ ನನ್ನ ಪಾಠವನ್ನು ಅವರು ಅಷ್ಟೊಂದು ಮೆಚ್ಚಲು ಕಾರಣ ಪಾಠದ ಮಧ್ಯದಲ್ಲಿ ಸಂದರ್ಭವನ್ನರಿತು ದೃಷ್ಟಾಂತ ಕಥೆ, ನಗೆ ಚಟಾಕಿ, ಪೂರಕ ಕಥೆಗಳನ್ನು ಹೇಳಿ ಪಾಠದ ಸ್ವಾರಸ್ಯವನ್ನು ಹೆಚ್ಚಿಸುತಿದ್ದೆ. ಅದರೊಂದಿಗೆ ಪಾಠದ ವಿಷಯವನ್ನೂ ಮನದಟ್ಟು ಮಾಡಲು ಪ್ರಯತ್ನಿಸುತಿದ್ದೆ.

ಒಮ್ಮೆ ಓರ್ವ ಪರೀಕ್ಷಾಧಿಕಾರಿಗಳು ವಾರ್ಷಿಕ ಪರೀಕ್ಷೆಗೆ ಬಂದಾಗ ನನ್ನೊಡನೆ ಭೂಗೋಳಕ್ಕೆ ಸಂಬಂಧಿಸಿದ ಒಂದು ಪಾಠವನ್ನು ಮಾಡಲು ತಿಳಿಸಿದರು. ಭೂಪಟ, ಕರಿಹಲಗೆ ಕೆಲಸ, ಚಟುವಟಿಕೆಗಳ ಮೂಲಕ ಮಾಡಿದ ಆ ಪಾಠವನ್ನು ಮನಸಾರೆ ಮೆಚ್ಚಿದ ಪರೀಕ್ಷಾಧಿಕಾರಿಗಳು ವರದಿಯಲ್ಲಿ ನನ್ನ ಬಗ್ಗೆ ಉತ್ತಮ ಅಭಿಪ್ರಾಯ ಬರೆದಿದ್ದರು. ಇನ್ನೊಮ್ಮೆ ಸಹಾಯಕ ವಿದ್ಯಾಧಿಕಾರಿಗಳು ಆಕಸ್ಮಿಕ ಭೇಟಿಯನ್ನಿತ್ತಾಗ ನಾನು ಮಾಡುತಿದ್ದ ಕನ್ನಡ ಪಾಠವನ್ನು ನನಗೆ ತಿಳಿಯದಂತೆ ಹೊರಗೇ ನಿಂತು ಕೇಳಿ, ಸಂತೋಷಗೊಂಡು ಆ ಮೇಲೆ ತರಗತಿಗೆ ಬಂದು ಪಾಠ ಮುಂದರಿಸುವಂತೆ ಹೇಳಿ, ವರದಿಯಲ್ಲಿ ಬರೆದು ತೆರಳಿದರು. ಮತ್ತೊಂದು ಬಾರಿ ಬಂದ ಓರ್ವ ಪರೀಕ್ಷಾಧಿಕಾರಿಗಳು ನಾನು ಮಾಡುತಿದ್ದ ಗಣಿತ ಪಾಠಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಕೇಳಿದ ಎಲ್ಲಾ ಬಾಯಿಲೆಕ್ಕಗಳನ್ನು ಸರಿಯಾಗಿಯೇ ಉತ್ತರಿಸಿದಾಗ ಅವರು ಕೂಡಾ ನನ್ನ ಪಾಠದ ಬಗ್ಗೆ ಉತ್ತಮ ಅಭಿಪ್ರಾಯವನ್ನೇ ಬರೆದುಹೋಗಿದ್ದರು.

ಹೀಗೆ ಪರೀಕ್ಷಾಧಿಕಾರಿಗಳ ಒಳ್ಳೆಯ ಅಭಿಪ್ರಾಯಗಳನ್ನು ಮಾನದಂಡವಾಗಿಟ್ಟುಕೊಂಡು 1979ರ ಶಿಕ್ಷಕರ ದಿನಾಚರಣೆಯ ದಿವಸ "ಮಾದರಿ ಶಿಕ್ಷಕ"ನೆಂಬ ಪ್ರಶಸ್ತಿಯನ್ನಿತ್ತು ವಿದ್ಯಾ ಇಲಾಖೆಯವರು ನನ್ನನ್ನು ಸನ್ಮಾನಿಸಿದರು. ಅದೇ ಸಂದರ್ಭದಲ್ಲಿ ಪ್ರೌಢಶಾಲಾ ವಿಭಾಗದಲ್ಲಿ ನನ್ನ ಇಂಗ್ಲಿಷ್ ಗುರುಗಳಾದ ಯು.ಎನ್.ಐತಾಳರಿಗೂ "ಮಾದರಿ ಶಿಕ್ಷಕ" ಪ್ರಶಸ್ತಿ ಪ್ರದಾನವಾಗಿತ್ತು. ಅವರು ತಮ್ಮ ಸನ್ಮಾನಕ್ಕೆ ಉತ್ತರ ನೀಡುತ್ತಾ ನಾನು ಹಿಂದೆ ಇಂಗ್ಲಿಷ್ ಅರ್ಥವಾಗದೆ ಅತ್ತ ಹಾಗೂ ಆಮೇಲೆ ಪ್ರಯತ್ನಪಟ್ಟು ಉತ್ತಮ ಅಂಕ ಪಡೆದ ವಿಚಾರವನ್ನು ಪ್ರಸ್ತಾಪಿಸುತ್ತಾ, ತನಗೆ ಪ್ರಶಸ್ತಿ ದೊರಕಿದುದಕ್ಕಿಂತ ತನ್ನ ಶಿಷ್ಯನಿಗೆ ದೊರೆತುದಕ್ಕಾಗಿ ಹೆಚ್ಚಿನ ಸಂತೋಷಪಡುತ್ತೇನಾಗಿ ತಿಳಿಸಿದರು. ಗುರುಗಳ ಹೊಗಳಿಕೆಯ ಮಾತುಗಳಿಗಾಗಿ ಆನಂದಬಾಷ್ಪ ಸುರಿಸಿ ಮನಸ್ಸಿನಲ್ಲೇ ಗುರುವಿಗೆ ನಮನ ಸಲ್ಲಿಸಿದೆ.

ಒಮ್ಮೆ ಅಧ್ಯಾಪಕರ ಮಾಸಿಕ ಸಭೆಯಲ್ಲಿ ಲಾಲಬಹದ್ದೂರ್ ಶಾಸ್ತ್ರಿಗಳ ಕುರಿತಾಗಿ ನಾನೊಂದು ಉಪನ್ಯಾಸ ನೀಡಿದೆ. ಆ ದಿನ ಹೊಸತಾಗಿ ನೇಮಕಗೊಂಡ ದೇವಪ್ರಕಾಶ್ ಎಂಬ ಸಹಾಯಕ ವಿದ್ಯಾಧಿಕಾರಿಗಳು ಆಗಮಿಸಿದ್ದರು. ನನ್ನ ಭಾಷಣ ಅವರ ಮೇಲೆ ತುಂಬಾ ಪರಿಣಾಮ ಬೀರಿತು. ಆ ಉಪನ್ಯಾಸವನ್ನು ಇತರ ಅಧ್ಯಾಪಕ ಕೇಂದ್ರದಲ್ಲಿ ಮಾಡುವಂತೆ ಅವರು ಸೂಚಿಸಿದರು. ಅದರಂತೆ ಕೆಲವು ಕೇಂದ್ರಗಳಲ್ಲಿ ಉಪನ್ಯಾಸ ನೀಡಿ ಬಂದೆ.

ನನ್ನ ಬಗ್ಗೆ ಸದಭಿಪ್ರಾಯ ಹೊಂದಿದ ಅವರು ಶಾಲೆಗೆ ಆಕಸ್ಮಿಕ ಭೇಟಿ ಇತ್ತಾಗ ಉಳಿದವರ ತರಗತಿಯಲ್ಲಿ ಪ್ರಶ್ನೆಗಳನ್ನು ಕೇಳಿದರೂ ನನ್ನ ತರಗತಿಯ ವಿದ್ಯಾರ್ಥಿಗಳನ್ನು ಪ್ರಶ್ನಿಸುತ್ತಿರಲಿಲ್ಲ. ವಾರ್ಷಿಕೋತ್ಸವ ಸಮಾರಂಭಗಳಲ್ಲಿ ಸಭಾ ಕಾರ್ಯಕ್ರಮದ ಬಳಿಕ ಹೋಗುತಿದ್ದವರು ನಾಟಕದಲ್ಲಿ ನನ್ನ ಪಾತ್ರ ಇದ್ದಾಗ ಒಂದೆರಡು ದೃಶ್ಯಗಳನ್ನಾದರೂ ನೋಡಿ ಹೋಗುತಿದ್ದರು. ಅಧ್ಯಾಪಕರ ಪ್ರವಾಸ ವೇಳೆ ನನ್ನ ಮೇಲಿನ ನಂಬಿಕೆಯಿಂದ ಶಿಕ್ಷಕಿಯರ ಮೇಲ್ವಿಚಾರಣೆಯ ಹೊಣೆಯನ್ನು ನನಗೀಯುತಿದ್ದರು, ನನ್ನ ಮಗನ ಹಾಲ್‌ಟಿಕೇಟ್ ಸಕಾಲಕ್ಕೆ ಸರಿಯಾಗಿ ತಲುಪದಿದ್ದಾಗ ಮುತುವರ್ಜಿಯಿಂದ ತಪಾಸಣೆ ನಡೆಸಿ ಕೊನೆಯಗಳಿಗೆಯಲ್ಲಿ ಕಳುಹಿಸಿ ಉಪಕರಿಸಿದ್ದರು. ಹೀಗೆ ನನ್ನ ಪಾಠ ಪ್ರವಚನಗಳನ್ನು ಮೆಚ್ಚಿದ ನನ್ನ ಮೇಲೆ ವಿಶ್ವಾಸವಿರಿಸಿದ ಸಕಾಲಕ್ಕೆ ಸರಿಯಾಗಿ ಉಪಕರಿಸಿದ ಈ ನನ್ನ ಮೇಲಾಧಿಕಾರಿಗಳನ್ನು ನಾನೆಷ್ಟು ಸ್ಮರಿಸಿಕೊಂಡರೂ ಕಡಿಮೆಯೇ ಸರಿ.

ಮುಖ್ಯೋಪಾಧ್ಯಾಯರಾದ ಸುಬ್ರಾಯ ಉಡುಪರು ನಿವೃತ್ತಿಯಾಗುವ ಸಮಯ ಸಮೀಪಿಸುತ್ತಿರುವಾಗ ಹಿರಿಯ ಸೇವಾರ್ಥಿಯಾದ ನನ್ನನ್ನು ಮುಖ್ಯೋಪಾಧ್ಯಾಯನನ್ನಾಗಿ ಮಾಡಲು ಮೆನೇಜರರು ಸಂಕಲ್ಪಿಸಿದರು. ಆದರೆ ಸೇವೆಯಲ್ಲಿ ನಾನು ಹಿರಿಯನಾದರೂ ಪ್ರಾಯದಲ್ಲಿ ಕೊರಗುವಣ್ಣ ಹಿರಿಯನು. ನಾನು ಮುಖ್ಯೋಪಾಧ್ಯಾಯನಾದರೆ ಆತನಿಗೆ ಮುಖ್ಯೋಪಾಧ್ಯಾಯನಾಗುವ ಅವಕಾಶವೇ ಸಿಗುತ್ತಿರಲಿಲ್ಲ. ಆಗಿನ ಕಾನೂನಿನಂತೆ ಖಾಸಗಿ ಶಾಲೆಯಲ್ಲಿ ಹಿರಿತನವನ್ನೇ ಅರ್ಹತೆಯನ್ನಾಗಿ ಪರಿಗಣಿಸಬೇಕಾಗಿರಲಿಲ್ಲ. ಮೇಲಾಗಿ ನನ್ನ ಉತ್ಕರ್ಷತೆಗೆ ಬಹುವಾಗಿ ಶ್ರಮಪಟ್ಟು ತ್ಯಾಗಮಾಡಿದಾತ ಆತ ಆದ್ದರಿಂದ ಆತನೇ ಮುಖ್ಯೋಪಾಧ್ಯಾಯನಾಗಬೇಕೆಂದು ಆತನಲ್ಲಿ ಬಿನ್ನೈಸಿಕೊಂಡೆ. ಆತನು ಸುತರಾಂ ಒಪ್ಪದೆ ಇದ್ದಾಗ ಬೇರೆ ದಾರಿ ಕಾಣದೆ ಒಪ್ಪಿಕೊಂಡು ಮುಖ್ಯೋಪಾಧ್ಯಾಯನಾದೆ.

ಸಹಾಯಕ ಅಧ್ಯಾಪಕರ ಸಹಕಾರದಿಂದ 2 ವರ್ಷಗಳ ಕಾಲ ಮುಖ್ಯೋಪಾಧ್ಯಾಯನಾಗಿ ಕಾರ್ಯನಿರ್ವಹಿಸಿದೆ. ಆ ಅವಧಿಯಲ್ಲಿ ಶಾಲಾ ವಾರ್ಷಿಕೋತ್ಸವವನ್ನು ಯಶಸ್ವಿಯಾಗಿ ನಡೆಸಿದೆವು. ಆದರೆ ಆ ಸಮಯದಲ್ಲಿ ಆಗಾಗ ಅನಾರೋಗ್ಯಕ್ಕೆ ತುತ್ತಾದೆ. ನಿಶ್ಶಕ್ತಿ ನನ್ನನ್ನು ಕಾಡಹತ್ತಿತು ಸಾಲದೆಂಬಂತೆ ನನ್ನ ವಾಸ್ತವ್ಯವು ಕೂಡಾ ದೂರದೂರಾದ ನೂಜಾಡಿಗೆ ಸ್ಥಳಾಂತರಗೊಂಡಿತು, ಕೆಲಸದೊತ್ತಡದಿಂದ ಬಿ.ಪಿ. ನನ್ನನ್ನು ಆವರಿಸಿತ್ತು. ಇದನ್ನೆಲ್ಲಾ ತಿಳಿದ ನನ್ನ ಮಗ ಡಾ॥ ಮನೋಜಕುಮಾರ ಸ್ವಯಂ ನಿವೃತ್ತಿಗೆ ಸೂಚಿಸಿದ. ಅದರಂತೆ 1991ರಲ್ಲಿ ಸ್ವಯಂ ನಿವೃತ್ತನಾದೆ. ನಾನು ಸ್ವಯಂ ನಿವೃತ್ತಿ ತೆಗೆದುಕೊಂಡುದರಿಂದ ಕೊರಗುವಣ್ಣ ಮುಖ್ಯೋಪಾಧ್ಯಾಯನಾಗಲು ಅವಕಾಶ ಸಿಕ್ಕಿದ್ದು ನನಗೆ ತುಂಬಾ ಸಂತೋಷದ ವಿಷಯವಾಯಿತು.

3. ನಾಟಕ ರಂಗದಲ್ಲಿ

ಯಕ್ಷಗಾನ ನನಗೆ ರಕ್ತಗತವಾಗಿ ಬಂದ ಕಲೆಯಾದರೆ ನಾಟಕ ಗುರುಕರುಣೆಯಿಂದ ಪ್ರಾಪ್ತವಾದ ಆಪ್ತಕಲೆ. ನಾನು 6ನೇ ತರಗತಿಯಲ್ಲಿ ಕಲಿಯುತ್ತಿರುವಾಗ ರಮಾನಾಥ ನಾಯಕ್ ಎನ್ನುವವರು ಆ ಶಾಲೆಗೆ ಹೊಸದಾಗಿ ಅಧ್ಯಾಪಕರಾಗಿ ನೇಮಕಗೊಂಡರು. ಅವರು ಶಾಲೆಯಲ್ಲಿ ಸ್ಕೌಟ್ ತರಗತಿ ಆರಂಭಿಸಿದರು. ಅದರ ಮಹತ್ವವನ್ನು ಕೇಳಿದ ನಾನು ಅದಕ್ಕೆ ಸೇರಿದೆ. ಸ್ಕೌಟ್ ಕ್ಯಾಂಪಿನಲ್ಲಿ ಜರುಗುತ್ತಿದ್ದ ಕ್ಯಾಂಪ್ ಫಯರಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಾಗಿ ಪ್ರಹಸನ, ಏಕಪಾತ್ರಾಭಿನಯ, ಹರಿಕಥೆ, ನೃತ್ಯ, ಸಂಗೀತ ಕಾರ್ಯಕ್ರಮಗಳು ಜರಗುತಿದ್ದುವು ಅದರಲ್ಲಿ ಒಮ್ಮೆ ನಾನು 'ಜಾನುವಾರು ಜಾತ್ರೆ' ಎಂಬ ಪ್ರಹಸನದಲ್ಲಿ ಮಲೆಯಾಳಿ ಭಾಷಿಗನಾಗಿ ಅಭಿನಯಿಸಲು ಅಧ್ಯಾಪಕರು ಅವಕಾಶ ನೀಡಿದರು. ಸಾಮಾನ್ಯ ರೀತಿಯಲ್ಲಿ ಅಭಿನಯಿಸಿದೆ. ಇದೇ ನನ್ನ ಪ್ರಥಮ ಅಭಿನಯ ಮುಂದೆ ಬೇರೆ ಬೇರೆ ಕ್ಯಾಂಪುಗಳಲ್ಲಿ ಶೆಟ್ರ ನಾಮ ಎಂಬ ಪ್ರಹಸನ, ಕಾಗೆಯ ಜಾಣತನ ಎಂಬ ಹರಿಕಥೆಯಲ್ಲಿ ಭಾಗವಹಿಸಿದೆ. ಅವುಗಳು ತುಂಬಾ ಜನಪ್ರಿಯತೆಗಳಿಸಿದವು. ಮುಂದೆ ನಾನು ಅನಂತಾಡಿಯಲ್ಲಿ ಜರಗಿದ ಸ್ಕೌಟ್ ತರಬೇತಿ ಶಾಲೆಯಲ್ಲಿ ಅದನ್ನು ಅಭಿನಯಿಸಿದಾಗ ಆಗಿನ ಸ್ಕೌಟ್ ಕಮೀಶನರಾದ ಭಾಸ್ಕರ ರೈಗಳು ಮೆಚ್ಚಿ ಎರಡೆರಡು ಬಾರಿ ಅದನ್ನು ಮಾಡಿಸಿ ಆನಂದಪಟ್ಟರು. ಆ ಮೇಲೆ ಬಸ್ರೂರು ಶಾಲೆಯ ವಾರ್ಷಿಕೋತ್ಸವದಲ್ಲಿ ವಿದ್ಯಾರ್ಥಿಗಳು ಅಭಿನಯಿಸಿದ ಸತಿ ಅನಸೂಯಾ ನಾಟಕದಲ್ಲಿ ಬ್ರಹ್ಮನ ಪಾತ್ರ ನಿರ್ವಹಿಸಿದೆ. ಅದು ಮೂರಕ್ಕೆ ಜಾರದೆ ಆರಕ್ಕೆ ಏರದೆ ಸಾಮಾನ್ಯ ಮಟ್ಟದಲ್ಲಿ ಸಾಗಿತ್ತು. ಆದರೆ ಅದು ನನ್ನ ಪ್ರಥಮ ನಾಟಕಾಭಿನಯ ಎಂಬ ದಾಖಲೆಗೆ ಸೇರಿತು. ಪ್ರೌಢಶಾಲೆಯಲ್ಲಿ ನಾನು ಕಲಿಯುತ್ತಿರುವಾಗ ನಾಟಕದಲ್ಲಿ ಭಾಗವಹಿಸುವ ಅವಕಾಶವೇ ಸಿಕ್ಕಿಲ್ಲ. ಆದರೆ ಶಿಕ್ಷಕ ತರಬೇತಿ ಶಾಲೆಯ ವಾರ್ಷಿಕೋತ್ಸವದಲ್ಲಿ ಅಭಿನಯಿಸಿದ 'ತಿಂದೋಡಿ' ಎಂಬ ನಾಟಕದಲ್ಲಿ ಒಂದು ಚಿಕ್ಕ ಸ್ತ್ರೀ ಪಾತ್ರ ನೀಡಿದ್ದರು. ಅದೊಂದು ಸಾಮಾನ್ಯ ಪೋಷಕ ಪಾತ್ರವಾಗಿದ್ದು ಅಭಿನಯಕ್ಕೆ ಹೆಚ್ಚಿನ ಅವಕಾಶವಿರಲಿಲ್ಲ, ಆದರೂ "ನೈಜಾಭಿನಯದಿಂದ ಪಾತ್ರಕ್ಕೆ ನ್ಯಾಯ ಒದಗಿಸಿದ್ದಿ" ಎಂದು ನಾಟಕದ ನಿರ್ದೇಶಕರು ಬೆನ್ನು ತಟ್ಟಿ ಪ್ರೋತ್ಸಾಹಿಸಿದರು.

ನನ್ನಲ್ಲಿ ಉತ್ತಮ ನಾಟಕಾಭಿನಯ ಇದೆ ಎಂದು ಪ್ರಥಮವಾಗಿ ಪ್ರಕಟಗೊಂಡುದು ಗುಲ್ವಾಡಿ ಶಾಲೆಯಲ್ಲಿ ಆಡಿದ "ಭೌಮಾಸುರ" ನಾಟಕದಲ್ಲಿ. ಆ ನಾಟಕದಲ್ಲಿ ನನ್ನದು ನಾರದನ ಪಾತ್ರ ಅದು ಹೆಚ್ಚು ಅಭಿನಯ ಹಾಗೂ ಹಾಡುಗಾರಿಕೆಗೆ ಅವಕಾಶವಿರುವ ಪಾತ್ರ. ಮೇಲಾಗಿ ಆ ನಾಟಕದ ನಿರ್ದೇಶಕರೂ, ಹಾರ್ಮೋನಿಯಂ ಮಾಸ್ತರರು, ನನ್ನ ನಾಟಕದ ಗುರುಗಳು ಆಗಿದ್ದ ರಮಾನಾಥ ನಾಯಕರು ನನಗೆ 4-6 ಪದ್ಯಗಳನ್ನು ಹಾಕಿದ್ದರು. ಆಗ ನನಗೆ ಉತ್ತಮ ಶಾರೀರವಿದ್ದುದರಿಂದ ನನ್ನ ಪದ್ಯಗಳಿಗೆ ಓನ್ಸ್ಮೋರ್ ಹಾಕಿ ಪ್ರೋತ್ಸಾಹಿಸಿದರು. ಅಭಿನಯವನ್ನು ಮೆಚ್ಚಿ ಸಿಳ್ಳು ಚಪ್ಪಾಳೆಯ ಮೂಲಕ ಹುರಿದುಂಬಿಸಿದರು. ಮರುವರ್ಷ ಅದೇ ಶಾಲೆಯಲ್ಲಿ ಆಡಿದ "ಕಾರಸ್ಥಾನ" ಎಂಬ ನಾಟಕದಲ್ಲಿ ಪ್ರಧಾನ ಹಾಸ್ಯ ಪಾತ್ರದಲ್ಲಿ ಅಭಿನಯಿಸಿದೆ. ಈ ನಾಟಕದ ಮೂಲಕ ನಾನೊಬ್ಬ ಶ್ರೇಷ್ಠಮಟ್ಟದ ಹಾಸ್ಯ ನಟನೆಂಬ ಪ್ರಸಿದ್ಧಿಗೆ ಪಾತ್ರನಾದೆ.

ನನ್ನ ನಾಟಕಾಭಿನಯದ ಪ್ರಸಿದ್ಧಿ ನಮ್ಮ ಮುಖ್ಯೋಪಾಧ್ಯಾಯರ ಕಿವಿಗೆ ಬಿದ್ದು ಆ ವರ್ಷ ಶಾಲೆಯ ವಾರ್ಷಿಕೋತ್ಸವ ಹಮ್ಮಿಕೊಂಡರು. ಅದರಲ್ಲಿ ನಾವು ಮಿಲ್ ಮೆನೇಜರ್ (ದಸರಾ) ಎಂಬ ನಾಟಕವನ್ನು ಆಡಿದೆವು. ನಾಯಕನ ಪಾತ್ರದಲ್ಲಿ ಗೋವರ್ಧನ ಹೆಗ್ಡೆ, ನಾಯಕಿಯ ಪಾತ್ರದಲ್ಲಿ ಕೊರಗುವಣ್ಣ, ಖಳನಾಯಕನಾಗಿ ಮಂಜುನಾಥ ಪಡಿಯಾರ್, ಹಾಸ್ಯ ಪಾತ್ರಗಳಲ್ಲಿ ನಾನು ಹಾಗೂ ಪ್ರಭಾಕರ ಹೆಗ್ಡೆ ಅಭಿನಯಿಸಿದ್ದೆವು. ಈ ನಾಟಕ ಅಭೂತಪೂರ್ವ ಯಶಸ್ಸು ಗಳಿಸಿತು. ಕಂಡ್ಲೂರು ಜನತೆಯ ಮನೆಮಾತಿನ ನಾಟಕವಾಯ್ತು. ನನ್ನ ಪೇಡೆ ಪೇಡೆ ....ಪ್ರಭಾಕರ ಹೆಗ್ಡೆಯವರ ದಿನವೆಲ್ಲಾ ಮಾಡಿದ ದುಡಿತ .... ಜನರ ಬಾಯಲ್ಲಿ ನಲಿದಾಡಿದುವು. ಕಂಡ್ಲೂರಿನಲ್ಲಿ ಒಂದು ಶ್ರೇಷ್ಠಮಟ್ಟದ ನಾಟಕ ತಂಡ ಉದಯವಾಯಿತು ಎಂಬ ಪ್ರಚಾರ ಉಂಟಾಯಿತು. ಹಿಂದೆ ಕೆ. ಆನಂದ ಎಂಬವರ ಕಾಲದಲ್ಲಿದ್ದ ಕಂಡ್ಲೂರಿನ ನಾಟಕದ ಹಿರಿಮೆ ಮರಳಿ ಬಂದಂತಾಗಿ ಆ ಕೀರ್ತಿಗೆ ನಮ್ಮ ನಾಟಕ ತಂಡ ಪಾತ್ರವಾದುದು ನಮಗೆ ತುಂಬಾ ಹೆಗ್ಗಳಿಕೆಯ ವಿಷಯವಾಯಿತು. ಈ ನಾಟಕವನ್ನು ಬೇರೆ ಬೇರೆ ಊರುಗಳಲ್ಲಿ ಹತ್ತಾರು ಬಾರಿ ಆಡಿ ಅದು ನಮ್ಮ ಮಾಸ್ಟರ್ ಪೀಸ್ ನಾಟಕವೆಂಬ ಖ್ಯಾತಿಗೆ ಪಾತ್ರವಾಯಿತು.

ನನ್ನ ಹಾಸ್ಯಾಭಿನಯವನ್ನು ಮೆಚ್ಚಿದ ಪ್ರೇಕ್ಷಕರು ಅಸುಪಾಸಿನ ಶಾಲೆಯ ನಾಟಕಗಳಲ್ಲಿ ಭಾಗವಹಿಸಲು ಆಮಂತ್ರಿಸಿದರು. ಮುಂದೆ ಪೌರಾಣಿಕ ನಾಟಕಗಳಾದ ಚಿತ್ರಾಂಗದೆ, ಉಷಾಪರಿಣಯ, ಸಂಪೂರ್ಣ ರಾಮಾಯಣ, ಕುರುಕ್ಷೇತ್ರ, ರಕ್ತರಾತ್ರಿ,

ಹರಿಶ್ಚಂದ್ರ ಮೊದಲಾದ ನಾಟಕಗಳಲ್ಲಿ ಹಾಸ್ಯನಟನಾಗಿ ಭಾಗವಹಿಸಿದೆ. ಪುತ್ಥಳಿ, ಹೆಣ್ಣಿನ ಕಣ್ಣೀರು, ಸ್ತ್ರೀರತ್ನ, ಕಣ್ಣುತೆರೆಸಿದ ಹೆಣ್ಣು, ಸುವರ್ಣ, ಹೆತ್ತಳಾತಾಯಿ, ಅತ್ತಿಗೆ, ಅಳಿಯದೇವರು, ಫಜೀತಿ, ಧರ್ಮರತ್ನಾಕರ, ಉಂಡಾಡಿಗುಂಡ, ದೀಪಾವಳಿ, ಅಣ್ಣ-ತಮ್ಮ, ಅಣ್ಣ-ತಂಗಿ, ಕೊಂಡು ತಂದ ಗಂಡ, ಬಣ್ಣದ ಬದುಕು, ಮಧುವಂತಿ, ಗೌಡ್ರಗದ್ದ, ದೇವದಾಸಿ, ಗಂಡನಮನೆ, ರತ್ನಮಾಂಗಲ್ಯ, ಎಚ್ಚಮನಾಯಕ, ಬಡತನದ ಭೂತ, ಮಲಮಗಳು, ಮದುಮಗಳು ಮೊದಲಾದ ಹಲವಾರು ನಾಟಕಗಳಲ್ಲಿ ಅಭಿನಯಿಸುವ ಅವಕಾಶ ದೊರೆಯಿತು. ಅದರಲ್ಲೂ ದಸರಾ ಮತ್ತು ಪುತ್ಥಳಿ ಹತ್ತುಬಾರಿಗೂ ಹೆಚ್ಚಾಗಿ ಅಭಿನಯಿಸಿದ್ದೆವು. ಕುಂದಾಪುರದಲ್ಲಿ ಜರಗಿದ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ನಾವು ಆಡಿದ ದಸರಾ ನಾಟಕವು ದ್ವಿತೀಯ ಬಹುಮಾನವನ್ನು ಪಡೆಯಿತು.

ಇದೇ ಸಂದರ್ಭದಲ್ಲಿ ಕಂಪೆನಿ ನಾಟಕಗಳಲ್ಲಿ ಭಾಗವಹಿಸಬೇಕಾಗಿ ಬಂದ ವಿಶೇಷ ಸನ್ನಿವೇಶವನ್ನು ನಿಮಗೆ ತಿಳಿಯ ಬಯಸುತ್ತೇನೆ. ನಾನು ಮದುವೆಯಾಗಿ 4-6 ದಿನಗಳು ಕಳೆದಿರಬಹುದು. ಒಂದು ದಿನ ಸಂಜೆ ನನ್ನ ಮಿತ್ರನಾದ ಮಂಜುನಾಥ ಪಡಿಯಾರನು ನಾಟಕ ಕಂಪೆನಿಯ ಮೆನೇಜರರಾದ ರಾಮ ನಾಯ್ಕ ಎಂಬವರೊಡನೆ ನಮ್ಮ ಮನೆಗೆ ಬಂದರು. ಉಪಹಾರ ಮುಗಿದ ಬಳಿಕ ರಾಮ ನಾಯ್ಕರು "ರಘು ಮಾಸ್ತರರೇ, ಒಂದು ಗಂಡಾಂತರ ಸನ್ನಿವೇಶ ನಮಗೆ ಎದುರಾಗಿದೆ. ನೀವು ಮನಸ್ಸು ಮಾಡಿದರೆ ನಾವು ಪಾರಾಗಬಹುದು. ಒಂದು ಉಪಕಾರ ಮಾಡಬೇಕು" ಎಂದಾಗ ನಾನು ವಿಚಾರವೇನು ಎಂದು ಕೇಳಿದಾಗ "ನಾಳೆಯ ದಿನ ಬ್ರಹ್ಮಾವರದಲ್ಲಿ ನಮ್ಮ ಕಂಪೆನಿಯಿಂದ 2 ಸಹಾಯಾರ್ಥ ಪ್ರದರ್ಶನ ನೀಡುತ್ತೇವೆಂದು ಒಪ್ಪಿಕೊಂಡಿದ್ದೇವೆ. ಈಗಾಗಲೇ ಸಾಕಷ್ಟು ಟಿಕೇಟುಗಳನ್ನು ಮಾರಿಯಾಗಿದೆ. ಆದರೆ ನಮ್ಮ ನಾಟಕದ ಹಾಸ್ಯ ನಟನಾದ ಲಕ್ಷ್ಮೀನಾರಾಯಣ ಎನ್ನುವವನು ಏನೋ ಜಗಳ ತೆಗೆದು ಕಂಪೆನಿಬಿಟ್ಟು ಹೋಗಿದ್ದಾನೆ. ಆ ಪಾತ್ರಕ್ಕೆ ನಮ್ಮಲ್ಲಿ ಬೇರೆ ಜನವೇ ಇಲ್ಲ. ಬೇರೆ ಕಂಪೆನಿಯಲ್ಲಿ ವಿಚಾರಿಸಿದರೂ ಸಿಗಲಿಲ್ಲ. ನಾಳೆ ನಾಟಕ ಆಡದಿದ್ದರೆ ನಮ್ಮ ಮರ್ಯಾದೆ ಉಳಿಯುವುದಿಲ್ಲ ನೀವು ಈ ಹಿಂದೆ ಆ ನಾಟಕದಲ್ಲಿ ಆ ಪಾತ್ರ ಮಾಡಿದ್ದಾಗಿ ಮಂಜುನಾಥ ತಿಳಿಸಿದರು. ಹಾಗಾಗಿ ನಿಮ್ಮಲ್ಲಿಗೆ ಬಂದೆ, ಮರ್ಯಾದೆ ಉಳಿಸಿ" ಎಂದು ಕೈಮುಗಿದು ಕೇಳಿಕೊಂಡರು. ನಾನು "ಬಹಳ ಹಿಂದೆ ನಾವು ಆಡಿದ ನಾಟಕ, ಈಗ ಅದರ ಮಾತು ನೆನಪಿನಲ್ಲಿ ಉಳಿದಿಲ್ಲ" ಎಂದಾಗ

"ಈಗಲೇ ನಾವು ಬ್ರಹ್ಮಾವರಕ್ಕೆ ಹೋಗುವ. ಅಲ್ಲಿ ನಾಟಕ ಪುಸ್ತಕವಿದೆ. ರಾತ್ರಿ ನೀವು ನೋಡಿಕೊಳ್ಳಿ, ನಾಳೇ ಮಧ್ಯಾಹ್ನ 2 ಗಂಟೆಗೆ ಮತ್ತು 6 ಗಂಟೆಗೆ ನಾಟಕ" ಎಂದು ಹೇಳಿದರು. ಸಂದರ್ಭದ ಗಂಭೀರತೆಯನ್ನರಿತು ಒಪ್ಪಿ ಅವರೊಡನೆ ಹೊರಟೆ ಆದರೆ ಅಲ್ಲಿ ನಾಟಕ ಪುಸ್ತಕ ಇದ್ದಿರಲಿಲ್ಲ. ಸುಮ್ಮನೆ ಆಚೆ, ಈಚೆ ಹುಡುಕಿದಂತೆ ಅಭಿನಯಿಸಿದರು. ಸಾಧಾರಣ 9 ಗಂಟೆಗೆ ಕೆಲವು ನಟ–ನಟಿಯರು ಆಗಮಿಸಿದರು. ನನ್ನ ಜೋಡಿ ಪಾತ್ರ ಮಾಡುವ ಶಕುಂತಳಾ, ಖಳನಾಯಕನ ಪಾತ್ರ ಮಾಡುವ ಆರೂರು ರಘುರಾಮಯ್ಯ ಮೊದಲಾದವರು ಸಂಭಾಷಣೆಯ ಕೆಲವು ತುಣುಕುಗಳನ್ನು ತಿಳಿಯ ಹೇಳಿದರು. ದೇಶಪಾಂಡೆ ಎನ್ನುವವರು ಪದ್ಯದ ತರಬೇತಿ ನೀಡಿದರು. ಆದರೂ ಅರ್ಧಂಬರ್ಧ ಮಾತು ತಿಳಿದು, ಕಂಪೆನಿಯ ನಟ ನಟಿಯರೊಡನೆ ಹೇಗೆ ಅಭಿನಯಿಸಲಿ ಎಂಬ ಭಯ ಉಂಟಾಯಿತು. ಕೊನೆಗೆ ದೇವರ ಮೇಲೆ ಭಾರ ಹಾಕಿ, ಗುರುಗಳನ್ನು ಸ್ಮರಿಸಿಕೊಳ್ಳುತ್ತಾ ರಂಗ ಪ್ರವೇಶ ಮಾಡಿದೆ. ನಾಟಕದ ಕಥೆ ತಿಳಿದುದರಿಂದ, ಹಿಂದೆ ಮಾಡಿದ ಪಾತ್ರವಾದುದರಿಂದ, ಸಹಕಲಾವಿದರ ಸಹಕಾರದಿಂದ ಎಲ್ಲಿಯೂ ಎಡವದೆ ಅಭಿನಯಿಸಿದೆ. ಸಂದರ್ಭವನ್ನರಿತು ಕೆಲವು ಕಡೆ ನನ್ನ ಸ್ವಂತಮಾತುಗಳನ್ನು ಸೇರಿಸಿದೆ. ನನ್ನ ಅಭಿನಯವೂ ಸೇರಿದಂತೆ ನಾಟಕವು ಯಶಸ್ವಿಯಾಯಿತು. ನಾಟಕ ಮುಗಿದ ಮೇಲೆ ನನ್ನ ಆತ್ಮೀಯ ಗೆಳೆಯರೊಬ್ಬರು ಗ್ರೀನ್ರೂಮಿಗೆ ಬಂದು "ಕಂಪೆನಿಯ ನಟರಿಗೆ ಏನೂ ಕಡಿಮೆಯಾಗದಂತೆ ಸಹಜವಾಗಿಯೇ ಅಭಿನಯಿಸಿದಿರಿ" ಎಂದು ಮೆಚ್ಚುಗೆಯ ಮಾತನ್ನಾಡಿದರು. ನಾಟಕ ಮುಗಿದ ಮೇಲೆ ಕಂಪೆನಿಯ ಮ್ಯಾನೇಜರರು ಹಾಗೂ ಇತರ ನಟ–ನಟಿಯರು ಕೃತಜ್ಞತಾಪೂರ್ವಕವಾಗಿ ನನ್ನನ್ನು ಬೀಳ್ಕೊಟ್ಟರು.(ಕಂಪೆನಿಯ ಮೆನೇಜರರಾದ ರಾಮ ನಾಯ್ಕರು ಹಿಂದೆ ಬಸ್ರೂರು ಶಾಲೆಯಲ್ಲಿ ನನ್ನ ಸಹಪಾಠಿಯಾಗಿದ್ದರು)

ಕಂಪೆನಿಯ ಸಹವಾಸ ಇಷ್ಟಕ್ಕೆ ಮುಗಿಯಲಿಲ್ಲ. ಮಂದಾರ್ತಿ ಕೃಷ್ಣಯ್ಯ ಶೆಟ್ಟಿ ಎನ್ನುವವರು ಬೇರೆಬೇರೆ ನಾಟಕ ಕಂಪೆನಿಗಳಲ್ಲಿ ಹಾರ್ಮೋನಿಯಂ ಮಾಸ್ತರರಾಗಿ ದುಡಿದವರು. ವೃದ್ಯಾಪ್ಯದಿಂದ ಕಂಪೆನಿ ಬಿಟ್ಟು ಊರು ಸೇರಿದ್ದರು. ಅವರು ತಮ್ಮ ಸಹಾಯಾರ್ಥ ಬೇರೆ ಬೇರೆ ಕಡೆಗಳಲ್ಲಿ 3–4 ನಾಟಕಗಳನ್ನು ಹಮ್ಮಿಕೊಂಡಿದ್ದರು. ಅದರಲ್ಲಿ ಭಾಗವಹಿಸುವವರು ಕಂಪೆನಿ ನಟ–ನಟಿಯರು. ಆದರೆ ಹಾಸ್ಯ ಪಾತ್ರಕ್ಕೆ ನನ್ನನ್ನೇ ಒತ್ತಾಯಿಸಿ ಒಪ್ಪಿಸಿದ್ದರು. ಒಬ್ಬ ಅಶಕ್ತ ಕಲಾವಿದನಿಗೆ ಸಹಾಯ ಮಾಡುವುದು ನನ್ನ ಕರ್ತವ್ಯ ಎಂಬ ದೃಷ್ಟಿಯಿಂದ ಒಪ್ಪಿದೆ. ಉಡುಪಿ, ಶಿರೂರು, ಮೊಳಹಳ್ಳಿಯಲ್ಲಿ

ಆಡಿದ ನಾಟಕಗಳಲ್ಲಿ ಅಭಿನಯಿಸಿದೆ. ಈ ನಾಟಕಗಳಿಂದ ಆರ್ಥಿಕವಾಗಿ ಸೋತಿರುವ ಕೃಷ್ಣಯ್ಯ ಶೆಟ್ರಿಗೆ ಸ್ವಲ್ಪ ಮಟ್ಟಿನ ಸಹಾಯವೂ ಆಯಿತು.

ಇನ್ನೊಂದು ಸಂದಿಗ್ಧ ಸಂದರ್ಭದಲ್ಲಿ ಉಡುಪಿಯಲ್ಲಿ ಒಂದು ನಾಟಕದಲ್ಲಿ ಪಾತ್ರ ನಿರ್ವಹಿಸಬೇಕಾಗಿ ಬಂತು. ಉಡುಪಿ ಬಂಟ್ಸ್ ಹಾಸ್ಟೇಲಿನ ವಿದ್ಯಾರ್ಥಿಗಳು ಹಾಸ್ಟೆಲ್‌ಡೇಗೆ "ಕೊಂಡು ತಂದ ಗಂಡ" ನಾಟಕ ಆಡುವುದೆಂದು ತೀರ್ಮಾನಿಸಿಕೊಂಡು, ಪಾತ್ರ ವಿತರಣೆ ಮಾಡಿಕೊಂಡು ತರಬೇತಿ ಆರಂಭಿಸಿದ್ದರು. 4–6 ತರಬೇತಿಗಳು ಮುಗಿದುವು. ಇನ್ನೇನು ನಾಟಕಕ್ಕೆ 3 ದಿನ ಉಳಿದಿರುವಾಗ ಅದರಲ್ಲಿ ಉಡುಪಿ ಮಾಣಿ ಪಾತ್ರ ಮಾಡುವವರು ತನಗೆ ಸೌಖ್ಯವಿಲ್ಲ, ನಾಟಕದಲ್ಲಿ ಪಾತ್ರ ನಿರ್ವಹಿಸಲು ಸಾಧ್ಯವಿಲ್ಲವೆಂದು ಊರಿಗೆ ಹೊರಟು ಹೋದರು. ನಿಜ ಸಂಗತಿಯೆಂದರೆ ಅದು ತುಂಬಾ ದೃಶ್ಯಗಳಲ್ಲಿ ಭಾಗವಹಿಸಲಿರುವ ಹೆಚ್ಚು ಮಾತುಗಳಿರುವ ಪಾತ್ರ. ಕೊನೆಯ ಟ್ರಾಯೆಲ್‌ವರೆಗೂ ಬಾಯಿಪಾಠ ಮಾಡಲು ಸಾಧ್ಯವಾಗಲಿಲ್ಲ. ಅಲ್ಲದೆ ಆ ಪಾತ್ರದ ಅಭಿನಯ ಕೂಡಾ ತುಂಬಾ ಕ್ಲಿಷ್ಟವಾಗಿತ್ತು. ಹೀಗಾಗಿ ಆ ಪಾತ್ರ ನಿರ್ವಹಿಸುವುದು ಕಷ್ಟವೆಂದು ತೋರಿ ಅಸೌಖ್ಯದ ನೆಪವನ್ನೊಡ್ಡಿ ತಪ್ಪಿಸಿಕೊಂಡಿದ್ದರಂತೆ. ಆ ನಾಟಕದ ನಟವರ್ಗದಲ್ಲಿ ನನ್ನ ಶಿಷ್ಯನೂ, ಸಂಬಂಧಿಯೂ ಆದ ಡಾ। ಜಯಶೀಲ ಹೆಗ್ಡೆ ಎಂಬವರಿದ್ದರು. ಅವರು ನೇರವಾಗಿ ನನ್ನಲ್ಲಿ ಬಂದು ಮರ್ಯಾದೆ ಉಳಿಸಬೇಕೆಂದು ಭಿನ್ನೈಸಿಕೊಂಡರು. ಅದು ನಾನು ಹಿಂದೆ ಅಭಿನಯಿಸಿದ ಪಾತ್ರವಾದರೂ ಬಹಳ ಹಿಂದೆ ಆಡಿದ್ದರಿಂದ ಮಾತುಗಳು ನೆನಪಿರಲಿಲ್ಲ. ಆಗ ಅವರು ನಾಟಕದ ಪುಸ್ತಕವನ್ನಿತ್ತು ಮರುದಿನ ರಾತ್ರಿ ಗ್ರೇಂಡ್ ಟ್ರಾಯಲ್ಲಿಗೆ ಬರುವಂತೆ ತಿಳಿಸಿ ತೆರಳಿದರು. ಆ ದಿನ ಇಡೀ ರಾತ್ರಿ ಮಾತುಗಳನ್ನು ಬಾಯಿಪಾಠ ಮಾಡಿ ಸಮಯಕ್ಕೆ ಸರಿಯಾಗಿ ಟ್ರಾಯಲ್ಲಿಗೆ ಹಾಜರಾದೆ. ಉತ್ತಮ ರೀತಿಯಲ್ಲಿ ಗ್ರೇಂಡ್ ಟ್ರಾಯಲ್ ನಡೆಯಿತು. ನಾಟಕವು ಕೂಡಾ ತುಂಬಾ ಯಶಸ್ವಿಯಾಯಿತು. ಮರುದಿನ ಹಾಸ್ಟೇಲಿನಲ್ಲಿ ಅದ್ದೂರಿಯ ಔತಣವನ್ನಿತ್ತು, ನನ್ನ ಉಪಕಾರವನ್ನು ಬಹುವಾಗಿ ಹೊಗಳಿ, ನೆನಪಿನ ಕಾಣಿಕೆಯನ್ನಿತ್ತು ಬೀಳ್ಕೊಟ್ಟರು.

ನಮ್ಮ ನಾಟಕ ಮಿತ್ರ ಮಂಜುನಾಥ ಪಡಿಯಾರರು ಹುಣ್ಸೆಮಕ್ಕಿಯಲ್ಲಿ ಸೋಡಾಫೆಕ್ಟರಿ ಇಟ್ಟುಕೊಂಡು ಸಾಧಾರಣ 8–10 ವರ್ಷಗಳ ಕಾಲ ವ್ಯಾಪಾರ ಮಾಡುತ್ತಿದ್ದರು. ಅವರು ಹೆಚ್ಚಾಗಿ ನಮ್ಮ ತಂಡದ ನಾಟಕಗಳಲ್ಲಿ ಖಳನಾಯಕನ ಪಾತ್ರ ಮಾಡುವವರು. ಅವರು ಅಲ್ಲಿರುವ ಅವಧಿಯಲ್ಲಿ ಆ ಊರಿನ ಶಾಲೆಯಲ್ಲಿ

4–6 ವಾರ್ಷಿಕೋತ್ಸವ ಜರಗಿತ್ತು. ಆ ಸಮಯ ಯುವಕರ ನಾಟಕದ ಜವಾಬ್ದಾರಿ ಇವರು ಮೇಲೆ ಬೀಳುತ್ತಿತ್ತು. ಅವರು ಸಾಮಾನ್ಯವಾಗಿ ನಾವು ಕಂಡ್ಲೂರು, ಬಳ್ಕೂರುಗಳಲ್ಲಿ ಆಡಿ ಯಶಸ್ವಿಯಾದ ನಾಟಕಗಳನ್ನೇ ಇಡುತ್ತಿದ್ದರು. ಒಂದು ವರ್ಷ ನಮ್ಮ ಮಾಸ್ಟರ್ ಪೀಸ್ ನಾಟಕವಾದ ಮಿಲ್ ಮ್ಯಾನೇಜರ್ ನಾಟಕ ಆಡುವುದೆಂದು ನಿಶ್ಚಯಿಸಿದರು. ಆ ನಾಟಕದಲ್ಲಿ ನನಗೆ 3–4 ಪದ್ಯಗಳಿದ್ದುವು. ಹೆಚ್ಚಾಗಿ ಅವುಗಳಿಗೆ ಒನ್ಸ್‌ಮೋರ್ ಬೀಳುತಿತ್ತು. ನಾಟಕದ ಗ್ರ್ಯಾಂಡ್ ಟ್ರಾಯಲ್ ದಿನ ನಟರೆಲ್ಲಾ ಸೇರಿ ಒಂದು ಠರಾವು ಮಾಡಿದರು. ಆ ನಾಟಕದಲ್ಲಿ ಒನ್ಸ್‌ಮೋರಿನಲ್ಲಿ ಒಟ್ಟಾದ ಹಣವನ್ನು ಮರುದಿನದ ಬಾಡೂಟಕ್ಕೆ ಕೊಡಬೇಕೆಂಬುದೇ ಠರಾವಿನ ವಿಷಯವಾಗಿದೆ. ನಾವೆಲ್ಲರೂ ಠರಾವಿಗೆ ಒಪ್ಪಿದೆವು. ನಾಟಕದ ದಿನ ನನ್ನ ಎಲ್ಲಾ ಪದ್ಯಗಳಿಗೆ 3–4 ಬಾರಿ ಒನ್ಸ್‌ಮೋರ್ ಬಿತ್ತು. ಮಂಜುನಾಥ ಪಡಿಯಾರ್ ಮತ್ತು ಪ್ರಭಾಕರ ಹೆಗ್ಡೆಯವರ ಪದ್ಯಗಳಿಗೆ ಒಂದೆರಡು ಒನ್ಸ್‌ಮೋರ್ ಬಿದ್ದಿತ್ತು. ನಾನು ಮಾತ್ರ ಹಾಡಿ ಹಾಡಿಗೆ ಸುಸ್ತಾಗಿದ್ದೆ. ನನ್ನ ಹಾಡಿನಿಂದಲೇ ಹೆಚ್ಚು ಹಣ ಸಂಗ್ರಹವಾಗಿತ್ತು. ಮಾಡಿಕೊಂಡ ನಿಬಂಧನೆಯಂತೆ ಮರುದಿನ ಬಾಡೂಟ ಜೋರಾಗಿಯೇ ನಡೆಯಿತು. ಹಾಗೆ ಊಟ ಮಾಡುವಾಗ ಗುಟ್ಟು ರಟ್ಟಾಯಿತು. ನನ್ನನ್ನು ಪದ್ಯದಲ್ಲಿ ಸೋಲಿಸುವುದಕ್ಕಾಗಿಯೇ ಉಳಿದವರೆಲ್ಲಾ ಸೇರಿ ಹೂಡಿದ ಸಂಚಾಗಿತ್ತು. ಬೇರೆಯವರನ್ನು ಪುಸಲಾಯಿಸಿ ನನ್ನ ಪದ್ಯಕ್ಕೆ ಮೇಲಿಂದ ಮೇಲೆ ಒನ್ಸ್ಮೋರ್ ಹಾಕಿಸಿದ್ದರು. ಆದರೆ ಒಟ್ಟಾದ ಹಣ ನನಗೆ ಸಿಗಬಾರದೆಂಬ ಕಾರಣಕ್ಕೆ ಠರಾವು ಮಾಡಿದ್ದಾಗಿ ಹೇಳಿ ನಗಾಡುತ್ತಾ, ಕೇಕೆ ಹಾಕುತ್ತಾ ಸಂಭ್ರಮಿಸಿದರು. ಅವರೊಂದಿಗೆ ನಾನೂ ಸಂಭ್ರಮಿಸಿದೆ.

ನನ್ನ ಕಲಾರಂಗದ ಗುರುಗಳಾದ ರಮಾನಾಥ ನಾಯಕರು ಒಮ್ಮೆ ಅಪಘಾತಕ್ಕೀಡಾದರು. ಅವರ ಸಹಾಯಾರ್ಥ ಒಂದು ನಾಟಕ ಮಾಡುವುದೆಂದು ಅವರ ಅಭಿಮಾನಿಗಳೂ, ಶಿಷ್ಯರು ತೀರ್ಮಾನಿಸಿದರು. ನಾವು ಈಗಾಗಲೇ ಬಳ್ಕೂರಿನಲ್ಲಿ ಆಡಿ ಯಶಸ್ವಿಯಾದ ಮಹಾತಾಯಿ (ಪುತ್ಥಳಿ) ನಾಟಕ ಆಡುವುದೆಂದು ತೀರ್ಮಾನವಾಯಿತು. ಮಂಜುನಾಥ ಪಡಿಯಾರರು ಹಾಗೂ ನಾನು ಮಾತ್ರ ಮೊದಲು ಅಭಿನಯಿಸಿದವರು. ಉಳಿದವರು ಬಸ್ರೂರು ವಲಯದ ಪ್ರಸಿದ್ಧ ನಟರು. ಅವರ ಪೈಕಿ ಆನಂದ ಬಸ್ರೂರು ಒಬ್ಬರ ಹೆಸರು ಮಾತ್ರ ಈಗ ನೆನಪಿಗೆ ಬರುತ್ತದೆ. ಕಲೆಕ್ಷನಿಗಾಗಿ ನಾವೆಲ್ಲರೂ ತುಂಬಾ ಶ್ರಮ ಪಟ್ಟಿದ್ದೆವು. ಬಸ್ರೂರಿನ ಶಾರದಾ ಕಾಲೇಜಿನ ರಂಗ ಮಂಟಪದಲ್ಲಿ 2 ಪ್ರದರ್ಶನಗಳನ್ನು ನೀಡಲಾಯಿತು. ತುಂಬಾ ಮಂದಿ ಪ್ರೇಕ್ಷಕರು ಸೇರಿದ್ದರು. ಹಾರ್ಮೋನಿಯಂ ಮಾಸ್ತರರಾಗಿ ಗುರುಗಳಾದ ರಮಾನಾಥ ನಾಯಕರೇ

ಭಾಗವಹಿಸಿದ್ದರು. ನಾಟಕವನ್ನು ಪ್ರೇಕ್ಷಕರು ತುಂಬಾ ಮೆಚ್ಚಿ ಕರತಾಡನದ ಮೂಲಕ ಪ್ರೋತ್ಸಾಹಿಸಿದರು. ಈ ರೀತಿಯಲ್ಲಾದರೂ ಗುರು ಋಣ ತೀರಿಸುವಂತಾಯಿತಲ್ಲಾ ಎಂಬ ಆತ್ಮ ಸಂತೋಷ ನನ್ನದಾಯಿತು.

ಯಕ್ಷಗಾನದಲ್ಲಿ ಜೋಡಾಟಗಳು ನಡೆಯುವಂತೆ ನಾಟಕದಲ್ಲಿ ಸ್ಪರ್ಧಾತ್ಮಕವಾಗಿ 2 ನಾಟಕಗಳು ಜರಗಿದ ಸ್ವಾರಸ್ಯಕರ ಸಂದರ್ಭವನ್ನು ನಿಮ್ಮೊಡನೆ ಹಂಚಿಕೊಳ್ಳಲು ಬಯಸುತ್ತೇನೆ. ಅದು ನಡೆದದ್ದು ವಂಡ್ಸೆ ಮಲನಾಡು ಹೈಸ್ಕೂಲಿನಲ್ಲಿ. ಆ ಹೈಸ್ಕೂಲು ವಂಡ್ಸೆ ಮತ್ತು ಕರ್ಕುಂಜೆ ಗ್ರಾಮದ ಮಧ್ಯದಲ್ಲಿದೆ. ಅಲ್ಲಿ ಎರಡೂ ಗ್ರಾಮಗಳ ವಿದ್ಯಾರ್ಥಿಗಳೇ ಹೆಚ್ಚು ಮಂದಿ ಇರುತ್ತಿದ್ದರು. ಅಲ್ಲಿಯ ಒಂದು ವರ್ಷದ ವಾರ್ಷಿಕೋತ್ಸವದಲ್ಲಿ ಎರಡೂ ಕಡೆಯ ಹಳೆ ವಿದ್ಯಾರ್ಥಿಗಳು ತಾವು ಬೇರೆ ಬೇರೆಯಾಗಿ ನಾಟಕ ಮಾಡುತ್ತೇವೆ. ತಮಗೆ ಅನುಮತಿ ಕೊಡಬೇಕೆಂದು ಆಗಿನ ಮುಖ್ಯೋಪಾಧ್ಯಾಯರಾದ ಎನ್. ಸುಬ್ಬಣ್ಣ ಹೆಗ್ಡೆಯವರಲ್ಲಿ ವಿನಂತಿಸಿಕೊಂಡಾಗ ಅವರು ಸಮ್ಮತಿ ನೀಡಿದರು. ತಮ್ಮ ನಾಟಕ ಒಳ್ಳೆಯದಾಗಬೇಕೆಂದು ಎರಡೂ ಕಡೆಯವರು ಉತ್ತಮ ನಟ ವರ್ಗವನ್ನು ಆಯ್ಕೆ ಮಾಡಲು ತೊಡಗಿದರು. ಅದು ಸ್ಪರ್ಧಾತ್ಮಕ ನಾಟಕಗಳೆಂದೇ ಬಿಂಬಿಸಲಾಯಿತು. ಕರ್ಕುಂಜೆಯವರು ಪುತ್ಥಳಿ ನಾಟಕವನ್ನು, ವಂಡ್ಸೆಯವರು ಗಂಡನಮನೆ ನಾಟಕವನ್ನೂ ಆರಿಸಿಕೊಂಡರು ಕರ್ಕುಂಜೆಯ ತಂಡಕ್ಕೆ ಎನ್. ಅನಂತ ನಾಯ್ಕರು ಹಾಗೂ ವಂಡ್ಸೆ ತಂಡಕ್ಕೆ ಕೆ. ವಿಠಲ ಶೆಟ್ರು (ಅಧ್ಯಾಪಕರು) ನೇತೃತ್ವ ವಹಿಸಿದರು.

ಪುತ್ಥಳಿ ನಾಟಕದ ಹಾಸ್ಯಪಾತ್ರ (ಬದ್ಧ)ದಲ್ಲಿ ಆಗಲೇ ನನಗೆ ತುಂಬಾ ಹೆಸರಿತ್ತು. ಆ ಕಾರಣಕ್ಕಾಗಿ ನಾನು ಆ ಪಾತ್ರ ಮಾಡಬೇಕೆಂದು ಒತ್ತಾಯ ಪೂರ್ವಕವಾಗಿ ಅನಂತ ನಾಯ್ಕರು ಒಪ್ಪಿಸಿದರು. ಈ ವರ್ತಮಾನ ವಿಠಲ ಶೆಟ್ಟರಿಗೆ ತಿಳಿದು ಅವರು ನನ್ನಲ್ಲಿಗೆ ಬಂದು " ನೋಡು ರಘು ಇದು ಎರಡು ಗ್ರಾಮಗಳ ಮಧ್ಯೆ ನಡೆಯುವ ಸ್ಪರ್ಧಾತ್ಮಕ ನಾಟಕ. ಹಾಗಾಗಿ ನೀನು ಆ ನಾಟಕದಲ್ಲಿ ಪಾತ್ರ ಮಾಡಬಾರದೆಂದು" ನನಗೆ ಒತ್ತಡ ತಂದರು. ಆಗ ನಾನು "ಈಗಾಗಲೇ ನಾನು ಒಪ್ಪಿಕೊಂಡದ್ದಾಗಿದೆ. ಅಲ್ಲದೆ 2 ಟ್ರಾಯಲ್ ಕೂಡಾ ನಡೆದಿದೆ. ಇಂಥಾ ಪರಿಸ್ಥಿತಿಯಲ್ಲಿ ಮಾಡದಿರುವುದು ಸರಿಯೇ ? " ಎಂದು ನನ್ನ ಅಸಹಾಯಕತೆಯನ್ನು ಮುಂದಿರಿಸಿದೆ. ಆಗ ಅವರು "ಹಾಗಾದರೆ ನಮ್ಮ ನಾಟಕದಲ್ಲೂ ಪ್ರಧಾನ ಹಾಸ್ಯ ಪಾತ್ರ ಮಾಡಬೇಕು" ಎಂದು ಒತ್ತಡ ತಂದರು. ಬೇರೆ ದಾರಿ ಕಾಣದೆ ಒಪ್ಪಿಕೊಂಡು ಆ ನಾಟಕದ ನೀಲಕಂಠ

ಎಂಬ ಪಾತ್ರ ಮಾಡಲು ಮುಂದಾದೆ.

ಪುತ್ಥಳಿ ಮೊದಲು ಆಡಿದ ನಾಟಕವಾದುದರಿಂದ ಹೆಚ್ಚಿನ ತರಬೇತಿ ನನಗೆ ಬೇಕಾಗಿರಲಿಲ್ಲ. ಆದರೆ ಗಂಡನಮನೆ ನನಗೆ ಹೊಸತು. ಅಲ್ಲದೆ ಆ ಪಾತ್ರವು ಕೂಡಾ ಸ್ವಲ್ಪ ಭಿನ್ನ ರೀತಿಯದಾಗಿತ್ತು. ಅಂತೂ ಶಕ್ತಿ ಮೀರಿ ಆ ಎರಡೂ ಪಾತ್ರಗಳನ್ನು ಮಾಡಿದೆ. ಗಂಡನಮನೆ ನಾಟಕದಲ್ಲಿ ಬಯಲಾಟದ ಪದ್ಯ ಹೇಳುತ್ತಾ ರಂಗ ಪ್ರವೇಶ ಮಾಡುವ ಒಂದು ಸನ್ನಿವೇಶವಿದೆ. ನಾಟಕದ ಪುಸ್ತಕದಲ್ಲಿ ಯಾವುದೋ ಒಂದು ದೊಡ್ಡಾಟದ ಪದ್ಯ ಹಾಕಿದ್ದರು. ಆದರೆ ಅದು ಇಲ್ಲಿಯ ಪ್ರೇಕ್ಷಕರಿಗೆ ಹಿಡಿಸಲಾರದೆಂದು ಮಾರವಿ ಏಕ ತಾಳದಲ್ಲಿ "ಬಿಡು ಬಿಡು ನಿನ್ನಯ ಹುಳಿ ಸಾರ್ ಪಾಯಸ। ಮೀನ್ಸುಳಿ ರುಚಿ ಬಕ್ಕಾ" ಎಂದು ಯಕ್ಷಗಾನ ದಾಟಿಯಲ್ಲಿ ಹಾಡುತ್ತಾ ರಂಗ ಪ್ರವೇಶಿಸಿದಾಗ ಇಡಿ ಸಭೆಗೆ ಸಭೆಯೇ ಚಪ್ಪಾಳೆ ಹೊಡೆದು ಸಂಭ್ರಮಿಸಿದರು. ಎರಡೂ ನಾಟಕಗಳೂ ಯಶಸ್ವಿಯಾಗಿ ಜರಗಿದವು. ಸ್ಪರ್ಧಾತ್ಮಕವಾಗಿ ನಡೆದ ಆ ನಾಟಕಗಳಲ್ಲಿ ಎರಡೂ ಕಡೆ ಅಭಿನಯಿಸಿದ ನಾನು ಗೆದ್ದವನೆಂಬುದಾಗಿ ಉಭಯ ಕಡೆಯವರೂ ಒಪ್ಪಿಕೊಂಡರು.

ನಾಟಕ ರಂಗದಲ್ಲಿ ಪಂಥಾಹ್ವಾನ ಸ್ವೀಕರಿಸಿ, ಅಭಿನಯಿಸಬೇಕಾದ ಒಂದು ವಿಶೇಷ ಸನ್ನಿವೇಶ ನನಗೆ ಒದಗಿ ಬಂದಿತ್ತು. ಬಸ್ರೂರಿನ ಬಿ.ಎಮ್. ಶಾಲೆಯಲ್ಲಿ ಬಹಳ ವರ್ಷಗಳ ಅನಂತರ ಅದ್ದೂರಿಯಿಂದ ವಾರ್ಷಿಕೋತ್ಸವ ಜರಗಿಸಲು ಸಂಕಲ್ಪಿಸಿದರು. ಹಿಂದೊಮ್ಮೆ ಅಲ್ಲಿ ಆಡಿದ ಬಡತನದ ಭೂತವೆಂಬ ನಾಟಕ ತುಂಬಾ ಪ್ರಸಿದ್ಧಿ ಪಡೆದಿತ್ತು. (ಆಗ ವಿದ್ಯಾರ್ಥಿಯಾಗಿದ್ದ ನಾನು ಆ ನಾಟಕ ನೋಡಿದ್ದೆ) ಈ ವರ್ಷದ ನಾಟಕದ ಜವಾಬ್ದಾರಿಯನ್ನು ಶ್ರೀ ಬಿ. ಅಪ್ಪಣ್ಣ ಹೆಗ್ಡೆಯವರಿಗೆ ಒಪ್ಪಿಸಿದ್ದರು. ಹೆಗ್ಡೆಯವರು ದೇವದಾಸಿ ನಾಟಕ ಆಯ್ಕೆ ಮಾಡಿ, ಪಾತ್ರ ವಿತರಣೆಗಾಗಿ ಬಸ್ರೂರಿನ ಆಗಿನ ಶ್ರೇಷ್ಠ ನಟ ವರ್ಗದವರನ್ನು ಶಾಲೆಗೆ ಕರೆಸಿಕೊಂಡರು. ಈ ಮಧ್ಯೆ ಯಾವ ಕಾರಣದಿಂದಲೋ ಗೊತ್ತಿಲ್ಲ ಆ ದಿನ ನನ್ನನ್ನೂ ಬರ ಹೇಳಿದ್ದರು. ಆನಂದ ಬಸ್ರೂರು, ಬಿ.ಕೆ. ಬಳೆಗಾರ್, ಕೋಳ್ಕೆರೆ ಸೀತಾರಾಮ ಶೆಟ್ಟಿ, ವೆಂಕಟ್ರಮಣ ಭಟ್, ಮಂಜುನಾಥ ಪಡಿಯಾರ್, ವಿಠಲ ನಾಯಕ್ ಮುಂತಾದವರು ಆಗಮಿಸಿದ್ದರು. ದೇವದಾಸಿ ನಾಟಕದಲ್ಲಿ ನಾಜೂಕಯ್ಯ ಪಾತ್ರದ ಮೇಲೆ ನಾಟಕದ ಯಶಸ್ಸು ನಿಂತಿರುತ್ತದೆ. ಹಿರಿಯಣ್ಣಯ್ಯ ಹಾಗೂ ಅವರ ಮಗ ಮಾಸ್ಟರ್ ಹಿರಿಯಣ್ಣಯ್ಯ ಆ ಪಾತ್ರದಲ್ಲಿ ತುಂಬಾ ಹೆಸರು ಪಡೆದವರು. ಈ ಪಾತ್ರ ಮಾಡಬೇಕೆಂಬ ಉತ್ಕಟವಾದ ಆಸೆ ಆ ಕೂಟದ 3-4

ಮಂದಿಗಳಲ್ಲಿತ್ತು. ಆದರೆ ಯಾವ ಕಾರಣಕ್ಕೊ ಗೊತ್ತಿಲ್ಲ ಅಪ್ಪಣ್ಣ ಹೆಗ್ಡೆಯವರು ಆ ಪಾತ್ರಕ್ಕೆ ನನ್ನನ್ನು ಆಯ್ಕೆ ಮಾಡಿದರು. ನಿಜವಾಗಿ ಹೇಳಬೇಕೆಂದರೆ ಅದು ನನಗೂ ಆಶ್ಚರ್ಯಕರವಾದ ಆಯ್ಕೆಯಾಗಿತ್ತು. ನನ್ನ ಆಯ್ಕೆಯಲ್ಲಿ ಉಳಿದ ನಟರಿಗೂ ಅಷ್ಟೇನೂ ಸಮಾಧಾನವಾದಂತೆ ಕಂಡು ಬರಲಿಲ್ಲ. ಆದರೆ ಅಪ್ಪಣ್ಣ ಹೆಗ್ಡೆಯವರ ನಿರ್ಧಾರದ ಮುಂದೆ ಯಾರೂ ಪ್ರಶ್ನಿಸುವಂತಿಲ್ಲ. ಹಾಗಾಗಿ ಭರದಿಂದ ಟ್ರಾಯಲ್ ನಡೆಯಲಾರಂಭಿಸಿತು. ಪ್ರತಿ ಟ್ರಾಯಲ್ಲಿಗೆ ಹೆಗ್ಡೆಯವರು ತಪ್ಪದೆ ಹಾಜರಾಗುತಿದ್ದರು. ನಟ ವರ್ಗದವರು ಉತ್ಸಾಹದಿಂದ ಭಾಗವಹಿಸುತಿದ್ದರು, ಮೊದಮೊದಲು ಅವರು ನನಗೆ ಅಷ್ಟೇನೂ ಸಹಕರಿಸದಿದ್ದರೂ ಕೊನೆಯ ಹಂತದಲ್ಲಿ ನನಗೆ ಸೂಕ್ತ ಸಲಹೆಗಳನ್ನಿತ್ತು ನನ್ನ ಪಾತ್ರದ ಯಶಸ್ಸಿಗೆ ಸಹಕಾರಿಗಳಾದರು.

ಅದೇ ಸಮಯಕ್ಕೆ ಮಾಸ್ಟರ್ ಹಿರಿಯಣ್ಣಯ್ಯನವರು ತಮ್ಮ ಉಡುಪಿ ಕ್ಯಾಂಪಿನಲ್ಲಿ ದೇವದಾಸಿ ನಾಟಕ ಆಡುತ್ತಿರುವ ವರ್ತಮಾನ ಹೆಗ್ಡೆಯವರಿಗೆ ತಿಳಿಯಿತು. ನಮ್ಮ ನಾಟಕಕ್ಕೆ ಪ್ರಯೋಜನವಾದೀತೆಂಬ ಕಾರಣದಿಂದ ಎಲ್ಲಾ ನಟರನ್ನು ಕರೆದುಕೊಂಡು ಉಡುಪಿಗೆ ಹೊರಟರು. ಹೋಗುವಾಗ 'ಮಾಸ್ಟರ್ ಹಿರಿಯಣ್ಣಯ್ಯನವರ ನಾಟಕಕ್ಕಿಂತ ನಮ್ಮ ನಾಟಕ ಒಳ್ಳೆಯದಾಗಬೇಕೆಂದು ನಿಮಗೆ ಇದನ್ನು ತೋರಿಸುತ್ತಿರುವುದು' ಎಂದು ತಿಳಿಸಿದರು. ಎಲ್ಲರೂ ಶ್ರದ್ಧೆಯಿಂದ ನಾಟಕ ವೀಕ್ಷಿಸಿ ಬಂದೆವು.

ಹೆಗ್ಡೆಯವರ ನಿರೀಕ್ಷೆಯಂತೆ ನಮ್ಮ ನಾಟಕವೂ ಯಶಸ್ವಿಯಾಯಿತು. ನಾನು ಹೇಳಿದ "ಸುಖವೀವ ಸುರಾಪಾನ" ಎಂಬ ಪದ್ಯಕ್ಕೆ 2–3 ಬಾರಿ ಓನ್ಸ್ ಮೋರ್ ಬಿತ್ತು. ಹಾರ್ಮೋನಿಯಂ ಮಾಸ್ತರರಾಗಿ ನನ್ನ ಗುರುಗಳಾದ ರಮಾನಾಥ ನಾಯಕರೇ ಇದ್ದರು. ಈ ನಾಟಕದಿಂದಾಗಿ ಬಸ್ರೂರಿನ ಪ್ರೇಕ್ಷಕರು ನನ್ನನ್ನು ಒಬ್ಬ ಸಮರ್ಥ ನಟನೆಂದು ಗುರುತಿಸುವಂತಾಯಿತು. ಅಪ್ಪಣ್ಣ ಹೆಗ್ಡೆಯವರಿಗೆ ತನ್ನ ಭರವಸೆಯನ್ನು ನೆರವೇರಿಸಿದವನೆಂದು ನನ್ನ ಬಗ್ಗೆ ಅಭಿಮಾನ ಹೆಚ್ಚಿತ್ತು. ನನಗೂ ಕೂಡಾ ಬಸ್ರೂರಿನ ಶ್ರೇಷ್ಠ ನಟವರ್ಗದವರ ಮಧ್ಯೆ ಅಭಿನಯಿಸಿ ಯಶಸ್ವಿಯಾದೆನೆಂಬ ಆತ್ಮ ತೃಪ್ತಿ ಉಂಟಾಯಿತು.

ನಾಟಕದಲ್ಲಿ ಹೆಚ್ಚಾಗಿ ನಾನು ಹಾಸ್ಯ ಪಾತ್ರಗಳನ್ನೆ ಮಾಡುತಿದ್ದೆ. ಅದರಲ್ಲಿ ಸ್ವಲ್ಪ ಮಟ್ಟಿನ ಹಿಡಿತವನ್ನೂ ಸಾಧಿಸಿದ್ದೆ. ಪ್ರೇಕ್ಷಕರು ಕೂಡಾ ಎಲ್ಲಿಯೂ ತೂಕ ತಪ್ಪದ, ಹಿತಮಿತವಾದ ನನ್ನ ನೈಜ ಅಭಿನಯವನ್ನು ಮೆಚ್ಚಿದ್ದರು. ಹಾಗಾಗಿ ಅದನ್ನೆ ಮುಂದುವರಿಸಿದೆ. ಆದರೆ ಒಮ್ಮೆ ನನ್ನ ಮಿತ್ರರಲ್ಲೊಬ್ಬರಾದ ವಿಠಲ ಶೆಟ್ರು ಮಂಗಳಾ

ನಾಟಕದಲ್ಲಿ ಒಂದು ಬದಲಾವಣೆಯನ್ನು ಮಾಡಿಕೊಳ್ಳಲು ಬಯಸಿದರು. ದುಃಖದ ಪಾತ್ರ ಮಾಡುತಿದ್ದ ಅವರು ಖಳನಾಯಕನ ಪಾತ್ರವನ್ನೂ, ಹಾಸ್ಯ ಪಾತ್ರ ಮಾಡುತಿದ್ದ ನಾನು ದುಃಖದ ಪಾತ್ರವನ್ನು ಮಾಡುವುದೆಂದು ನಿರ್ಧರಿಸಿ ಆ ಪಾತ್ರಗಳನ್ನು ನಿರ್ವಹಿಸಿದೆವು. ವಿಠಲ ಶೆಟ್ರು ಅದರಲ್ಲಿ ಉತ್ತೀರ್ಣರಾದರು. ಆದರೆ ನನ್ನ ಪಾತ್ರವನ್ನು ಪ್ರೇಕ್ಷಕರು ಹಿಂದಿನಂತೆ ಸ್ವೀಕರಿಸಿದಂತೆ ಕಂಡು ಬರಲಿಲ್ಲ. ಹಾಗಾಗಿ ಮುಂದೆ ಕೇವಲ ಹಾಸ್ಯ ಪಾತ್ರಗಳನ್ನೇ ನಿರ್ವಹಿಸುತ್ತಾ ಮುಂದುವರಿಸಿದೆ.

ನಾಟಕ ರಂಗದಲ್ಲಿ ನಾನೊಬ್ಬ ಉತ್ತಮ ನಟನೆಂದು ಸುತ್ತುಮುತ್ತಲ ಊರಿನಲ್ಲಿ ಪ್ರಚಾರವಾಯಿತು. ಹೀಗಾಗಿ ಕೆಲವು ಶಾಲೆಗಳಲ್ಲಿ ಜರಗುವ ಯುವಕರ ನಾಟಕಕ್ಕೆ ನನ್ನನ್ನು ನಿರ್ದೇಶಕನಾಗಿ ಬರುವಂತೆ ಆಹ್ವಾನಿಸಿದರು. ಬೈಲೂರು, ನೆಲ್ಲಿಕಟ್ಟೆ, ಅಂಪಾರು, ಕೆದೂರು, ಶಂಕರನಾರಾಯಣ, ಉಳ್ಳೂರು, ವಕ್ವಾಡಿ ಮೊದಲಾದ ಕಡೆ ನಿರ್ದೇಶಕನಾಗಿ ಸಹಕರಿಸಿದೆ. ಅದರಲ್ಲೂ ವಕ್ವಾಡಿಗೆ ನಾನು ಹೋದಾಗ ನನಗೆ ಮಾಡಿದ ಹಾರ್ದಿಕ ಉಪಚಾರ ನಾನು ಮರಯಲಾಗದ್ದು. ನನ್ನ ನೆನಪಿನಂತೆ ಕೃಷ್ಣ ಶೆಟ್ಟಿ ಎನ್ನುವವರು ಆ ನಾಟಕದಲ್ಲಿ ನಾಯಕನ ಪಾತ್ರ ಮಾಡಿದ್ದರು. ತರಬೇತಿಗೆ ಹೋದಾಗಲೆಲ್ಲಾ ಅವರ ಮನೆಯಲ್ಲೇ ನನಗೆ ಪುಷ್ಕಳವಾದ ಊಟ ಹಾಗೂ ಉಪಹಾರ ಟ್ರಾಯಲ್ ಮುಗಿದ ಮೇಲೆ ಅಲ್ಲಿಯೇ ವಿಶ್ರಾಂತಿಗಾಗಿ ಉತ್ತಮ ವ್ಯವಸ್ಥೆ. ಸ್ವತಃ ಕೃಷ್ಣ ಶೆಟ್ಟರೇ ಸೈಕಲ್ಲಿನಲ್ಲಿ ನನ್ನನ್ನು ಕರೆದುಕೊಂಡು ಹೋಗಿ ಮರುದಿನ ಶಾಲಾ ಸಮಯಕ್ಕೆ ಸರಿಯಾಗಿ ಕಂಡ್ಲೂರಿಗೆ ಮುಟ್ಟಿಸುತಿದ್ದರು. ಮುಂದೆ ಅವರು ವಿಜಯಾ ಬ್ಯಾಂಕ್ ಅಧಿಕಾರಿಯಾದರೆಂದು ಕೇಳಿದ್ದೇನೆ. ಆದರೆ ಇದುವರೆಗೂ ಅವರನ್ನು ನೋಡಿ ಮಾತಾಡಲು ಸಾಧ್ಯವಾಗಲಿಲ್ಲ. ಅಲ್ಲಿ ಆಡಿದ ನಾಟಕ ನಮ್ಮ ಮಾಸ್ಟರ್ ಪೀಸ್ ನಾಟಕವಾದ ಮಿಲ್ ಮ್ಯಾನೇಜರ್ ಅದರಲ್ಲಿ ಅದೇ ಊರಿನವರಾದ ಮಂಜಯ್ಯ ಹೆಗ್ಡೆ ಹಾಗೂ ಸೀತಾರಾಮ ಶೆಟ್ಟಿ ಎನ್ನುವ ಅಧ್ಯಾಪಕ ಮಿತ್ರರು ಪ್ರಧಾನ ಪಾತ್ರ ನಿರ್ವಹಿಸಿದ್ದರು. ನಾಟಕವೂ ಚೆನ್ನಾಗಿಯೇ ನಡೆಯಿತು.

ನಾನು ನೇತಾಜಿ ಶಾಲೆಗೆ ಸೇರಿದ ಮೇಲೆ 6-7 ವಾರ್ಷಿಕೋತ್ಸವ ಜರಗಿತ್ತು. ಪ್ರತಿಬಾರಿ ವಿದ್ಯಾರ್ಥಿಗಳಿಗಾಗಿ ನಾನೇ ನಾಟಕ ಹಾಗೂ ಅದಕ್ಕೆ ಬೇಕಾದ ಗೀತೆಗಳನ್ನು ಬರೆಯುತಿದ್ದೆ. ಶ್ರೀ ಕೃಷ್ಣ ವಿಜಯ, ಭಾರ್ಗವ ವಿಜಯ, ಪುರಂದರ ದಾಸರು, ಮಹಾದಾನಿ ಮಯೂರ, ನಾಗಾನಂದ, ಸೀತಾ ಪರಿತ್ಯಾಗ ಮತ್ತು ನಿಜಗಲ್ಲು ಗಿರಿಜವ್ವ ಎಂಬ 7 ನಾಟಕಗಳನ್ನು ಬರೆದು, ನಿರ್ದೇಶಿಸಿ ವಿದ್ಯಾರ್ಥಿಗಳಿಂದ ಆಡಿಸಿದೆ.

ಅವುಗಳೆಲ್ಲಾ ಯಶಸ್ವಿಯಾದದರಿಂದ ನೆರೆಯ ಗುಲ್ವಾಡಿ, ಬಸರೂರು, ಸೌಕೂರು ಮುಂತಾದ ಶಾಲೆಯವರು ಅವುಗಳನ್ನು ಆಡಿಸಿ ಜನಪ್ರಿಯಗೊಳಿಸಿದ್ದಾರೆ.

ನಾಟಕ ರಂಗದಲ್ಲಿ ವೈಯುಕ್ತಿಕವಾಗಿ ನನಗೆ ಯಾವುದೇ, ಸನ್ಮಾನ, ಪ್ರಶಸ್ತಿಗಳು ಬಾರದೇ ಹೋದರೂ ಸಾವಿರಾರು ಪ್ರೇಕ್ಷಕರನ್ನು ನಗಾಡಿಸಿ ಹಗುರಗೊಳಿಸಿದ್ದೇನೆ ಎಂಬ ತೃಪ್ತಿ ನನಗಿದೆ. ಅವರ ಅಭಿಮಾನಕ್ಕೆ ಪಾತ್ರನಾಗಿದ್ದೇನೆ ಎಂಬ ಸಂತೋಷ ನನ್ನದಾಗಿದೆ. ಆದರೂ ನನ್ನ ನಾಟಕಾಭಿನಯದ ಬಗ್ಗೆ ಕರ್ನಾಟಕ ನಾಟಕ ಅಕಾಡೆಮಿಯವರಿಗೆ ತಿಳಿದು ಬಂದು ಅವರು ಪ್ರಕಟಿಸಿದ " ಇಂದಿನ ರಂಗ ಕಲಾವಿದರು" ಎಂಬ ಪುಸ್ತಕದಲ್ಲಿ ನನ್ನ ಹೆಸರನ್ನು ದಾಖಲಿಸಿದ್ದಾರೆ ಎಂದು ತಿಳಿದು ಸಮಾಧಾನಗೊಂಡೆ. ನನ್ನ 75ನೇ ಜನ್ಮ ದಿನೋತ್ಸವ ಸಮಾರಂಭದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಆಶಯದಂತೆ ಅಂದು ಆಡಿದ "ರತ್ನ ಮಾಂಗಲ್ಯ" ಎಂಬ ನಾಟಕದಲ್ಲಿ ಹಾಸ್ಯ ಪಾತ್ರ ನಿರ್ವಹಿಸಿದೆ. ಅದೇ ನಾನು ಇತ್ತೀಚೆಗೆ ನಟಿಸಿದ ನಾಟಕದ ಪಾತ್ರವಾಗಿದೆ.

4. ಯಕ್ಷಗಾನ ಕ್ಷೇತ್ರದಲ್ಲಿ

ಭಾಗವತನಾಗಿ : ಯಕ್ಷಗಾನವು ಈ ಹಿಂದೆ ತಿಳಿಸಿದಂತೆ ನನಗೆ ರಕ್ತಗತವಾಗಿ ಬಂದಿರಬೇಕೆಂದು ಕಾಣುತ್ತದೆ. ನನ್ನ ತಂದೆ ಹವ್ಯಾಸಿ ಭಾಗವತರಾಗಿದ್ದು, ಮನೆಯಲ್ಲಿ ಆಗಾಗ ಲಯ ಬದ್ಧವಾಗಿ ಹಾಡುತಿದ್ದರು. ಮಾತ್ರವಲ್ಲ ನನ್ನ ಅಜ್ಜ ಚಿತ್ತೂರು ಕೃಷ್ಣಯ್ಯ ಶೆಟ್ರು, ಮಾವ ಕಂದಾವರ ಅಣ್ಣಪ್ಪ ಶೆಟ್ರು, ಆಗಿನ ಕಾಲದ ಪ್ರಸಿದ್ಧ ಅರ್ಥಧಾರಿಗಳಾಗಿದ್ದರು ಇದಕ್ಕೆ ಪೂರಕವಾಗಿ ನನ್ನ ಬಾಲ್ಯದ ದಿನಗಳಲ್ಲಿ ನಮ್ಮ ಪರಿಸರದಲ್ಲಿ ಆಗಾಗ ಸೌಕೂರು ಮತ್ತು ಮಾರಣಕಟ್ಟೆ ಮೇಳಗಳ ಆಟಗಳು ನಡೆಯುತಿದ್ದುವು. ಗ್ರಾಮಾಂತರ ಪ್ರದೇಶಗಳಲ್ಲಿ ಆ ಕಾಲದಲ್ಲಿ ಮನರಂಜನೆಯ ಏಕಮಾತ್ರ ಸಾಧನವೆಂದರೆ ಯಕ್ಷಗಾನ ಬಯಲಾಟಗಳು. ಸಣ್ಣ ಪ್ರಾಯದಲ್ಲಿಯೇ ಮನೆಯವರೊಂದಿಗೆ ಆಟಗಳನ್ನು ನೋಡುತಿದ್ದ ನನಗೆ ಅದರಲ್ಲಿ ಆಸಕ್ತಿ ಮೊಳೆಯಿತು. ಅದರಲ್ಲಿರುವ ವೇಷಗಳು ಹಾಗೂ ನರ್ತನಗಳು ನನ್ನನ್ನು ಆಕರ್ಷಿಸಿದ್ದು ನಿಜವಾದರೂ ಹೆಚ್ಚಾಗಿ ಭಾಗವತರ ಹಾಡಿನ ಕಡೆಗೆ ನನ್ನ ಹೆಚ್ಚಿನ ಒಲವು ಹರಿದಿರಬೇಕು. ಆಟ ನೋಡಿದ ಮರುದಿನ ಭಾಗವತರು ಹಾಡಿದ ಹಾಡುಗಳನ್ನು ಲಯಬದ್ಧವಾಗಿ ಹಾಡಲು ಪ್ರಯತ್ನಿಸಿದೆ. ಅದರಲ್ಲಿ ಬಹುಮಟ್ಟಿಗೆ ಯಶಸ್ವಿಯಾದೆ. ಮೇಲಾಗಿ ತಂದೆಯವರ ಹಾಡುಗಳು ನನ್ನ ಮೇಲೆ ಪ್ರಭಾವ ಬೀರಿದುವು. ಹೀಗೆ ಪರಂಪರೆ ಹಾಗೂ ಪರಿಸರದ ಪ್ರಭಾವದಿಂದ ಯಕ್ಷಗಾನದ ಕಡೆಗೆ ನನ್ನ ಆಸಕ್ತಿ ಬಲವಾಯಿತು.

ಬಸ್ರೂರು ಹಿಂದೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 6ನೇ ತರಗತಿಯಲ್ಲಿ ಕಲಿಯುತ್ತಿರುವಾಗ ಡಿಬೇಟ್ ಕ್ಲಾಸಿನಲ್ಲಿ ಅಧ್ಯಾಪಕರ ಒತ್ತಾಯದಿಂದ ಭಾಗವಹಿಸಲೇಬೇಕಾಗಿತ್ತು. ಒಂದು ದಿನ ನನಗೆ ತಿಳಿದಿರುವ ಒಂದು ಯಕ್ಷಗಾನ ಪದ್ಯವನ್ನು ಕಣ್ಮುಚ್ಚಿ ಹಾಡಿದೆ. ಕಾರಣ ನಾನು ಪ್ರಥಮವಾಗಿ ವೇದಿಕೆ ಏರಿದ ಸಂದರ್ಭವಾದುದರಿಂದ ತುಂಬಾ ಭಯಗೊಂಡಿದ್ದೆ. ಆದರೆ ಲಯಬದ್ಧವಾಗಿ, ಉತ್ತಮರಾಗದಿಂದ ಹೇಳಿದ ಪದ್ಯಕ್ಕೆ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಚಪ್ಪಾಳೆ ಮೂಲಕ ಮೆಚ್ಚುಗೆ ಸೂಚಿಸಿದರು. ಮುಂದೆ ಒಂದೆರಡು ಬಾರಿ ಅಧ್ಯಾಪಕರ ಅಪೇಕ್ಷೆಯಿಂದ ಯಕ್ಷಗಾನದ ಬೇರೆ ಬೇರೆ ಹಾಡುಗಳನ್ನು ಹೇಳಿದೆ. ಇದನ್ನು ಕೇಳಿದ ಅಧ್ಯಾಪಕರಾದ ರಘುನಾಥ ನಾಯಕರು ಸ್ಕೌಟು

ಶಿಬಿರದಲ್ಲಿ ವಿದ್ಯಾರ್ಥಿಗಳಿಂದ 'ಶಂಭುಕ ವಧೆ' ಎಂಬ ಯಕ್ಷಗಾನ ಮಾಡಿಸಿ, ಅದಕ್ಕೆ ನನ್ನ ಭಾಗವತಿಕೆ ಮಾಡಿಸಿದರು. ಮರುವರ್ಷ ಶಾಲಾ ವಾರ್ಷಿಕೋತ್ಸವಕ್ಕೆ ಸುರಾಸುರ ಪಲಾಯನ ಎಂಬ ಯಕ್ಷಗಾನ ಪ್ರಸಂಗ ರಚಿಸಿ ನನ್ನ ಭಾಗವತಿಕೆಯಲ್ಲಿ ಆಡಿಸಿದರು. ಮೇಲಿನ ಎರಡೂ ಸಂದರ್ಭಗಳಲ್ಲಿ ಬಸ್ರೂರು ಗೋಪಾಲಾಚಾರಿ ಎಂಬವರಿಂದ ತರಬೇತಿ ಕೊಡಿಸಿದ್ದರು. ಮುಂದೆ ಅದೇ ಶಾಲೆಯಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಎವ್ವಾಸ್ ಖಾನ್ ಕಾಳಗ, ತ್ಯಾಂಪಣ್ಣ ಪ್ರತಾಪ ಎಂಬ ಯಕ್ಷಗಾನಕ್ಕೆ ನನ್ನಿಂದಲೇ ಭಾಗವತಿಕೆ ಮಾಡಿಸಿದರು. ಹೀಗೆ ಆ ಶಾಲೆಯ ವಿದ್ಯಾರ್ಥಿಗಳ ಯಕ್ಷಗಾನಕ್ಕೆ ನನ್ನ ಭಾಗವತಿಕೆ ಖಾಯಂ ಆಯಿತು. ನನ್ನ ಸಹಪಾಠಿಗಳು ಬಾಲಭಾಗವತ ಎಂದು ಅಡ್ಡ ಹೆಸರಿನಿಂದ ಕರೆಯುತ್ತಿದ್ದರು. ಮುಂದೆ ಕುಂದಾಪುರದ ಹೈಸ್ಕೂಲಿನಲ್ಲಿ ಕಲಿಯುತ್ತಿರುವಾಗ ಕೂರಾಡಿ ತೇಜಪ್ಪ ಹೆಗ್ಡೆಯವರು ರಚಿಸಿದ ಪಾದ್ರಿ ಸಂಧಾನ ಎಂಬ ವಿದ್ಯಾರ್ಥಿಗಳ ಯಕ್ಷಗಾನಕ್ಕೂ ಕೂಡಾ ನನ್ನದೇ ಭಾಗವತಿಕೆ ಮಾಡಿಸಿದರು. ಅಂದಿನ ನನ್ನ ಭಾಗವತಿಕೆಯನ್ನು ಮೆಚ್ಚಿದ ಓರ್ವ ಮುಸ್ಲಿಮ್ ಬಂಧು ಬೆಳ್ಳಿಯ ಪದಕವನ್ನಿತ್ತು ಪ್ರೋತ್ಸಾಹಿಸಿದರು. ಮುಂದೆ ನಾನು ಅಧ್ಯಾಪಕನಾದ ಮೇಲೆ ನಾನು ಆಡಿಸಿದ ಭಾರ್ಗವ ವಿಜಯಕ್ಕೆ ನಾನು ಮಾಡಿದ ಭಾಗವತಿಕೆ ನನ್ನ ಕೊನೆಯ ಭಾಗವತಿಕೆ. ರಾಗ-ತಾಳಗಳ ಖಚಿತ ಅನುಭವ ನನಗಿಲ್ಲವಾದುದರಿಂದ ಭಾಗವತಿಕೆಯಲ್ಲಿ ಮುಂದುವರಿಯುವ ಇಚ್ಛೆ ನನಗಿಲ್ಲವಾಯಿತು.

ವೇಷಧಾರಿಯಾಗಿ : ನಾನು ಹೈಸ್ಕೂಲಿನಲ್ಲಿ ಕಲಿಯುತ್ತಿರುವಾಗ ಹಟ್ಟಿಯಂಗಡಿಯಲ್ಲಿ ಒಂದು ಯಕ್ಷಗಾನ ಸಂಘ ಸ್ಥಾಪನೆಯಯಿತು. ಆ ಸಂಘದವರು ಅಷ್ಟಮಿಯ ಸಮಯ ಅಲ್ಲಿಯ ಶ್ರೀ ಕೃಷ್ಣ ಮಠದಲ್ಲಿ ಕಂಸವಧೆಯೆಂಬ ಆಟವಾಡಲು ನಿಶ್ಚಯಿಸಿ, ಅದರಲ್ಲಿ ನನಗೆ ಕೃಷ್ಣನ ಪಾತ್ರವನ್ನು ನೀಡಿದರು. ಆ ಆಟಕ್ಕೆ ಕುಂದಾಪುರದ ದಾಮೋದರ ಪೈ ಎನ್ನುವವರು ತರಬೇತಿ ನೀಡಿ ಭಾಗವತಿಕೆ ಮಾಡಿದ್ದರು. ಇದೇ ಯಕ್ಷಗಾನದಲ್ಲಿ ನನ್ನ ಪ್ರಥಮ ವೇಷ. ಆ ಪಾತ್ರ ಯಶಸ್ವಿಯಾದುದರಿಂದ ಮುಂದೆ ಆ ಸಂಘದವರು ಆಡಿದ ಸುಧನ್ವ ಕಾಳಗದಲ್ಲೂ ಕೃಷ್ಣನ ಪಾತ್ರ ನಿರ್ವಹಿಸಿದೆ. ಮುಂದೆ ಕುಂದಾಪುರ ವೆಂಕಟ್ರಮಣ ಸಂಘದವರು ಆಡಿದ ರುಕ್ಷಿಣಿ ಸ್ವಯಂವರದಲ್ಲೂ ಕೂಡಾ ಕೃಷ್ಣನ ಪಾತ್ರವನ್ನು ಮಾಡುವ ಅವಕಾಶ ನನಗೊದಗಿತು. ಹೀಗಾಗಿ ಆರಂಭದಲ್ಲಿ ಕೃಷ್ಣನ ಪಾತ್ರ ನನ್ನ ಫೆವರೇಟ್ ಪಾತ್ರವಾಯಿತು. ಮುಂದೆ ಕುಂದಾಪುರದ ವಕೀಲರಾದ ಎಂ.ಎಂ.ಹೆಗ್ಡೆಯವರ ಹವ್ಯಾಸಿ ಬಳಗದಲ್ಲಿ ಕೆಲವಾರು ವೇಷಗಳನ್ನು ಮಾಡಿದೆ.

ಎಂ.ಎಂ. ಹೆಗ್ಡೆಯವರ ಅರ್ಜುನನಿಗೆ ಒಂದೆರಡು ಬಾರಿ ಕೃಷ್ಣನಾಗಿ ಅಭಿನಯಿಸಿದೆ. ವಿದ್ಯುನ್ಮತಿ ಕಲ್ಯಾಣದಲ್ಲಿ ಚಿತ್ರಕೇತು ಪಾತ್ರ ನಿರ್ವಹಿಸಿದೆ. ಹವ್ಯಾಸಿಗಳ ಜೋಡಾಟಗಳಲ್ಲೂ ಲವ, ವೃಷಸೇನ, ಮುಂತಾದ ಪಾತ್ರಗಳನ್ನು ಮಾಡಿದ್ದುಂಟು. ಆದರೆ ನೃತ್ಯದಲ್ಲಿ ನನಗೆ ಹಿಡಿತ ಸಾಧಿಸುವುದು ಕೊನೆಗೂ ಸಾಧ್ಯವಾಗಲಿಲ್ಲ. ಹಾಗಾಗಿ ಕೊನೆಕೊನೆಗೆ ಮಾತು ಪ್ರಧಾನವಾಗಿರುವ ನಾರದ, ಅಗಸ್ತ್ಯ, ಅಕ್ರೂರ, ಸಂಜಯ ಮೊದಲಾದ ಪಾತ್ರಗಳನ್ನು ಮಾಡಹತ್ತಿದೆ.

ಒಮ್ಮೆ ಅದುವರೆಗೆ ನಾನು ಮಾಡದೆ ಇರುವ ಪ್ರಧಾನ ಸ್ತ್ರೀ ಪಾತ್ರವೊಂದನ್ನು ನಿರ್ವಹಿಸಲೇ ಬೇಕಾದ ಆಕಸ್ಮಿಕ ಸಂದರ್ಭ ಬಂದೊದಗಿತು. ಕಂಬದಕೋಣೆ ಸಂಜೀವರಾಯರು ಆ ಪ್ರದೇಶದ ಪ್ರಭಾವಿ ವ್ಯಕ್ತಿಗಳು. ಅವರು ಯಕ್ಷಗಾನದ ಪೋಷಕರು ಹಾಗೂ ಅರ್ಥಧಾರಿಗಳು, ಒಮ್ಮೆ ಅವರು ತಮ್ಮ ಊರಿನಲ್ಲಿ ಒಂದು ಸಹಾಯಾರ್ಥ ಆಟ ಆಡಲು ನಿರ್ಧರಿಸಿ, ಸುಭಾಹುಕಾಳಗ ಮತ್ತು ದ್ರೌಪದಿ ಪ್ರತಾಪ ಪ್ರಸಂಗ ಆಡುವುದೆಂದು ನಿಶ್ಚಯಿಸಿದರು. ನಾನು ಅಗಸ್ತ್ಯನ ಪಾತ್ರ ಮಾಡಬೇಕೆಂದು ಸುಚಿಸಿದ್ದರಿಂದ ಆ ದಿನ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಹೋಗಿದ್ದೆ. ನಿಶ್ಚಯಿಸಿದಂತೆ ಅಗಸ್ತ್ಯನ ಪಾತ್ರ ನಿರ್ವಹಿಸಿ, ಆಟ ನೋಡಲು ಕುಳಿತಿದ್ದೆ.

ಯಾರೋ ಒಬ್ಬರು ನಾನು ಕುಳಿತಲ್ಲಿಗೆ ಬಂದು "ಸಂಜೀವರಾಯರು ನಿಮ್ಮನ್ನು ಕರೆಯುತಿದ್ದಾರೆ" ಎಂದು ತಿಳಿಸಿದರು. ನಾನು ಕೂಡಲೆ ಅವರಿರುವ ಚೌಕಿಗೆ ತೆರಳಿದೆ. ಆಗ ಅವರು ನನ್ನನ್ನು ಹತ್ತಿರ ಕರೆದು "ನೋಡು ರಘು, ಸಂದಿಗ್ದ ಸಂದರ್ಭವೊಂದು ಬಂದೊದಗಿದೆ. ದ್ರೌಪದಿ ಪಾತ್ರ ಮಾಡುವ ವ್ಯಕ್ತಿ ಈ ವರೆಗೆ ಬಂದಿಲ್ಲ, ಇನ್ನೂ ಕಾಯಲು ಸಮಯವಿಲ್ಲ. ಆದ್ದರಿಂದ ನೀನು ಕೂಡಲೇ ದ್ರೌಪದಿಯ ವೇಷಕ್ಕೆ ಸಿದ್ದನಾಗು" ಎಂದರು. ನಾನು ಕಕ್ಕಾ ಬಿಕ್ಕಿಯಾದೆ. ಅದುವರೆಗೆ ಸ್ತ್ರೀ ಪಾತ್ರ ಮಾಡದ ನಾನು ಅದರಲ್ಲೂ ಪ್ರತಾಪದ ದ್ರೌಪದಿಯನ್ನು ಮಾಡಲು ಅದನ್ನು ಯಶಸ್ವಿಯಾಗಿ ನಿರ್ವಹಿಸಲು ಅಸಮರ್ಥನಿದ್ದೆ. ನನ್ನ ಅಸಹಾಯಕತೆಯನ್ನು ನಿವೇದಿಸಿಕೊಂಡೆ. ಕೊನೆಗೆ ಸಂಜೀವರಾಯರು " ಇದು ನನ್ನ ಪ್ರತಿಷ್ಠೆಯ ವಿಷಯ ಉಳಿಸಿದರೆ ಉಳಿಸು, ಬಿಟ್ಟರೆ ಬಿಡು" ಎಂದು ಹೇಳಿ ಸುಮ್ಮನಾದರು ಉಪಾಯವಿಲ್ಲದೆ ಪಾತ್ರ ನಿರ್ವಹಿಸಿದೆ. ಉತ್ತಮ ರೀತಿಯಲ್ಲಿ ಆಗದೆ ಇದ್ದರೂ ತೀರಾ ಕಳಪೆ ಎನಿಸದೆ ಆಟ ಮುಗಿಯಿತು. ಒಪ್ಪಿಕೊಂಡ ಕಲಾವಿದ ಆ ದಿನ ಬಂದಿದ್ದು ಕರಪತ್ರದಲ್ಲಿ ತನ್ನ ಹೆಸರು ಇಲ್ಲದುದನ್ನು ಕಂಡು ಕೋಪದಿಂದ ಹತ್ತಿರದಲ್ಲಿರುವ ತನ್ನ ಸಂಬಂಧಿಕರ ಮನೆಯಲ್ಲಿ

ಉಳಿದುಕೊಂಡಿದ್ದನಂತೆ. ಈ ವಿಚಾರ ತಿಳಿದ ಎಂ.ಎಂ.ಹೆಗ್ಡೆಯವರು ಮುಂದೆ ಆತನಿಗೆ ತಮ್ಮ ಮಂಡಳಿಯನ್ನು ಪ್ರವೇಶಿಸದಂತೆ ಬಹಿಷ್ಕಾರ ಹಾಕಿದರು.

ಇಂಥಹದೆ ಇನ್ನೊಂದು ಸಂದರ್ಭ ಎಂ.ಎಂ.ಹೆಗ್ಡೆಯವರ ತಂಡದ ಭದ್ರಾವತಿ ಆಟದಲ್ಲಾಯಿತು. ಅಂದು ದ್ರೌಪದಿ ಪ್ರತಾಪದ ಸುಭದ್ರೆ ಪಾತ್ರ ಮಾಡುವವನು ಯಾವ ಕಾರಣದಿಂದಲೋ ಗೈರು ಹಾಜರಾಗಿದ್ದ. ಅಂದು ಡಾ|ವೈ ಚಂದ್ರಶೇಖರ ಶೆಟ್ರ ದ್ರೌಪದಿಯ ಎದುರಿಗೆ ಸುಭದ್ರೆಯ ಪಾತ್ರ ಮಾಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ನನಗೊದಗಿತು ಕೊನೆಗೆ ಡಾ| ಚಂದ್ರಶೇಖರ ಶೆಟ್ರ ಕ್ಷಿಪ್ರ ತರಬೇತಿ ಪಡೆದು ಆ ಪಾತ್ರ ನಿರ್ವಹಿಸದೆ. ಅಂದಿನಿಂದ ಎಂ.ಎಂ. ಹೆಗ್ಡೆಯವರು ನನ್ನನ್ನು ಕಂಡೊಡನೆ ಆಪದ್ಬಾಂಧವ ಬಂದ ಎಂದು ಹೇಳುವುದು ವಾಡಿಕೆಯಾಯಿತು.

ಒಮ್ಮೆ ಆನಗಳ್ಳಿಯಲ್ಲಿ ಆದ ಆಟದಲ್ಲಿ ವಿದ್ಯುನ್ಮತಿ ಕಲ್ಯಾಣದಲ್ಲಿ ಚಿತ್ರವಾಹನ ಪಾತ್ರದಲ್ಲಿ ಕುಣಿಯುವಾಗ ಕೇದಿಗೆ ಮುಂದಲೆಜಾರಿದ್ದರಿಂದ ತುಂಬಾ ನಿರಾಶೆಗೊಂಡು ವೇಷವನ್ನೇ ಮಾಡುವುದಿಲ್ಲವೆಂಬ ನಿರ್ಧಾರಕ್ಕೆ ಬಂದೆ. ಆದರೆ ಅಭಿಮಾನಿಗಳ ಒತ್ತಾಯದ ಮುಂದೆ ನಾನು ಅಸಹಾಯಕನಾಗಿ ಮಾಡಲೇಬೇಕಾದ ಪರಿಸ್ಥಿತಿ ಒದಗಿತು. ಕುಂದಬಾರಂದಾಡಿಯಲ್ಲಿ ಚೌತಿಯ ಸಂದರ್ಭ ಅಕ್ರೂರ, ಸಂಜಯ ಪಾತ್ರ ನಿರ್ವಹಿಸಲೇಬೇಕಾಯಿತು. ನನ್ನ 75ನೇ ಜನ್ಮದಿನೋತ್ಸವದ ಸಂದರ್ಭದಲ್ಲಿ ಆಡಿದ ಭದ್ರಾಯು ಚರಿತ್ರೆಯಲ್ಲಿ ಅಭಿಮಾನಿಗಳ ಒತ್ತಾಯಕ್ಕೆ ಕಟ್ಟುಬಿದ್ದು ಒಂದು ವೃದ್ಧ ವಿಪ್ರನ ವೇಷ ಮಾಡಿದೆ. ಇದು ನಾನು ಇತ್ತೀಚೆಗೆ ನಿರ್ವಹಿಸಿದ ಯಕ್ಷಗಾನದ ಪಾತ್ರವಾಗಿದೆ. ಅರ್ಥಧಾರಿಯಾಗಿ ನಾನು ಹೈಸ್ಕೂಲಿನಲ್ಲಿ ಕಲಿಯುತ್ತಿರುವ ಸಂದರ್ಭದಲ್ಲಿ ಅಜ್ಜ ಹಾಗೂ ಮಾವಂದಿರೊಂದಿಗೆ ಆಗಾಗ ತಾಳಮದ್ದಳೆಗೆ ಹೋಗುತಿದ್ದೆ. ತಾಳಮದ್ದಳೆಯ ಅರ್ಥಕೇಳುತಿದ್ದಂತೆ ಅದರಲ್ಲಿ ಆಸಕ್ತಿ ಹೆಚ್ಚಾಗ ತೊಡಗಿತು. ಮನೆಯಲ್ಲಿರುವ ತಾಳಮದ್ದಳೆಯ ಚಾಲ್ತಿ ಪ್ರಸಂಗಗಳನ್ನು ಓದಲು ಆರಂಬಿಸಿದೆ. ಅಜ್ಜ ಕೃಷ್ಣಯ್ಯ ಶೆಟ್ರಲ್ಲಿ ಪುರಾಣದ ಕತೆಗಳನ್ನು ಕೇಳಿ ತಿಳಿದುಕೊಳ್ಳ ಹತ್ತಿದೆ. ನನ್ನ ಆಸಕ್ತಿಯನ್ನು ಕಂಡು ನನ್ನ ಮಾವ ಅಣ್ಣಪ್ಪ ಶೆಟ್ರು ಕೃಷ್ಣ ಸಂಧಾನದ ಸಹದೇವನ ಅರ್ಥವನ್ನು ಬರೆದುಕೊಟ್ಟು ಬಾಯಿಪಾಠ ಮಾಡಿಸಿದರು. ಬಸ್ರೂರಿನಲ್ಲಿ ನಡೆದ ಒಂದು ತಾಳಮದ್ದಳೆಯಲ್ಲಿ ಸಹದೇವನ ಅರ್ಥ ಹೇಳುವ ಅವಕಾಶ ಒದಗಿಸಿಕೊಟ್ಟರು. ಇನ್ನೊಮ್ಮೆ ಅಜ್ಜನೊಂದಿಗೆ ಹಟ್ಟಿಕುದ್ರುವಿನಲ್ಲಿ ನಡೆದ ತಾಳಮದ್ದಳೆಗೆ ಹೋಗಿದ್ದೆ. ಆ ದಿನ ಎಂ.ಎಂ. ಹೆಗ್ಡೆಯವರು ಪ್ರಧಾನ ಅರ್ಥಧಾರಿಯಾಗಿ ಬಂದಿದ್ದು ಸುಧನ್ವನ

ಅರ್ಥ ಹೇಳುವವರಿದ್ದರು. ಆ ದಿನ ನನ್ನ ಅಜ್ಜ ಅಲ್ಲಿಯೇ ಮಾಹಿತಿ ನೀಡಿ ಕೂಡಲೇ ಅರ್ಥ ಹೇಳಿಸಿದರು. ನಾನು ಹೊಸದಾಗಿ ಅರ್ಥ ಹೇಳುವವನಾದುದರಿಂದಲೂ, ಚಿಕ್ಕ ವಯಸ್ಸಿನವರಾದುದರಿಂದಲೂ ಎಂ.ಎಂ. ಹೆಗ್ಡೆಯವರು ನನ್ನನ್ನು ಯಾವುದೇ ಕಷ್ಟಕ್ಕೆ ಒಡ್ಡದೆ ಸಹಕರಿಸಿದರು. ಇದರಿಂದಾಗಿ ತಾಳ ಮದ್ದಳೆಯಲ್ಲಿ ಅರ್ಥ ಹೇಳುವ ಧೈರ್ಯ ಬಂದಂತಾಯ್ತು. ಮುಂದೆ ಶಿಕ್ಷಕ ತರಬೇತಿ ಕಾಲದಲ್ಲಿ ಅಲ್ಲಿ ಆಗಾಗ ನಡೆಯುತ್ತಿದ್ದ ತಾಳಮದ್ದಳೆಗಳಲ್ಲಿ ಅರ್ಥ ಹೇಳುವ ಅವಕಾಶವೊದಗಿತು ಅಂತಹ ಸಂದರ್ಭಗಳಲ್ಲಿ ಬೇರೆ ಬೇರೆ ಪಾತ್ರಗಳ ಅರ್ಥ ಅಭ್ಯಾಸ ಮಾಡಿ ಸ್ವತಂತ್ರವಾಗಿ ಹೇಳುವ ಶಕ್ತಿ ಬಂತು.

ಒಮ್ಮೆ ಮಂಗಳೂರಿನ ವೆಂಕಟ್ರಮಣ ದೇವಸ್ಥಾನದಲ್ಲಿ ನಡೆದ ತಾಳಮದ್ದಳೆಗೆ ನನ್ನ ಮಿತ್ರರೊಂದಿಗೆ ಹೋಗಿದ್ದೆ. ಆಗ ನನ್ನ ಮಿತ್ರರು ಅಲ್ಲಿಯ ಸಂಯೋಜಕರೊಂದಿಗೆ ನನ್ನ ಅರ್ಥದ ಬಗ್ಗೆ ಹೊಗಳುತ್ತಾ ಅವಕಾಶಕ್ಕಾಗಿ ಕೇಳಿಕೊಂಡರು. ಆ ದಿನ ಅತಿಕಾಯ ಕಾಳಗ, ಶ್ರೇಷ್ಠ ಅರ್ಥದಾರಿಗಳಾದ ಶೇಣಿಯವರು ಅತಿಕಾಯನ ಅರ್ಥ ಹೇಳಿದ್ದರು. ನನಗೆ ರಾಮನ ಅರ್ಥ ಹೇಳುವ ಅವಕಾಶ ನೀಡಿದರು ಧೈರ್ಯ ಮಾಡಿ ಅರ್ಥ ಹೇಳಿದೆ. ಅಂದಿನ ಅರ್ಥ ಒಳ್ಳೆಯದಾಗಿ ಮೂಡಿ ಬಂದುದರಿಂದ ಮುಂದೆ 2–3 ಬಾರಿ ಅಲ್ಲಿಯ ಕೂಟಗಳಲ್ಲಿ ಅರ್ಥ ಹೇಳುವ ಅವಕಾಶ ಸಿಕ್ಕಿತು. ಅಧ್ಯಾಪಕ ವೃತ್ತಿಗೆ ಸೇರಿದ ಮೇಲೆ ಬಸ್ರೂರು ಯಕ್ಷಗಾನ ಸಂಘದಲ್ಲಿ ಅರ್ಥ ಹೇಳಲು ಆರಂಭಿಸಿದೆ. ಇಂತಹ ಸಂದರ್ಭದಲ್ಲಿ ಆಗಿನ ಶ್ರೇಷ್ಠ ಅರ್ಥಧಾರಿಗಳಲ್ಲೊಬ್ಬರಾದ ಕೂರಾಡಿ ತೇಜಪ್ಪ ಹೆಗ್ಡೆಯವರೊಡನೆ ವಾದದ ಸುಳಿಯಲ್ಲಿ ತೊಳಲಾಡುವ ಸಂದರ್ಭ ಒಂದು ಒದಗಿ ಬಂತು.

ನೆಲ್ಲಿಕಟ್ಟೆಯಲ್ಲಿ ಕೃಷಿಗೆ ಸಂಬಂಧಿಸಿದ ಒಂದು ವಿಚಾರ ಸಂಕೀರ್ಣದ ಅಂಗವಾಗಿ ಒಂದು ತಾಳಮದ್ದಳೆ ಹಮ್ಮಿಕೊಂಡಿದ್ದರಿಂದ ಸ್ಥಳೀಯರಾದ ಅಂಪಾರು ಶೀನಪ್ಪ ಹೆಗ್ಡೆಯವರು ಅದರ ನೇತೃತ್ವ ವಹಿಸಕೊಂಡು ಅಂದಿನ ಕೂಟಕ್ಕೆ

ಶಂಕರನಾರಾಯಣ ತಂಡದ ಅರ್ಥಧಾರಿಗಳನ್ನು ಆಹ್ವಾನಿಸಿದ್ದರು. ಅಂಪಾರು ಕೃಷ್ಣ ವೈದ್ಯರ ತಂಡದ ಹಿಮ್ಮೇಳ. ಆದರೆ ರಾತ್ರಿ ಗಂಟೆ 9-30 ಆದರೂ ಶಂಕರನಾರಾಯಣದ ತಂಡದವರು ಬರಲಿಲ್ಲ. ಆ ಮೇಲೆ ಅಲ್ಲಿಗೆ ಬಂದ ಆ ತಂಡದ ಸದಸ್ಯರಲ್ಲಿ ಒಬ್ಬರಾದ ಕೂರಾಡಿ ತೇಜಪ್ಪ ಹೆಗ್ಡೆಯವರು ವಾಹನದ ವ್ಯವಸ್ಥೆ ಸಿಗದೆ ಅವರು ಬರಲಿಲ್ಲ. ಇನ್ನು ಬರುವಂತೆಯೂ ಇಲ್ಲವೆಂದು ಹೇಳಿದಾಗ ಮುಂದೇನು ಮಾಡುವುದೆಂದು ತೋಚದೆ ಶೀನಪ್ಪ ಹೆಗ್ಡೆಯವರು ಗಲಿಬಿಲಿಗೊಂಡಾಗ ಯಾರೋ ಒಬ್ಬರು ಮಹಾತ್ಮರು ನಾನು ಅಲ್ಲಿರುವ ವಿಚಾರ ತಿಳಿಸಿ, ಚಿಕ್ಕ ಪುಟ್ಟ ಅರ್ಥ ಹೇಳುತ್ತಾರೆ ಎಂಬ ಸೂಚನೆಯಿತ್ತರು. ಆಗ ಶೀನಪ್ಪ ಹೆಗ್ಡೆಯವರು ಬಂದು ನನ್ನನ್ನು ಒಪ್ಪಿಸಿ ತೇಜಪ್ಪ ಹೆಗ್ಡೆಯವರೊಡನೆ ಅಂಗದ-ಪ್ರಹಸ್ಥ ಸಂವಾದ ಮಾಡುವಂತೆ ಕೇಳಿಕೊಂಡರು. ನನ್ನ ವಿಚಾರವನ್ನು ತಿಳಿಯದ ತೇಜಪ್ಪ ಹೆಗ್ಡೆಯವರು ನನ್ನನ್ನು ತೀರಾ ಕೀಳಾಗಿ ಅಂದಾಜಿಸಿ, ಅರ್ಥ ಹೇಳಲು ನಿರಾಕರಿಸಿದರು. ಅಂತಹ ಪರಿಸ್ಥಿತಿಯಲ್ಲಿ ನಾನು ಹಾಗೂ ಸುಬ್ರಾಯ ಭಟ್ ಎಂಬ ಅಧ್ಯಾಪಕರು ಸುಧನ್ವ- ಪ್ರಭಾವತಿ ಸಂವಾದ ಮುಗಿಸಿ ಭಾಗವತರು ಮಂಗಳ ಹಾಡಲು ಆರಂಭಿಸಿದಾಗ ಅಲ್ಲಿಯವರೆಗೆ ತಾಳಮದ್ದಳೆ ಕೇಳುತ್ತಾ ಸುಮ್ಮನೆ ಕುಳಿತ ತೇಜಪ್ಪ ಹೆಗ್ಡೆಯವರು ಅರ್ಜುನನ ಅರ್ಥ ಹೇಳಲು ಬಂದು ಕುಳಿತರು. ನನ್ನನ್ನು ಸೇರಿದಂತೆ ಎಲ್ಲರಿಗೂ ಆಶ್ಚರ್ಯ. ಅದುವರೆಗೂ ಚೆನ್ನಾಗಿ ಅರ್ಥ ಹೇಳುತ್ತಿದ್ದ ನನ್ನನ್ನು ಒರೆಗೆ ಹಚ್ಚುವುದಕ್ಕಾಗಿಯೇ ಬಂದು ಕುಳಿತರೆಂಬುದು ಎಲ್ಲರಿಗೂ ಅರ್ಥವಾಗಿತ್ತು. ಎಲ್ಲರ ಎಣಿಕೆಯಂತೆ ಪ್ರಥಮ ಪದ್ಯದಲ್ಲೇ ನನ್ನನ್ನು ಕೆಣಕಲು ಆರಂಭಿಸಿದರು. "ಅರ್ಜುನನೆಂದರೆ ನೀನೇ ಏನು?" ಎಂಬ ನನ್ನ ಪ್ರಶ್ನೆಗೆ "ಅರ್ಜುನ ಎಂದರೆ ಏನು?" ಎನ್ನುವ ಮರು ಪ್ರಶ್ನೆ ಹಾಕಿದರು. ಆಗ ನಾನು "ಕುಂತಿಯ ಮಗ" ಎಂದೆ "ಅದಲ್ಲ" ಅರ್ಜುನ ಎನ್ನುವ ಶಬ್ದಕ್ಕೆ ಏನು ಅರ್ಥ" ಎಂದು ಮರು ಪ್ರಶ್ನೆ ಹಾಕಿದರು. ಆಗ ಸಹಜವಾಗಿಯೇ ನನಗೆ ಸಿಟ್ಟು ಬಂದಿತ್ತು. ಶಬ್ದಕ್ಕೆ ಅರ್ಥ ತಿಳಿದಿದ್ದರೂ ಹೇಳದೆ ಖಾರವಾಗಿಯೇ "ಇದು ಗುರುಮಠವೇ ? ಅಥವಾ ರಣರಂಗವೇ? ಶಬ್ದಕ್ಕೆ ಅರ್ಥ ಕೇಳಲು ನೀನು ನನ್ನ ಗುರುವೇ? ಅಲ್ಲ

ನಾನು ನಿನ್ನ ಶಿಷ್ಯನೇ ? ನಿನ್ನ ಸಮರ ಕೌಶಲ ತಿಳಿಯಲು ನಾನು ಬಯಸುತ್ತೇನೆ. ಆದ್ದರಿಂದ ನನ್ನ ವಿದ್ವತ್ತನ್ನು ಪರೀಕ್ಷಿಸುವ ಬದಲು ನನ್ನ ಶಸ್ತ್ರಾಸ್ತ್ರ ಸಾಮರ್ಥ್ಯವನ್ನು ತಿಳಿಯಲು ಅಳೆಯಲು ಮುಂದಾಗು" ಎಂದಾಗ ಸಭೆಯವರೆಲ್ಲಾ ಸಿಳ್ಳೆ, ಚಪ್ಪಾಳೆ ಹೊಡೆದು ನನ್ನನ್ನು ಸಮರ್ಥಿಸಿದರು. ಇದರಿಂದ ಸಿಟ್ಟುಗೊಂಡ ಹೆಗ್ಡೆಯವರು ಕೊನೆಯವರೆಗೂ ವಾದವನ್ನೇ ಮುಂದುವರೆಸಿದರೂ ಎಲ್ಲಿಯೂ ಯಶಸ್ಸನ್ನು ಕಾಣಲಿಲ್ಲ. ತಾಳಮದ್ದಳೆ ಮುಗಿದ ಮೇಲೆ "ನಿನ್ನ ಅರ್ಥದ ಬಲವನ್ನು ಪರೀಕ್ಷಿಸುವುದಕ್ಕೆ ಹಾಗೆ ಹೇಳಿದೆನಲ್ಲದೆ ನಿನ್ನನ್ನ ಸೋಲಿಸುವುದಕ್ಕಲ್ಲ. ಉತ್ತೀರ್ಣನಾಗಿದ್ದಿ, ಒಳ್ಳೆಯ ಭವಿಷ್ಯವಿದೆ. ಇನ್ನೂ ಹೆಚ್ಚಿನ ಅಭ್ಯಾಸ ಮಾಡು ಒಳ್ಳೆಯದಾಗಲಿ" ಎಂದು ಆಶೀರ್ವದಿಸಿದರು. ಈ ಘಟನೆಯಿಂದ ಅರ್ಥಧಾರಿಯಾಗಿ ಮುಂದುವರೆಯುವುದಾದರೆ ಹೆಚ್ಚಿನ ತಯಾರಿ ಬೇಕೆಂಬ ಅರಿವು ನನಗುಂಟಾಯಿತು. ಅಂದಿನ ಕೂಟದಲ್ಲಿ ಉಪಸ್ಥಿತರಿದ್ದ ಹಡಾಳಿ ಚಿಕ್ಕಯ್ಯ ಶೆಟ್ಟಿ, ನೆಲ್ಲಿಕಟ್ಟೆ ಚರಡಪ್ಪ ನಾಯಕ್ ಮೊದಲಾದ ಹಿರಿಯರು ಬಂದು ನನ್ನ ಬೆನ್ನುತಟ್ಟಿ, ಮೆಚ್ಚುಗೆ ಸೂಚಿಸಿ ಶುಭ ಹಾರೈಸಿದರು. ತಾಳಮದ್ದಳೆ ಕ್ಷೇತ್ರದಲ್ಲಿ ಮುಂದುವರೆಯಬೇಕೆಂಬ ಛಲ ನನ್ನಲ್ಲಿ ಉಂಟಾಯಿತು.

ಬಸ್ರೂರು ಯಕ್ಷಗಾನ ಸಂಘದ ಅಧ್ಯಕ್ಷರಾದ ನಾರಾಯಣ ಶೇರೆಗಾರರು ಆಸುಪಾಸಿನ ಮನೆಯವರಲ್ಲಿ ತಾಳಮದ್ದಳೆ ಮಾಡಿಸುವಂತೆ ಕೇಳಿಕೊಳ್ಳುತ್ತಿದ್ದರು. ಅಂತೆಯೇ ಹೇರಿಕೆರೆಯ ಪರಿಸರದ ಒಂದು ಮನೆಯಲ್ಲಿ ನಡೆದ ತಾಳಮದ್ದಳೆಯಲ್ಲಿ ಸುಧನ್ವ ಕಾಳಗ-ಕರ್ಣಾರ್ಜುನ ಕಾಳಗವೆಂದು ನಿಶ್ಚಯಿಸಿ ಸುಧನ್ವ ಮತ್ತು ಶಲ್ಯನ ಪಾತ್ರ ನನಗೆ ನೀಡಿದ್ದರು. ಹಿಂದಿನ ದಿನ ನಾನು ನಿದ್ದೆ ಬಿಟ್ಟವನಾದುದರಿಂದ ಸುಧನ್ವನ ಅರ್ಥ ಮುಗಿದೊಡನೆ ಆ ಮನೆಯ ಯಜಮಾನರೊಡನೆ ಸ್ವಲ್ಪ ಹೊತ್ತು ನಿದ್ರಿಸಲು ಜಾಗ ಕೇಳಿದೆ. ಅವರು ತನ್ನ ಮನೆಯ ಕೋಣೆಯನ್ನೇ ತೆರವುಗೊಳಿಸಿ "ಇಲ್ಲಿಗೆ ತಾಳಮದ್ದಳೆ ಶಬ್ಧ ಹೆಚ್ಚಿಗೆ ಕೇಳಿಸುವುದಿಲ್ಲ. ಯಾರೂ ಬರುವುದಿಲ್ಲ. ನಿಮ್ಮ ಅರ್ಥ ಬಂದೊಡನೆ ನಾನೇ ಬಂದು ಎಬ್ಬಿಸಿಕೊಂಡು ಹೋಗುತ್ತೇನೆ" ಎಂದು ಹೇಳಿ ಬಾಗಿಲು ಚಾಚಿಕೊಂಡು ಹೊರಟು ಹೋದರು. ನಾನು ಅಂಗಿ ಕಳಚಿ, ಪಕ್ಕದಲ್ಲಿಟ್ಟುಕೊಂಡು ಚಾಪೆಯಲ್ಲಿ ಒರಗಿದೆ. ಕೂಡಲೆ ನಿದ್ರೆ ಆವರಿಸಿತು. ಎಬ್ಬಿಸುತ್ತೇನೆಂದು ಹೇಳಿದವರು ಬರಲೇ ಇಲ್ಲ, ಗಾಢ ನಿದ್ದೆ ಬಂದರೂ ಶಲ್ಯನ ಪಾತ್ರ ಬಂದೊಡನೆ ತಟ್ಟನೆ ಎಚ್ಚರವಾಯ್ತು. ಕೂಡಲೇ ಸಭೆಗೆ ಬಂದು ಅರ್ಥ ಹೇಳಿ ಮುಗಿಸಿದೆ.

ತಾಳಮದ್ದಳೆಯಲ್ಲಿ ಭಾಗವಹಿಸುತ್ತಾ ಹೋದಂತೆ ಕೆಲವು ಮಂದಿ ಅರ್ಥಧಾರಿ ಮಿತ್ರರು ಆಪ್ತರಾದರು. ಅಂತೆಯೇ ನಾವು ನಾಲ್ಕಾರು ಮಂದಿ ಅಲಿಖಿತವಾದ ಒಂದು ತಂಡವನ್ನು ಕಟ್ಟಿಕೊಂಡೆವು. ಅದರಲ್ಲಿ ಕಿಬ್ಬೈಲು ಕರುಣಾಕರ ಶೆಟ್ಟಿ, ಸರ್ವೋತ್ತಮ ಶೇಟ್, ಶಂಕರನಾರಾಯಣ, ಹಾಲಾಡಿ ಜಯವಂತ ಕಾಮತ್, ಫಾರೆಸ್ಟರ್ ನಾಗಯ್ಯ ಶೆಟ್ಟಿ ಮುಂತಾದವರು ನಮ್ಮ ತಂಡದ ಸದಸ್ಯರು. ಆಮೇಲೆ ಹೆಗ್ಗೇರಿ ಕೊರಗಯ್ಯ ಶೆಟ್ರು ನಮ್ಮೊಂದಿಗೆ ಸೇರಿಕೊಂಡರು. ನಮ್ಮ ಈ ತಂಡವು ಆಸುಪಾಸಿನ ಪರಿಸರದಲ್ಲಿ ಹಲವಾರು ತಾಳಮದ್ದಳೆ ಜರಗಿಸಿ, ಅದರಲ್ಲಿ ಜನರ ಅಭಿರುಚಿಯನ್ನು ಹೆಚ್ಚಿಸಿದ್ದೆವು ಎಂದು ಹೆಮ್ಮೆಯಿಂದ ಹೇಳಬಹುದಾಗಿದೆ. ಕೆಲವೊಮ್ಮೆ ನಮ್ಮೊಂದಿಗೆ ಇತರ ಪ್ರಸಿದ್ಧ ಹಳೆಯ ಅರ್ಥಧಾರಿಗಳು ಭಾಗವಹಿಸಿ ಕೂಟಕ್ಕೆ ಕಳೆಯನ್ನು ಹೆಚ್ಚಿಸಿದ್ದಾರೆ.

ಒಮ್ಮೆ ನೇರಳಕಟ್ಟೆಯಲ್ಲಿ ವಕ್ವಾಡಿ ನಾರಾಯಣ ಮಾಸ್ತರರ ನೇತೃತ್ವದಲ್ಲಿ ಒಂದು ತಾಳಮದ್ದಳೆ ನಿಶ್ಚಯಿಸಲ್ಪಟ್ಟಿತು. ಅಂದಿನಕೂಟಕ್ಕೆ ಶಿವಪುರ ಶ್ರೀನಿವಾಸ ಪಂಡಿತರು ಪ್ರಧಾನ ಅರ್ಥಧಾರಿಗಳಾಗಿ ಆಹ್ವಾನಿತರಾಗಿದ್ದರು. ನಾನು ಕೂಡಾ ಅಂದಿನ ಕೂಟಕ್ಕೆ ಆಹ್ವಾನಿತನಾಗಿದ್ದೆ. ಪ್ರಸಂಗ ಮಾಗಧ ವಧೆ. ಪಂಡಿತರ ಮಾಗಧ, ನನ್ನದು ಧರ್ಮರಾಯ. ದೊಡ್ಡ ಕೂಟದಲ್ಲಿ ನನ್ನ ಒಂದು ಚಿಕ್ಕ ಅರ್ಥ. ಮೊದಲೇ ನಿರ್ಣಯಿಸಿದ ಪಾತ್ರವಾದುದರಿಂದ ಸಾಕಷ್ಟು ತಯಾರಿಯಲ್ಲಿಯೇ ಚೊಕ್ಕದಾಗಿ ಅರ್ಥೈಸಿದೆ. ಪಂಡಿತರಾದರೋ ತಮ್ಮ ವಾಚಿಕಾಭಿನಯದಿಂದ ವಿದ್ವತ್ಪೂರ್ಣ ಅರ್ಥಗಾರಿಕೆಯಿಂದ, ಸಮಯೋಚಿತ ಚರ್ಚೆಯಿಂದ ಇಡೀ ಸಭೆಯನ್ನೇ ರಂಜಿಸಿದರು. ನಾನು ಅಂದೇ ಅವರ ಅರ್ಥವನ್ನು ಪ್ರಥಮವಾಗಿ ಕೇಳಿದ್ದು, ತುಂಬಾ ಆಕರ್ಷಿತನಾದೆ. ಅವರೇ ನನಗೆ ಮಾದರಿ ಅರ್ಥಧಾರಿಗಳಾದರು. ಬೆಳಿಗ್ಗೆ ಅವರನ್ನು ಕಂಡು ನಮಸ್ಕರಿಸಿ, ಅಭಿನಂದಿಸಿದೆ. ಅವರು ಕೂಡಾ ನನ್ನ ಅರ್ಥವನ್ನು ಮೆಚ್ಚಿ ಮಾತಾಡಿದರು. ಮಾತ್ರವಲ್ಲ ತಾವು ಭಾಗವಹಿಸುವ ಕೂಟಕ್ಕೆ ಬರುತ್ತಾ ಇರಿ ಎಂದು ಹೇಳಿ ಹೊರಟು ಹೋದರು. ಮುಂದೆ 3-4 ಕೂಟದಲ್ಲಿ ನಾವು ಒಂದಾದೆವು. ಅರ್ಥಗಾರಿಕೆಯ ಬಗ್ಗೆ ಹಾಗೆ ಅದರ ಸೂಕ್ಷ್ಮತೆಯ ಬಗ್ಗೆ ಕೆಲವು ಸೂಚನೆಗಳನ್ನಿತ್ತರು. ದಿನಗಳೆದಂತೆ ನಮ್ಮ ಮಿತ್ರತ್ವ ಹೆಚ್ಚಿ, ಮುಂದೆ ಅವರನ್ನು ತಾಳ ಮದ್ದಳೆ ಕ್ಷೇತ್ರದ ಗುರುವೆಂದೇ ಮಾನಿಸಿಕೊಂಡೆ.

ಆ ಸಮಯದಲ್ಲಿ ಭುಜಂಗ ಬಲ್ಲಾಳರ ಮುಂದಾಳ್ತನದಲ್ಲಿ ಹೆಬ್ರಿಯಲ್ಲಿ ಅದ್ದೂರಿಯ ಒಂದು ತಾಳಮದ್ದಳೆ ನಿಶ್ಚಯವಾಯಿತು. ಅಂದಿನ ಕೂಟಕ್ಕೆ ಹಿರಿಯ ಅರ್ಥಧಾರಿಗಳಾದ ಪೊಳಲಿ, ಪೆರ್ಲ, ದೇರಾಜೆ, ಶಿವಪುರ, ಸೀತಾನದಿ, ತೆಕ್ಕಟ್ಟೆಯವರು ಆಹ್ವಾನಿತ ಅರ್ಥಧಾರಿಗಳು ಪಂಡಿತರ ಸೂಚನೆಯಂತೆ ನನಗೂ ಆಮಂತ್ರಣ ಬಂದಿತ್ತು. ಬೀಷ್ಮಾರ್ಜುನ ಕಾಳಗ ಪ್ರಸಂಗ; ಉತ್ಸಾಹಿ ತರುಣ ಅರ್ಥಧಾರಿ ಎಂದು ಬಲ್ಲಾಳರಿಗೆ ಹೇಳಿ ಅಭಿಮನ್ಯುವಿನ ಅರ್ಥಕ್ಕಾಗಿ ನನ್ನನ್ನು ಆಮಂತ್ರಿಸುವಂತೆ ಪಂಡಿತರೇ ಸೂಚಿಸಿದ್ದರು. ಗುರುವಿನ ಮಾತನ್ನು ಮೀರಬಾರದೆಂದು ಹೋಗಿ ಪೊಳಲಿಯವರ ಭೀಷ್ಮನಿಗೆ ಅಭಿಮನ್ಯುವಾಗಿ ಅರ್ಥವಿಸಿದೆ. ಪೊಳಲಿಯವರು ಆ ಕಾಲಕ್ಕೆ ಹಿರಿಯ ಪ್ರಸಿದ್ಧ ಅರ್ಥಧಾರಿಗಳು. ಅವರನ್ನು ಕಂಡುದು, ಅವರ ಅರ್ಥ ಕೇಳಿದ್ದು ಅದೇ ಪ್ರಥಮ ಬಾರಿ. ಅವರ ವಿದ್ವತ್ಪೂರ್ಣ ಅರ್ಥಗಾರಿಕೆಯ ಬಗ್ಗೆ ಕೇಳಿದ್ದೆ. ಹಾಗಾಗಿ ಸಹಜವಾಗಿಯೇ ಹೆದರಿದ್ದೆ. ಆದರೆ ಗುರುಗಳಾದ ಪಂಡಿತರ ಸೂಚನೆಯಂತೆ ಹೆದರಿ ಹೆದರಿಯೇ ಅರ್ಥ ಹೇಳಿದೆ. ಹುಡುಗನೆಂಬ ನೆಲೆಯಲ್ಲಿ ಪೊಳಲಿಯವರು ನನ್ನನ್ನು ಸುಧಾರಿಸಿಕೊಂಡೇ ಅರ್ಥ ಹೇಳಿದರು. ಅರ್ಥದ ಮಧ್ಯದಲ್ಲಿ "ನೀನು ನಮ್ಮ ವಂಶದ ಕುಡಿ. ಎಳವೆಯಲ್ಲೇ ರಣ ಕೌಶಲವನ್ನು ಕರಗತ ಮಾಡಿಕೊಂಡಿದ್ದೆ ಎಂದು ಕೇಳಿದ್ದೆ. ಈಗ ಪ್ರತ್ಯಕ್ಷ ಕಂಡಂತಾಯ್ತು. ಸಂತೋಷ ಆದರೆ ನನ್ನನ್ನು ಜೈಸುತ್ತೇನೆಂಬ ಹುಂಬು ಧೈರ್ಯಕ್ಕೆ ಸಿಲುಕಬೇಡ ಹಿಂದೆ ತೆರಳು" ಎಂದು ಒಂದು ರೀತಿಯಲ್ಲಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದರು. ಅಂದಿನ ಕೂಟದಲ್ಲಿ ಆ ಹಿರಿಯ ಅರ್ಥಧಾರಿಗಳೊಂದಿಗೆ ಅರ್ಥ ಹೇಳಿದ ಸಂದರ್ಭವನ್ನು ಈಗಲೂ ನೆನೆದುಕೊಂಡು ಪುಳಕಿತನಾಗುತ್ತೇನೆ.

ಯಾವುದೇ ಕಲಾ ಪ್ರಕಾರವಾದರೂ ಒಂದೇ ಕೂಟದವರಿಂದ ನಡೆದರೂ ಅದು ಒಮ್ಮೊಮ್ಮೆ ಒಂದು ತೆರನಾಗಿ ಮೂಡಿಬರುವುದು ಸ್ವಾಭಾವಿಕವಾಗಿದೆ. ನಮ್ಮದೇ ಕೂಟದಲ್ಲಿ ಒಂದು ಅತ್ಯುತ್ತಮ ಹಾಗೂ ಅತಿ ಕೆಟ್ಟ ತಾಳಮದ್ದಳೆಯೂ ಆದದ್ದಿದೆ. ಆ ಕೂಟಗಳ ಕುರಿತು ಸಂಕ್ಷಿಪ್ತವಾಗಿ ತಿಳಿಯ ಬಯಸುತ್ತೇನೆ.

ಒಮ್ಮೆ ನೂಜಾಡಿ ಶಾಲೆಯಲ್ಲಿ ಊರವರ ಆಶಯದಂತೆ ಒಂದು ತಾಳಮದ್ದಳೆ ನಿಶ್ಚಯಿಸಿ, ಆ ಕೂಟಕ್ಕೆ ನನ್ನ ಮಿತ್ರಮಂಡಳಿಯನ್ನೆ ಆಹ್ವಾನಿಸಿದ್ದೆ. ಅಂದು ಪ್ರಸಂಗ ವಾಲಿವಧೆ. ನನ್ನದು ರಾಮ, ಕಿಬ್ಬೈಲು ಕರುಣಾಕರ ಹೆಗ್ಡೆಯವರ ವಾಲಿ, ಹೆಗ್ಗೇರಿ ಕೊರಗಯ್ಯ ಶೆಟ್ರ ಸುಗ್ರೀವ, ಸರ್ವೋತ್ತಮ ಶೇಟ್‌ರ ತಾರೆ ಹಾಗೂ ನಾಗಪ್ಪ ಶೆಟ್ಟರ ಹನುಮಂತ. ಆ ದಿನದ ಕೂಟದಲ್ಲಿ ಹನುಮಂತನ ಭಕ್ತಿಯ ಪಾರಮ್ಯ, ರಾಮ-ಸುಗ್ರೀವರ ಸ್ನೇಹ ಸಂಭಾಷಣೆ, ವಾಲಿ - ಸುಗ್ರೀವರ ಸಂದರ್ಭೋಚಿತ ಚರ್ಚೆ, ವಾಲಿಯ ಆರೋಪ, ಕೊನೆಯಲ್ಲಿ ರಾಮನ ಸಮಾಧಾನದ ಮಾತು ಇವುಗಳೆಲ್ಲಾ ಸುಸಂಬದ್ಧವಾಗಿಯೇ ಸಾಗಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿತು. ಅಂದಿನ ಕೂಟಕ್ಕೆ ಪ್ರಧಾನ ಅತಿಥಿಗಳಾಗಿ ಬಂದಿದ್ದ ಜೀವ ವಿಮಾ ಅಧಿಕಾರಿಗಳಾದ ಸೋಮಯಾಜಿಯವರು ಅಂದಿನ ಕೂಟವನ್ನು ತುಂಬಾ ಮೆಚ್ಚಿಕೊಂಡದ್ದಲ್ಲದೆ, ಹೆಬ್ರಿಯಲ್ಲಿ ನಮ್ಮ ಇಂದಿನ ತಂಡದವರಿಂದಲೇ ಒಂದು ತಾಳಮದ್ದಳೆಯಾಗಬೇಕೆಂದು ನಿಶ್ಚಯಿಸಿ, ದಿನಾಂಕ ಸೂಚಿಸಿ ತೆರಳಿದರು. ಇದು ನಮ್ಮ ಅತಿ ಯಶಸ್ವಿ ಕೂಟವಾಗಿತ್ತು.

ಅವರು ಸೂಚಿಸಿದ ದಿನದಂದು ಕ್ಲಪ್ತ ಸಮಯಕ್ಕೆ ನಮ್ಮ ತಂಡ ಅಲ್ಲಿಗೆ ತೆರಳಿತ್ತು. ಆಗಿನ ಅಲ್ಲಿಯ ಮುಂದಾಳುಗಳಾದ ಸುಭೋದ ಬಲ್ಲಾಳರು ನಮ್ಮನ್ನು ಹಾರ್ದಿಕವಾಗಿ ಸ್ವಾಗತಿಸಿದರು. ನಮ್ಮ ಸಂಬಂಧಿಕರ ಮನೆಯಲ್ಲಿ ಅದ್ದೂರಿಯ ಭೋಜನ ವ್ಯವಸ್ಥೆ ನಡೆದು ಶಾಲೆಯಲ್ಲಿ ನಡೆಯುವ ಕೂಟಕ್ಕೆ ಹಾಜರಾದೆವು. ಪ್ರಸಂಗ ಸುಧನ್ವ ಕಾಳಗ. ನನ್ನದು ಸುಧನ್ವ, ಕರುಣಾಕರ ಹೆಗ್ಡೆಯವರ ಅರ್ಜುನ, ಹೆಗ್ಗೇರಿಯವರ ಕೃಷ್ಣ, ಶೇಟ್‌ರ ಪ್ರಭಾವತಿ ಹಾಗೂ ನಾಗಪ್ಪ ಶೆಟ್ರ ಸುಗರ್ಭೆ. ಸ್ಥಳೀಯ ಅರ್ಥಧಾರಿಗಳಾದ ಅಂಬಾತನಯರು ಹಂಸಧ್ವಜನ ಅರ್ಥ ಹೇಳಿ ಪ್ರಸಂಗಕ್ಕೆ ಚಾಲನೆ ನೀಡಿದರು. ಆರಂಭದಿಂದ ಸುಧನ್ವ ಪ್ರಭಾವತಿಯರ ಸಂವಾದದವರೆಗೆ ಕೂಟ ಸಾಂಗವಾಗಿಯೇ ಸಾಗಿತು. ಅರ್ಜುನನ ಪ್ರವೇಶದ ನಂತರ ಕೂಟದ ನಡೆಯೇ ಬದಲಾಯಿತು. ಅರ್ಜುನನ ಪಾತ್ರಧಾರಿಗಳಾದ ಕರುಣಾಕರ ಹೆಗ್ಡೆಯವರು ಯಾಕೋ ಎಲ್ಲರಲ್ಲೂ ಮುನಿಸಿಕೊಂಡಂತೆ ಕಂಡಿತು. ಸುಧನ್ವನೊಡನೆ ಪ್ರತಿ ಪದ್ಯದಲ್ಲೂ ತರ್ಕಕ್ಕಿಳಿದರು. ಅದೇನು ಅಷ್ಟೊಂದು ಆಭಾಸವಾಗಿರಲಿಲ್ಲ. ಆದರೆ ಕೃಷ್ಣನ ಪ್ರವೇಶವಾದ ಮೇಲೆ ಆತನೊಂದಿಗೂ ಅಡಿಗಡಿಗೆ ವಾದ ಬೆಳೆಸಿದರು. ಕೃಷ್ಣಾರ್ಜುನರು ಭಾವ - ಮೈದುನರಾಗದೆ, ಕಡು ವೈರಿಗಳಂತೆ ಕಂಡರು. ಪ್ರೇಕ್ಷಕರು ಸಹನೆ ಮೀರಿ "ವಾದ ನಿಲ್ಲಿಸಿ ಕಥೆ ಮುಂದುವರಿಸಿ" ಎನ್ನುವಂತಾಯಿತು. ತಾಳಮದ್ದಳೆ ಮುಗಿದ ಮೇಲೆ ಪ್ರಾಯೋಜಕರು ಅದೇ ಶಾಲೆಯಲ್ಲಿ ಉಳಕೊಳ್ಳಲು

ವ್ಯವಸ್ಥೆ ಮಾಡಿ ಹೊರಟು ಹೋದರು. ಬೆಳಿಗ್ಗೆ ಎದ್ದೊಡನೆ ಹತ್ತಿರದ ಹೋಟೇಲಿನವರು ಕಾಫಿ – ತಿಂಡಿ ತಂದುಕೊಟ್ಟರು. ಸ್ವಲ್ಪ ಹೊತ್ತು ಕುಳಿತರೂ ಯಾರೂ ನಮ್ಮನ್ನು ಬೀಳ್ಕೊಳ್ಳಲು ಬಂದಿರಲಿಲ್ಲ. ಭಾರವಾದ ಮನಸ್ಸಿನಿಂದ ಅಲ್ಲಿಂದ ಹೊರಟು ಮನೆ ಸೇರಿದೆವು. ಇದು ನಮ್ಮ ಅತಿ ಕೆಟ್ಟ ಕೂಟವಾಗಿ ದಾಖಲಾಯಿತು.

ಯಾವುದೇ ಒಂದು ಕೂಟಕ್ಕೆ ನಾವು ಪೂರ್ವ ತಯಾರಿ ಮಾಡಿಕೊಳ್ಳದೇ ಹೋದಲ್ಲಿ ಕೆಲವೊಮ್ಮೆ ನನ್ನ ಎಣಿಕೆ ಮೀರಿ ಯಶಸ್ಸು ಕಂಡದ್ದುಂಟು. ಈ ಕುರಿತಾಗಿ ನನ್ನ ಅನುಭವಕ್ಕೆ ಬಂದ ಒಂದು ಘಟನೆಯನ್ನು ನಿಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ. ಬಸ್ರೂರಿಗೆ ಹತ್ತಿರದ ಉಳ್ಳೂರು ಕಾರ್ತಿಕೇಯ ಸ್ವಾಮಿಯ ಸನ್ನಿಧಿಯಲ್ಲಿ ಒಂದು ತಾಳಮದ್ದಳೆ. ಪ್ರಸಂಗ ಭರತಾಗಮನ. ಯಕ್ಷಗಾನ ದಿಗ್ಗಜ ಅರ್ಥಧಾರಿಗಳಾದ ಕೊರ್ಗಿ ವೆಂಕಟೇಶ ಉಪಾಧ್ಯ ಹಾಗೂ ಮೇಲುಕೋಟೆ ಉಮಾಕಾಂತ ಭಟ್ಟರ ರಾಮ–ಭರತ ನನ್ನಲ್ಲಿ ಸೀತೆಯ ಅರ್ಥ ಹೇಳಲು ಅಲ್ಲಿಯ ವ್ಯವಸ್ಥಾಪಕರು ವಿನಂತಿಸಿಕೊಂಡರು. ಈ ಪ್ರಸಂಗದ ತಾಳಮದ್ದಳೆ ನಾನು ಕಂಡುದು ಬಹಳ ವರ್ಷಗಳ ಹಿಂದೆ. ಅದರ ಪದ್ಯಗಳಾವುದೂ ನನಗೆ ಬಾಯಿ ಪಾಠದಲ್ಲಿ ಉಳಿದಿರಲಿಲ್ಲ. ಕೊನೆಗೆ ಅನಿವಾರ್ಯ ಪರಿಸ್ಥಿತಿಯಲ್ಲಿ ಪ್ರಸಂಗದ ಪದ್ಯಗಳನ್ನು ಬರೆದುಕೊಂಡು, ಯಾವ ಪೂರ್ವ ತಯಾರಿಯೂ ಇಲ್ಲದೆಯೇ ದೇವರಿಗೆ ಕೈಮುಗಿದು ಅರ್ಥಕ್ಕೆ ಕುಳಿತುಕೊಂಡೆ ಅದಾವ ಶಕ್ತಿಯೋ ನಾನರಿಯೆ ನನಗರಿವಿಲ್ಲದೆ ವಿಷಯಗಳು ತನ್ನಿಂದ ತಾನಾಗಿಯೇ ಒದಗಿ ಬಂತು. ಸರಾಗವಾಗಿ ಭಾವ ಪ್ರಧಾನವಾಗಿ ಅರ್ಥ ಹೇಳಿದೆ. ಅದು ತನ್ನ ಮಾವನ ಕುರಿತಾದ ಗುಣಗಳನ್ನು ನೆನೆದು ಸೀತೆ ಅಳುವ ಸನ್ನಿವೇಶ. ಮಧ್ಯದಲ್ಲಿ ಯಾವ ಪಾತ್ರದ ಪ್ರವೇಶವಿಲ್ಲ. ಹೀಗಾಗಿ ಅಡೆತಡೆಯಿಲ್ಲದೆ ನಿರರ್ಗಳವಾಗಿ ಮಾತಾಡಿ ಮುಗಿಸಿದೆ. ಬೇರೆ ಕಡೆಗೆ ಹೋಗಬೇಕಾಗಿರುವುದರಿಂದ ಅರ್ಥ ಮುಗಿದೊಡನೆ ಯಾರಿಗೂ ತಿಳಿಸದೆ ಹೊರಟುಹೋದೆ. ತಾಳಮದ್ದಳೆ ಮುಗಿದ ಮೇಲೆ ಆ ಇಬ್ಬರು ವಿದ್ವಾಂಸರು ನನ್ನನ್ನು ಕೇಳಿದರಂತೆ. ನನ್ನ ಅರ್ಥದ ಬಗ್ಗೆ ಬಹುವಾಗಿ ಹೊಗಳಿದರಂತೆ. ಬಹಳ ದಿನಗಳ ಅನಂತರ ನಾನು ಸಿಕ್ಕಿದಾಗ ನನ್ನ ಅಂದಿನ ಅರ್ಥದ ಬಗ್ಗೆ ಮೆಚ್ಚುಗೆ ಸೂಚಿಸಿದರು. ಇದು ಯಕ್ಷಗಾನ ಕ್ಷೇತ್ರದಲ್ಲಿ ನಾನು ಪಡೆದ ಅನಿರೀಕ್ಷಿತ ಯಶಸ್ಸು ವಿದ್ವಾಂಸರು ಪ್ರಾಂಜಲ ಮನಸ್ಸಿನಿಂದ ಹೊಗಳಿದ ಸನ್ನಿವೇಶ.

ಪ್ರಸಂಗ ಕರ್ತೃನಾಗಿ : ಚಿಕ್ಕಂದಿನಿಂದಲೂ ಆಟ ನೋಡುವಾಗಲೆಲ್ಲಾ ನನ್ನ ಹೆಚ್ಚಿನ ಲಕ್ಷ್ಯವೆಲ್ಲಾ ಭಾಗವತರ ಹಾಡಿನ ಮೇಲೆ. ಅವುಗಳನ್ನು ಅನುಕರಿಸಿ ಹಾಡುವ ಹುಚ್ಚು. ಅದಕ್ಕಾಗಿ ಮನೆಯಲ್ಲಿರುವ ಪ್ರಸಂಗಗಳನ್ನು ಓದಲಾರಂಭಿಸಿದೆ. ಓದುತ್ತಾ ಹೋದಂತೆ ಅದರ ಸಾಹಿತ್ಯದ ಪರಿಚಯವಾಗಿ ಪ್ರಸಂಗ ಬರೆಯಬೇಕೆಂಬ ಹುಚ್ಚು ಬಯಕೆ ಉಂಟಾಗಿತ್ತು ಎಳವೆಯಲ್ಲೆ. ಮುಂದೆ 10ನೇ ತರಗತಿಯಲ್ಲಿ ಓದುವಾಗ ಮುದ್ದಣ ಕವಿಯ ಹಾಗೂ ಆತನ ಕೃತಿಗಳ ಕುರಿತಾಗಿ ವಿಸ್ತಾರವಾದ ಪಾಠವೊಂದು ಕನ್ನಡ ಪಠ್ಯ ಪುಸ್ತಕದಲ್ಲಿತ್ತು. ಅದರಲ್ಲಿ ಆತನ ರತ್ನಾವತಿ ಕಲ್ಯಾಣ ಹಾಗೂ ಕುಮಾರ ವಿಜಯದ ಕೆಲವು ಪದ್ಯಗಳನ್ನು ಉದಾಹರಣೆಯಾಗಿ ನೀಡಿದ್ದರು. ನಮ್ಮ ಕನ್ನಡ ಅಧ್ಯಾಪಕರಾದ ಐರೋಡಿ ಕೃಷ್ಣ ಉಡುಪರು ಆ ಪದ್ಯಗಳನ್ನು ಸ್ವಾರಸ್ಯ ಪೂರ್ಣವಾಗಿ ವಿವರಿಸಿದ್ದಲ್ಲದೆ ಅದರ ಛಂದಸ್ಸಿನ ಮೂಲ ಪಾಠ ಅವರಿಂದ ದೊರಕಿತ್ತು. ಮುದ್ದಣನ ಪ್ರಸಂಗಗಳ ಪದ್ಯಗಳಲ್ಲಿರುವ ಶಬ್ದಾಲಂಕಾರ, ಅರ್ಥಾಲಂಕಾರಗಳಿಗೆ ಮನಸೋತ ನಾನು ಅವನಂತೆ ಪ್ರಸಂಗ ರಚಿಸಬೇಕೆಂಬ ಕನಸು ಕಂಡೆ. ಆ ಶಾಲೆಯ ಅಧ್ಯಾಪಕರ ಕೊಠಡಿಯಲ್ಲಿರುವ ಮುದ್ದಣನ ಭಾವಚಿತ್ರವನ್ನು ಕಂಡಾಗಲೆಲ್ಲಾ ಬಯಕೆ ಚಿಗುರೊಡೆಯಲು ಪ್ರಾರಂಭಗೊಂಡಿತು.

ನಾನು ಅಧ್ಯಾಪಕ ವೃತ್ತಿಗೆ ಸೇರಿ ಕನ್ನಡ ಪಾಠ ಮಾಡುವಾಗ ಚಂದನ ದಾಸ ಎಂಬ ಪಾಠ ಮಾಡುವ ಅವಕಾಶ ಬಂತು. ಅದು ಚಂದ್ರಗುಪ್ತ-ಚಾಣಕ್ಯರ ಕಥೆಗೆ ಸಂಬಂಧಿಸಿದ ಕತೆ. ಆ ಕಥೆಯ ಬಗ್ಗೆ ಕುತೂಹಲ ಮೂಡಿ ಕೆಂಪು ನಾರಾಯಣ ಕವಿ ಬರೆದ ಪುಸ್ತಕ ತರಿಸಿಕೊಂಡು ಓದಿದೆ. ಅದೇ ಕತೆಯನ್ನು ಚಂದ್ರಗುಪ್ತ - ಚಾಣಕ್ಯ ಎಂಬ ಹೆಸರಿನಿಂದ ಪ್ರಸಂಗ ಬರೆಯಲು ಆರಂಭಿಸಿದೆ. ಹಿಂದಿನ ಪ್ರಸಂಗಗಳ ಪದ್ಯಗಳನ್ನು ಆಧಾರವಾಗಿಟ್ಟುಕೊಂಡು, ಹಿಂದೆ ಕಲಿತ ಛಂದಸ್ಸಿನ ಬಲದಿಂದ ಪದ್ಯ ಬರೆಯಲು ಪ್ರಾರಂಭಿಸಿದೆ. ಪದ್ಯಗಳು ಹಾಡಲು ಸರಿಯಾಗಿ ಒದಗುತ್ತವೆಯೇ ಎಂದು ಖಚಿತಪಡಿಸಿಕೊಳ್ಳಲು ಬರೆದ ಪದ್ಯಗಳನ್ನು ಪ್ರಸಿದ್ಧ ಭಾಗವತರಾದ ನಾರಣಪ್ಪ ಉಪ್ಪೂರರಿಗೆ ತೋರಿಸುತಿದ್ದೆ. ಅವರು ಸರಿಯಾಗಿದೆ ಎಂದು ಹೇಳಿದ್ದಲ್ಲದೆ ಪ್ರಸಂಗ ಪೂರ್ತಿಗೊಳಿಸುವಂತೆಯೂ, ಅದನ್ನು ತಾನೇ ಆಡಿಸುವುದಾಗಿಯೂ ಹೇಳಿ ನನ್ನನ್ನು ಪ್ರೋತ್ಸಾಹಿಸಿದರು. ಅವರ ಮಾತಿನಂತೆ ಪೂರ್ತಿಗೊಳಿಸಿ, ಶುದ್ಧಪ್ರತಿ ತಯಾರಿಸಬೇಕೆಂದು ಸಂಕಲ್ಪಿಸಿ, ಆ ಕರಡು ಪ್ರತಿಯನ್ನು ಶಾಲೆಯ ಕಪಾಟಿನಲ್ಲಿ ಇತರ ಪುಸ್ತಕಗಳೊಂದಿಗೆ ಇಟ್ಟುಬಿಟ್ಟೆ.

ಅದೇ ಸಮಯಕ್ಕೆ ಸುರತ್ಕಲ್ ಮೇಳದವರು ಬಸ್ರೂರಿನಲ್ಲಿ ಚಂದ್ರಗುಪ್ತ ವಿಜಯವೆಂಬ ಆಟ ಆಡುವರೆಂಬ ವಿಚಾರ ತಿಳಿದು ನೋಡಲು ಹೋದೆ. ಪ್ರಸಂಗವನ್ನು ಚೆನ್ನಾಗಿಯೇ ಆಡಿದ್ದರು. ಆದರೆ ಅದನ್ನು ಪ್ರೇಕ್ಷಕರು ಮೆಚ್ಚಿದಂತೆ ಕಂಡು ಬರಲಿಲ್ಲ. ಮಾತ್ರವಲ್ಲದೆ ಸೀತಾನದಿ ಗಣಪಯ್ಯ ಶೆಟ್ಟಿಯಂಥಹ ಪ್ರಸಿದ್ಧ ಪ್ರಸಂಗಕರ್ತರು ಕೃತಿಯ ಮುಂದೆ ನನ್ನ ಕೃತಿ ಯಶಸ್ವಿಯಾಗಲಾರದೆಂಬ ಭಾವನೆಯಿಂದ ಕರಡು ಪ್ರತಿಯನ್ನು ನಕಲು ತೆಗೆಯದೆ ಹಾಗೆ ಇಟ್ಟೆ. ಮುಂದೊಂದು ದಿನ ಅದನ್ನು ನೋಡಬೇಕೆಂಬ ಆಸೆಯಿಂದ ಹುಡುಕಲು ಹೊರಟರೆ ಪುಸ್ತಕವೇ ಸಿಗದಾಯಿತು. ಹೀಗೆ ಆ ಪ್ರಸಂಗ ರಂಗವೇರದೆ ಮಾಯವಾಗಿ ಹುಟ್ಟುವ ಮೊದಲೇ ಸ್ರಾವವಾದ ಪಿಂಡದಂತಾಯ್ತು.

ಸಾಧಾರಣ 1977ರ ಹೊತ್ತಿಗೆ ಡಾ। ವೈ. ಚಂದ್ರಶೇಖರ ಶೆಟ್ರು ಕಂಡ್ಲೂರು ಸರಕಾರಿ ಆಸ್ಪತ್ರೆಗೆ ವರ್ಗವಾಗಿ ಬಂದರು. ಅವರು ಆ ಹೊತ್ತಿಗೆ 4–6 ಪ್ರಸಂಗಗಳನ್ನು ರಚಿಸಿ ಖ್ಯಾತನಾಮರಾಗಿದ್ದರು. ಸಾಲಿಗ್ರಾಮ ಡೇರೆ ಮೇಳಕ್ಕೆ ಖಾಯಂ ಪ್ರಸಂಗಕರ್ತೃರಾಗಿದ್ದರು. ಮುಂದಿನ ತಿರುಗಾಟಕ್ಕೆ ಪ್ರಸಂಗ ಕೊಡುತ್ತೇನೆಂಬುದಾಗಿ ಸಾಲಿಗ್ರಾಮ ಮೇಳದ ಯಜಮಾನರಿಗೆ ಆಶ್ವಾಸನೆ ನೀಡಿದ್ದರು. ಆದರೆ ಆ ವರ್ಷ ಅವರು ತಮ್ಮ ಹೊಸಮನೆ ಕಟ್ಟಲು ತೊಡಗಿದ್ದರಿಂದ ಪ್ರಸಂಗ ರಚನೆಗೆ ಸಮಯ ಸಿಗದೇ ಅಗಲೇ ಸಿದ್ಧಗೊಳಿಸಿ ಇಟ್ಟುಕೊಂಡ ಸತಿ ಸೀಮಂತಿನಿ ಕಥೆಯನ್ನು ನನಗಿತ್ತು ಪ್ರಸಂಗ ರಚಿಸುವಂತೆ ಕೇಳಿಕೊಂಡರು. ಪ್ರಸಂಗ ರಚಿಸಬೇಕೆಂಬ ಬಯಕೆಯಲ್ಲಿದ್ದ ನನಗೆ ಹುಡುಕುವ ಬಳ್ಳಿ ಕಾಲ್ತೊಡಕಿದಂತಾಯ್ತು. ಆದರೆ ಅವರು ಕೊಟ್ಟ ಕಥೆ ಇಡೀ ರಾತ್ರಿಗೆ ಸಾಲದಾಗಿತ್ತು. ಆದ್ದರಿಂದ ಆ ಕಥೆಗೆ ಪೂರಕವಾಗಿ ಸೀಮಂತಿನಿಯ ಅಳಿಯ ಭದ್ರಾಯುವಿನ ಕಥೆಯನ್ನು ಹೊಂದಿಸುವುದೆಂದು ತೀರ್ಮಾನಿಸಿದೆ. ಡಾಕ್ಟರರ ಮಾರ್ಗದರ್ಶನ ಪಡೆದು ಪ್ರಸಂಗ ರಚನೆಗೆ ತೊಡಗಿ ಪೂರ್ತಿಗೊಳಿಸಿದೆ. ಆದರೆ ಆ ವರ್ಷ ಪ್ರಧಾನ ಭಾಗವತರಾಗಿ ಸಾಲಿಗ್ರಾಮ ಮೇಳಕ್ಕೆ ಹೊಸದಾಗಿ ಸೇರ್ಪಡೆಗೊಂಡ ಕಾಳಿಂಗ ನಾವಡರು ನನ್ನ ಪ್ರಸಂಗವನ್ನು ಹೇಗೆ ಸ್ವೀಕರಿಸುವರೋ, ಪ್ರಸಂಗವು ಎಷ್ಟರ ಮಟ್ಟಿಗೆ ಯಶಸ್ವಿಯಾದೀತೋ ಎಂಬ ಬಗ್ಗೆ ತುಂಬಾ ಭಯಗೊಂಡೆ. ಆದರೆ ಅದು ಹಾಗಾಗದೆ ಭಾಗವತರು ಅದರ ಪದ್ಯಗಳನ್ನು ಬಹುವಾಗಿ ಮೆಚ್ಚಿಕೊಂಡರು. ತಮ್ಮ ಸಮರ್ಥ ನಿರ್ದೇಶನದಿಂದ ಪ್ರಸಂಗವನ್ನು ಯಶಸ್ವಿಗೊಳಿಸಿದರು. ಆ ವರ್ಷ ನಾವಡರ ಜನಪ್ರಿಯ ಪ್ರಸಂಗ "ನಾಗಶ್ರೀ"ಯ ಜನಪ್ರಿಯತೆಯ ಭರದಲ್ಲೂ ನನ್ನ ಪ್ರಸಂಗ 60ಕ್ಕೂ ಮಿಕ್ಕಿ ಪ್ರದರ್ಶನ ಕಂಡಿತು. ಸೀಮಂತಿನಿಯು

ಯಶಸ್ಸಿನ ಕಾರಣದಿಂದ ಮುಂದಿನ ತಿರುಗಾಟಕ್ಕೆ ನಾನೇ ಪ್ರಸಂಗ ರಚಿಸಬೇಕೆಂದು ನಾವಡರೇ ನನ್ನನ್ನು ಒತ್ತಾಯಿಸಿದರು. ಅವರ ಮೇಲಿನ ಭರವಸೆಯಿಂದ ಪ್ರಸಂಗ ರಚನೆಗೆ ಮುಂದಾದೆ.

ಕಾಳಿಂಗ ನಾವಡರ ಕಂಠಶ್ರೀಯಿಂದ ಸೀಮಂತಿನಿ ಪ್ರಸಂಗದ ಪದ್ಯಗಳು ಬಹು ಸೊಗಸಾಗಿ ಹೊರಹೊಮ್ಮಿದ್ದುವು. ಅವರ ಪದ್ಯದ ಪರಿಣಾಮ ಎಷ್ಟು ಪ್ರಖರವಾಗಿತ್ತೆಂದರೆ ಪುತ್ತೂರು ಸಮೀಪದ ಒಂದು ಆಟದಲ್ಲಿ ಅವರು ಹಾಡಿದ ಒಂದು ಪದ್ಯಕ್ಕೆ ಕೆಲವು ಯುವಕರು ಓನ್ಸ್‌ಮೋರ್ ಹಾಕಿದರು. ಆದರೆ ಯಕ್ಷಗಾನದಲ್ಲಿ ಓನ್ಸ್‌ಮೋರ್‌ಗೆ ಅವಕಾಶವಿಲ್ಲವೆಂದು ಸ್ವತಃ ನಾವುಡರೇ ಕೇಳಿಕೊಂಡಂತೆ ಯುವಕರಿಗೆ ಪುನಃ ಕೇಳುವ ಅವಕಾಶ ದೊರೆಯಲಿಲ್ಲ.

ಮುಂದಿನ ಪ್ರಸಂಗಕ್ಕೆ ಕಥಾವಸ್ತುವಿನ ಶೋಧನೆಯಲ್ಲಿದ್ದ ನಾನು ಆಕಸ್ಮಿಕವಾಗಿ ಶಂಕರನಾರಾಯಣ ಸಮೀಪದ ಉಳ್ಳೂರು ಶ್ರೀ ಬನಶಂಕರಿ ದೇವಸ್ಥಾನಕ್ಕೆ ಹೋಗುವ ಅವಕಾಶ ದೊರಕಿತು. ಆ ದೇವಸ್ಥಾನದಲ್ಲಿ ಹರಕೆಯಾಗಿ ಬಂದ ಚಿಕ್ಕ ಚಿಕ್ಕ ತೊಟ್ಟಿಲುಗಳನ್ನು ನೋಡಿದೆ. ಅಲ್ಲಿಯ ಕೆಲವರಿಂದ ಆ ದೇವಸ್ಥಾನಕ್ಕೆ ಸಂಬಂಧಿಸಿದ ಕೆಲವು ದಂತ ಕಥೆಗಳನ್ನು ತಿಳಿದುಕೊಂಡೆ. ಅದರ ಆಧಾರ ಮೇಲೆ ಶ್ರೀ ದೇವಿ ಬನಶಂಕರಿ ಎಂಬ ಪ್ರಸಂಗ ರಚಿಸಿದೆ.

ಈ ಪ್ರಸಂಗವು ಕೂಡಾ ನಿರೀಕ್ಷೆ ಮೀರಿ ಯಶಸ್ಸನ್ನು ಕಂಡಿತು. ಇದರೊಂದಿಗೆ ಪ್ರದರ್ಶನಗೊಂಡ ನಾವಡರ ಕಾಂಚನಶ್ರೀ ಪ್ರಸಂಗ ಜನರ ಮೇಲೆ ಹೆಚ್ಚಿನ ಪ್ರಭಾವ ಬೀರಲಿಲ್ಲ. ಆದರೂ ಈ ಎರಡು ಪ್ರಸಂಗಗಳಿಂದ ಆ ವರ್ಷದ ಮೇಳದ ತಿರುಗಾಟ ತುಂಬಾ ಯಶಸ್ಸಿನಿಂದ ಕೊನೆಗೊಂಡಿತು. ಆ ವರ್ಷದ ಕೊನೆಗೆ ಡಾ। ಎಚ್. ಶಾಂತಾರಾಮರ ಅಧ್ಯಕ್ಷತೆಯಲ್ಲಿ ಕಾಳಿಂಗ ನಾವಡರನ್ನು ಕುಂದಾಪುರದಲ್ಲಿ ಬಹಳ ಅದ್ದೂರಿಯಿಂದ ಸನ್ಮಾನಿಸಲು ಮೇಳದ ಯಜಮಾನರು ನಿರ್ಧರಿಸಿದರು. ಈ ವಿಚಾರ ತಿಳಿದ ನಾವಡರು ತಮ್ಮೊಂದಿಗೆ ನನ್ನನ್ನೂ ಸನ್ಮಾನಿಸುವುದಾದರೆ ಮಾತ್ರ ಸನ್ಮಾನ ಸ್ವೀಕರಿಸುತ್ತೇನೆಂಬುದಾಗಿ ಹೇಳಿದ್ದರಿಂದ ಅವರೊಂದಿಗೆ ನನಗೂ ಸನ್ಮಾನ ದೊರೆಯಿತು. ನಾವುಡರು ಆ ಸನ್ಮಾನಕ್ಕೆ ಉತ್ತರಿಸುವಾಗ ನನ್ನ ಪ್ರಸಂಗದ ಪದ್ಯಗಳ ಬಗ್ಗೆ ಮೆಚ್ಚುಗೆಯ ಮಾತನ್ನಾಡಿ ತಮ್ಮ ಔದಾರ್ಯವನ್ನು ತೋರಿದರು.

ಈ ಮಧ್ಯೆ ಈ ಪ್ರಸಂಗ ಶಂಕರನಾರಾಯಣದಲ್ಲಿ ನಡೆದಾಗ ನನ್ನ ಅಪ್ತಮಿತ್ರರಾದ ಸಂಕಾಪುರ ಶಿವರಾಮ ಶೆಟ್ರ ನೇತೃತ್ವದಲ್ಲಿ ನನಗೆ ಸನ್ಮಾನ ನಡೆದಿತ್ತು. ಈ ಸನ್ಮಾನ ನನಗೆ ಯಕ್ಷಗಾನ ರಂಗದಲ್ಲಿ ದೊರೆತ ಪ್ರಥಮ ಸನ್ಮಾನವೆಂಬ ದಾಖಲೆಗೆ ಪಾತ್ರವಾಯಿತು.

ನನ್ನ ಮೂರನೇ ಪ್ರಸಂಗ "ಚೆಲುವೆ ಚಿತ್ರಾವತಿ" ಅದಾಗಲೇ ನಮ್ಮ ನಾಟಕ ತಂಡದವರು ಆಡಿ ಜನಪ್ರಿಯಗೊಳಿಸಿದ್ದ ಮತ್ಥಳಿ ನಾಟಕದ ಪ್ರೇರಣೆಯಿಂದ ಬರೆದ ಪ್ರಸಂಗ. ಮೂಲ ಕಥಾ ವಸ್ತು ಅದರದ್ದೇ ಆದರೂ ಯಕ್ಷರಂಗಕ್ಕೆ ಒಪ್ಪುವಂತೆ ಸಾಕಷ್ಟು ಬದಲಾವಣೆ ಮಾಡಿಕೊಂಡಿದ್ದೆ. ಕಾಳಿಂಗನನ್ನು ರಂಗಕ್ಕೆ ತರುವುದಕ್ಕಾಗಿ ಗೊಲ್ಲರ ಸನ್ನಿವೇಶ ಸೇರಿಸಿದ್ದೆ. ಪ್ರಸಂಗ ತುಂಬಾ ಜನಪ್ರಿಯತೆಗಳಿಸಿತು. ಅದರಲ್ಲೂ ಪ್ರಸಂಗದ ಕೊನೆಯಲ್ಲಿ ಬರುವ ಧರಣಿಮಂಡಲ ಪದ್ಯವು ನಾವಡರ ವಿಶಿಷ್ಠ ಶೈಲಿಯ ಹಾಡುಗಾರಿಕೆಯಿಂದ ಪ್ರೇಕ್ಷಕರ ಮನಮೆಚ್ಚಿಸಿತ್ತು. ಈ ಹಾಡನ್ನು ಕೇಳುವ ಹಾಗೂ ಅದಕ್ಕೆ ಸಂಬಂಧಿಸಿ ರೂಪಕವನ್ನು ನೋಡುವ ಆಸೆಯಿಂದ ಪ್ರೇಕ್ಷಕರು ಬೆಳಗಿನ ತನಕ ಆಟ ನೋಡುವಂತಾಯಿತು.

ನಾಲ್ಕನೆ ಪ್ರಸಂಗ "ರತಿರೇಖಾ". ಇದು ಕವಿ ರವೀಂದ್ರರ ತಲೆದಂಡ ಎಂಬ ಚಿಕ್ಕ ಕಥೆಯ ವಿಸ್ತೃತರೂಪ. ಭೋಗಕ್ಕಿಂತ ತ್ಯಾಗವೇ ಮೇಲೆಂಬ ತತ್ವವನ್ನು ಸಾರುವ ಕಥೆ. ಆದರೆ ಅದರಲ್ಲಿರುವ ಹಾಸ್ಯ ಸನ್ನಿವೇಶಗಳ ಆಧಿತ್ಯದಿಂದ ಅದು ಹಾಸ್ಯಮಯ ಪ್ರಸಂಗವೆಂದೇ ಹೇಳುವಂತಾಯಿತು. ಇದರಲ್ಲಿ ಬರುವ ಕೋಮಟಿ ಶೆಟ್ಟಿಯ ಪ್ರಣಯ ಪ್ರಸಂಗದಿಂದಾಗಿ ಹೊನ್ನಾವರದ ವೈಶ್ಯ ಸಮಾಜದವರ ಕೆಂಗಣ್ಣಿಗೆ ನಾನು ಗುರಿಯಾಗಬೇಕಾಯಿತು. ದಿನ ಪತ್ರಿಕೆಯೊಂದರಲ್ಲಿ "ಪ್ರಸಂಗಕರ್ತರು ನಮ್ಮ ಸಮಾಜವನ್ನು ಬಹುವಾಗಿ ಛೇಡಿಸಿದ್ದಾರೆ, ನಿಂದಿಸಿದ್ದಾರೆ. ಈ ಬಗ್ಗೆ ಪ್ರಸಂಗಕರ್ತರು ಬಹಿರಂಗವಾಗಿ ಕ್ಷಮೆಯಾಚಿಸಿ, ಪ್ರಸಂಗ ಆಡುವುದನ್ನು ನಿಲ್ಲಿಸತಕ್ಕದ್ದು ಎಂದು ಪ್ರಕಟಣೆ ಕೊಟ್ಟರು. ಇದಕ್ಕೆ ನಾನು "ಹಾಸ್ಯಕ್ಕಾಗಿ ಕೋಮಟಿ ಜಾತಿಯ ವೃದ್ಧ ಕಾಮುಕನ ಪ್ರಣಯ ಸನ್ನಿವೇಶ ತಂದಿರುವೆನಲ್ಲದೆ ಎಲ್ಲಿಯೂ ಜಾತಿಯನ್ನು ನಿಂದಿಸಿಲ್ಲ. ಏನಾದರೂ ನಿಂದನೆ ಬಂದಿದ್ದರೆ ಅದು ಕಲಾವಿದರ ಅಜಾಗ್ರತೆಯಿಂದ ಬಂದಿರಬಹುದು. ಇದರ ಸತ್ಯಾಸತ್ಯತೆಯನ್ನು ತಿಳಿಯಬೇಕಾದರೆ ಪ್ರಸಂಗವನ್ನು ಖುದ್ದು ಪರಿಶೀಲಿಸಬಹುದು" ಎಂದು ಪತ್ರಿಕೆಯಲ್ಲಿಯೇ ಪ್ರಕಟಣೆ ಕೊಟ್ಟೆ. ಅದರೊಂದಿಗೆ ಆ ಪ್ರಕರಣ ಕೊನೆಗೊಂಡಿತು. ಈ ಪ್ರಸಂಗವನ್ನು ಆಗಿನ ರಾಜ್ಯದ ಆರ್ಥಿಕ ಮಂತ್ರಿಗಳಾದ

ವೀರಪ್ಪ ಮೊೖಲಿಯವರು ಉದ್ಘಾಟಿಸಿದ ಕಾರಣದಿಂದಲೋ ಏನೋ ಆರ್ಥಿಕವಾಗಿ ಮೇಳಕ್ಕೆ ಲಾಭವೇ ಆಗಿತ್ತು. ಅದರೊಂದಿಗೆ ಪ್ರಸಂಗಕ್ಕೂ ಒಳ್ಳೆಯ ಹೆಸರು ಬಂದಿತ್ತು.

ಮುಂದೆ 1–2 ವರ್ಷ ಬೇರೆ ಬೇರೆ ಕಾರಣಗಳಿಂದ ಪ್ರಸಂಗ ರಚನೆ ಮಾಡಿಲ್ಲ. ಆ ಮೇಲೆ ಪೆರ್ಡೂರು ಮೇಳದವರಿಗಾಗಿ "ಶೂದ್ರ ತಪಸ್ವಿನಿ" ಎಂಬ ಪ್ರಸಂಗ ರಚಿಸಿದೆ. ಇದು ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಚಿಕವೀರರಾಜೇಂದ್ರ ಎಂಬ ಕಾದಂಬರಿಯ ಪ್ರೇರಣೆಯಿಂದ ಬರೆದುದಾಗಿತ್ತು. ಆರಂಭದಿಂದಲೇ ಈ ಪ್ರಸಂಗ ಯಶಸ್ವಿ ಪ್ರಯೋಗಗಳನ್ನು ನೀಡುತ್ತಿರುವಾಗ ಮರವಂತೆಯ ವಾಸುದೇವ ಭಟ್ ಎನ್ನುವವರು ತನ್ನ ಮಿತ್ರರೊಡಗೂಡಿ "ಇದು ಚಿಕವೀರರಾಜೇಂದ್ರದ ನೊಣಪ್ರತಿ" ಪ್ರಸಂಗಕರ್ತರ ಈ ಕೃತಿ ಚೌರ್ಯವನ್ನು ನಾವು ಖಂಡಿಸುತ್ತೇವೆ. ಪ್ರಸಂಗ ಆಡುವಾಗ ಮಾಸ್ತಿ ವಿರಚಿತವೆಂದು ಕರಪತ್ರದಲ್ಲಿ ಪ್ರಕಟಿಸಬೇಕು. ತಪ್ಪಿದಲ್ಲಿ ಪ್ರಸಂಗಕರ್ತರ ವಿರುದ್ಧ ದಾವೆ ಹೂಡಲಾಗುವುದು" ಎಂದು ಪತ್ರಿಕೆಯಲ್ಲಿ ಪ್ರಕಟಣೆ ನೀಡಿದರು. ಅದಕ್ಕೆ ನಾನು ಸಮಂಜಸವಾದ ಉತ್ತರವನ್ನು ಪತ್ರಿಕೆಯ ಮೂಲಕವೇ ನೀಡಿದೆ. ಮುಂದೆ ಟೀಕೆ – ಉತ್ತರ ಹೀಗೆ ಕೆಲವು ದಿನಗಳವರೆಗೆ ಮುಂದುವರಿಯಿತು. ಕೊನೆಗೆ ಮುಂದೊಂದು ದಿನ ಯುವ ಪ್ರಸಂಗಕರ್ತೃರಾದ ಯಕ್ಷಾನಂದ ಕುತ್ಪಾಡಿಯವರು ನನ್ನ ಪರವಾಗಿ ಸಮರ್ಪಕ ಕಾರಣ ನೀಡಿ "ಪ್ರಸಂಗ ಕರ್ತೃರ ಯಾವ ತಪ್ಪೂ ಇದರಲ್ಲಿ ಕಾಣುವುದಿಲ್ಲ. ಟೀಕೆ ಮಾಡುವವರಿಗೆ ನೊಣಪ್ರತಿ ಅರ್ಥ ತಿಳಿದಿಲ್ಲ. ಕಥೆಯಲ್ಲಿ ಸ್ವಲ್ಪಮಟ್ಟಿನ ಹೋಲಿಕೆಯ ಹೊರತಾಗಿ ಉಳಿದಂತೆ ಎಲ್ಲವೂ ಸ್ವತಂತ್ರ ರಚನೆಯಾಗಿದೆ. ಇದು ನೂರಕ್ಕೆ ನೂರು ಕಂದಾವರದ ಕೃತಿಯಲ್ಲದೆ ಮಾಸ್ತಿಯವರದ್ದಲ್ಲ" ಎಂದು ಪತ್ರಿಕೆಯಲ್ಲಿ ಉತ್ತರ ನೀಡಿದರು. ಅಲ್ಲಿಗೆ ಆ ಪ್ರಕರಣ ತಣ್ಣಗಾಯಿತು. ಆದರೆ ಈ ಕಾರಣದಿಂದಾಗಿ ಪ್ರಸಂಗಕ್ಕೆ ತುಂಬಾ ಪ್ರಚಾರ ಸಿಕ್ಕಂತಾಗಿ ಗಲ್ಲಾ ಪೆಟ್ಟಿಗೆ ತುಂಬಿದಂತಾಯ್ತು. ಅದರ ಕಣಿ ಪದ್ಯದಿಂದಾಗಿ ಧಾರೇಶ್ವರರ ಹಾಡುಗಾರಿಕೆ ಜನಪ್ರಿಯವಾಯಿತು.

ಮುಂದೆ ಪೆರ್ಡೂರು ಮೇಳದವರಿಗಾಗಿ ವಧು–ಮಾಧವಿ, ಮಂತ್ರಮಾಣಿಕ್ಯ, ನಾಗನಂದನೆ, ಚಾರುಚಂದ್ರಿಕೆ, ತ್ಯಾಗತಪಸ್ವಿ, ಸಮರ ಸಂಧಾನ, ವಿಜಯಕೇಸರಿ, ಪುಷ್ಪಾಂಜಲಿ, ಗಿರಿಕನ್ಯೆ ಎಂಬ ಪ್ರಸಂಗಗಳನ್ನು ರಚಿಸಲಾಯಿತು. ಇವುಗಳಲ್ಲಿ ಸಮರ–ಸಂಧಾನ ಒಂದು ಬಿಟ್ಟು ಉಳಿದೆಲ್ಲವುಗಳು ಯಶಸ್ವಿ ಪ್ರಸಂಗಗಳೆನಿಸಿದುವು.

ಈ ಮಧ್ಯೆ ಮೂಲ್ಕಿ ಮೇಳದವರಿಗಾಗಿ ಸೀತಾಪಾರಮ್ಯ ಎಂಬ ಪ್ರಸಂಗವನ್ನೂ ಗೋಳಿಗರಡಿ ಮೇಳದವರಿಗಾಗಿ ರಾಧೇಯ ಹಾಗೂ ಅಮೃತವರ್ಷಿಣಿ ಪ್ರಸಂಗವನ್ನೂ ಬರೆದು ಕೊಟ್ಟೆ. ಹೊಸನಗರ ಶ್ರೀ ರಾಘವೇಂದ್ರ ಸ್ವಾಮೀಜಿಯವರ ಅಪೇಕ್ಷೆಯಂತೆ ನಳ-ದಮಯಂತಿ ಎನ್ನುವ ಪ್ರಸಂಗ ಹೊಸತಾಗಿ ರಚಿಸಲಾಯಿತು. ರೇಡಿಯೋ ಪ್ರಸಾರಕ್ಕಾಗಿ ಗಂಗಾಶಾಪ ಹಾಗೂ ವಿಡಿಯೋ ಮುದ್ರಣಕ್ಕಾಗಿ ಯೋಗ ಗುರು ಪತಂಜಲಿ ಪ್ರಸಂಗ ಬರೆದುಕೊಟ್ಟೆ.

ಕಾಳಿಂಗ ನಾವಡರ ಅಪೇಕ್ಷೆಯಂತೆ ವಸುವರಾಂಗಿ ಎಂಬ ಪೌರಾಣಿಕ ಪ್ರಸಂಗ ಬರೆದುಕೊಟ್ಟೆ. ಇದು ನಾವಡರು ಆಡಿಸಿದ ನನ್ನ ಕೊನೆಯ ಪ್ರಸಂಗ. ಅವರ ನಿಧನಾನಂತರ ಸಾಲಿಗ್ರಾಮ ಮೇಳದವರಿಗಾಗಿ ಸಾಧ್ವಿಸುನಂದೆ ಎಂಬ ಪ್ರಸಂಗ ರಚಿಸಿದೆ.

ಮಿತ್ರರಾದ ವಾಸುದೇವ ಸಾಮಗರು ಹೇಳುವಂತೆ ಹೊಸಸೀಸೆಯಲ್ಲಿ ಹಳೆ ಮದ್ಯ ಎಂಬತ್ತಿರುವ ಭೀಷ್ಮನು ತಂದೆಯಿಂದ ಪಡೆದ ಇಚ್ಛಾಮರಣ ವರಕ್ಕೆ ಸಂಬಂಧಿಸಿದಂತೆ "ಇಚ್ಛಾಮರಣಿ ಭೀಷ್ಮ" ಎಂಬ ಪ್ರಸಂಗವನ್ನು ಹೊಸರೂಪದಲ್ಲಿ ರಚಿಸಿ ಕೊಟ್ಟೆ. ಇದು ಪ್ರಯೋಗಕ್ಕೆ ಇನ್ನು ಬರಬೇಕಷ್ಟೇ.

ಮಹಿಮಾ - ಮಾಧವ ಎಂಬ ಚಾರಿತ್ರಿಕ ಕಥಾವಸ್ತುವಿನ ಒಂದು ಪ್ರಸಂಗ ಮಿತ್ರರ ಬೇಡಿಕೆಯಂತೆ ಬರೆದು ಕೊಟ್ಟಿದ್ದೆ. ಅದು ಕೂಡಾ ಇನ್ನೂ ರಂಗಕ್ಕೆ ಬರಬೇಕಷ್ಟೆ.

ನಾನು ಇತ್ತೀಚೆಗೆ ಬರೆದ ಪ್ರಸಂಗವೆಂದರೆ ಮಾತೃದೇವೋಭವ. ಇದು ನನ್ನ ಮಹತ್ವಾಕಾಂಕ್ಷೆಯ ಪ್ರಸಂಗವಾಗಿತ್ತು. ಆದರೆ ಓರ್ವ ಪ್ರಮುಖ ವೇಷಧಾರಿಯು ತನ್ನ ಸ್ವಭಾವಕ್ಕೆ ಹೊಂದಿಕೆಯಾಗದ ಪಾತ್ರವೆಂದೋ, ಪಾತ್ರಕ್ಕೆ ಕೆಲಸ ವಿಪರೀತವಾಯಿತೆಂದೂ ನಿರ್ವಹಣೆಯಲ್ಲಿ ಅಸಡ್ಡೆ ತೋರಿದ. ಆ ಪಾತ್ರವು ಪ್ರಸಂಗದ ಮುಖ್ಯ ಪಾತ್ರವಾದುದರಿಂದ ಪ್ರಸಂಗ ಯಶಸ್ಸು ಕಾಣದೆ ಸ್ಥಗಿತಗೊಂಡಿತು. ಆದರೆ ಮುಂದೆ ಬಯಲಾಟ ಮೇಳದವರು ಅದನ್ನು ಯಶಸ್ವಿಗೊಳಿಸಿದ್ದರಿಂದ ತುಸು ಸಮಾಧಾನ ಪಡುವಂತಾಯಿತು.

ನನ್ನ ಎಲ್ಲಾ ಪ್ರಸಂಗಗಳನ್ನು ಬಡಗುತಿಟ್ಟಿನ ಹೆಚ್ಚಿನ ಮೇಳದವರು ಆಡಿದ್ದಾರೆ. ಈಗಲೂ ಆಡುತ್ತಿದ್ದಾರೆ. ವಸುವರಾಂಗಿ ಮತ್ತು ವಧು-ಮಾಧವಿಯನ್ನು ಧರ್ಮಸ್ಥಳ ಮೇಳದವರೂ ಶ್ರೀದೇವಿ ಬನಶಂಕರಿ ಮತ್ತು ವಧುಮಾಧವಿ ಕಟೀಲು ಮೇಳದವರೂ ಆಡುತಿದ್ದಾರೆ.

ಈ ಎಲ್ಲಾ ರಚನೆಗಳೊಂದಿಗೆ ಕೆಲವು ಕ್ಷೇತ್ರ ಮಹಾತ್ಮೆ ಬರೆದು ಕೊಡುವಂತೆ ಸ್ಥಳವಂದಿಗರು ಕೇಳಿಕೊಂಡಂತೆ ಪುರಿ, ಹರಿಹಳ್ಳಿ ಆದಿ ಚುಂಚನಗಿರಿ, ರಕ್ತೇಶ್ವರಿ, ಅಮೃತೇಶ್ವರಿ, ಗೋಳಿಗರಡಿ, ಶಿರಡಿ, ಬಾರಾಳಿ ಕ್ಷೇತ್ರ ಮಹಾತ್ಮೆಗಳನ್ನು ರಚಿಸಿ ಕೊಟ್ಟೆ. ಇದುವರೆಗೆ ಒಟ್ಟು 33 ಪ್ರಸಂಗಗಳ ರಚನೆ ಆದಂತಾಗಿದೆ. ಇವುಗಳಲ್ಲಿ ಚೆಲುವೆ ಚಿತ್ರಾವತಿ, ಶ್ರೀದೇವಿ ಬನಶಂಕರಿ, ರತಿರೇಖಾ, ನಾಗನಂದನೆ, ಶೂದ್ರ ತಪಸ್ವಿನಿ, ವಧೂ ಮಾಧವಿ ಅತಿ ಹೆಚ್ಚು ಜನಪ್ರಿಯತೆಗಳಿಸಿದ ಪ್ರಸಂಗಳೆನಿಸಿವೆ.

5. ಸಾಹಿತ್ಯ ವಲಯದಲ್ಲಿ

ಪ್ರಸಂಗ ಮತ್ತು ನಾಟಕಗಳೂ ಸಾಹಿತ್ಯ ಸಂಬಂಧಿಸಿದವುಗಳೇ ಅವುಗಳ ವಿವರವನ್ನು ಹಿಂದಿನ ಅಧ್ಯಾಯಗಳಲ್ಲಿ ತಿಳಿಸಿದ್ದಾಗಿದೆ. ನಾಟಕಗಳು ವಿದ್ಯಾರ್ಥಿಗಳಿಂದ ರಂಗದಲ್ಲಿ ಯಶಸ್ಸನ್ನು ಕಂಡಿವೆಯಾದರೂ ಯಾವುದನ್ನೂ ಮುದ್ರಿಸಲು ಸಾಧ್ಯವಾಗಲಿಲ್ಲ. ಆದರೆ ಪ್ರಸಂಗಗಳಲ್ಲಿ ಶ್ರೀದೇವಿ ಬನಶಂಕರಿ ಎಂಬ ಪ್ರಸಂಗವನ್ನು ಐರೋಡಿ ಸದಾನಂದ ಹೆಬ್ಬಾರರ ಆಶಯದಂತೆ ಎಂ.ಎಂ. ಹೆಗ್ಡೆಯವರ ಸಹಕಾರದಿಂದ ಅಚ್ಚು ಹಾಕಿಸಿದೆ. ಇದು ಮುದ್ರಿತವಾದ ನನ್ನ ಪ್ರಥಮ ಪ್ರಸಂಗ ಮುಂದೆ ಉಪ್ಪುಂದ ಮಾದಯ್ಯ ಶೆಟ್ರ ಮನೆಯವರು ತಮ್ಮ ಧಾರ್ಮಿಕ ಪ್ರತಿಷ್ಠಾನದ ವತಿಯಿಂದ ನನ್ನ ಹತ್ತು ಪ್ರಸಂಗಗಳ ಸಂಕಲನ "ದಶಮಿ" ಯನ್ನು ಪ್ರಕಾಶನಗೊಳಿಸಿದರು. ಅವರಿಗೆ ಈ ಮೂಲಕ ನನ್ನ ಕೃತಜ್ಞತೆಗಳನ್ನು ಸಲ್ಲಿಸುತಿದ್ದೇನೆ.

ನನ್ನ ಇತರ ಸಾಹಿತ್ಯ ಪರ ಕೆಲಸಗಳೆಂದರೆ ಕಥೆ, ಕವನ, ಅಭಿನಯಗೀತೆಗಳು ಕೆಲವೊಂದು ಕಥೆ, ಕವನ, ನಗೆಹನಿಗಳನ್ನು ಆಗ ಪ್ರಚಾರದಲ್ಲಿದ್ದ ಪ್ರಜಾಮತ, ನವಯುಗ ಪತ್ರಿಕೆಗಳಿಗೆ ಕಳುಹಿಸಿದ್ದೆ. ಅವುಗಳಲ್ಲಿ ಕೆಲವು ಕಸದಬುಟ್ಟಿಗೆ ಸೇರಿತಾದರೂ ಕೆಲವೊಂದು ಪತ್ರಿಕೆಯಲ್ಲಿ ಪ್ರಕಟಗೊಂಡುವು. ಪ್ರಕಟಗೊಂಡ ಕಥೆಗಳಲ್ಲಿ ನನಗೆ ವ್ಯಥೆಯನ್ನುಂಟು ಮಾಡಿದ ಕಥಾ ಪ್ರಸಂಗವೊಂದನ್ನು ನಿಮ್ಮೊಡನೆ ಹಂಚಿಕೊಳ್ಳ ಬಯಸುತ್ತೇನೆ.

ನಾನು ಪ್ರಾಥಮಿಕ ಶಾಲೆಗೆ ಹೋಗುತ್ತಿರುವಾಗ ಮಧ್ಯ ದಾರಿಯಲ್ಲಿ ಸಿಗುವ ಮನೆಯ ಹುಡುಗನೋರ್ವ ನಮ್ಮೊಂದಿಗೆ ಶಾಲೆಗೆ ಬರುತಿದ್ದ. ಆಗಾಗ ಅವನ ಮನೆಗೆ ಹೋಗಿ ನೀರು ಕುಡಿದು ಬಾಯಾರಿಕೆ ಹಿಂಗಿಸಿಕೊಳ್ಳುತಿದ್ದೆ. ನಾನು ಅಧ್ಯಾಪಕ ವೃತ್ತಿಗೆ ಸೇರಿದ ಸಮಯ (ಕಥೆಗಾರನಾದ ಸಮಯ) ಆ ಮನೆಯಲ್ಲಿ ನಡೆದ ಒಂದು ದುರಂತವನ್ನು ಯಾರಿಂದಲೋ ಕೇಳಿ ತಿಳಿದೆ. ಘಟನೆ ಇಷ್ಟೇ. ಆ ಮನೆಯ ಒಬ್ಬಳು ಹುಡುಗಿ ಪಕ್ಕದ ಒಂದು ಶ್ರೀಮಂತರ ಮನೆಯ ಹುಡುಗನ ಪ್ರೇಮ ಪಾಶಕ್ಕೆ ಸಿಲುಕಿ ಗರ್ಭವತಿಯಾದಳು. ತಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳಲೋಸುಗ ಆಕೆಯನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಹೆರಿಗೆಯಾದ ಮೇಲೆ ಮಗುವನ್ನು ಅನಾಥಶ್ರಮಕ್ಕೆ ಕೊಡುವುದೆಂದು

ನಿಶ್ಚಯಿಸಿ ಬೆಂಗಳೂರಿಗೆ ಕರೆದುಕೊಂಡು ಹೋದರು. ಆದರೆ ಮಗುವನ್ನು ಅನಾಥಾಶ್ರಮಕ್ಕೆ ಕೊಡಲು ಸುತಾರಾಂ ಹುಡುಗಿ ಒಪ್ಪದಿರುವಾಗ ಕೊನೆಗೆ ಆಕೆಗೆ ಕೊಡುವ ಔಷದಕ್ಕೋ, ತಿನ್ನುವ ಆಹಾರಕ್ಕೊ ವಿಷವಿಕ್ಕಿಕೊಂದರು. ಮಗುವನ್ನು ಅನಾಥಾಶ್ರಮಕ್ಕೆ ಕೊಟ್ಟು ಕೈ ತೊಳೆದು ಕೊಂಡರು. ಈ ಘಟನೆಯನ್ನು ಅವರ ಹತ್ತಿರದ ಮನೆಯವರು ನನಗೆ ತಿಳಿಸಿದರು. ನಾನು ಶಾಲೆಗೆ ಬರುವಾಗ ಹಲವಾರು ಬಾರಿ ಆ ಹುಡುಗಿಯ ಕೈಯಿಂದ ನೀರು ತರಿಸಿ ಕುಡಿದಿದ್ದೆ. ವಿಷಯ ಕೇಳಿ ತುಂಬಾ ನೊಂದೆ. ಮಾತ್ರವಲ್ಲ ಅದೇ ಘಟನೆಯನ್ನು "ಪ್ರೇತ ಹೇಳಿದ ಕಥೆ" ಎಂಬ ತಲೆ ಬರಹದಲ್ಲಿ ಕಥೆ ಬರೆದು ಪ್ರಜಾಮತ ಪತ್ರಿಕೆಗೆ ಕಳುಹಿಸಿದೆ. ಅದು ಪ್ರಕಟವಾಗಿ, ಓದಿದ ಕೆಲವು ನನ್ನ ಮಿತ್ರರು ಕಥೆಯನ್ನು ಮೆಚ್ಚಿ ಹೊಗಳಿದಾಗ ಸಂತೋಷದಿಂದ ಉಬ್ಬಿಹೋದೆ. ಆದರೆ ಕೆಲವು ದಿನಗಳ ಅನಂತರ ನನಗೆ ಬಂದ ಅನಾಮಿಕ ಪತ್ರವೊಂದು ನನ್ನನ್ನು ದಂಗು ಪಡಿಸಿತು. ಅದರ ಸಾರಾಂಶ ಹೀಗಿತ್ತು. "ನೀವು ಪ್ರಕಟಿಸಿದ ಕಥೆಯನ್ನು ಪತ್ರಿಕೆಯಲ್ಲಿ ಓದಿದೆವು. ಇದರಿಂದ ತಾನೊಬ್ಬ ಕಥೆಗಾರನಾದೆನೆಂದು ನೀವು ಹೆಮ್ಮೆ ಪಟ್ಟಿರಬಹುದು. ಆದರೆ ಇದರಿಂದ ಮರ್ಯಾದಸ್ಥರ ಮಾನಹರಣವಾಗುತ್ತಿದೆ ಎಂಬ ಪರಿಜ್ಞಾನ ನಿಮಗಿಲ್ಲದಿರುವುದನ್ನು ತಿಳಿದು ಬೇಸರಗೊಂಡಿದ್ದೇವೆ. ಇನ್ನು ಮುಂದೆ ಇಂಥಾ ಕಥೆ ಬರೆದು ತೊಂದರೆ ತಂದುಕೊಳ್ಳಬೇಡಿ" ಎಂಬ ಎಚ್ಚರಿಕೆಯ ಸಂದೇಶವಿತ್ತು. ಹೇಗಿದೆ ಕಥೆಗಾರನಿಗೊದಗಿದ ವ್ಯಥೆಯ ಪ್ರಕರಣ?.

ಮಂದಾರ್ತಿ ದೇವಸ್ಥಾನದವರು ಹಾರಾಡಿ ರಾಮ ಗಾಣಿಗರ ಜನ್ಮ ಶತಾಬ್ದಿಯ ಅಂಗವಾಗಿ " ಮಂದಾರ್ತಿ ಮೇಳದಲ್ಲಿ ಹಾರಾಡಿ ರಾಮ ಗಾಣಿಗರು " ಎಂಬ ಸ್ಮಾರಕ ಗ್ರಂಥ ರಚನೆಗೆ ನನ್ನನ್ನು ಪ್ರಧಾನ ಸಂಪಾದಕನನ್ನಾಗಿ ಆರಿಸಿದರು. ಅವರ ಆಶಯದಂತೆ ರಾಮ ಗಾಣಿಗರ ಕೆಲವು ಮಂದಿ ಅವರ ಒಡನಾಡಿಗಳನ್ನು ಅಭಿಮಾನಿ ಮಿತ್ರರನ್ನೂ ಸಂದರ್ಶಿಸಿ ಹಾಗೂ ಅವರು ಕುರಿತಾಗಿ ಈ ಹಿಂದೆ ಪ್ರಕಟವಾದ ಕೆಲವು ವಿಚಾರಗಳನ್ನು ಸಂಗ್ರಹಿಸಿ ಒಂದು ಉತ್ತಮ ಸ್ಮರಣ ಸಂಚಿಕೆ ತಯಾರಿಸಿಕೊಟ್ಟೆ. ಬಳಿಕ ಡಾ। ವೈ. ಚಂದ್ರಶೇಖರ ಶೆಟ್ರ ಕುರಿತಾಗಿ ಹೊರತಂದ "ಪೂರ್ಣಚಂದ್ರ" ಎಂಬ ಸ್ಮಾರಕ ಗ್ರಂಥಕ್ಕೆ ಪ್ರಧಾನ ಸಂಪಾದಕನಾಗಿ ಕಾರ್ಯನಿರ್ವಹಿಸಿದೆ. ಅಲ್ಲದೆ ಕಾಂತಾವರದ ಕನ್ನಡ ಸಂಘದವರು ಪ್ರಕಟಿಸಿದ ನಾಡಿಗೆ ನಮಸ್ಕಾರ ಮಾಲಿಕೆಯಲ್ಲಿ "ಯಕ್ಷ ಗಂಧರ್ವ" ಹಾರಾಡಿ ರಾಮ ಗಾಣಿಗ ಎಂಬ ಅವನ ಜೀವನ ಚರಿತ್ರೆಯನ್ನು ಬರೆದುಕೊಟ್ಟೆ, ಹೀಗೆ ಎರಡು ಸಂಪಾದಿತ ಕೃತಿಗಳು ಒಂದು ಜೀವನ ಚರಿತ್ರೆ ಬರೆಯುವ ಅವಕಾಶ ನನಗೆ ದೊರೆತಿತ್ತು.

ನನ್ನ ಅಜ್ಜ ಚಿತ್ತೂರು ಕೃಷ್ಣಯ್ಯ ಶೆಟ್ರು ಉತ್ತಮ ಪ್ರವಚನಗಾರರು. ವರ್ಷಂಪ್ರತಿ ಬಸ್ರೂರು ಹನುಮಂತ ದೇವಸ್ಥಾನದಲ್ಲಿ ಅವರ ಪ್ರವಚನ ನಡೆಯುತಿತ್ತು. ಕೆಲವೊಮ್ಮೆ ಅವರೊಂದಿಗೆ ಹೋಗುತಿದ್ದ ನಾನು ಗಮಕಿಯಾಗಿ ವಾಚನ ಮಾಡುತಿದ್ದೆ. ಕೆಲವು ಬಾರಿ ಪ್ರವಚನ ಮಾಡುವ ಅವಕಾಶವೂ ದೊರೆಯುತಿತ್ತು. ಮುಂದೆ ಗಾಂಧಿ ರಾಮಣ್ಣ ಶೆಟ್ರ, ಹೊಸಮಠ ಕೃಷ್ಣಯ್ಯ ಶೆಟ್ರ ವಾಚನಕ್ಕೆ ಪ್ರವಚನಕಾರನಾಗಿ ಭಾಗವಹಿಸಿದೆ. ಕುಮಾರ ಶಂಕರನಾರಾಯಣ ಇವರ ಪ್ರವಚನಕ್ಕೆ ಗಮಕಿಯಾಗಿಯೂ ಭಾಗವಹಿಸಿದೆ.

ಉಪ್ಪುಂದ ಚಂದ್ರಶೇಖರ ಹೊಳ್ಳರು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕುಂದಾಪುರ ತಾಲೂಕು ಘಟಕದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದರು. 4 ವರ್ಷಗಳ ಕಾಲ ಗ್ರಾಮಾಂತರ ಪ್ರದೇಶಗಳಲ್ಲಿ ಹಲವಾರು ಸಾಹಿತ್ಯ ಪರ ಚಟುವಟಿಕೆಗಳನ್ನು ನಡೆಸಿ ಅಲ್ಲಿಯ ಜನರಲ್ಲಿ ಸಾಹಿತ್ಯ ಪ್ರೇಮ ಉಂಟಾಗುವಂತೆ ಪ್ರಯತ್ನಿಸಿದೆ. ನಾನು ಅನಾರೋಗ್ಯ ಸ್ಥಿತಿಯಲ್ಲಿರುವಾಗಲೂ ಕೂಡಾ ಹೊಳ್ಳರ ಪ್ರೋತ್ಸಾಹ ಹಾಗೂ ಸಹಕಾರದಿಂದ ನನ್ನ ಕೆಲಸಗಳು ಸಾಂಗವಾಗಿ ನೆರವೇರಿದುವು. ಹೊಳ್ಳರು ಮಾಡಿದ ಉಪಕಾರಕ್ಕೆ ನಾನೆಷ್ಟು ಕೃತಜ್ಞತೆ ಸಲ್ಲಿಸಿದರು ಕೂಡಾ ಕಡಿಮೆಯೇ ಸರಿ.

"ಆಸೆಗೊಂದು ಎಲ್ಲೆ ಎಲ್ಲಿದೆ" ಎಂದು ಒಂದು ಚಲಚ್ಚಿತ್ರ ಗೀತೆ ಕೇಳಿದ ನೆನಪು ಹೌದು. ಮನುಷ್ಯನ ಆಸೆಗೆ ಮಿತಿಯಿಲ್ಲ. ಅಂತೆಯೇ ನನಗೂ ಹಲವಾರು ಆಸೆಯಿದೆ. ಆದರೆ ಅವುಗಳನ್ನು ಕಾರ್ಯಗತಗೊಳಿಸುವುದು ಸುಲಭದ ಕೆಲಸವಲ್ಲ. ಕೊನೆಯ ಪಕ್ಷ ಆಟಕ್ಕೂ-ಕೂಟಕ್ಕೂ ಸೂಕ್ತವಾದ ಒಂದು ಪ್ರಸಂಗ ಯುವಕರು ಆಡಬಹುದಾದ ಒಂದು ಸಾಮಾಜಿಕ ನಾಟಕ, ಗ್ರಾಮಾಂತರ ಬದುಕನ್ನು ಪ್ರತಿಬಿಂಬಿಸುವ ಒಂದು ಕಿರು ಕಾದಂಬರಿ ಬರೆಯಬೇಕೆಂಬ ಬಯಕೆಯಿದೆ. ಶ್ರೀ ದೇವರು ಆಯುರಾರೋಗ್ಯ ಚೈತನ್ಯ ನೀಡಿ ಈ ಆಸೆ ಈಡೇರಿದರೆ ನಾನು ಧನ್ಯ.

೬. ಸಂಸಾರ ಶರಧಿಯಲ್ಲಿ

ಹಟ್ಟಿಯಂಗಡಿ ರಾಮ ಭಟ್ಟರು ಅತಿಕಾಯ ಕಾಳಗ ಪ್ರಸಂಗದಲ್ಲಿ ಸಂಸಾರವನ್ನು ಶರಧಿಗೆ ಹೋಲಿಸಿದರು. ಪಾರವಿಲ್ಲದ ಶರಧಿಯಲ್ಲಿ ಅಪಾಯಕಾರಿ ಅಲೆಗಳು ಕ್ರೂರ ಜಲಚರಗಳು ಇರುವುದರೊಂದಿಗೆ ಅನರ್ಘ್ಯ ರತ್ನಗಳೂ ಇವೆ. ಅಂತೆಯೇ ಸಂಸಾರದಲ್ಲಿ ಸುಖದ ಸೆಲೆ ಇರುವಂತೆ ದುಃಖದ ಅಲೆಗಳೂ ಇವೆ. ಅವರವರ ಪ್ರಾರಬ್ಧ ಕರ್ಮಕ್ಕನುಸಾರವಾಗಿ ಅವುಗಳ ಪ್ರಮಾಣ ಹೆಚ್ಚು ಕಡಿಮೆಯಾಗುತ್ತವೆ. ನಾನಂತೂ ಸಂಸಾರದಲ್ಲಿ ಸಾಕಷ್ಟು ನೋವು, ನುರಿಗಳನ್ನು ಅನುಭವಿಸಿದವನು. ಅವುಗಳೆಡೆಯಲ್ಲಿ ಕಿಂಚಿತ್ ಸುಖವನ್ನೂ ಕಂಡಿದ್ದೇನೆ.

ನಾನು ಅಧ್ಯಾಪಕ ವೃತ್ತಿಗೆ ಸೇರುವಾಗ ನನ್ನ ತಂದೆಯವರ ಆರ್ಥಿಕ ಸ್ಥಿತಿ ಸಾಕಷ್ಟು ಹದಗೆಟ್ಟಿತ್ತು. ಮನೆಯಲ್ಲಿ ಆಸ್ತಿ ಪಾಲಾಗಿ ಅವರೇ ಕಟ್ಟಿಸಿದ ಮನೆ ಅನ್ಯರ ಪಾಲಾಗಿತ್ತು. ದೊರೆತ ಅಲ್ಪ ಮೊತ್ತದ ಹಣದಿಂದ ತಾತ್ಕಾಲಿಕವಾಗಿ ಒಂದು ಚಿಕ್ಕ ಮನೆ ಕಟ್ಟಿಕೊಳ್ಳಬೇಕಾಗಿತ್ತು. ದೊಡ್ಡಮನೆಯ ಯಜಮಾನರಾಗಿದ್ದವರು ಚಿಕ್ಕ ಹಿಡುವಳಿಯ ಒಡೆಯರಾದರು. ಅದೇ ಸಮಯದಲ್ಲಿ ನಡೆದ ಹಿರಿಯ ಮಗಳ ಮದುವೆಗೆ ಕೈಯಲ್ಲಿರುವ ಹಣ ಸಾಲದಾಗಿ ಸಾಲದ ಹೊರೆ ಹೆಗಲೇರಿತ್ತು. ಹೆಂಡತಿಯ ವಾತ ಕಾಯಿಲೆಗೆ ದಿನ ನಿತ್ಯದ ಔಷದೋಪಚಾರಕ್ಕೆ ಸಾಕಷ್ಟು ಹಣವ್ಯಯವಾಗಿತ್ತು. ಈ ಎಲ್ಲಾ ಕಾರಣಗಳಿಂದ ಸೋತು ಸುಣ್ಣವಾಗಿದ್ದ ತಂದೆಗೆ ದುಡಿವ ಮಗನಾಗಿ ಹೆಗಲಿಗೆ ಹೆಗಲು ಕೊಡಬೇಕಾದುದು ನನ್ನ ಕರ್ತವ್ಯವಾಗಿತ್ತು. ಹೀಗಾಗಿ ಇಪ್ಪತ್ತರ ಹರೆಯದಲ್ಲೇ ಸಂಸಾರ ನಿರ್ವಹಣೆಯ ಪಾಲುದಾರನಾದೆ.

ಕಷ್ಟಗಳ ಕೋಟಲೆಗಳಲ್ಲೆ ಒಂದೆರಡು ವರ್ಷ ಕಳೆವಷ್ಟರಲ್ಲಿ ನನ್ನ ತವರು ಮನೆಯಾದ ಕಂದಾವರದಲ್ಲೂ ಆಸ್ತಿ ಪಾಲಾಯಿತು. ಕರ್ಕಿಯಲ್ಲಿ ಸರಿಯಾದ ಮನೆ ಇಲ್ಲದುದರಿಂದ ಅಲ್ಲಿಯ ಮನೆಯನ್ನು ಎರಡು ಕಡೆಯವರು ವಹಿಸಿಕೊಂಡು ಉಳಿದೆರಡು ಕಡೆಯುವರಿಗೆ ಆ ಬಾಬ್ತು ಹಣಕೊಡಬೇಕಾಯ್ತು. ಮನೆ ಇಬ್ಭಾಗವಾದುದರಿಂದ ಹೊಸದಾಗಿ ಅಡುಗೆ ಕೋಣೆ ಸ್ನಾನದ ಕೋಣೆ, ಹೊಸ ಬಾವಿ ಮಾಡಿಕೊಳ್ಳಬೇಕಾಯಿತು. ಹೊಸದಾಗಿ ವ್ಯವಸಾಯ ಆರಂಭಿಸಬೇಕಾದುದರಿಂದ ಅದಕ್ಕೆ ಬೇಕಾದ ಸಲಕರಣೆಯನ್ನು ಹೊಂದಿಸಿಕೊಳ್ಳಬೇಕಾಯಿತು. ಬಂಧುಗಳ ಹಾಗೂ ಮಿತ್ರರ ಸಹಕಾರದಿಂದ

ಇವುಗಳನ್ನೆಲ್ಲಾ ನಿಭಾಯಿಸಿಕೊಂಡೆ. ಆ ವರ್ಷದ ಸಾಗುವಳಿ ಕಾರ್ಯದಲ್ಲಿ ತಂದೆಯವರು ಹಾಗೂ ಸಹೋದರ ಸಹೋದರಿಯರು ತುಂಬಾ ಕಷ್ಟ ಪಡಬೇಕಾಯಿತು. ಇದೇ ಸಂದರ್ಭದಲ್ಲಿ ನನ್ನ ತಾಯಿಗೆ ಪ್ರಸೂತಿಕಾ ವಾಯು ಉಂಟಾಗಿ ಬುದ್ಧಿಯ ಮೇಲಿನ ಸ್ಥಿಮಿತವನ್ನೇ ಕಳೆದುಕೊಂಡು ಮಂಕಳಂತಾಗಿ ಮೂಲೆ ಸೇರಿದಳು. ಒಂದರ ಮೇಲೆ ಒಂದರಂತೆ ಘಟಿಸಿದ ಸಂಕಷ್ಟಗಳನ್ನು ಎದುರಿಸುತ್ತಾ 3–4 ವರ್ಷ ಉತ್ತರಿಸಿದೆ.

ಯಾವ ಔಷಧೋಪಚಾರಕ್ಕೂ ಬಗ್ಗದ ಅಮ್ಮನ ಕಾಯಿಲೆ ದಿನದಿಂದ ದಿನಕ್ಕೆ ಉಲ್ಬಣಗೊಂಡಿತು ಕೊನೆಕೊನೆಗೆ ಅನ್ನಾಹಾರವನ್ನು ಸರಿಯಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಬುದ್ಧಿ ಸ್ಥಿಮಿತ ಮೊದಲೇ ಕಳೆದುಕೊಂಡಿದ್ದಳು. ಒಂದು ದಿನ ಮಧ್ಯ ರಾತ್ರಿ ಸಮಯ ನೋಡನೋಡುತ್ತಿರುವಂತೆ ಪ್ರಾಣಪಕ್ಷಿ ಹಾರಿಹೋಗಿತ್ತು. ವಿಷಯ ಕೇಳಿದ ಅಕ್ಕಪಕ್ಕದ ಮನೆಯವರು ಬಂದು ಸ್ವಲ್ಪ ಹೊತ್ತು ಕುಳಿತು ಸಮಾಧಾನ ಹೇಳಿ ಮನೆಗೆ ತೆರಳಿದರು. ಹೆಣದ ಬಳಿ ತಮ್ಮಂದಿರನ್ನು ತಂಗಿಯಂದಿರನ್ನು ಕುಳ್ಳಿರಿಸಿಕೊಂಡು ಆ ರಾತ್ರಿ ಕಳೆದೆ. ಆ ರಾತ್ರಿ ತಂದೆಯವರು ಕೂಡಾ ಮನೆಯಲ್ಲಿರಲಿಲ್ಲ. ಸಂಬಂಧಿಕರ ಮನೆಗೆ ಹೋದವರು ಬಂದಿರಲಿಲ್ಲ. ಮರುದಿನ ಬೆಳಿಗ್ಗೆ ಸ್ವಲ್ಪ ದೂರದಲ್ಲಿದ್ದ ಕೊರಗುವಣ್ಣನಿಗೆ ಜನ ಕಳುಹಿಸಿದೆ. ವಿಷಯ ಕೇಳಿದವನೇ ಓಡೋಡಿ ಮನೆಗೆ ಬಂದು ನಮಗೆ ಸಾಂತ್ವನ ಹೇಳಿ, ಅವನೇ ಮುಂದಾಗಿ ನಿಂತು ಅಗ್ನಿ ಸಂಸ್ಕಾರ ಕಾರ್ಯ ಮುಗಿಸಿದ. ಮರುದಿನ ವಿಷಯ ತಿಳಿದು ತಂದೆಯವರು ಬಂದರು. ಅಪರಕ್ರಿಯೆಗೆ ಸಂಬಂಧಿಸಿದ ಉಳಿದ ಕಾರ್ಯಗಳನ್ನು ವಿಧಿವತ್ತಾಗಿ ನೆರವೇರಿಸಿ, ತಂದೆಯೊಂದಿಗೆ ಗೋಕರ್ಣಕ್ಕೆ ಹೋಗಿ ಅಸ್ಥಿ ವಿಸರ್ಜನೆ ಮಾಡಿ, ತಾಯಿಯ ಋಣ ಭಾರ ಕಡಿಮೆ ಮಾಡಿಕೊಂಡೆ. ನನ್ನ ವಿದ್ಯಾಭ್ಯಾಸಕ್ಕೆ ಸಾಕಷ್ಟು ಶ್ರಮಪಟ್ಟು ನನ್ನ ಅಂದ ಚೆಂದವನ್ನು ಕಾಣಬೇಕೆಂದು ಹಂಬಲಿಸಿದ ನನ್ನಮ್ಮ ಕಾಯಿಲೆಯಿಂದ ನರಳಿ, ಕೊನೆಗೆ ಹುಚ್ಚಳಂತಾಗಿ ಕೊನೆಯುಸಿರೆಳೆದು ನಮ್ಮನ್ನು ತಬ್ಬಲಿಗಳನ್ನಾಗಿ ಮಾಡಿ ತೆರಳಿಬಿಟ್ಟಳು. ಈಗಲೂ ಆಕೆಯು ಪಟ್ಟ ಶ್ರಮ ನೋವನ್ನು ನೆನಪಿಸಿಕೊಂಡಾಗ ಕಂಬನಿಯಿಂದ ಕಣ್ಣು ಮಂಜಾಗುತ್ತದೆ.

1965ನೇ ಇಸ್ವಿಯಲ್ಲಿ ಗುಲ್ವಾಡಿ ಪಟೇಲ ಶಿವರಾಮ ಹೆಗ್ಡೆಯವರ ಮಗಳಾದ ದೇವಕಿ ಎಂಬವಳೊಡನೆ ನನ್ನ ವಿವಾಹ ನಡೆಯಿತು. ಮರುವರ್ಷ ನನ್ನ ಎರಡನೆ ತಂಗಿ ಸುಶೀಲಳ ಮದುವೆ ಅಕ್ಕುಂಜೆ ಬಾಲಕೃಷ್ಣ ಶೆಟ್ಟರೊಂದಿಗೆ ಜರಗಿತು. ಅದೇ

ವರ್ಷ ನನ್ನ ಪ್ರಥಮ ಪುತ್ರಿ ಶೈಲಜಾಳ ಜನನವೂ ಆಯಿತು. ತಂಗಿಯ ಮದುವೆಗೆ ಕೈಯಲ್ಲಿದ್ದ ಹಣ ಸಾಲದಾಗಿ ತಂದೆಯ ಕರ್ಕಿಯ ಆಸ್ತಿಯಲ್ಲಿ ಸ್ವಲ್ಪಾಂಶ ಮಾರಬೇಕಾಗಿ ಬಂತು.

ನನ್ನ ತಮ್ಮ ಕರುಣಾಕರ ಎಸ್.ಎಸ್.ಎಲ್.ಸಿ. ಮುಗಿಸಿ ಮುಂದೇನು ಮಾಡಬೇಕೆಂದು ಯೋಚಿಸುತ್ತಿರುವಾಗ ಪತ್ರಿಕೆಯಲ್ಲಿ ಬಂದ ಪ್ರಕಟಣೆಯೊಂದನ್ನು ನೋಡಿ ಕೃಷಿಗೆ ಸಂಬಂಧಿಸಿದ ಕೋರ್ಸು ಮಾಡಲು ಮದ್ರಾಸಿಗೆ ಸೇರಲಿದ. ಅವನ ಆ ಕೋರ್ಸಿಗೆ ಭಾವ ಬಾಲಕೃಷ್ಣ ಶೆಟ್ರು ಧನ ಸಹಾಯ ಮಾಡಿದ್ದರು. ಕೋರ್ಸ್ ಏನೋ ಮುಗಿಸಿ ಮನೆಗೆ ಬಂದ. ಆದರೆ 6 ತಿಂಗಳು ಕಾದರೂ ಫಲಿತಾಂಶ ಬರಲಿಲ್ಲ. ಆ ಮೇಲೆ ತಿಳಿಯಿತು ಅದು ಸರಕಾರದಿಂದ ಅಧಿಕೃತ ಮಂಜೂರು ಪಡೆದ ಸಂಸ್ಥೆ ಅಲ್ಲವೆಂದು. ಆ ಮೇಲೆ ಬೇರೆ ದಾರಿ ಕಾಣದೆ ತುಮಕೂರಿನ ಸಿದ್ಧಗಂಗಾ ಶಿಕ್ಷಕ ತರಬೇತಿ ಶಾಲೆಗೆ ಸೇರಿಸಿ ಬಂದೆ. ತರಬೇತಿ ಪೂರೈಸಿ ಊರಿಗೆ ಬಂದ. ಆದರೆ ಆ ಸಮಯ ಸರಕಾರಿ ಶಾಲೆಯಲ್ಲಿ ಕೆಲಸ ದೊರೆಯುವುದು ಅಷ್ಟೇನೂ ಸುಲಭವಾಗಿರಲಿಲ್ಲ. ಕೊನೆಗೆ ನನ್ನ ಆತ್ಮೀಯ ಮಿತ್ರರಾದ ಬಸ್ರೂರು ಅಪ್ಪಣ್ಣ ಹೆಗ್ಡೆಯವರ ಸಹಾಯದಿಂದ ಬಸ್ರೂರು ವೀರರಾಜೇಂದ್ರ ಹೆಗ್ಡೆಯವರ ಆಡಳಿತದ ಹಿಂದೂ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕನಾಗಿ ಸೇರಿದ. ಅಂತೂ ಒಬ್ಬಳು ತಂಗಿಯ ಮದುವೆ, ತಮ್ಮನಿಗೆ ಉದ್ಯೋಗ ದೊರೆತು ಸ್ವಲ್ಪ ಮಟ್ಟಿನ ನೆಮ್ಮದಿ ಪಡೆವಂತಾಯಿತು. ಆದರೂ ಉಳಿದಿಬ್ಬರು ತಂಗಿಯಂದಿರ ಮದುವೆ ಹಾಗೂ ಇನ್ನೊಬ್ಬ ತಮ್ಮನ ವಿದ್ಯಾಭ್ಯಾಸದ ಹೊಣೆ ಉಳಿದೇ ಇತ್ತು.

1972 ರಲ್ಲಿ ನನ್ನ ಇನ್ನೊಬ್ಬಳು ತಂಗಿ ಪ್ರೇಮಳ ಮದುವೆ ಚಿಟ್ಟೆ ಚಂದ್ರಶೇಖರ ಶೆಟ್ರೊಂದಿಗೆ ನಡೆಯಿತು. ಈ ಮದುವೆಗೆ ತಂದೆಯ ಸ್ವಲ್ಪಾಂಶ ಆಸ್ತಿ ಮಾರಿದ ಹಣದೊಂದಿಗೆ ನಾನು ಮತ್ತು ತಮ್ಮ ಕರುಣಾಕರ ಶೆಟ್ಟಿ ಒಂದಾಗಿ ಉಳಿದ ಹಣ ಒದಗಿಸಿಕೊಂಡು ಲಗ್ನ ಕಾರ್ಯ ಪೂರೈಸಿದೆವು.

ಆ ವರ್ಷದ ಮಳೆಗಾಲದ ಆರಂಭ. ವಿಪರೀತ ಮಳೆ. ಮಳೆಯಲ್ಲೇ ಶಾಲೆಯಿಂದ ಮನೆಗೆ ಹೋದ ನನಗೆ ವಿಪರೀತ ಜ್ವರ ಬಂದು ಮಲಗಿದೆ. 3-4 ದಿನವಾದರೂ ಜ್ವರ ಬಿಡದಾಗ ಡಾಕ್ಟರರು ರಕ್ತ ಪರೀಕ್ಷೆ ಮಾಡಿಸಿ ಅದು ವಿಷಮ ಶೀತ ಜ್ವರವೆಂದು ತಿಳಿಸಿ ಅದಕ್ಕೆ ಬೇಕಾದ ಚಿಕಿತ್ಸೆ ನೀಡಿದರು. ಆ ಸಮಯ ಈಗಿನಂತೆ ಕ್ಷಿಪ್ರದಲ್ಲಿ ಗುಣಹೊಂದುವ ಔಷಧಿ ಬಂದಿರಲಿಲ್ಲ. 3 ವಾರಗಳ ಬಳಿಕ ಜ್ವರ ಬಿಟ್ಟಿತು.

ಸಾಕಷ್ಟು ನಿತ್ರಾಣ. 2-3 ದಿನಗಳ ಬಳಿಕ ಸ್ನಾನ ಮಾಡಿ ಶಾಲೆಗೆ ಹಾಜರಾದೆ. ಮೂರೋ ನಾಲ್ಕೋ ದಿನ ಶಾಲೆಗೆ ಹೋಗಿ ಬಂದಿರಬಹುದು. ಪುನಃ ಜ್ವರ ಆರಂಭವಾಯಿತು. ಅದೇ ವಿಷಮ ಶೀತ ಜ್ವರ ಮರುಕಳಿಸಿದೆ. ಮಾಮೂಲಿನಂತೆ ಪುನಃ ಅದೇ ಔಷಧ, ಈ ಬಾರಿ ಕೂಡಾ ಜ್ವರ ಬಿಡಲು 3 ವಾರ ಬೇಕಾಯಿತು. ಜ್ವರವೇನೋ ಬಿಟ್ಟಿತು. ಆದರೆ ಅಸಾಧ್ಯ ನಿತ್ರಾಣ. ಎದ್ದು ನಿಲ್ಲಲು ಕೂಡಾ ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿತ್ತು.

2ನೇ ಬಾರಿ ಜ್ವರ ಬಂದು ಮಲಗಿದ ವಿಚಾರ, ಅಸಾಧ್ಯ ನಿತ್ರಾಣದಿಂದ ಕಂಗೆಟ್ಟು ಮನೆಯಲ್ಲಿರುವ ವಿಚಾರ ತಿಳಿದ ನನ್ನ ವಿದ್ಯಾರ್ಥಿಗಳು "ನಮ್ಮ ಗುರುಗಳನ್ನು ನಾವು ನೋಡಬೇಕು ದಯವಿಟ್ಟು ಕರೆದುಕೊಂಡು ಹೋಗಿ" ಎಂದು ಕೊರಗುವಣ್ಣನಲ್ಲಿ ದೈನ್ಯದಿಂದ ಕೇಳಿಕೊಂಡರಂತೆ. ಯಾವ ಸಮಾಧಾನಕ್ಕೂ ಅವರು ಒಪ್ಪದಿರುವಾಗ ಒಂದು ದಿನ ಸಾಧಾರಣ 11 ಗಂಟೆ ಹೊತ್ತಿಗೆ ಅವರನ್ನೆಲ್ಲಾ ಕರೆದುಕೊಂಡು ಕೊರಗುವಣ್ಣ ನಮ್ಮ ಮನೆಗೆ ಬಂದ. ವಿದ್ಯಾರ್ಥಿಗಳನ್ನೆಲ್ಲಾ ಹೊರಗೆ ಚಾವಡಿಯಲ್ಲಿ ಕುಳ್ಳಿರಿಸಿ, ನಾನು ಮಲಗಿದ ಕೋಣೆಗೆ ಬಂದು ವಿಚಾರ ತಿಳಿಸಿದ. ನನ್ನ ಕೈ ಹಿಡಿದುಕೊಂಡು ಮೆಲ್ಲನೆ ಹೊರಗೆ ಕರೆತಂದು ಒಂದು ಕುರ್ಚಿಯಲ್ಲಿ ಕುಳ್ಳಿರಿಸಿದ. ನನ್ನ ಕ್ಷೀಣವಾದ ಶರೀರ, ನಿಸ್ತೇಜವಾದ ಕಣ್ಣು ಗಡ್ಡ ಮೀಸೆಯಿಂದ ಆವೃತ್ತವಾದ ಮುಖವನ್ನು ಕಂಡ ವಿದ್ಯಾರ್ಥಿಗಳು ದುಃಖ ತಡೆಯಲಾರದೆ ಗೋಳೋ ಎಂದು ಅತ್ತು ಬಿಟ್ಟರು. ನನಗೂ ಅವರ ಸ್ಥಿತಿಯನ್ನು ಕಂಡು ತಡೆಯಲಾಗದೆ ಅತ್ತುಬಿಟ್ಟೆ. ಹತ್ತಿರದಲ್ಲಿ ನಿಂತಿದ್ದ ಮನೆಯವರೂ ಕೂಡಾ ಕೂಗಿಕೊಂಡು ಬಿಟ್ಟರು. ನಮಗೆಲ್ಲಾ ಧೈರ್ಯ ಹೇಳುತಿದ್ದ ಕೊರಗುವಣ್ಣನ ಕಣ್ಣಲ್ಲೂ ನೀರು ಇಳಿಯುತಿತ್ತು. ಇಡೀ ಮನೆ ಕಣ್ಣೀರ ಕಡಲಲ್ಲಿ ಮುಳುಗಿತ್ತು. ಕೊನೆಗೆ ಕೊರಗುವಣ್ಣನೇ ಎಲ್ಲರನ್ನೂ ಸಮಾಧಾನಿಸಿದ. ಆತನೆ ಮುಂದಾಗಿ ನಿಂತು ವಿದ್ಯಾರ್ಥಿಗಳಿಗೆ ಕಾಫಿ ಮಾಡಿಸಿ ಕೊಟ್ಟ. ವಿದ್ಯಾರ್ಥಿಗಳು ನನ್ನ ಕಾಲು ಮುಟ್ಟಿ ನಮಸ್ಕರಿಸಿ, ಹೊರಟು ಪುನಃ ದುಃಖ ಉಮ್ಮಳಿಸಿ ಬಂತು. ಹೇಗೋ ಸಾವರಿಸಿಕೊಂಡು " ಎಲ್ಲಾ ಸಮಾಧಾನದಿಂದಲೇ ಹೊರಡಿ. ಇನ್ನು 4-6 ದಿನಗಳಲ್ಲಿ ಶಾಲೆಗೆ ಬಂದು ಪಾಠ ಮಾಡುತ್ತೇನೆ" ಎಂದು ಅವರನ್ನು ಸಾಂತ್ವನಗೊಳಿಸಿ ಕಳುಹಿಸಿಕೊಟ್ಟೆ. ನನ್ನ ವಿದ್ಯಾರ್ಥಿಗಳ ಆ ಪ್ರೀತಿ ಆ ಗೌರವ ನೆನಪಿಸಿಕೊಂಡರೆ ಈಗಲೂ ಕಣ್ಣಿನಲ್ಲಿ ನೀರಿಳಿಯುತ್ತದೆ.

ವಿದ್ಯಾರ್ಥಿಗಳಲ್ಲಿ ಹೇದ್ದೆನೋ ಸರಿ. ಆದರೆ ಮನೆಯಿಂದ 4–5 ಕಿ.ಮೀ ದೂರದ ಶಾಲೆಗೆ ದಿನನಿ ಹೋಗಿ ಬರಲು ಸಾಧ್ಯವಾಗದ ಸ್ಥಿತಿ ನನ್ನದಾಗಿತ್ತು. ಎರಡೆರಡು ಬಾರಿ ಜ್ವಲ್ಲಿ ರಳಿದ ನನಗೆ ತುಂಬಾ ನಿತ್ರಾಣ. ಕೊನೆಗೆ ಶಾಲೆಗೆ ಹತ್ತಿರದಲ್ಲಿ ಸ್ವಲ್ಪ ಸಯ ಬಿಡಾರ ಮಾಡುವುದೆಂದು ಮನಸ್ಸು ಮಾಡಿದೆ. ಆದರೆ ಬಿಡಾರಕ್ಕೆ ಸರಿದ ಸ್ಥಳ ಗಲಿಲ್ಲ. ಕೊನೆಗೆ ವಿಜಯಾ ಬ್ಯಾಂಕ್ ಮೆನೇಜರರಾದ ವೆಂಕಪ್ಪ ಶೆಟ್ಟಿನ್ನುವವರು ತತ್ಕಾಲಕ್ಕೆ ತನ್ನ ಮನೆಯಲ್ಲೇ ಉಳಕೊಳ್ಳಲು ವ್ಯವಸ್ಥೆ ಮಾಡಿದ ಒಂದೆರಡು ತಿಂಗಳಲ್ಲಿ ಗೋಪಾಲ ನಾಯಕ್‌ರ ಕಟ್ಟಡದಲ್ಲಿ ಸ್ಥಳ ದೊರ. ಗೋಪಾಲ ನಾಯಕ್‌ರ ಮಗ ಚಂದ್ರಶೇಖರ ನಾಯಕ್ ಎಂಬ ಹುಡುಗ ಬಿಕ್ಕೆ ಬೇಕಾದ ಅಂಗಡಿ ಸಾಮಾನು ತಂದು ಕೊಡುತ್ತಿದ್ದ. ನನ್ನ ಕೆಲವು ್ಯಾರ್ಥಿಗಳು ಆಗಾಗ ಹಾಲು, ತರಕಾರಿ ತಂದುಕೊಡುತಿದ್ದರು. ಹೀಗೆ ಎಲ್ಲರ ಹಕಾರದಿಂದ ಶಾಲೆಗೆ ಹೋಗಿ ಬರಲು ಆರಂಭಿಸಿದೆ. ಆದರೆ ಮೊದಲಿನಂತೆ ಪಾಠ ಮಾಡಲು ಸಾಧ್ಯವಾಗುತ್ತಿರಲಿಲ್ಲ. ರಜೆ ಎಲ್ಲಾ ಆಗಲೇ ಮುಗಿದುದರಿಂದ ಹೋಗಿ ಬರದೆ ನಿರ್ವಾಹವಿರಲಿಲ್ಲ.

ಇದೇ ಸಮಯವಿರಬೇಕೆಂದು ನನ್ನ ನೆನಪು. ಆ ವರ್ಷ ಮಂದಾರ್ತಿ ಮೇಳವನ್ನು ಎಂ.ಎಂ. ಹೆಗ್ಡೆಯವರು ವಹಿಸಿಕೊಂಡು ತಿರುಗಾಟ ಆರಂಭಿಸಿದ್ದರು. ಶಿವರಾತ್ರಿಯ ದಿನ ಅವರಿಗೆ ಎಲ್ಲಿಯೂ ಆಟ ಸಿಗಲಿಲ್ಲ. ಅದಕ್ಕೆ 2 ದಿನ ಮೊದಲು ನಾನು ಆಟಕ್ಕೆ ವ್ಯವಸ್ಥೆ ಮಾಡುವಂತೆ ಸೂಚಿಸಿ, ಒಂದು ಚೀಟಿ ಕಳುಹಿಸಿದರು. ವೀಳ್ಯದ ಹಣವನ್ನು ಹಿಂದಿನಿಂದ ಕೊಟ್ಟರೆ ಸಾಕು ಎಂದೂ ಸೂಚಿಸಿದ್ದರು. ನನ್ನ ಒಂದು ಹರಕೆ ಆಟ ಬಾಕಿ ಇದ್ದುದರಿಂದ ಒಪ್ಪಿಕೊಂಡು ಆಟಕ್ಕೆ ವ್ಯವಸ್ಥೆ ಮಾಡಿದೆ. ನನ್ನ ತಂದೆಯವರ ಅಪೇಕ್ಷೆಯಂತೆ ಆರಂಭಕ್ಕೆ ಅಭಿಮನ್ಯು ಕಾಳಗವನ್ನೂ ಶಿವರಾತ್ರಿಯಾದುದರಿಂದ ಆಮೇಲೆ ಕಾಮದಹನ ಪ್ರಸಂಗವನ್ನು ಕೊಟ್ಟಿದ್ದೆ. ಆಟ ಚೆನ್ನಾಗಿ ಮಾಡಿದರು. ಕಾಲು ನೋವಿನಲ್ಲೂ ಉಡುಪಿ ಬಸವನವರು ನನಗಾಗಿ ಕೌರವ ಮತ್ತು ಈಶ್ವರನ ಪಾತ್ರ ನಿರ್ವಹಿಸಿದ್ದರು.

ಸ್ವಲ್ಪ ಸಮಯದಲ್ಲೇ ಇನ್ನೊಂದು ದುರಂತ ನನಗಾಗಿ ಕಾದಿತ್ತು. ನನ್ನ ಕಿರಿಯ ಸೋದರ ಗೋಪಾಲಕೃಷ್ಣ ಎನ್ನುವವನು ಬಿ.ಕಾಂ.ನಲ್ಲಿ ಓದುತಿದ್ದ. ಪ್ರತಿಭಾವಂತ ಹುಡುಗ. ಸ್ಫುರದ್ರೂಪಿಯೂ ಆಗಿದ್ದ. ಒಂದು ದಿನ ಕಾಲೇಜಿಗೆ ಹೋದವನು ರಾತ್ರಿ ಮನೆಗೆ ಬಂದಿರಲಿಲ್ಲ. ಮರುದಿನ ಸಂಜೆಯಾದರೂ ಮನೆಗೆ

ಬಾರದಿರುವಾಗ ಗಾಬರಿಗೊಂಡು ಹುಡುಕಲು ಹೊರಟೆವು. ಕಾಲೇಜಿನಲ್ಲಿ ವಿಚಾರಿಸಿದಾಗ 2 ದಿನದಿಂದ ಬಂದಿರಲಿಲ್ಲವೆಂದು ತಿಳಿದು ಬಂತು. ಕೊನೆಗೆ ಹತ್ತಿರದಲ್ಲಿದ್ದ ಕೆರೆ, ಬಾವಿ ಶೋಧಿಸಲು ಹೊರಟಾಗ ಮನೆಯಿಂದ 2 ಕಿ.ಮೀ. ದೂರದ ಕೆರೆವೊಂದರಲ್ಲಿ ಆತನ ಶವ ದೊರಕಿತು. ಜೀವನದಲ್ಲಿ ಜಿಗುಪ್ಸೆಗೊಂಡು ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಬರೆದ ಚೀಟಿ ಪ್ಯಾಂಟಿನ ಕಿಸೆಯಲ್ಲಿತ್ತು. ಜನರು ಬೇರೆ ಬೇರೆ ಕಾರಣಗಳನ್ನು ಊಹಿಸಿ ಹೇಳಲಾರಂಭಿಸಿದರು. ಆದರೆ ಸತ್ಯಾಂಶ ಏನೆಂದು ಕೊನೆಗೂ ತಿಳಿಯದಾಯಿತು. ಆತ ಕಲಿಯುವುದರಲ್ಲಿ ಜಾಣನಾಗಿರುವಂತೆ ಸಂಗೀತ, ನಾಟಕ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ಮುಂಚೂಣಿಯಲ್ಲಿದ್ದ. ಆತನ ಬಗ್ಗೆ ಕುಟುಂಬದವರಾದ ನಾವೆಲ್ಲರೂ ತುಂಬಾ ನಿರೀಕ್ಷೆ ಇಟ್ಟು ಕೊಂಡಿದ್ದೆವು. ನಮ್ಮ ಆಸೆಯನ್ನೆಲ್ಲಾ ಹುಸಿಗೊಳಿಸಿ ಹೊರಟು ಹೋಗಿಯೇ ಬಿಟ್ಟ. ಆತನ ಅಗಲಿಕೆಯ ದುಃಖವನ್ನು ಮರೆಯಲು ನನಗೆ ಒಂದು ವರ್ಷವೇ ಬೇಕಾಯ್ತು. ಆ ಅವಧಿಯಲ್ಲಿ ನಾನು ಯಾವುದೇ ವಿನೋದ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ. ಅವನು ಕಲಿಯುತಿದ್ದ ಶಾರದಾ ಕಾಲೇಜಿನವರು ಅವರ ಸ್ಮರಣಾರ್ಥವಾಗಿ ಸಂಗೀತ ಸ್ಪರ್ಧೆಯಲ್ಲಿ ಗೆದ್ದವರಿಗೆ ಅವನ ಹೆಸರಿನಲ್ಲಿ ಪ್ರತಿ ವರ್ಷ ಪಾರಿತೋಷಕ ನೀಡುತ್ತಿದ್ದಾರೆಂದು ತಿಳಿದುಬಂತು.

ಮರು ವರ್ಷ ನನ್ನ ತಮ್ಮ ಕರುಣಾಕರನ ಹಾಗೂ ಕಿರಿಯ ತಂಗಿ ರತ್ನಾವತಿಯ ಮದುವೆ ಒಂದೇ ವೇದಿಕೆಯಲ್ಲಿ ಜರಗಿತು. ಶಿರೂರು ಕಲ್ಮನೆ ಮಾದಯ್ಯ ಶೆಟ್ರ ಮಗ ಜಯಕರನು ರತ್ನಾವತಿಯನ್ನು, ಕರುಣಾಕರನು ಅವರ ಮಗಳಾದ ವಾರಿಜಳನ್ನು ವಿವಾಹವಾದರು. ಇಲ್ಲಿಗೆ ನನ್ನ ತಂಗಿಯಂದಿರು ಹಾಗೂ ತಮ್ಮನ ಮದುವೆಯಾಗಿ ಅದೊಂದು ಜವಾಬ್ದಾರಿ ನೆರವೇರಿದಂತಾಯ್ತು.

ಸ್ವಲ್ಪ ಸಮಯಕ್ಕೆಂದು ಕಂಡ್ಲೂರಿನಲ್ಲಿ ಮಾಡಿದ ಬಿಡಾರ ಮೂರು ವರ್ಷಗಳ ವರೆಗೆ ಮುಂದುವರಿಯಿತು. ಆ ಸಮಯದಲ್ಲಿ ಕಂಡ್ಲೂರಿನ ಕೆಲವು ಯಕ್ಷಗಾನ ಕಲಾಭಿಮಾನಿಗಳು ನನ್ನ ಅಧ್ಯಕ್ಷತೆಯಲ್ಲಿ ಒಂದು ಯಕ್ಷಗಾನ ಸಂಘ ಸ್ಥಾಪಿಸಲು ಸಂಕಲ್ಪಿಸಿದರು. ಅಂತೆಯೇ ಶ್ರೀ ಕನ್ನಿಕಾ ಪರಮೇಶ್ವರೀ ಯಕ್ಷಗಾನ ಕಲಾ ಸಂಘ ಸ್ಥಾಪನೆಗೊಂಡು, ವಾರಕ್ಕೊಮ್ಮೆ ತಾಳಮದ್ದಳೆ ಹಮ್ಮಿಕೊಂಡು ಸದಸ್ಯರಿಗೆ ಅರ್ಥಗಾರಿಕೆಯಲ್ಲಿ ತರಬೇತಿ ಕೊಡಲಾಯಿತು. ದಸರಾ ಉತ್ಸವದ ಸಮಯ ಪ್ರಸಿದ್ಧ ಅರ್ಥಧಾರಿಗಳನ್ನು ಕರೆಸಿ ತಾಳಮದ್ದಳೆ ಹಾಗೂ ಊರ ಯುವಕರಿಂದ

ನಾಟಕ ಹಾಗೂ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮ ಜರಗಿಸಲಾಯಿತು. ಆ ಸಮಯ ಪ್ರಸಂಗಕರ್ತರಾದ ಸೀತಾನದಿ ಗಣಪಯ್ಯ ಶೆಟ್ಟಿ, ವೇಷಧಾರಿಗಳಾದ ಕೊಳ್ಳೂರು ರಾಮಚಂದ್ರ ರಾವ್, ಅರ್ಥಧಾರಿಗಳಾದ ಎಮ್.ಆರ್. ಲಕ್ಷ್ಮೀನಾರಾಯಣ ಮುಂತಾದವರನ್ನು ಸನ್ಮಾನಿಸಿ ಗೌರವಿಸಲಾಯಿತು. ಮುಂದೆ ವೈದ್ಯಾಧಿಕಾರಿಗಳಾದ ಡಾ। ವೈ. ಚಂದ್ರಶೇಖರ ಶೆಟ್ರು ಇಲ್ಲಿಗೆ ಬಂದ ನಂತರ ಯಕ್ಷಗಾನ ಸಂಘದ ಸದಸ್ಯರಿಗೆ ನೃತ್ಯ ತರಬೇತಿ ನೀಡಿ ಅವರಿಂದ ಆಟಗಳನ್ನು ಆಡಿಸಲಾಯಿತು. ಇತ್ತೀಚೆಗೆ ಆ ಸಂಘದ 40ನೇ ವಾರ್ಷಿಕೋತ್ಸವವನ್ನು ಅತಿ ಸಂಭ್ರಮದಿಂದ ಆಚರಿಸಲಾಯಿತು.

ನನ್ನ ತಂದೆಯವರು ತಮ್ಮ 90ನೇ ವಯಸ್ಸಿನಲ್ಲಿ ನಿಧನರಾದರು. ಅಂತೆಯೇ ನನ್ನ ಶ್ರೇಯೋಭಿವೃದ್ಧಿಗೆ ಹಲವು ರೀತಿಯಿಂದ ಸಹಕರಿಸಿದ ಕೊರುಗುವಣ್ಣ ತನ್ನ 66ನೇ ವಯಸ್ಸಿನಲ್ಲಿ ವಿಧಿವಶನಾದ. ಆತನ ನೆನಪು ಸದಾ ನನಗೆ ಪ್ರೇರಕ ಶಕ್ತಿಯಾಗಿ ಉಳಿದಿದೆ.

ಗೃಹಸ್ಥರ ಸಮ್ಮುಖದಲ್ಲಿ ನಮ್ಮೊಳಗೆ ಕಾನೂನುಬದ್ಧವಾಗಿ ಆಸ್ತಿಯನ್ನು ವಿಭಾಗಿಸಿಕೊಂಡು ಆದಿಮನೆಯಲ್ಲಿ ನನ್ನ 2ನೇ ತಂಗಿ ಸುಶೀಲಳು ನೆಲೆಸತಕ್ಕದೆಂದು ನಿರ್ಣಯಿಸಲಾಯಿತು. ನಾವು ಆಸ್ತಿಯನ್ನು ವಿಭಾಗಿಸಿಕೊಂಡು ಬೇರೆ ಬೇರೆಯಾಗಿ ವಾಸವಾಗಿದ್ದರೂ ನಮ್ಮ ಐಕ್ಯಮತ್ಯಕ್ಕೆ ಚ್ಯುತಿ ಬಂದಿಲ್ಲ. ಶುಭಕಾರ್ಯಗಳಲ್ಲಿ ಒಂದಾಗಿ ಭಾಗ ವಹಿಸುತ್ತೇವೆ. 3 ವರ್ಷಗಳ ಹಿಂದೆ ನಾವೆಲ್ಲಾ ಒಂದಾಗಿ "ಕಂದಾವರ ರಘುರಾಮ ಶೆಟ್ಟಿ ಪ್ರತಿಷ್ಠಾನ" ಸ್ಥಾಪಿಸಿಕೊಂಡು ವರ್ಷಕ್ಕೊಬ್ಬ ಯಕ್ಷಗಾನ ಕಲಾವಿದನಿಗೆ "ಕಂದಾವರ" ಪ್ರಶಸ್ತಿಯನ್ನಿತ್ತು ಗೌರವಿಸುತ್ತಾ ಬರುತಿದ್ದೇವೆ. ದೇವರ ದಯೆಯಿಂದ, ಹಿರಿಯರ ಆಶೀರ್ವಾದದಿಂದ ಎಲ್ಲರೂ ಮರ್ಯಾದಿತ ಜೀವನವನ್ನು ಸಾಗಿಸುವಷ್ಟು ಶಕ್ತರಾಗಿದ್ದೇವೆಂದು ತಿಳಿಸಲು ಸಂತೋಷಪಡುತ್ತೇನೆ.

ಈಗಾಗಲೇ ತಿಳಿಸಿದಂತೆ ಹಿರಿಯ ಮಗಳಾಗಿ ಶೈಲಜಾ ಜನಿಸಿದ ಮೇಲೆ ನೀರಜಾ ಎಂಬ ಮಗಳೂ, ಮನೋಜನೆಂಬ ಮಗನೂ ಜನಿಸಿದರು. ಮಗನು ಆಯುರ್ವೇದ ವೈದ್ಯನಾಗಿ ಜಯಶ್ರೀ ಎಂಬವಳನ್ನು ವರಿಸಿ ಶಿವಮೊಗ್ಗದಲ್ಲಿ ಸ್ವಂತ ಚಿಕಿತ್ಸಾಲಯವನ್ನು ನಡೆಸುತಿದ್ದಾನೆ. ಶೈಲಜಾ ವಿಜಯ ಕುಮಾರನನ್ನೂ, ನೀರಜಾ ಜಯರಾಮನನ್ನೂ ವಿವಾಹವಾಗಿ ಗ್ರಹಸ್ಥಾಶ್ರಮಿಗಳಾಗಿದ್ದಾರೆ. ಮೊಮ್ಮಕ್ಕಳಾದ

ಅಕ್ಷತಾ, ಅಭಿರಾಮ, ಅನಿರುದ್ಧ ಹಾಗೂ ಗುರುಚರಣರು ವಿದ್ಯಾರ್ಜನೆಯಲ್ಲಿದ್ದು ಉತ್ತಮ ಪ್ರಗತಿ ತೋರುತಿದ್ದಾರೆಂದು ತಿಳಿಸಲು ಸಂತೋಷ ಪಡುತ್ತೇನೆ.

ನಾನು 1991 ರಲ್ಲಿ ನನ್ನ ಅನಾರೋಗ್ಯದ ಕಾರಣದಿಂದ ಸ್ವಯಂ ನಿವೃತ್ತಿ ಹೊಂದಿ ಹೆಂಡತಿ ಊರಾದ ನೂಜಾಡಿಯಲ್ಲಿ ವಾಸ್ತವ್ಯ ಹೂಡಿದೆ. ಇಲ್ಲಿಯೂ ಆಸ್ತಿ ಪಾಲಾದುದರಿಂದ ವಾಸಕ್ಕೆ ಒಂದು ಚಿಕ್ಕ ಹಂಚಿನಮನೆಯನ್ನು ಕಟ್ಟಿಸಿಕೊಂಡು ಅದಕ್ಕೆ ಸ್ವಸ್ತಿ ನಿಲಯವೆಂಬ ಹೆಸರಿರಿಸಿಕೊಂಡು ವಾಸಮಾಡುತಿದ್ದೇವೆ. ಹೆಂಡತಿಯ ಶೃದ್ಧಾಪೂರ್ವಕ ಸೇವೆ, ಮಕ್ಕಳ ಸಮಯೋಜಿತ ಸಹಕಾರ, ಕುಟುಂಬದವರ ಗೌರವದ ಅಭಿಮಾನ ಹೊಂದಿದ ಸಂತೃಪ್ತ ಜೀವನ ನನ್ನದಾಗಿದೆ.

ನನ್ನ ಜೀವನ ಪಥದಲ್ಲಿ ಉಪಕರಿಸಿದವರ, ಸಹಕರಿಸಿದವರ, ಉಪಚರಿಸಿದವರ, ಗೌರವಿಸಿದವರ ಯಾದಿ ಸುದೀರ್ಘವಾದುದು. ಅದನ್ನು ಪ್ರತ್ಯ-ಪ್ರತ್ಯೇಕವಾಗಿ ಹೆಸರಿಸುವುದು ಕಷ್ಟ ಸಾಧ್ಯ ಕೆಲಸ. ಅದಕ್ಕಾಗಿ ಅವರೆಲ್ಲರನ್ನೂ ಮನಸಾ ಸ್ಮರಿಸಿಕೊಳ್ಳುತ್ತಾ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸುತ್ತೇನೆ.

****

ಪ್ರಸಂಗಕರ್ತನ ಗೆಳೆತನ ತೆರೆದಿಟ್ಟ ನೆನಪುಗಳು

ಬಿ. ಅಪ್ಪಣ್ಣ ಹೆಗ್ಡೆ
ಅಧ್ಯಕ್ಷರು, ಅಭಿನಂದನಾ ಸಮಿತಿ

ನನ್ನ ನಿಡುಗಾಲದ ಗೆಳೆಯ, ಪ್ರಾಥಮಿಕ ಹಂತದ ಸಹಪಾಠಿ ಕಂದಾವರ ರಘುರಾಮ ಶೆಟ್ಟಿ ಅವರು ತಮ್ಮ ಬದುಕಿನ ಎಪ್ಪತ್ತೊಂಭತ್ತು ಸಂವತ್ಸರಗಳನ್ನು ಪೂರೈಸಿ. ಎಂಭತ್ತನೇ ವರ್ಷಕ್ಕೆ ಕಾಲಿಡುತ್ತಿರುವುದು ವಿಶೇಷವಾಗಿ ನನಗೆ ಹೆಮ್ಮೆಯ ವಿಚಾರವಾಗಿದೆ. ಸುಮಾರು ಐವತ್ತು ವರ್ಷಗಳ ಇವರ ಸಾರ್ವಜನಿಕ ಬದುಕು ಹಲವು ಮಹತ್ವದ ಸಾಧನೆಗಳಿಗೆ ವಾತಾವರಣ ನಿರ್ಮಿಸುತ್ತಲೇ ಬಂದಿದೆ. ಯಕ್ಷಗಾನ, ಸಾಹಿತ್ಯ ಮತ್ತು ರಂಗಭೂಮಿಯ ಏಳ್ಗೆಗೆ ಸಂಬಂಧಿಸಿದಂತೆ, ಇವರು ನಿರ್ವಹಿಸಿದ ಚಟುವಟಿಕೆಗಳು ಮತ್ತು ನೀಡಿದ ಕೊಡುಗೆಗಳನ್ನು ಬಲು ಹತ್ತಿರದಿಂದ ಕಂಡು, ಅದರಲ್ಲಿ ಭಾಗಿಯಾದವರಲ್ಲಿ ನಾನೂ ಒಬ್ಬ. ಸುಮಾರು ಏಳು ದಶಕಗಳ ಅವಧಿಯ ನಮ್ಮಿಬ್ಬರ ಒಡನಾಟ ತೆರೆದಿಟ್ಟ ನೆನಪುಗಳು ಅನಂತ, ಅಪರಿಮಿತ. ಈ ಹಂತದಲ್ಲಿ ನಮ್ಮಿಬ್ಬರ ನಡುವಿನ ಆತ್ಮೀಯತೆ, ಬಾಂಧವ್ಯ ಮತ್ತು ಸಾಮರಸ್ಯ ಕಾಲದಿಂದ ಕಾಲಕ್ಕೆ ಗಟ್ಟಿಯಾಗುತ್ತಲೇ ಬಂದಿದೆ. ಹಾಗೆಯೇ ವಿಭಿನ್ನ ಸಂದರ್ಭಗಳಲ್ಲಿ ನಡೆದ ಮತ್ತು ವೇದಿಕೆಯನ್ನು ಹಂಚಿಕೊಂಡ ಕಾರ್ಯಕ್ರಮಗಳು ನಮ್ಮ ನಡುವಿನ ಬೆಸುಗೆಯನ್ನು ಮಗದಷ್ಟು ಅರಳಿಸಿದೆ.

ಗೆಳೆಯ ಕಂದಾವರ ಅವರು ಎಂಭತ್ತರ ಹರೆಯಕ್ಕೆ ಪಯಣಿಸುತ್ತಿರುವ ಈ ಸಂದರ್ಭದಲ್ಲಿ ನನ್ನ ಮತ್ತು ಅವರ ನಡುವಿನ ಒಡನಾಟದ ಕೆಲವು ನೆನಪುಗಳನ್ನು ತೆರೆದುಕೊಳ್ಳುವುದು ಹೆಚ್ಚು ಸಂದರ್ಭೋಚಿತ ಅನ್ನಿಸುತ್ತದೆ. 1950ರ ದಶಕದಲ್ಲಿ ಬಸ್ರೂರಿನ ಹಿಂದೂ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಾವಿಬ್ಬರು ಸಹಪಾಠಿಗಳು. ಸುಮಾರು ಮೂರು ವರ್ಷಗಳ ಕಾಲ ನಾವು ಒಂದೇ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದವರು. ಆ ದಿನಗಳಲ್ಲಿಯೇ ಕಂದಾವರ ಅವರಿಗೆ ಅಭಿನಯ ಮತ್ತು ನಟನೆಯಲ್ಲಿನ ಆಸಕ್ತಿ ತೀವ್ರವಾಗಿತ್ತು. ಆಗ ಶಾಲೆಯಲ್ಲಿ ಯಾವುದೇ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ನಡೆದರೂ ಅದರಲ್ಲಿ ವಿದ್ಯಾರ್ಥಿಯಾಗಿ ಅವರ ಪಾತ್ರ ಮಹತ್ವದ್ದು. ಆ ವೇಳೆಗೆ ನಾನೂ ಸಹ ರಂಗಚಟುವಟಿಕೆಗಳಲ್ಲಿ ಆಸಕ್ತನಾಗಿದ್ದ ಕಾರಣದಿಂದ ನನ್ನ ಮತ್ತು ಅವರ ನಡುವಿನ ಗೆಳೆತನ ಮತ್ತಷ್ಟು ಗಾಢವಾಗಿ ನೆಲೆಯೂರತೊಡಗಿತು. ನಾಟಕಗಳಲ್ಲಿ ವಿಭಿನ್ನ

ಪಾತ್ರಗಳ ಮೂಲಕ ಕಾಣಿಸಿಕೊಳ್ಳಲು ಆರಂಭಿಸಿದ ರಘುರಾಮ ಶೆಟ್ಟಿ ಅವರು ಮುಂದೆ ಕಿರುನಾಟಕಗಳ ರಚನೆಗೆ ತೊಡಗಿದರು. ಹೀಗೆ ಬಾಲ್ಯದ ದಿನಗಳಲ್ಲಿ ರಂಗಚಟುವಟಿಕೆಗಳು ಮತ್ತು ಯಕ್ಷಗಾನದೊಂದಿಗಿನ ಇವರ ಸಾರ್ವಜನಿಕ ಬದುಕಿಗೆ ಬುನಾದಿಯನ್ನು ನಿರ್ಮಿಸಿತು. ಬಸ್ರೂರು, ಬಲು ಹಿಂದಿನಿಂದಲೂ ವಿವಿಧ ಬಗೆಯ ರಂಗಚಟುವಟಿಕೆಗಳಿಗೆ ಆಶ್ರಯತಾಣವಾಗಿ ಪರಿಣಮಿಸುತ್ತ ಬಂದಿದೆ. ಅಂದಿನ ಕಾಲದಲ್ಲಿ ಆನಂದ ಬಸ್ರೂರು ಅವರಿಂದ ತೊಡಗಿ ಬಿ. ಕೆ ಬಳೆಗಾರ್, ವಿಠಲ ನಾಯಕ್, ಮಂಜುನಾಥ ಪಡಿಯಾರ್, ಕೋಳ್ಕೆರೆ ಸೀತಾರಾಮ ಶೆಟ್ಟಿ, ವೆಂಕಟ್ರಮಣ ಭಟ್ ಮೊದಲಾದವರು ಬಸ್ರೂರನ್ನು ಕೇಂದ್ರವಾಗಿರಿಸಿಕೊಂಡು ಬೆಳೆದ ರಂಗಕರ್ಮಿಗಳು ಹಾಗೂ ನಟರು. ಒಮ್ಮೆ ಬಸ್ರೂರಿನಲ್ಲಿ ಪ್ರದರ್ಶನಗೊಂಡ ದೇವದಾಸಿ ನಾಟಕ ಅದ್ದೂರಿ ಯಶಸ್ಸು ಕಂಡದ್ದು ನನಗಿನ್ನೂ ನೆನಪಿದೆ. ಅದನ್ನು ಸಂಘಟಿಸುವ ಜವಾಬ್ದಾರಿ ನನ್ನ ಪಾಲಿಗೆ ಒದಗಿ ಬಂದಿತ್ತು. ಅಲ್ಲಿ ನಾಜೂಕಯ್ಯನ ಪಾತ್ರ ಅತ್ಯಂತ ನಿರ್ಣಾಯಕವಾದುದು. ಆ ಪಾತ್ರವನ್ನು ಯಾರು ನಿರ್ವಹಿಸಬಹುದು ಎಂಬ ಚರ್ಚೆ ನಡೆದಾಗ ಅಂತಿಮವಾಗಿ ಆ ಪಾತ್ರವನ್ನು ಕಂದಾವರ ಅವರಿಗೆ ನೀಡಿದೆ. ಅವರು ಅದನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದರು. ಆ ಮೂಲಕ ಸುತ್ತಲಿನ ಪರಿಸರದಲ್ಲಿ ಜನಮನ್ನಣೆಗೂ ಪಾತ್ರರಾದರು. ಆ ಬಳಿಕ ಅವರು ನೂರಾರು ನಾಟಕಗಳಲ್ಲಿ ಹಾಸ್ಯನಟನಾಗಿ ಕಾಣಿಸಿಕೊಂಡರು.

ಮುಂದೆ ನನ್ನ ಮತ್ತು ಅವರ ಒಡನಾಟ ಮತ್ತಷ್ಟು ವಿಸ್ತರಿಸಿದ್ದು ಅವರು ಕಂಡ್ಲೂರಿನ ನೇತಾಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಸೇರಿಕೊಂಡಾಗ. ಆಗ ಕಂಡ್ಲೂರಿನಲ್ಲಿ ನೇತಾಜಿ ಶಾಲೆ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿ ಪರಿಣಮಿಸಿತ್ತು. ಅಲ್ಲಿ ಕಂದಾವರ ಅವರ ನೇತೃತ್ವದಲ್ಲಿ ರಂಗ ಚಟುವಟಿಕೆಗಳು ನಡೆದಾಗ ನಾನೂ ಸಹ ಆಸಕ್ತಿಯಿಂದ ಭಾಗವಹಿಸುತ್ತಿದ್ದೆ. ಅವರು ಮುಖ್ಯೋಪಾಧ್ಯಾಯರಾಗಿದ್ದ ಅವಧಿಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಅನೇಕ ಬಾರಿ ಅತಿಥಿಯಾಗಿ ಭಾಗವಹಿಸಿದ್ದೆ. ಕಂದಾವರ ಅವರು ತಮ್ಮ ಸಾರಥ್ಯದಲ್ಲಿ ಯಾವ ಕಾರ್ಯಕ್ರಮವನ್ನು ಆಯೋಜಿಸಿದರೂ ಸಹ ನನ್ನನ್ನು ಆಹ್ವಾನಿಸುತ್ತಿದ್ದರು. ಅಲ್ಲಿ ಅತ್ಯಂತ ಉತ್ಸಾಹದಿಂದ ಆದ್ಯತೆಯ ಮೇರೆಗೆ ಪಾಲ್ಗೊಳ್ಳುತ್ತಿದ್ದೆ. ಕಳೆದ ಎರಡು ವರ್ಷಗಳ ಹಿಂದಷ್ಟೇ ಅವರ ಹೆಸರಿನಲ್ಲಿ ಆರಂಭವಾದ ಟ್ರಸ್ಟ್‌ನ್ನು ಉದ್ಘಾಟಿಸುವ ಅವಕಾಶವೂ ಸಹ ನನ್ನ ಪಾಲಿಗೆ ಒದಗಿ ಬಂದಿತ್ತು. ಹೀಗೆ ಕಂದಾವರ ರಘುರಾಮ

ಶೆಟ್ಟಿ ಅವರ ಕುಟುಂಬದ ಓರ್ವ ಸದಸ್ಯನೆಂಬ ರೀತಿಯಲ್ಲಿಯೇ ಅವರ ಮತ್ತು ಅವರ ಕುಟುಂಬಿಕರೊಂದಿಗೆ ಬಾಂಧವ್ಯವನ್ನು ಬೆಳೆಸಿಕೊಂಡು ಬಂದಿದ್ದೇನೆ.

ಕರ್ನಾಟಕ ಕರಾವಳಿಯ ಕುಂದಾಪುರ ಪರಿಸರದಲ್ಲಿ ಯಕ್ಷಗಾನ ಪ್ರಸಂಗ ಸಾಹಿತ್ಯ ರಚನೆಗೆ ಹೊಸರೂಪ ನೀಡಿದವರಲ್ಲಿ ಗೆಳೆಯ ಕಂದಾವರ ರಘುರಾಮ ಶೆಟ್ಟಿ ಅವರು ಮುಂಚೂಣಿಯಲ್ಲಿ ಕಂಡುಬರುತ್ತಾರೆ. ಇವರ ಅಜ್ಜ ಚಿತ್ತೂರು ಕೃಷ್ಣಯ್ಯ ಶೆಟ್ಟರು, ಮಾವ ಕಂದಾವರ ಅಣ್ಣಪ್ಪ ಶೆಟ್ಟರು ಆ ಕಾಲದ ಪ್ರಸಿದ್ಧ ಅರ್ಥದಾರಿಗಳು. ಇನ್ನು ಇವರ ತಂದೆ ಕರ್ಕಿ ಸದಿಯಣ್ಣ ಶೆಟ್ಟರು ಯಕ್ಷಗಾನ ಕಲಾಭಿಮಾನಿ ಮಾತ್ರವಲ್ಲ ಹಲವಾರು ಕೂಟಗಳಲ್ಲಿ ಭಾಗವತಿಕೆ ಮಾಡಿದವರು. ಈ ಪರಂಪರೆ ಕಂದಾವರ ಅವರಿಗೆ ವರವಾಗಿ ಪರಿಣಮಿಸಿತು. ಹಾಗೆಯೇ ಬಾಲ್ಯದಲ್ಲಿ ಸೌಕೂರು ಮತ್ತು ಮಾರಣಕಟ್ಟೆ ಮೇಳಗಳ ಆಟಗಳು ಇವರನ್ನು ವಿಶೇಷವಾಗಿ ಪ್ರಭಾವಿಸುತ್ತ ಬಂದವು. ಎಳವೆಯ ಹಂತದಲ್ಲಿ ಅವರಿಗಿದ್ದ ಯಕ್ಷಗಾನದ ಬಗೆಗಿನ ಆಸಕ್ತಿ ಮತ್ತು ಲಯಗಾರಿಕೆಯನ್ನು ಗುರುತಿಸಿದ ಗುರುಗಳಾದ ರಮಾನಾಥ ನಾಯಕರು ಶಂಬೂಕ ವಧೆ ಎಂಬ ಕಿರು ಯಕ್ಷಗಾನ ಬಯಲಾಟದಲ್ಲಿ ಭಾಗವತಿಕೆ ಮಾಡಲು ಅವಕಾಶ ಕಲ್ಪಿಸಿದರು. ಇಲ್ಲಿಂದ ಮುಂದೆ ಅವರ ಯಕ್ಷಲೋಕದ ಪಯಣ ಅವಿರತವಾಗಿ ಸಾಗಿತು. ಈ ಹಂತದಲ್ಲಿ ಶಿವಪುರ ಪಂಡಿತರನ್ನು ಗುರುಗಳಾಗಿ ಸ್ವೀಕರಿಸಿ, ಅವರ ಮಾರ್ಗದರ್ಶನದಲ್ಲಿ ಮುಂದುವರಿದು ಪ್ರಭಾವಿ ಅರ್ಥದಾರಿಗಳಾಗಿ ಮೂಡಿ ಬಂದರು. ಪರಿಸರ ಹಾಗೂ ಪರಂಪರೆಯ ಪ್ರಭಾವದಿಂದ ರೂಪುಗೊಂಡು ಪರಿಶ್ರಮದಿಂದ ಪ್ರಸಿದ್ಧಿಗೇರಿದ ಸಿದ್ಧಿಯು ಇವರಿಗೆ ಸಲ್ಲುತ್ತದೆ. ಛಂದೋಬದ್ಧವಾಗಿ ಪೌರಾಣಿಕ-ಸಾಮಾಜಿಕ ಆಕರಗಳನ್ನೇ ಬಳಸಿಕೊಂಡು ಇವರು ರಚಿಸಿದ ಬಹಳಷ್ಟು ಪ್ರಸಂಗಗಳು ಮೌಲ್ಯಾಧಾರಿತ ಮತ್ತು ಸುಸಂಬದ್ಧವೆನಿಸಿವೆ.

ಇವರ ವಿಶಿಷ್ಟ ಬಗೆಯ ಪ್ರಸಂಗಕೃತಿಗಳು ನಾಡಿನುದ್ದಗಲಕ್ಕೂ ಹೊಸ ಅಲೆಯನ್ನೇ ಸೃಷ್ಟಿಸಿವೆ. ಆಧುನಿಕ ಸಂವೇದನೆಯ ಮನಸ್ಸುಗಳು ಸಹ ಯಕ್ಷಗಾನದೆಡೆಗೆ ಆಕರ್ಷಿತರಾಗುವ ಹಿನ್ನೆಲೆಯಲ್ಲಿ ಇವರ ಪ್ರಸಂಗಗಳ ಪಾತ್ರ ಅತ್ಯಂತ ಹಿರಿದು. ಪಂಡಿತರಿಂದ ತೊಡಗಿ ಪಾಮರರವರೆಗೂ ಎಲ್ಲಾ ವರ್ಗದ, ವಯೋಮಾನದ ಜನರು ಸಹ ಇವರ ಪ್ರಸಂಗಗಳಿಗೆ ಮಾರುಹೋಗಿದ್ದಾರೆ. ಕಾಲಮಾನಕ್ಕನುಗುಣವಾಗಿ ಯಕ್ಷಗಾನದ ಸ್ವರೂಪ ಮತ್ತು ಆಯಾಮಗಳನ್ನು ಪರಿವರ್ತಿಸುವ ಇವರ ನಿಲುವು ಮತ್ತು ಕಳಕಳಿ ಅಪಾರ ಜನಮನ್ನಣೆಗೆ ಪಾತ್ರವಾಗಿದೆ. ಇವರ ಒಂದಿಷ್ಟು ಪ್ರಸಂಗಗಳು ಯಕ್ಷರಂಗದಲ್ಲಿ ಒಂದು

ಮನ್ವಂತರವನ್ನೇ ಸೃಷ್ಟಿಸಿವೆ ಎಂದರೆ ಅತಿಶಯೋಕ್ತಿ ಎನಿಸದು. ಕಳೆದ ನಾಲ್ಕು ದಶಕಗಳಿಂದೀಚೆಗೆ ನಾನೂ ಸಹ ಅವರ ಪ್ರಸಂಗಕೃತಿಗಳನ್ನು ಆಸ್ವಾದಿಸುತ್ತ ಬಂದಿದ್ದು ಅವು ತೆರೆದಿಡುವ ಅನುಭವಜಗತ್ತು ಅನನ್ಯವಾದುದು. ಅವರ ಹೊಸ ಪ್ರಸಂಗಗಳು ರಂಗದ ಮೇಲೆ ಮೂಡಿಬಂದಾಗ ಅದರ ಸಾಧಕ-ಬಾಧಕಗಳ ಕುರಿತಂತೆ ಆಗಾಗ ಚರ್ಚಿಸಿದ್ದು ಈಗಲೂ ನೆನಪಾಗುತ್ತಿದೆ. ನನ್ನ ಗೆಳೆಯನೊಬ್ಬನ ಎಲ್ಲಾ ಪ್ರಸಂಗಕೃತಿಗಳು ಅಪೂರ್ವ ರಂಗ ಕೃತಿಗಳಾಗಿ ಜನಮಾನಸವನ್ನು ತಲುಪಿದ್ದು ಅಭೂತಪೂರ್ವ ವಿದ್ಯಮಾನವೇ ಸರಿ.

ಗೆಳೆಯ ಕಂದಾವರ ರಘುರಾಮ ಶೆಟ್ಟಿ ಅವರು ಎಂಭತ್ತರ ಹೊಸ್ತಿಲಿನಲ್ಲಿರುವ ಈ ಮಹತ್ವದ ಸಂದರ್ಭದಲ್ಲಿ ಅವರ ಅಭಿಮಾನಿ ಬಳಗ ಒಗ್ಗೂಡಿ ಏರ್ಪಡಿಸುತ್ತಿರುವ ಸಾರ್ವಜನಿಕ ಅಭಿನಂದನೆ ನಿಜಕ್ಕೂ ಅರ್ಥಪೂರ್ಣ ಅನ್ನಿಸುತ್ತಿದೆ. ಅವರ ಸಾಧನೆಯ ಹಾದಿಯನ್ನು ಮೆಲುಕು ಹಾಕಲು ಇದೊಂದು ಸುವರ್ಣಾವಕಾಶ. ಯಕ್ಷಗಾನ, ಸಾಹಿತ್ಯ ಮತ್ತು ರಂಗಭೂಮಿಗೆ ಅವರು ನೀಡಿದ ಕೊಡುಗೆಯ ಕುರಿತಂತೆ ಮುಕ್ತ ಸಂವಾದ ನಡೆಸಲು ಇದೊಂದು ಉತ್ತಮ ರಂಗಸಜ್ಜಿಕೆ ಎಂಬ ಅಭಿಪ್ರಾಯ ನನ್ನದು. ಕಂದಾವರ ಅವರ ಬದುಕು-ಬರಹ-ಸಾಧನೆಗಳ ಚಿತ್ರಣವನ್ನು ಒಳಗೊಂಡ 'ಕಂದಾವರ' ಅಭಿನಂದನಾ ಗ್ರಂಥವು ಒಳ್ಳೆಯ ಆಕರಕೃತಿಯಾಗಿ ಹೊರಹೊಮ್ಮಲಿ ಎಂಬ ಆಶಯ ನನ್ನದು. ಈ ಎಲ್ಲಾ ಕಾರ್ಯಕ್ರಮಗಳನ್ನು ಮುನ್ನಡೆಸುವ ಅವಕಾಶ ನೀಡಿದ ಸರ್ವರಿಗೂ ನಾನು ಆಭಾರಿಯಾಗಿದ್ದೇನೆ. ಕಂದಾವರ ರಘುರಾಮ ಶೆಟ್ಟಿ ಮತ್ತು ಅವರ ಕುಟುಂಬಿಕರಿಗೆ ಶ್ರೀ ಮಹಾಲಿಂಗೇಶ್ವರನು ಒಳಿತನ್ನು ಕರುಣಿಸಲಿ.

ಕಂದಾವರೆಯ ಎಸಳುಗಳ ನಡುವೆ...............

ಬಿ. ಎಂ. ಸುಕುಮಾರ ಶೆಟ್ಟಿ
ಅಧ್ಯಕ್ಷರು
ಅಭಿನಂದನಾ ಗ್ರಂಥ ಪ್ರಕಾಶನ ಸಮಿತಿ

ನನ್ನ ಗುರುಗಳು, ಖ್ಯಾತ ಪ್ರಸಂಗಕರ್ತರೂ ಆಗಿರುವ ಕಂದಾವರ ರಘುರಾಮ ಶೆಟ್ಟಿ ಅವರು ಎಂಭತ್ತು ವರ್ಷಗಳ ತುಂಬು ಬದುಕಿಗೆ ತೆರೆದುಕೊಳ್ಳುತ್ತಿರುವ ಈ ಶುಭ ಸಂದರ್ಭದಲ್ಲಿ ಸಾರ್ವಜನಿಕ ಅಭಿನಂದನೆ ಕಾರ್ಯಕ್ರಮವನ್ನು ಆಯೋಜಿಸಿರುವುದು ಎಲ್ಲಕ್ಕಿಂತ ವಿಶೇಷವಾಗಿ ನನಗೆ ಸಂಭ್ರಮ ತಂದಿದೆ. ನನ್ನ ಪ್ರಾಥಮಿಕ ಹಂತದ ಶೈಕ್ಷಣಿಕ ಬದುಕನ್ನು ಉನ್ನತ ಮತ್ತು ಮಾನವೀಯ ನೆಲೆಯಲ್ಲಿ ರೂಪಿಸಿದ್ದು ಗುರುಗಳಾದ ಕಂದಾವರ ಅವರು ಎಂಬುದರಲ್ಲಿ ಎರಡು ಮಾತಿಲ್ಲ. ಒಂದರ್ಥದಲ್ಲಿ ನನ್ನ ಶೈಕ್ಷಣಿಕ ಜೀವನಕ್ಕೆ ಕ್ರಮಬದ್ಧ ಮತ್ತು ಕಲಾತ್ಮಕ ಬುನಾದಿಯನ್ನು ಒದಗಿಸಿದ ಹಿರಿತನ ಇವರದ್ದು. ನಾನು ಕಂಡ್ಲೂರಿನ ನೇತಾಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ಅವಧಿಯಲ್ಲಿ ಗುರುಗಳಾದ ಕಂದಾವರ ಅವರು ಬೋಧಿಸುತ್ತಿದ್ದ ಸಂಗತಿಗಳು, ಹೇಳುತ್ತಿದ್ದ ನೀತಿಕತೆಗಳು ಇಂದಿಗೂ ಒಮ್ಮೊಮ್ಮೆ ನನ್ನನ್ನು ಕಾಡುವುದಿದೆ. ಅವರ ಅತ್ಯಪೂರ್ವ ಅಭಿನಯ ಕೌಶಲ್ಯ, ಗೀತ ರಚನೆ ಅಂದಿನ ದಿನಗಳಲ್ಲಿಯೇ ನನ್ನೊಳಗೆ ಬೆರಗು ಹುಟ್ಟಿಸಿತ್ತು. ಅವರ ಎಂಭತ್ತರ ಸಂಭ್ರಮದ ಈ ಸಂದರ್ಭದಲ್ಲಿ 'ಕಂದಾವರೆ' ಅಭಿನಂದನಾ ಗ್ರಂಥ ಪ್ರಕಟವಾಗುತ್ತಿರುವುದು ಅವರ ವಿದ್ಯಾರ್ಥಿವೃಂದ, ಅಭಿಮಾನಿಗಳು ಮತ್ತು ಹಿತೈಷಿಗಳಿಗೆ ವಿಶೇಷ ಸಂತೃಪ್ತಿ ತಂದ ವಿಚಾರವಾಗಿದೆ. ಗುರುಗಳಾದ ಕಂದಾವರ ಅವರ ಬದುಕು ಮತ್ತು ಸಾಧನೆಯನ್ನು ಅವಲೋಕಿಸುವ ಹಾಗೂ ವಿಶ್ಲೇಷಿಸುವ ಈ ಕೃತಿ ಯಕ್ಷರಂಗದ ಒಂದು ಮೌಲ್ಯಪೂರ್ಣ ಗ್ರಂಥವಾಗಿ ಹೊರಹೊಮ್ಮಿದೆ ಎಂಬ ಅಭಿಪ್ರಾಯ ನನ್ನದು. ಗ್ರಂಥ ಪ್ರಣಾಶನ ಸಮಿತಿಯ ಅಧ್ಯಕ್ಷನಾಗಿರುವ ಹಿನ್ನೆಲೆಯಲ್ಲಿ ಗುರುಗಳಾದ ಕಂದಾವರ ರಘುರಾಮ ಶೆಟ್ಟಿ ಅವರು ಸಾಗಿ ಬಂದ ಹಾದಿಯ ಕೆಲ ಪುಟಗಳನ್ನು ಮೊದಲಾಗಿ ಓದುಗರೊಂದಿಗೆ ಹಂಚಿಕೊಳ್ಳುವುದು ಈ ಸಂದರ್ಭದಲ್ಲಿ ಹೆಚ್ಚು ಸೂಕ್ತ ಅನ್ನಿಸಿದೆ.

ಕರ್ನಾಟಕ ಕರಾವಳಿಯ ಯಕ್ಷಗಾನ ಪ್ರಸಂಗ ಸಾಹಿತ್ಯ ಪರಂಪರೆಗೆ ಖ್ಯಾತ ಪ್ರಸಂಗಕರ್ತ ಹಾಗೂ ಸಾಹಿತಿ ಕಂದಾವರ ರಘುರಾಮ ಶೆಟ್ಟಿ ಅವರು ನೀಡಿದ ಕೊಡುಗೆ ಮಹತ್ವಪೂರ್ಣವಾದುದು. ಕುಂದಾಪುರ ತಾಲೂಕಿನ ಬಳ್ಕೂರು ಗ್ರಾಮದ 'ಕಂದಾವರದಲ್ಲಿ ಜನಿಸಿದ ಇವರು ಕಂಡ್ಲೂರಿನ ನೇತಾಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ-ಶಿಕ್ಷಕರಾಗಿ ವೃತ್ತಿಬದುಕನ್ನು ನಿರ್ವಹಿಸಿ, ಮುಂದೆ ಅದೇ ಸಂಸ್ಥೆಯಲ್ಲಿ ಮುಖ್ಯೋಪಾಧ್ಯಾಯರಾಗಿ, ಸುಮಾರು 35 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದರು. ತಮ್ಮ ವೃತ್ತಿ ಬದುಕಿನುದ್ದಕ್ಕೂ ಸಹಸ್ರಾರು ಮಂದಿ ವಿದ್ಯಾರ್ಥಿಗಳನ್ನು ಈ ನಾಡಿಗೆ ನೀಡಿದ ಹೆಗ್ಗಳಿಕೆ ಕಂದಾವರ ಅವರದ್ದು. ನನ್ನನ್ನೂ ಒಳಗೊಂಡಂತೆ ಆವರು ಬೋಧಿಸಿದ ಅನೇಕ ಮಂದಿ ವಿದ್ಯಾರ್ಥಿಗಳು ಇಂದು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಳ್ಳುವುದರೊಂದಿಗೆ ತಮ್ಮ ವಿಶಿಷ್ಟ ಸಾಧನೆ-ಕಾರ್ಯ ನಿರ್ವಹಣೆಯ ಮೂಲಕ ಗಮನಸೆಳೆದಿದ್ದಾರೆ. ಓರ್ವ ಮಾದರಿ ಶಿಕ್ಷಕರಾಗಿ ಇವರು ನಿರ್ವಹಿಸಿದ ಕೆಲಸಗಳು ಮಾತಿನ ಎಲ್ಲೆಗೆ ನಿಲುಕದ್ದು. ಇಂದಿಗೂ ಸಹ ಇವರ ಅಧ್ಯಯನ ಮತ್ತು ಬರವಣಿಗೆಯ ಕ್ರಿಯಾಚರಣೆ ಅವಿಶ್ರಾಂತ ಮತ್ತು ನಿರಂತರ.

ರಘುರಾಮ ಶೆಟ್ಟಿ ಅವರು ತಮ್ಮ ವ್ಯಾಸಂಗದ ದಿನಗಳಿಂದಲೇ ಸಾಹಿತ್ಯಿಕ-ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೀವ್ರ ಸ್ವರೂಪದ ಆಸಕ್ತಿಯನ್ನು ಮೈಗೂಡಿಸಿಕೊಂಡಿದ್ದರು. ಮುಖ್ಯವಾಗಿ ಸಾಹಿತ್ಯ, ಸಂಗೀತ, ಯಕ್ಷಗಾನ ಮತ್ತು ಇತರ ರಂಗಕಲೆಗಳ ಬಗೆಗಿನ ಅವರ ತುಡಿತ ಎಲ್ಲರ ಮೆಚ್ಚುಗೆಗೂ ಪಾತ್ರವಾಗಿತ್ತು. ವಿದ್ಯಾರ್ಥಿದೆಸೆಯಲ್ಲಿಯೇ ತಮ್ಮ ವಿಶಿಷ್ಟ ಶೈಲಿಯ ಭಾಗವತಿಕೆಯ ಮೂಲಕ ಸುತ್ತಲಿನ ಪರಿಸರದ ಜನರ ಗಮನ ಸೆಳೆದಿದ್ದ ಇವರು ಆ ಕಾಲಕ್ಕಾಗಲೇ ಯಕ್ಷರಂಗಕ್ಕೆ ಪ್ರವೇಶ ಮಾಡಿದರು. ತಮ್ಮ ಮಾಧ್ಯಮಿಕ ವ್ಯಾಸಂಗವನ್ನು ನಿರ್ವಹಿಸುತ್ತಿದ್ದ ಅವಧಿಯಲ್ಲಿಯೇ ಉತ್ತಮ ಅರ್ಥಧಾರಿಯಾಗಿದ್ದ ರಘುರಾಮ ಶೆಟ್ಟಿಯವರು ಹಿರಿಯ ಅರ್ಥದಾರಿಗಳೊಂದಿಗೆ ಕೂಡಿಕೊಂಡು ಮಹತ್ವದ ಪ್ರದರ್ಶನಗಳಲ್ಲಿ ಸಹಭಾಗಿಗಳಾದರು. ಯಕ್ಷರಂಗದೊಂದಿಗಿನ ಇವರ ನಂಟು ಮತ್ತಷ್ಟು ನಿಕಟವಾದದ್ದು ಪ್ರಸಂಗ ರಚನೆಯಲ್ಲಿ ತೊಡಗಿಕೊಳ್ಳುವ ಮೂಲಕ. 1978ರಲ್ಲಿ ಆರಂಭವಾದ ಪ್ರಸಂಗ ರಚನೆಯ ಕಾಯಕ ಹತ್ತು ಹಲವು ಬಗೆಯ ಪ್ರಯೋಗಗಳೊಂದಿಗೆ ಇಂದಿಗೂ ನಿರಂತರವಾಗಿ ಪ್ರವಹಿಸುತ್ತಿದೆ. ಈವರೆಗೆ ಸುಮಾರು 33 ಪ್ರಸಂಗಗಳಿಗೆ ಇವರು ಆಕೃತಿ ನೀಡಿದ್ದಾರೆ. ಇವರಿಂದ ಪ್ರಕಟಗೊಂಡ ಚೆಲುವೆ ಚಿತ್ರಾವತಿ, ದೇವಿ ಬನಶಂಕರಿ, ಪೂತ್ರ ತಪಸ್ವಿನಿ ಮೊದಲಾದ ಪ್ರಸಂಗಗಳು

ಮತ್ತು ತೆಂಕುತಿಟ್ಟಿನ ಧರ್ಮಸ್ಥಳ, ಕಟೀಲು ಮೊದಲಾದ ಮೇಳಗಳು ಇವರ ಪ್ರಸಂಗಗಳಿಗೆ ರಂಗಭೂಮಿಕೆಯನ್ನು ಒದಗಿಸುತ್ತ ಬಂದಿವೆ. ಇವರ ಆಯ್ದ ಹತ್ತು ಪ್ರಸಂಗಗಳು ದಶಮಿ ಎಂಬ ಹೆಸರಿನಲ್ಲಿ ಕೃತಿಯಾಗಿ ಅರಳಿದೆ. ಈ ಕೃತಿ ಯಕ್ಷರಂಗವನ್ನೂ ಒಳಗೊಂಡಂತೆ, ಸಾಹಿತ್ಯ ಲೋಕದಲ್ಲಿಯೂ ಒಂದಿಷ್ಟು ಸಂವಾದ, ಮನ್ನಣೆಗಳಿಗೆ ಒಳಗಾಗಿದೆ.

ಯಕ್ಷಗಾನ ಪ್ರಸಂಗಗಳ ರಚನೆ ಮತ್ತು ಅರ್ಥಗಾರಿಕೆಯ ಜತೆಗೆ ನಾಟಕ ರಂಗದೊಂದಿಗಿನ ಇವರ ನಂಟು ವಿಶಿಷ್ಟವಾದುದು. ತಮ್ಮ ವೃತ್ತಿಬದುಕಿನ ಆರಂಭದ ದಿನಗಳಿಂದ ತೊಡಗಿ ಇಂದಿನವರೆಗೂ ಕಂಡ್ಲೂರು, ಬಸ್ರೂರು ಮತ್ತು ಸುತ್ತಲಿನ ಪರಿಸರದಲ್ಲಿ ಪ್ರಯೋಗ ಕಂಡ ನೂರಾರು ಸಾಮಾಜಿಕ ನಾಟಕಗಳಲ್ಲಿ ವಿಭಿನ್ನ ಪಾತ್ರಗಳ ಮೂಲಕ ಕಾಣಿಸಿಕೊಂಡಿದ್ದಾರೆ. ಅದರಲ್ಲೂ ಹಾಸ್ಯ ಪಾತ್ರಗಳಲ್ಲಿನ ಇವರ ತೊಡಗಿಕೊಳ್ಳುವಿಕೆ ಗಮನಾರ್ಹವಾದುದು. ಹಾಗೆಯೇ ಕೆಲವು ಕಂಪನಿ ನಾಟಕಗಳಲ್ಲಿ ಇವರು ಕಾಣಿಸಿಕೊಂಡದ್ದೂ ಇದೆ. ವಿದ್ಯಾರ್ಥಿ ಸಮುದಾಯ ರಂಗಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಅನುಕೂಲವಾಗುವಂತೆ ಒಟ್ಟು ಏಳು ನಾಟಕಗಳನ್ನು ರಚಿಸಿ, ನಿರ್ದೇಶಿಸಿದ್ದಾರೆ. ಈ ನಾಟಕಗಳು ಬಸ್ರೂರು, ಬಳ್ಕೂರು, ಕಂಡ್ಲೂರು ಪರಿಸರದಲ್ಲಿ ಒಂದಿಷ್ಟು ಮಂದಿ ಹವ್ಯಾಸಿ ನಟ, ಕಲಾವಿದರನ್ನು ರೂಪಿಸುವುದರೊಂದಿಗೆ ರಂಗಚಟುವಟಿಕೆಗಳು ಕ್ರಿಯಾಶೀಲವಾಗುವಂತೆ ಮಾಡಿವೆ.

ಕಂದಾವರ ಅವರ ಸಾಹಿತ್ಯಿಕ ಸಂಬಂಧಿ ಚಟುವಟಿಕೆಗಳು ಅವರ ಯಕ್ಷರಂಗದ ದುಡಿಮೆಗೆ ಪೂರಕವೆಂಬಂತೆ ಮೂಡಿಬಂದಿವೆ. ಯಕ್ಷಗಾನ ಪ್ರಸಂಗಗಳ ರಚನೆ ಅವರ ಪ್ರಧಾನ ಸಾಹಿತ್ಯಿಕ ಕೊಡುಗೆ ಆಗಿರುವ ನಡುವೆಯೂ ಏಳು ಕಿರು ನಾಟಕಗಳು, ರಂಗಗೀತೆಗಳು ಹಾಗೂ ಒಂದಿಷ್ಟು ಶಿಶುಗೀತೆಗಳನ್ನು ರಚಿಸಿದ್ದಾರೆ. ಇವರ ಕತೆ, ಕವಿತೆಗಳು ಪ್ರಜಾಮತ, ನವಯುಗ ಮೊದಲಾದ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಇವರು ರಚಿಸಿದ ಶಿಶುಗೀತೆಗಳು ಕುಂದಾಪುರ ಪರಿಸರದ ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಸೊಗಡನ್ನು ಅತ್ಯಂತ ನಯವಾಗಿ ಮತ್ತು ಸೂಕ್ಷ್ಮವಾಗಿ ಬಿಂಬಿಸಿವೆ. ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸುವುದರೊಂದಿಗೆ ತಾಲೂಕಿನ ಗ್ರಾಮಾಂತರ ಪರಿಸರದಲ್ಲಿ ವೈವಿಧ್ಯಮಯ ಮಾದರಿಯ ಸಾಹಿತ್ಯಿಕ ಚಟುವಟಿಕೆಗಳನ್ನು ಸಂಘಟಿಸಿದ್ದಾರೆ. ತಮ್ಮ ಅವಧಿಯಲ್ಲಿ ವಿದ್ಯಾರ್ಥಿಗಳಲ್ಲಿ ಸಾಹಿತ್ಯಿಕ ಆಸಕ್ತಿಯನ್ನು

ಮೂಲೆಗಳಲ್ಲಿ ಸಾಹಿತ್ಯಿಕ ವಾತಾವರಣವನ್ನು ನಿರ್ಮಾಣ ಮಾಡುವ ಸಲುವಾಗಿ ವಿಶೇಷ ಉಪನ್ಯಾಸಗಳು ಮತ್ತು ಗಮಕ ವಾಚನ–ಗಾಯನ ಕಾರ್ಯಕ್ರಮಗಳನ್ನು ಸಹ ಆಯೋಜಿಸಿದ್ದಾರೆ. ಹೀಗೆ ಸಾಹಿತ್ಯಿಕ ರಚನೆ, ಸಂಘಟನೆ ಮತ್ತು ಪ್ರಸರಣದ ಕೆಲಸಗಳಿಗೆ ಸಂಬಂಧಿಸಿದಂತೆ ಕಂದಾವರ ಅವರ ಕೊಡುಗೆ ಅಪೂರ್ವವಾದುದು.

ಕಂದಾವರ ಅವರು ಯಕ್ಷಗಾನ ಸಾಹಿತ್ಯಕ್ಕೆ ನೀಡಿದ ವಿಶಿಷ್ಟ ಕೊಡುಗೆಯನ್ನು ಮನ್ನಿಸಿ, ವಿವಿಧ ಸಂಘ–ಸಂಸ್ಥೆಗಳು ಗೌರವಿಸಿ, ಸನ್ಮಾನಿಸಿವೆ. ಮುಂಬೈ, ಬೆಂಗಳೂರು, ಕಾಸರಗೋಡು, ಧಾರವಾಡ, ದಾವಣಗೆರೆ ಮೊದಲಾದೆಡೆಗಳಲ್ಲಿ ಅಭಿಮಾನಿ ಬಳಗ ಇವರನ್ನು ಗೌರವಿಸಿದೆ. ಮಂಗಳೂರಿನ ಬಂಟರ ಯಾನೆ ನಾಡವರ ಮಾತೃಸಂಘದ ವತಿಯಿಂದ ಚಿನ್ನದ ಪದಕವನ್ನು ಪಡೆದಿರುವ ಇವರು ಕರ್ನಾಟಕ ಯಕ್ಷಗಾನ ಸಮಿತಿ ಪ್ರಶಸ್ತಿ ಗಳಿಸಿದ್ದಾರೆ. ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗೌರವಕ್ಕೆ ಪಾತ್ರರಾಗಿರುವ ಇವರು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರನ್ನೂ ಒಳಗೊಂಡಂತೆ ಅನೇಕ ಮಂದಿ ಹಿರಿಯರು, ಮಠಾಧೀಶರುಗಳಿಂದ ವಿವಿಧ ಸಂದರ್ಭಗಳಲ್ಲಿ ಅಭಿನಂದನೆಗೆ ಪಾತ್ರರಾಗಿದ್ದಾರೆ. ಹಾಗೆಯೇ ಪ್ರತಿಷ್ಠಿತ ಸೀತಾನದಿ ಪಶಸ್ತಿ, ಕಣಂಜಾರು ಆನಂದ ಶೆಟ್ಟಿ ಸ್ಮಾರಕ ಪ್ರಶಸ್ತಿ, ಯಕ್ಷಗಾನಶ್ರೀ ಪ್ರಶಸ್ತಿ ಮೊದಲಾದ ಪುರಸ್ಕಾರಗಳು ಇವರನ್ನು ಅರಸಿ ಬಂದಿವೆ. ಕರ್ನಾಟಕ ನಾಟಕ ಅಕಾಡಮಿ ಪ್ರಕಟಿಸಿದ ರಂಗ ಕಲಾವಿದರು ಕೃತಿಯಲ್ಲಿ ಇವರ ಸಾಧನೆಯ ವಿವರಗಳು ದಾಖಲಾಗಿವೆ.

ಗುರುಗಳಾದ ಕಂದಾವರ ರಘುರಾಮ ಶೆಟ್ಟಿ ಅವರ ಎಂಭತ್ತರ ವರ್ಷಾಚರಣೆಯ ಸಂದರ್ಭದಲ್ಲಿ ಹಮ್ಮಿಕೊಂಡಿರುವ ಎಲ್ಲಾ ಕಾರ್ಯಕ್ರಮಗಳು ಅವರ ಅಭಿಮಾನಿ ಬಳಗ ಮತ್ತು ವಿದ್ಯಾರ್ಥಿವೃಂದದ ಸಹಯೋಗದೊಂದಿಗೆ ಅರ್ಥಪೂರ್ಣವಾಗಿ ಸಾಕಾರಗೊಳ್ಳಲಿ. 'ಕಂದಾವರೆ' ಅಭಿನಂದನಾ ಗ್ರಂಥದ ಪರಿಕಲ್ಪನೆಯನ್ನು ಸಿದ್ಧಪಡಿಸಿ, ಲೇಖನಗಳನ್ನು ಸಂಗ್ರಹಿಸಿ, ಸಂಪಾದನೆಯ ಜವಾಬ್ದಾರಿಯನ್ನು ಸ್ವೀಕರಿಸಿದ ಲೇಖಕ ತಾರಾನಾಥ ಬಲ್ಯಾಯ ಅವರಿಗೆ ಗ್ರಂಥ ಪ್ರಕಾಶನ ಸಮಿತಿಯ ಪರವಾಗಿ ವಂದನೆಗಳು. ಗುರುಗಳ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಮುಂದಿನ ದಿನಗಳಲ್ಲಿ ಮಗದಷ್ಟು ವಿಸ್ತಾರಗೊಳ್ಳಲಿ. ಇವರ ಇನ್ನಷ್ಟು ಮೌಲ್ಯಪೂರ್ಣ ಪ್ರಸಂಗಕೃತಿಗಳು ಕಲಾರಸಿಕರನ್ನು ಹೃದಯಸ್ಪರ್ಶಿಯಾಗಿ ತಲುಪುವಂತಾಗಲಿ. ಉತ್ತಮ ಆರೋಗ್ಯ, ಭಾಗ್ಯಗಳು ಲಭಿಸಲಿ ಎಂದು ಮನದುಂಬಿ ಹಾರೈಸುತ್ತೇನೆ.

ಪುರಾಣ ಕಥನಗಳಿಗೆ ಆಕರ್ಷಕ ವಿನ್ಯಾಸವಿತ್ತ ಕವಿಕಂದಾವರ

– ಡಾ. ಎನ್. ನಾರಾಯಣ ಶೆಟ್ಟಿ

ಕನ್ನಡದ ಶುದ್ಧ ದೇಸೀ ಬಂಧಗಳಾದ ಏಲೆ, ತ್ರಿಪದಿ, ದ್ವಿಪದಿ, ಸಾಂಗತ್ಯ ಮತ್ತು ಘನಾಕ್ಷರೀ ಮುಂತಾದ ಈಗ ಕಾಣಿಸುವ ಅಪೂರ್ವ ಛಂದಸ್ಸುಗಳಿಗೆ ಯಕ್ಷಗಾನ ಆಕರ. ಇವುಗಳು ಯಕ್ಷಗಾನ ಸಾಹಿತ್ಯದಲ್ಲಿ ಮಾತ್ರ ಈಗ ಉಳಿದು ಕೊಂಡಿವೆ. ಇವುಗಳನ್ನು ಯಕ್ಷಗಾನದ ಪರಿಣತರು ಕೂಡಾ ಈಗೀಗ ತಮ್ಮ ಅನುಭವದ ಕೊರತೆಯಿಂದಾಗಿ ಅಲಕ್ಷಿಸುತ್ತಿದ್ದಾರೆ. ಅತ್ಯಂತ ಆಕರ್ಷಕವಾದ ಅಂಶ ಮತ್ತು ವಿವಿಧ ಮಾತ್ರಾಗಣಘಟಿತ ಛಂದಸ್ಸುಗಳಿಗೆ ಒಗ್ಗುವ ಅಪೂರ್ವ ಮತ್ತು ಅಲಭ್ಯವಾಗಿ ಸಾಹಿತ್ಯ ಲೋಕದಿಂದಲೇ ಕಣ್ಮರೆಯಾಗುತ್ತಿರುವ ಛಂದಸ್ಸುಗಳ ಅಸ್ತಿತ್ವವನ್ನು ಉಳಿಸಿಕೊಂಡಿರುವುದು ಯಕ್ಷಗಾನ ಸಾಹಿತ್ಯ ಮಾತ್ರ. ಇಂತಹ ಅಪೂರ್ವ ಬಂಧಗಳ ಆಶ್ರಯದಿಂದಲೇ ಪ್ರಸಂಗ ರಚನೆ ಮಾಡಿರುವ ಕವಿಗಳಲ್ಲಿ ಕಂದಾವರ ರಘುರಾಮ ಶೆಟ್ಟರು ಅಗ್ರಗಣ್ಯರು.

ಇವರ ಸಾಹಿತ್ಯ ಅತ್ಯಂತ ಸರಳವಾಗಿದ್ದು ರಸಭರಿತವೂ ಆಗಿದ್ದು ಪ್ರೇಕ್ಷಕರಿಗೆ ಗ್ರಹಿಸಿಕೊಳ್ಳಲು ಸುಲಭವಾಗಿದ್ದರಿಂದ ಪದ್ಯಗಳೆಲ್ಲವೂ ಭಾವಪೂರ್ಣವಾಗಿ, ನೃತ್ಯಾನುಕೂಲವಾಗಿ, ರಸಸ್ಯಂದಿಯಾಗಿ ಪ್ರೇಕ್ಷಕರನ್ನು ರಂಜಿಸುತ್ತದೆ. ಮನುಷ್ಯ ಸ್ವಭಾವ, ವರ್ತನೆಗಳಿಗೆ ನಿಕಟವಾಗಿ, ಪ್ರೇಕ್ಷಕರಿಗೆ ಆಸಕ್ತಿ ಹುಟ್ಟುವಂತೆ ಇವರು ಪ್ರಸಂಗ ರಚನೆ ಮಾಡಿದ್ದಾರೆ. ಅತ್ಯಂತ ಕೆಳಸ್ತರದ ಪ್ರೇಕ್ಷಕರನ್ನೂ ರಂಜಿಸುವಂತಹ ಕಥನ ತಂತ್ರದಿಂದ ಇವರು ಪ್ರಸಂಗ ರಚಿಸಿದ್ದಾರೆ. ಆದುದರಿಂದ ಇವರ ಎಲ್ಲಾ ಪ್ರಸಂಗಗಳೂ ಯಶಸ್ವಿಯಾಗಿವೆ.

ಸ್ವತಃ ಸನ್ನಿವೇಶಗಳೊಂದಿಗೆ ತನ್ಮಯರಾಗಿ ಅನುಭವಿಸದೆ ಕವಿತೆಯು ಪ್ರೇಕ್ಷಕರ ಹೃದಯವನ್ನು ತಟ್ಟಲು ಸಾಧ್ಯವೇ ಇಲ್ಲ. ಈ ಸೂಕ್ಷ್ಮ ವಿಚಾರವನ್ನು ಕವಿಗಳಾದ ಕಂದಾವರ ರಘುರಾಮ ಶೆಟ್ಟರು ಚೆನ್ನಾಗಿ ಬಲ್ಲರು ಎಂಬುದನ್ನು ಇವರ ಪ್ರಸಂಗಗಳ

ಕಥಾಸಾರ, ದೃಶ್ಯಾವಳಿಗಳ ಸಂಯೋಜನೆ ಮತ್ತು ಬಳಸಿದ ಸಾಹಿತ್ಯದಿಂದ ತಿಳಿಯಬಹುದು. ಆ ನಿಟ್ಟಿನಲ್ಲಿ ಕವಿಗಳು ತಮ್ಮ ಪರಿಶ್ರಮದಲ್ಲಿ ಸಾರ್ಥಕ್ಯ ಪಡೆದಿದ್ದಾರೆ. ತೊಡೆ ಮುರಿದು ನೆಲಕಚ್ಚಿದ ಕೆಲವು ಪುರಾಣ ಪ್ರಸಂಗಗಳಿಗೆ ಜೀವದಾನವಿತ್ತು ಎತ್ತಿ ನಿಲ್ಲಿಸಿ, ನಡೆಸಿ, ನಲಿಸಿ ಜೀವಕಳೆಯಿತ್ತ ಕೀರ್ತಿ ಶೆಟ್ಟರಿಗೆ ಸಿದ್ಧಿಸಿದೆ. ಸನ್ಮಾನ್ಯ ಕಂದಾವರ ರಘುರಾಮ ಶೆಟ್ಟರ ಸಾಧನೆಯನ್ನು ನಾನು ಮನಸಾ ಒಪ್ಪಿಕೊಂಡಿದ್ದೇನೆ. ಸಾಹಿತ್ಯ ಶಾರದೆಯು ಅವರಿಗೆ ಇನ್ನಷ್ಟು ಶಕ್ತಿಯನ್ನಿತ್ತು ತನ್ನ ಮಡಿಲಾಶ್ರಯದಲ್ಲಿ ಕಾಪಿಟ್ಟು ಅನುಗ್ರಹಿಸಲಿ ಎಂದು ಹಾರೈಸುತ್ತೇನೆ.

ಕಂದಾವರದವರ ಕಾವ್ಯಮಾಲೆ

ಡಾ. ಕಬ್ಬಿನಾಲೆ ವಸಂತಭಾರದ್ವಾಜ
ಯಕ್ಷಗಾನ ವಿದ್ವಾಂಸರು

ಆಧುನಿಕ ಯಕ್ಷಗಾನ ಕವಿಗಳಲ್ಲಿ ಕಂದಾವರ ರಘುರಾಮ ಶೆಟ್ಟರು ಪ್ರಮುಖರು. ಕಳೆದ ನಲವತ್ತು ವರ್ಷಗಳಲ್ಲಿ ಅವರು ರಚಿಸಿದ ಪ್ರಸಂಗಗಳು ಹಲವು. ಅವುಗಳಲ್ಲಿ ಪ್ರತಿಯೊಂದೂ ರಂಗದಲ್ಲಿ ಯಶಸ್ವಿಯಾಗಿ ಜನಮನದಲ್ಲಿ ಅಚ್ಚಳಿಯದೆ ಉಳಿದಿರುವುದು ಅವರ ಕಾವ್ಯಶಕ್ತಿಗೆ ಸಾಕ್ಷಿ. ಕುಂದಾಪುರದ ಕಂಡ್ಲೂರಿನಲ್ಲಿ ಶಿಕ್ಷಕರಾಗಿದ್ದುಕೊಂಡು, ತಾಳಮದ್ದಳೆ, ಅರ್ಥಗಾರಿಕೆ, ನಾಟಕ ನಟನೆ, ಗಮಕ ವ್ಯಾಖ್ಯಾನಗಳೊಂದಿಗೆ ಸಾಹಿತಿಯಾಗಿಯೂ ಗುರುತಿಸಿಕೊಂಡವರು ಅವರು. ಕಂದಾವರದವರ ಕೆಲವು ಕಥನ, ಕವಿತೆಗಳು ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಹವ್ಯಾಸಿ ರಂಗದಲ್ಲಿ ಭಾಗವತರಾಗಿ ತಾಳತಟ್ಟಿ, ವೇಷಧಾರಿಯಾಗಿ ಗೆಜ್ಜೆಕಟ್ಟಿ ಯಕ್ಷಗಾನದ ಕುರಿತು ವಿಶೇಷ ಆಸ್ಥೆಯನ್ನು ಬೆಳೆಸಿಕೊಂಡವರು. ವಿದ್ವಾನ್ ಐರೋಡಿ ಕೃಷ್ಣ ಉಡುಪರಿಂದ ಛಂದಃಶಾಸ್ತ್ರದ ಪ್ರಾಥಮಿಕ ಪರಿಚಯವನ್ನು ತಿಳಿದುಕೊಂಡು ಪ್ರಸಂಗ ರಚನೆಗೆ ತೊಡಗಿದವರು. 1970ರ ದಶಕದಲ್ಲಿ ಹೊಸ ಪ್ರಸಂಗಗಳಿಗೆ ಹೆಚ್ಚಿನ ಬೇಡಿಕೆಯುಂಟಾದಾಗ, ಭಾಗವತ ಕಾಳಿಂಗ ನಾವಡರ ಒತ್ತಾಸೆಗೆ ಓಗೊಟ್ಟು ನೂತನ ಪ್ರಸಂಗಗಳನ್ನು ರಚಿಸಿ, ಖ್ಯಾತ ನಾಮರಾದವರು.

ಕಂದಾವರದವರ ಹತ್ತು ಪ್ರಸಂಗಗಳು 'ದಶಮಿ' ಎಂಬ ಹೆಸರಿನಲ್ಲಿ ಸಂಕಲನಗೊಂಡಿವೆ(2001) ಅವುಗಳಲ್ಲಿ ಐದು ಪ್ರಸಂಗಗಳು ಪೌರಾಣಿಕ ವಸ್ತುವಿನ ಸುತ್ತ ಹೆಣೆದವುಗಳು. ಸತೀ ಸೀಮಂತಿನಿ, ನಾಗನಂದನೆ, ಸೀತಾಪಾರಮ್ಯ, ವಧೂ ಮಾಧವಿ ಹಾಗೂ ವಸುವರಾಂಗಿಗಳು ಪುರಾಣ ಕೃತಿಗಳಾದರೂ ಸಂವಿಧಾನದಲ್ಲಿ ನಾವೀನ್ಯವನ್ನು ಪಡೆದಿವೆ. 'ಶ್ರೀದೇವಿ ಬನಶಂಕರಿ' ಜಾನಪದ ಕಥಾವಸ್ತುವನ್ನೊಳಗೊಂಡ ಪ್ರಸಂಗ. ಇನ್ನು " ಚೆಲುವೆ ಚಿತ್ರಾವತಿ" ಪುತ್ಥಳಿ ಎಂಬನಾಟಕವೊಂದರ ವಿಸ್ತೃತರೂಪ. 'ರತಿರೇಖಾ' ರವೀಂದ್ರನಾಥ ಟಾಗೋರರ ಸಣ್ಣ ಕಥೆಯನ್ನು

ಅವಲಂಬಿಸಿದ ಕೃತಿ. 'ಶೂದ್ರತಪಸ್ವಿನಿ' ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಕಾದಂಬರಿಯಾದ ಚಿಕವೀರ ರಾಜೇಂದ್ರವನ್ನು ಹಿನ್ನೆಲೆಯಾಗಿಟ್ಟುಕೊಂಡು ರಚಿಸಿದ ಪ್ರಸಂಗ. 'ಶಾಪ ಸಂಯೋಗ' ಕವಿಯ ಪರಿಸರದಲ್ಲಿ ನಡೆದ ಘಟನೆಯೊಂದನ್ನು ಆಧುನಿಕ ಕಾಲ್ಪನಿಕ ಕೃತಿ. ಹೀಗೆ ಭಿನ್ನ ಭಿತ್ತಿಗಳನ್ನು ಹೊಂದಿ ಯಕ್ಷಗಾನೀಯ ಚೌಕಟ್ಟಿನಲ್ಲಿ ಅರಳಿದ ಕಾವ್ಯಕುಸುಮಗಳಿವು. ಹೊಸ ಕಾಲದ ಪ್ರಸಂಗ ಸಾಹಿತ್ಯದ ಚರಿತ್ರೆಯಲ್ಲಿ ಕಂದಾವರದವರ ಈ ಕೃತಿಗಳಿಗೆ ಅಗ್ರಸ್ಥಾನ ಸಲ್ಲುತ್ತದೆ. ಕಥೆಗಿಂತಲೂ ಕಥನ ಕ್ರಮವು ವಿನೂತನವಾಗಿರುವುದು ಕಂದಾವರದವರ ವೈಶಿಷ್ಟ್ಯ. ಸಾಂಪ್ರದಾಯಿಕ ಛಂದೋಬಂಧಗಳೊಂದಿಗೆ ಸೃಜನಶೀಲ ವಿನ್ಯಾಸಗಳನ್ನು ಹೆಣೆಯುತ್ತಲೇ, ಭಾವಾಭಿವ್ಯಂಜನೆಯ ಸರಳಶೈಲಿಯನ್ನು ಬಳಸಿದ ಪ್ರತಿಭೆ ಅವರದು. ಕಂದಾವರದವರ ಪ್ರಸಂಗಗಳ ಆಶಯದಲ್ಲಿ ಸಮಾಜ ಶಿಕ್ಷಣದ ಧ್ವನಿಯಿದೆ, ಆಕರದಲ್ಲಿ ದೇಸಿಯ ಬನಿಯಿದೆ. ಆ ಕುರಿತ ಒಂದು ಬೀಸುನೋಟ ಇಲ್ಲಿದೆ.

ಪದ್ಯಗಳಲ್ಲಿ ನಾಟ್ಯಗುಣ :

ಯಕ್ಷಗಾನ ಪದ್ಯಗಳೆಂದರೆ ಆದಿ, ಏಕ, ಅಷ್ಟ, ರೂಪಕ, ತ್ರಿವುಡೆ, ಝಂಪೆ, ಮಟ್ಟೆ ತಾಳಗಳ ವಿವಿಧಾವರ್ತದ ವಿಭಿನ್ನ ವಿನ್ಯಾಸವೆಂದಷ್ಟೇ ಭಾವಿಸುವುದು ಸರಿಯಲ್ಲ. ಸಾಂಪ್ರದಾಯಿಕ ಛಂದೋಬಂಧಗಳನ್ನು ಕಾಲಕಾಲಕ್ಕೆ ವಿತರಿಸಿದ ಸೃಜನಶೀಲತೆ ಯಕ್ಷಗಾನ ಕವಿಗಳ ಬಹುಮುಖ್ಯ ಕೊಡುಗೆ.

ದಾಸ ಸಾಹಿತ್ಯದ ಶಿಲ್ಪವನ್ನು ಮೀರಿನಿಂತ ಯಕ್ಷಗಾನ ಕಾವ್ಯಬಂಧಗಳು ಈ ವಿಕಾಸವನ್ನು ಸಾಕ್ಷೀಕರಿಸಿವೆ. ಇದಕ್ಕಾಗಿ ಪಾದಪೂರಣ, ವರಣ ಬಂಧನ, ಮುಡಿ-ಇಮ್ಮಡಿ-ಮುಮ್ಮಡಿಗಳ ಸಂಯೋಜನ ಮುಂತಾದ ಕೌಶಲಗಳನ್ನು ಕವಿಗಳು ಬಳಸಿದ್ದಾರೆ. ಹೊಸ ಕಾಲದ ಕವಿಗಳೂ ಈ ಹಾದಿಯಲ್ಲಿ ಹಿಂದೆ ಬಿದ್ದಿಲ್ಲ. ಕಂದಾವರದವರು ಕೂಡಾ ಇಂತಹ ಹೊಸಬೆಳೆಯನ್ನು ಬೆಳೆದಿದ್ದಾರೆ. ಅವರ ಕೆಲವು ರಚನೆಗಳಲ್ಲಿ ಸಾಂಪ್ರದಾಯಿಕ ಬಂಧಗಳ ವಿಸ್ತರಣೆ ಕಂಡುಬರುತ್ತದೆ. ನಾದ ಗುಣ - ನಾಟ್ಯಗುಣಗಳನ್ನು ಎರಕ ಹೊಯ್ಯುವಂತಹ ಕವಿಕರ್ಮ ಕೌಶಲ ಇಲ್ಲಿ ಸುಸ್ಪಷ್ಟ.

ಚಿತ್ತವಿ. ಸಿರಿಭೂಸು. ರೋತ್ತಮ. ರೀಗ	ವಿ.ವಿ.ವಿ.ಬ್ರ
ಬಿತ್ತರಿ. ಸುವೆಘನ. ವಿತ್ತದ. ಯೋಗ ॥ಪ॥	ವಿ.ವಿ.ವಿ.ಬ್ರ
ಪರಮಪ. ತಿವ್ರತೆ. ತರುಣೀಸಿ. ಮಂತಿನಿ	ವಿ.ವಿ.ವಿ.ವಿ.
ನಿರತವಾ. ಚರಿಪಳೂ. ಉರುತರ. ವೃತವೊಂದ	ವಿ.ವಿ.ವಿ.ವಿ.

ಕರೆಸಿದಂ. ಪತಿಯರ. ನು । ಶ್ರ. ದ್ಧಾಭಕ್ತಿ	ವಿ. ವಿ. ಮು। ಮೂ. ವಿ.
ಇರಿಸಿಪೂ. ಜಿಸುತಿತಾ. ನು । ಕೇ. ಳು ವಳಂತೆ	ವಿ. ವಿ. ಮು। ಮೂ. ವಿ.
ಕೊರತೆ ಏ. ನೆಂಬುದ. ನು । ನೀ. ಡುವಳಂತೆ	ವಿ. ವಿ. ಮು। ಮೂ. ವಿ.
ಒರೆದುದು ಪುಸಿಯಲ್ಲ ನಿಜವಾರ್ತೆ. ಯಿದನು॥	ವಿ. ವಿ. ವಿ. ಬ್ರ

(ಸತಿ ಸೀಮಂತಿನಿ)

'ಯರಕಲಕಾಂಭೋದಿ –ಅಷ್ಟ' ವೆಂಬ ಈ ಅಂಶಗಣಬಂಧ ಗಮನಾರ್ಹವಾಗಿದೆ. ಮೊದಲೆರಡು ಸಾಲುಗಳ ಪಲ್ಲವಿ ಛಂದೋವತಂಸದ ಅರ್ಧರೂಪ. ಅನಂತರದ ಎರಡು ಸಾಲುಗಳು ಒಳಪ್ರಾಸದಿಂದ ನಾಲ್ಕು ಸಾಲುಗಳ ಚೆಲುವನ್ನು ಹೊಂದಿವೆ. ಆ ಮೇಲೆ ಮೂರು ಸಾಲುಗಳಲ್ಲಿ ' ವಿ+ವಿ+ ಮುಡಿ, ಗಣಗಳ ಸೊಬಗು. ಮುಡಿ ಯುಕ್ತ ವಿಷ್ಣುವನ್ನು ರುದ್ರವೆಂದೂ ಭಾವಿಸಬಹುದು. ಈ ಪಾದಗಳ ಮುಂದೆ ಮೂಲಾಂಶಯುಕ್ತ ವರಣ ಸಂಯೋಜನೆಯಿರುವುದು ಇಡೀ ಬಂಧದ ಬೆಡಗು. ಕೊನೆಯ ಪಾದದಲ್ಲಿ ಮತ್ತೆ ಪಲ್ಲವಿಯಂತೆ ಛಂದೋವತಂಸದ ಗಣಗಳ ಗುಂಪು. ಹೀಗೆ ಈ ವಿನ್ಯಾಸದ ಸ್ವರೂಪ ಮನೋಹರ.

ನಿನ್ನಮು. ರಳಿನಾದ. ಕೆ । ತಲೆ. ದೂಗುವ	ವಿ.ವಿ.ಮುಡಿ।ಮೂ.ವಿ.
ಹೆಣ್ಣಲ್ಲ. ಈ ರಾಧಿ. ಕೆ	ವಿ.ವಿ. ಮುಡಿ
ಬಣ್ಣ. ಗಾರಿಕೆ ತೋರಿ. ಎನ್ನ ಕಾ. ಡಿಸಬೇಡ	ವಿ.ವಿ.ವಿ.ವಿ.
ಕಣ್ಣ ಹಾ. ಯಿಸೆ ಇತ್ತ. ಮಣ್ಣ ಮು. ಕ್ಕಿಪೆಬಿಡು	ವಿ.ವಿ.ವಿ.ವಿ.
ಜಾಗ। ನಡೆ –ಬೇಗ	ಬ್ರ.ಮೂ.ಬ್ರ
ತೊರೆ–ಸೋಗ।ಹಾ–ಡದಿರ್ ಹಳೆ ರಾಗ ॥	ಮೂ.ಬ್ರ.।ಮೂ.ವಿ.

(ಚೆಲುವೆ ಚಿತ್ರಾವತಿ)

ಈ ಪದ್ಯದ ಕೊನೆಯಲ್ಲಿರುವ ಬ್ರಹ್ಮಗಣಗಳು ಮುಡಿಯಾಗಿ ನಿಲ್ಲುವುದು ಗಮನಾರ್ಹ ಹೊಸಗನ್ನಡ ಛಂದಸ್ಸಿನಲ್ಲಿ ಎರಡು ಬಾರಿ ಪದ್ಯಕ್ಕೆ ಮುಕ್ತಾಯಗಳು. ಮುಡಿವು ಬಂದರೆ 'ಇಮ್ಮಡಿ' ಎಂದು ಕರೆಯಲಾಗುತ್ತದೆ. ಆದರೆ ಇಲ್ಲಿ ನಾಲ್ಕು ಬಾರಿ ಮುಡಿಯುಂಟಾಗುತ್ತದೆ. (ಕನ್ಯಾನ ವೆಂಕಟರಮಣ ಭಟ್ಟರ ಬ್ರಹ್ಮಕಪಾಲ ಪ್ರಸಂಗದಲ್ಲಿ ಇಂತಹ ಪದ್ಯ ಬಂಧವಿದೆ)

ಕೇಳು. ವೀರ. ಪೂರ್ವ. ಕಥೆಯ. ನು । ಎನ್ನ. ಪತಿಯ	3.3.3.3.ಗು।3.3
ಖೂಳ. ತನದಿ. ಬಂದ. ವ್ಯಥೆಯ. ನು	3.3.3.3.ಗು
ಹೇಳಲುಮನ. ಹೇಸುತಲಿದೆ	6.6

ತಾಳುತ ವ್ರತ. ದಲ್ಲಿರೆ ರತಿ 6.6

ಕೇಳಿಗೆ ಕರೆ. ಒಪ್ಪುದೆ ಖತಿ 6.6

ತಾಳುತ ನಾ. ಪೊರಟಿಹೆನ್ನೈ 6.6

ವೇಳೆ. ಯನ್ನು. ಕೊಡುವಿ. ಯಾದ. ರೆ। ನಿ–ನ್ನರಸಿ. ಯಾಗಿ 3.3.3.3.

ಗುಮೂ.3.3

ಬಾಳ. ಲಿಹೆನು .ಮಾತಿ. ದೂ ಖಿ.ರೆ ॥ 3.3.3.3.ಗು

(ನಾಗನಂದನೆ)

ಇದೂ ಕೂಡಾ ವಿಶೇಷ ಪದ್ಯ ಬಂಧ. ಇಲ್ಲಿ ಮೊದಲೆರಡು ಪಾದಗಳಲ್ಲಿ ಹಾಗೂ ಕೊನೆಯ ಎರಡು ಪಾದಗಳಲ್ಲಿ ತ್ರಿಮಾತ್ರಾಗಣಗಳಿವೆ. ಈ ಪಾದಗಳ ಮಧ್ಯೆ ಯುಗ್ಮ ತ್ರಿಮಾತ್ರೆಗಳ ವರಣವಿದೆ. ಈ ನಾಲ್ಕು ಪಾದಗಳ ನಡುವೆ ಷಣ್ಮಾತ್ರಾಗಣಯುಗ್ಮಗಳ ನಾಲ್ಕು ಪಾದಗಳಿವೆ. ರೂಪಕ ತಾಳದ ಗತಿಗೆ ಇವುಗಳೂ ಹೊಂದುವುದು ವಿಶೇಷವಾಗಿದೆ. ಆರು ಅಕ್ಷರ ಕಾಲದ ರೂಪಕ ತಾಳಕ್ಕೆ ಇಲ್ಲಿ 3+3 ಮತ್ತು 2+2+2 ಎಂಬ ಎರಡು ವಿನ್ಯಾಸಗಳ ಬಳಕೆಯಿದೆ. ಸಾಮಾನ್ಯವಾಗಿ 3+3 ವಿನ್ಯಾಸವನ್ನು ಯಕ್ಷಗಾನದಲ್ಲಿ ಮಧ್ಯತಾಳದಲ್ಲೇ ಹಾಡುವ ರೂಢಿಯಿದೆ. ಖಂಡಜಾತಿಯ ಮಧ್ಯತಾಳದಲ್ಲಿ 5+2+5 ಎಂದು ಒಟ್ಟು 12 ಅಕ್ಷರ ಕಾಲವಿದೆ. ಆದರೆ ಇದು 6+6 ಎಂದು ವಿಭಜನೆಗೊಂಡು ಮತ್ತೆ ತ್ರಿಕಗಳೆಂಬ ಭ್ರಮೆಗೆ ಒಳಗಾಗುತ್ತವೆ. ಚತುರಶ್ರ ಜಾತಿಯ ರೂಪಕತಾಳ ಆರು ಮಾತ್ರಾ ಕಾಲವು (2+4) ಯಕ್ಷಗಾನದಲ್ಲಿ 2+2+2 (ತಯಿ. ತದಿ. ನಕ) ಎಂಬ ಗತಿಯಲ್ಲಿರುತ್ತದೆ. ಈ ಮೇಲಿನ ಪದ್ಯವು ಈ ಎರಡೂ ಗತಿವಿಶೇಷತೆಗಳ ಸೌಂದರ್ಯಾಸ್ವಾದಕ್ಕೆ ನಿದರ್ಶನವಾಗಿದೆ. (ಆದುದರಿಂದ ಇದಕ್ಕೆ ಪಠ್ಯದಲ್ಲಿ 'ಕಲ್ಯಾಣಿ ರೂಪಕ – ಮಿಶ್ರ ಛಂದಸ್ಸು' ಎಂಬ ಕವಿ ಸೂಚನೆ)

ಕಾವ್ಯ ಪ್ರೌಢಿಮೆ

ಯಕ್ಷಗಾನ ಕಾವ್ಯವು ಸರಳವಾಗಿರಬೇಕೆಂಬ ನಿಲುವು ಕಂದಾವರದವರದು. ಆದರೆ ಅವರ ಪ್ರಸಂಗಗಳಲ್ಲಿ ಅಲ್ಲಲ್ಲಿ ಕೆಲವು ಪಾಂಡಿತ್ಯ ಪ್ರೀತಿಯ ನಿಧರ್ಶನಗಳೂ ಇವೆಯೆನ್ನುವುದು ಅಚ್ಚರಿಯಾದರೂ ಸತ್ಯ !

ಗುರುನಿರೂಪಣೆಯನ್ನು ಮೀರಲಾಗದು ಕಂದಾ ।

ವರ ಖುಷಿ ಕೌಶಿಕರೆಂದ ॥

ತೆರನಂತೆ ರಘುರಾಮ ಅಸುರೆಯ ವದಿಸುತ್ತ ।

ಗುರುಭಕ್ತಿಯಲಿ ಶ್ರೇಷ್ಠಿಯಾದ ॥

(ಸತೀ ಸೀಮಂತಿನಿ)

ಪಾತ್ರಗಳ ಸಂಭಾಷಣೆಯ ಪದ್ಯವೊಂದು ಗೌಪ್ಯವಾಗಿ 'ಕವಿಮುದ್ರಿಕೆ' ಯಾಗಿರುವುದು ಇಲ್ಲಿಯ ವೈಶಿಷ್ಟ್ಯ. (ಒಗಟಿನಂತಹ ಪದ್ಯಗಳಲ್ಲಿ ಕವಿನಾಮ ಸಂಯೋಜನೆ ಮಾಡಿದ ಅನೇಕ ಪ್ರಸಂಗಗಳಿವೆ.) ರಘುರಾಮನು ವಿಶ್ವಾಮಿತ್ರ ಮುನಿಗಳ ಆದೇಶದಂತೆ ತಾಟಕಿಯ ವಧೆಗೈದು ಶ್ರೇಷ್ಠ ವ್ಯಕ್ತಿಯಾದನೆಂಬುದನ್ನು ತಿಳಿಸುತ್ತಾ "ಕಂದಾವರ-ರಘುರಾಮ ಶ್ರೇಷ್ಠ ಎಂಬ ಸೂಚನೆಯನ್ನೂ ನೀಡಲಾಗಿದೆ!

ಪಿಂತೆ ನಡೆದಿರುವ ವೃತ್ತಾಂತ <u>ಭೂವರನೆ</u>
ಚಿಂತಿಸದೆ ಕೇಳು ಮುದವಾಂತು <u>ನೃಪವರನೆ</u>॥ಪ॥
ಅಂದು ತೊರೆದಿಹ ನಿನ್ನ ಕಂದ ಮಡದಿಯರನ್ನು
ತಂದು ಸಲಹಿದನಿವನ <u>ತಂದೆ</u>।
ಹೊಂದಿರಲು ಮೃತಿಯೋಗದಿಂದಿವನ ಪ್ರಾಣವನು
ಅಂದು ಪುನರಪಿ ನಾನೆ <u>ತಂದೆ</u>॥
ವ್ರಣಬಾಧೆ ನನ್ನಿಂದ ಗುಣವಾಯ್ತು ಮಾರಾಜ
ಗುಣನಿಧಿಯು ಈ ನಿನ್ನ <u>ಸುಮತಿ</u> ॥
ಮನದ ಸಂಶಯ ಬಿಟ್ಟು ಅನುಗ್ರಹಿಸುವಂತಿವಳ
ತ್ರಿಣಯ ನೀಡಲಿ ನಿನಗೆ <u>ಸುಮತಿ</u>॥
ಭಟ್ಟಿನಿಗಳೆಲ್ಲ ತಾವೆ ಗುಟ್ಟಿನಲಿ ಗರಳವನು
ಕೊಟ್ಟಿರದರಿಂದೀತ <u>ಬಿಸಜ</u>
ದಿಟ್ಟನೈ ಶರಣರಲಿ ಶ್ರೇಷ್ಠ ತವ ವಂಶಲತೆ
ಬಿಟ್ಟಿರುವ ವಿಮಲತರ <u>ಬಿಸಜ</u>॥

(ಸತೀ ಸೀಮಂತಿನಿ)

ಈ ಎಲ್ಲ ಪದ್ಯಗಳ ಅಂತ್ಯಪ್ರಾಸದಲ್ಲಿ ಶಬ್ದಶ್ಲೇಷೆಯಿದೆ. ವರ(ಪತಿ-ಶ್ರೇಷ್ಠ) <u>ತಂದೆ</u>(ಜನಕ-ತಂದಿರುವೆ), ಸುಮತಿ(ಸ್ತ್ರೀನಾಮ-ಸದ್ಬುದ್ಧಿ), <u>ಬಿಸಜ</u>(ವಿಷಜನ್ಯ-ಕಮಲ) ಶಬ್ದಗಳ ವಿಭಿನ್ನಾರ್ಥಗಳು ಇಲ್ಲಿಯ ಸೊಬಗು. ಪಾತ್ರಾಧಾರಿಗಳಿಗೆ ಪೂರ್ವಸಿದ್ಧತೆಯಿಲ್ಲವಾದರೆ ಈ ಪದ್ಯಗಳಿಗೆ ನ್ಯಾಯ ದೊರಕುವುದಿಲ್ಲ.

ಇನ್ನು ಕೆಲವೆಡೆ ಕವಿಯ ಪಾರಂಪರಿಕ ಕಾವ್ಯಭ್ಯಾಸ ಪ್ರಯತ್ನಗಳು ಇಣುಕಿವೆ. ಕಂಗಳಲಿ ಮಾತಾಡಿದ, ಚಂದ್ರಾಂಗದನ ವದನಚಂದ್ರಿಕೆಯ ನುಂಡು, ದೊರಕದ ಪರವಸ್ತು ದೊರಕಿತು ತನಗೆಂದು, ಬಯಕೆ ಬಂಜೆಯಾಗಿ-

ಮುಂತಾದ ಸಾಲುಗಳಲ್ಲಿ ಕವಿತಾಕಾಂತಿಯಿದೆ, ಪ್ರಾಚೀನ ಕಾವ್ಯಗಳ ಪ್ರತಿಫಲನವಿದೆ. ಅಲ್ಲಲ್ಲಿ ಪೂರ್ವಕವಿಗಳ ಗಾಢಪ್ರಭಾವಕ್ಕೆ ಒಳಗಾಗಿದ್ದೂ ಉಂಟು. ಉದಾಹರಣೆಗೆ "ಧಾರಿಣಿಪನೋದಿ ಲಿಖಿತಾ"(ರತ್ನಾವತೀ ಕಲ್ಯಾಣ), "ಚಿತ್ರತರಾಂಗಿ ಕೇಳೆಲೆ ಬಾಲೆ"(ವಾಲಿಸುಗ್ರೀವರ ಕಾಳಗ) ಈ ಮುಂತಾದ ಪ್ರಾಚೀನ ಪ್ರಸಿದ್ಧ ಪದ್ಯಪಲ್ಲವಿಗಳು ಕವಿಯನ್ನು ವಿವಶಗೊಳಿಸಿವೆ. 'ವಸುವರಾಂಗಿ' ಪ್ರಸಂಗದಲ್ಲಿ "ಕಟ್ಟಿಕೊ ಸೆರಗಿನಲಿ ಗಂಟನು", "ಹಿಂದಕೆ ಇಪ್ಪತ್ತೊಂದು ಬಾರಿಯಲಿ", "ಭ್ರಷ್ಟ ಹೆಂಗಸೆ ನಿನ್ನ ಮುಖವನು"(ಭೀಷ್ಮವಿಜಯ)"ಕಂದರುಭಯರಲ್ಲಿ ಭೇಧ", "ತೃಣವನ್ನು ಮುರಿದಿಕ್ಕಲು ಕೊಡಲಿಯು ಬೇಕೆ"(ಭೀಷ್ಮಪರ್ವ) ಮುಂತಾದ ಸಾಲುಗಳಲ್ಲಿ ಹಳೆಯ ಪ್ರಸಂಗ ಪದ್ಯಗಳ ಬಿಂಬ ಪ್ರತಿಬಿಂಬ ಭಾವವಿದೆ. ಆದರೂ ಅವುಗಳಲ್ಲಿ ಅರ್ಥ ವಿಸ್ತಾರವಿದೆ ಎನ್ನುವುದು ಪ್ರಶಂಸಾರ್ಹ. ಯಕ್ಷಗಾನ ಕಾವ್ಯಕ್ಕೆ ಅಗತ್ಯವಾದ ಪದಾಭಿನಯಶಕ್ತಿ ಕಂದಾವರದವರ ಕೃತಿಗಳಲ್ಲಿ ಹೇರಳವಾಗಿದೆ ಎನ್ನಬೇಕು. "ಕುಲದ ಕುಡಿಗಳ ಕೂಡಿ ಬಂದನೆ", "ಬುದ್ಧಿ – ಬಲು ಕಳವಳಗೊಳಿಸುವ ಸುದ್ದಿ" "ಹೇಳಲಾಗದು – ಕೇಳಿ – ತಾಳಲಾಗದು"," ಜಡಜನೇತ್ರನೆ ಇಂಥ ನುಡಿಯೇಕೆ", ನೆಟ್ಟ ಕಣ್ಣುಗಳಿಂದಲಾಕೆಯ ಸೃಷ್ಟಿಪತಿ ನೋಡಲ್ಕೆ" " ಮದನಾಂಗಿ ನೀ ಬಂದ ಹದನವು ಲೇಸಾಯ್ತು' – ಮುಂತಾದ ಪದ್ಯಗಳು ಗಾಯನ – ನರ್ತನಗಳಲ್ಲಿ ಪರಿಣಾಮಕಾರಿಯಾಗಿ ಮೂಡಿ ಬರುತ್ತವೆ. ಆ ಕಾರಣದಿಂದ ಸಹೃದಯ ರಸಿಕರ ಮನದಂಗಳದಲ್ಲಿ ಬಹುಕಾಲ ಅನುಕರಣಿಸುತ್ತವೆ.

ದೇಸಿಯ ಚೆಲುವು

ಬಂದಷ್ಟೇ ಕೂತಿದೆ ಕಾಣಿ । ಕೂಗ
ಬಂದಾಯ್ತು ಆಚೆಂದ ಏದೋಣಿ ದೋಣಿ ॥
ಒಂದ್ಗಳ್ಗಿ ಕೂಕಂಬ್ಕೆ ಬಿತ್ರಾ । ದಾಟಿ
ದ್ಮಂದಿ ಸಾಬೀತಂಗೆ ದುಡ್ಡಾದ್ರು ಕೊಡ್ತ್ರಾ ॥
ಮೊನ್ನೊಬ್ಬ್ರ ಮಾರಾಜ್ರ ಬಂದ್ರ । ನನ್ನ
ಹೆಣ್ಣಿಗೆ ಹುಚ್ಚಾಯಿ ಮದಿಯಾತಿ ಅಂದ್ರ ॥
ನನ್ನಾಸಿ ಹೇಳ್ರ ಆ ರಾಯ್ರ । ಹಾಂ ಹೂಂ
ಅನ್ನದೆ ಭಿಮ್ಮಗೆ ತಮ್ಮಷ್ಟಕೆ ಹೋರ್ರ ॥

(ವಸುವರಾಂಗಿ)

ಇದು ಗಂಗಾ ತೀರದಲ್ಲಿ ದೋಣಿ ನಡೆಸುವ ಕಂಧರನ ಪದ್ಯ. ಕುಂದಗನ್ನಡದಲ್ಲಿ ರಚನೆಗೊಂಡಿರುವುದು ಇದರ ವಿಶೇಷತೆ. (ಹಲಸಿನಹಳ್ಳಿ ನರಸಿಂಹ ಶಾಸ್ತ್ರಿಗಳ ಭೀಷ್ಮ ಪ್ರತಿಜ್ಞೆ ಪ್ರಸಂಗದಲ್ಲಿಯೂ ಇಂತಹುದೇ ಪದ್ಯವಿದೆ.) ಅಪ್ಪಟ ದೇಸಿತನ ಈ ಪದ್ಯದ ಚೆಲುವು. ಕವಿಯ ಮಾತೃಭಾಷೆಯಾದುದರಿಂದ ಅಲ್ಲಿ ಕೃತಕತೆಯ ಲವಲೇಶವೂ ಇಲ್ಲ.

ಜೊತೆಗೆ ವಿವಿಧ ಪ್ರಸಂಗಗಳಲ್ಲಿ ಬರುವ ಲೋಕೋಕ್ತಿಗಳು ಜಾನಪದ ಗಂಧವನ್ನು ಸೊಗಸಾಗಿ ಬೀರುತ್ತದೆ. "ಚಳಿಕಾಯಿಸಲು ಕರ್ಪೂರವನು ಸುಡುವರುಂಟೆ" (ಸೀತಾಪಾರಮ್ಯ), "ಕೊಟ್ಟಿಗೆ ಹಸುವು ನಾನಾದೆನೆ ಮಗಳನ್ನು ಅಟ್ಟಿದೆಯಲ್ಲಾ ಕಾನನಕೆ" (ವಧೂ ಮಾಧವಿ), ಎರಡು ಕೈಗಳು ಸೇರೆ ಸ್ವರವಲ್ತೆ" (ಚೆಲುವೆ ಚಿತ್ರಾವತಿ), "ಸುಟ್ಟಗಾಯಕೆ ಸುಣ್ಣ ಎರಚದಿರಮ್ಮಾ" "ಧರೆಬೀಜ ನುಂಗೆ ಮಾಡುವುದೇನು" (ಶೂದ್ರತಪಸ್ವಿನಿ), "ಕಾಲನಿಡುವ ಮುನ್ನ ಕಣ್ಣನ್ನು ಇಟ್ಟು" (ರತಿರೇಖಾ), "ದಾನದಾನಕೆ ಸಮಾಧಾನ ಮೇಲು (ಸೀತಾಪಾರಮ್ಯ)ಮುಂತಾದ ಮಾತುಗಳು ಜನಸಾಮಾನ್ಯರ ದೈನಂದಿನ ಬದುಕಿಗೆ ಸಂಬಂಧಿಸಿದವುಗಳೇ ಆಗಿವೆ. ಇದರಿಂದ ಸಮಕಾಲೀನ ಅನುಭವವೂ ರಸನಿಷ್ಪತ್ತಿಗೆ ಕಾರಣವಾಗುತ್ತಿದೆ.

ಕಂದಾವರದವರ ಪ್ರಸಂಗಗಳಲ್ಲಿ ಕಾವ್ಯಭಾಷೆ, ದೇಸಿಯ ಸೊಬಗು, ಛಂದೋಬಂಧಗಳ ಸೃಜನೆ ಮುಂತಾದ ಮುಖ್ಯ ಲಕ್ಷಣಗಳೊಂದಿಗೆ, ಅವರ ರಂಗತಂತ್ರ ನಿಷ್ಠೆ ಕೂಡಾ ಗಮನಾರ್ಹವೆನಿಸುತ್ತದೆ. ಪ್ರಸಂಗವು ಓದುಗಬ್ಬವಾಗದೆ ರಂಗಕಾವ್ಯವಾಗಿ ಅರಳಬೇಕೆಂಬ ಅವರ ಹಂಬಲ ಮೆಚ್ಚಬೇಕಾದುದು. 'ಶೂದ್ರ ತಪಸ್ವಿನಿ' ಪ್ರಸಂಗದಲ್ಲಿ ಕನಸೊಂದು ದೃಶ್ಯವಾಗುವುದು, ಯಕ್ಷಗಾನ ಮೇಳವೊಂದು 'ಕಂಸನ ಕಥೆ'ಯನ್ನು ಪ್ರದರ್ಶಿಸುವುದು. 'ಚೆಲುವೆ ಚಿತ್ರಾವತಿ'ಯಲ್ಲಿ ಪುಣ್ಯಕೋಟಿಯ ಕಥನವು ಸಾಂಕೇತಿಕ ಧ್ವನಿಯಾಗುವುದು, 'ಶೂದ್ರ ತಪಸ್ವಿನಿ'ಯಲ್ಲಿ ಅಂಜನ ದೃಶ್ಯವು ರಂಗದಲ್ಲಿ ಪಡಿಮೂಡುವುದು ಹೀಗೆ ವಿನೂತನ ರಂಗತಂತ್ರಗಳು ಆಧುನಿಕ ಪ್ರೇಕ್ಷಕರಿಗೆ ಮುದನೀಡುವಲ್ಲಿ ಸಫಲವಾಗಿದೆ. ಕಾಲ್ಪನಿಕ ಕಥೆಗಳಲ್ಲಿಯೂ ಪೌರಾಣಿಕ ಆವರಣ ನಿರ್ಮಾಣವಾಗಿ ಯಕ್ಷಗಾನೀಯ ವೇಷಭೂಷಣಗಳು ಕಂಗೊಳಿಸುವುದು ಕಲಾಭಿಜ್ಞತೆಗೆ ಸಾಕ್ಷಿ. ಯಕ್ಷಗಾನದ ಪಾರಂಪರಿಕ ಸೊಬಗನ್ನು ಹೊಸಪ್ರಸಂಗಗಳಿಂದಲೂ ಕಾಪಿಡಲು ಸಾಧ್ಯವೆಂಬುದನ್ನು ಕಂದಾವರದವರ ಪ್ರಸಂಗಗಳು ಸಾಧಿಸಿ ತೋರಿಸಿವೆ. ಹೀಗೆ ಹಲವಾರು ಕಾರಣಗಳಿಂದ ಕಂದಾವರದವರ ಕಾವ್ಯಮಾಲೆ ದಶಕಗಳು ಉರುಳಿದರೂ ಮಸುಕಾಗಲಿಲ್ಲ. ಇಂತಹ ಕವಿಗಳನ್ನು ಗೌರವಿಸುವುದರಿಂದ ಕಲಾಸರಸ್ವತಿಯ ಆರಾಧನೆ ಅರ್ಥಪೂರ್ಣ ಎನಿಸುತ್ತದೆ.

ಸೌಜನ್ಯಶೀಲ ಗುಣಗ್ರಾಹಿ

ಅಂಬಾತನಯ ಮುದ್ರಾಡಿ

ಇತ್ತೀಚಿಗಿನ ದಿನಗಳಲ್ಲಿ ಸಾಹಿತ್ಯ- ಕಲಾಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಬಹುಶ್ರುತರಾದವರನ್ನು ಸಾರ್ವಜನಿಕವಾಗಿ ಸಂಮಾನಿಸುತ್ತಿರುವುದನ್ನು ನಾವೆಲ್ಲ ಕಾಣುತ್ತಿದ್ದೇವೆ. ಇದರ ಜತೆಯಲ್ಲೇ "ಅಭಿನಂದನಾ ಗ್ರಂಥ" ವನ್ನೂ ಹೊರತರುತ್ತಿರುವುದು ಸ್ತುತ್ಯಾರ್ಹವಾದುದು. ಹಾಗೆ ನೋಡಿದರೆ, ಯಾವುದೇ ಸಂಮಾನಗಳಿಗಿಂತ "ಅಭಿನಂದನ" ಗ್ರಂಥ ಗೌರವ ದೊಡ್ಡದು. ಇದು ವ್ಯಕ್ತಿಯ- ವ್ಯಕ್ತಿತ್ವದ, ಸಾಧನೆಯ ದಾಖಲೆಯಾಗಿ ಬಹುಕಾಲ ಉಳಿಯುತ್ತದೆ. ನಾಳೆಯ ಪೀಳಿಗೆಗೆ ಮಾರ್ಗದರ್ಶನವಾಗುತ್ತದೆ. ಸಮಾಜದ ಮುನ್ನಡೆಗೆ ಒಳ್ಳೆಯದನ್ನು ಗುರುತಿಸುವ ಕಣ್ಣು ಬೇಕು ; ಗೌರವಿಸುವ ಹೃದಯಬೇಕು. ಯಾವನೇ ಸಾಹಿತಿಯಾಗಲಿ, ಕಲಾವಿದನಾಗಲಿ ಧನ್ಯತೆಯನ್ನು ಕಾಣುವುದು ಈ ಮೂಲಕ. ಮಾನ್ಯ ಕಂದಾವರ ರಘುರಾಮ ಶೆಟ್ಟರಿಗೆ ಇಂತಹ ಗೌರವ ಸಲ್ಲುತ್ತಿದೆ. ಅವರ ಅಭಿಮಾನಿಯಾಗಿ ನಾನು ಮಾತುಗಳನ್ನು ಬರೆಯುವುದು ನನಗೂ ಧನ್ಯತೆಯನ್ನು ತಂದಿದೆ.

ಸಮಾನಶೀಲಗಳು ಪರಸ್ಪರ ಸ್ನೇಹಕ್ಕೆ ಕಾರಣವಾಗುತ್ತವೆ. ಅವರಿಗೂ- ನನಗೂ ಒಂದಿಷ್ಟು ನಂಟುತನವಿದೆ. ನಾವಿಬ್ಬರೂ ಪ್ರಾಥಮಿಕ ಶಾಲಾ ಶಿಕ್ಷಕರು. ಯಕ್ಷಗಾನ ಪ್ರಸಂಗಕರ್ತೃರೂ ಅರ್ಥದಾರಿಗಳೂ ಹಾಗೆ ನೋಡಿದರೆ, ಯಕ್ಷಗಾನದಲ್ಲಿ ತಮ್ಮನ್ನು ತೊಡಗಿಸಿಕೊಂಡ ಅನೇಕರು ಹಿಂದೆಯೂ ಇದ್ದರು. ಇಂದಿಗೂ ಇದ್ದಾರೆ. ಅಧ್ಯಾಪನವೊಂದು ಸಂಕ್ಷಿಪ್ತ ಕಲಾಕೌಶಲ, ಆತನಿಗೆ ಕಲೆಯ ಸಂಪರ್ಕವಾದಂತೆ, ಆಸಕ್ತಿ ಹೆಚ್ಚಿದಂತೆ, ಅವನ ಪಾಠಕ್ಕೂ ಒಂದು ಚೈತನ್ಯ ಬರುತ್ತದೆ. ಆದರಲ್ಲೂ ಪ್ರಾಥಮಿಕ ಶಿಕ್ಷಕರಿಗಂತೂ ಕಲಾಸಾಂಗತ್ಯ ತೀರ ಅಗತ್ಯ. ಅವರು ಹಾಡಬೇಕು, ನಟಿಸಬೇಕು. ಅಭಿನಯ ಚತುರರಿರಬೇಕು ಸ್ವಯಂ ಕವಿಗಳಾಗಿದ್ದರಂತೂ ಆ ಪರಿಣಾಮವೇ ಬೇರೆ ಮಕ್ಕಳನ್ನು ಸುಲಭದಲ್ಲಿ ಇನ್ನಿತ್ತ ಆಕರ್ಷಿಸಿಕೊಳ್ಳುವುದಕ್ಕೂ ಮಕ್ಕಳಲ್ಲಿನ ಸೂಕ್ತ

ಪ್ರತಿಭೆಯನ್ನು ಹೊರತಂದು, ಅವರ ವಿಕಾಸಕ್ಕೆ ಕಾರಣರಾಗಲು ಸಹಕಾರಿಯಾಗುತ್ತದೆ.

"ಜೀವನೋಪಾಯಕ್ಕಾಗಿ ಒಂದು ವೃತ್ತಿ, ಜೀವದಾನಂದಕ್ಕಾಗಿ ಒಂದು ಪ್ರವೃತ್ತಿ ಎಲ್ಲ ಪ್ರವೃತ್ತಿಗಳಿಗಿಂತ ಸಾಹಿತ್ಯ ಕಲಾ ಪ್ರವೃತ್ತಿ ದೊಡ್ಡದು. ಅದರಿಂದಾಗುವ ಪರಿಣಾಮ ದೊಡ್ಡದು. ವೃತ್ತಿಯ ಯಾಂತ್ರಿಕತೆಯನ್ನು ಕಲೆ ಹೋಗಲಾಡಿಸುತ್ತದೆ. ಅದಕ್ಕೊಂದು ಚೈತನ್ಯ ತುಂಬುತ್ತದೆ. ಬಲ್ಲವರಷ್ಟೇ ಇದನ್ನು ಬಲ್ಲರು.

ನನ್ನ ಮತ್ತು ಕಂದಾವರ ರಘುರಾಮ ಶೆಟ್ಟರ ಗೆಳೆತನಕ್ಕೆ ಸುಮಾರು ನಲವತ್ತೈದು ವರ್ಷಗಳ ನೀಳುಗಾಲದ ಬೆಸುಗೆಯಿದೆ. ನಾನು ವೃತ್ತಿಯಿಂದ ನಿವೃತ್ತನಾಗಿ ಇಪ್ಪತ್ತೈದು ವರ್ಷಗಳ ಅನಂತರವೂ ಈ ಸ್ನೇಹ ಉಳಿದು ಬಂದಿದೆ, ಬೆಳೆಯುತ್ತಲೂ ಬಂದಿದೆ. ಕಂದಾವರದವರು ಕಂಡ್ಲೂರು ನೇತಾಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದು " ತಾಳಮದ್ದಳೆ" ಗಾಗಿ ನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡವರು. ಅವರೊಂದಿಗೆ ತಾಳಮದ್ದಳೆಯಲ್ಲಿ ಅರ್ಥ ಹೇಳಿದ ನೆನಪಿದೆ. ಅವರ ಅರ್ಥಗಾರಿಕೆಯಲ್ಲಿ ಸರಳತೆಯಿತ್ತು, ಸಜ್ಜನಿಕೆಯಿತ್ತು. ಅವರೆಂದೂ ಇದಿರಾಳಿಯ ತೇಜೋವಧೆ ಮಾಡಿದವರಲ್ಲ. ತಾನು ವಹಿಸಿದ ಪಾತ್ರವನ್ನು "ಪಾತ್ರ"ವಾಗಿ ಸಹೃದಯರ ಮುಂದೆ ತೆರೆದಿಡುವುದೇ ಅವರಿಗೆ ಮುಖ್ಯವಾಗಿತ್ತು. ಪದ್ಯದಿಂದ ಪದ್ಯಕ್ಕೆ ಸಂವಾದವನ್ನು ಕೊಂಡೊಯ್ಯುವ ಅವರ ಧೋರಣೆ ಪರಂಪರೆಯಿಂದ ಪ್ರಾಪ್ತವಾದುದು. ಈ ಸೊಬಗು ಇಂದು ವಿರಳವಾಗಿದೆ.

ಕಂದಾವರದವರು ವಾಲಿವಧೆಯ "ರಾಮ" ನಾಗಿ, ಅಂಗದ ಸಂಧಾನದ 'ಅಂಗದ'ನಾಗಿ ಕೃಷ್ಣ ಸಂಧಾನದ 'ಕೃಷ್ಣ' – ಧರ್ಮರಾಯ 'ವಿದುರ'ನಾಗಿ ಸುಧನ್ವ ಕಾಳಗದ 'ಸುಧನ್ವ'ನಾಗಿ – ಕಂಸವಧೆಯ 'ಅಕ್ರೂರ'ನಾಗಿ ಪಾತ್ರಲೀನರಾಗುತ್ತಿದ್ದುದನ್ನು ನಾನು ಕಂಡಿದ್ದೇನೆ. ಪಾಯಃ ಈ ಎಲ್ಲ ಪಾತ್ರಗಳೂ ನನಗೆ ಪ್ರಿಯವಾದವುಗಳು, ನಾನು ನಿರ್ವಹಿಸಿದವು. ಈ ಪಾತ್ರಗಳ ಶೀಲ ಸ್ವಭಾವಗಳು ಕಂದಾವರದ " ಸಾತ್ವಿಕ ಚಿಂತನೆಗೆ" ತಕ್ಕವುಗಳು. ಕರ್ಣಾರ್ಜುನ ಕಾಳಗದ 'ಕೃಷ್ಣ–ಶಲ್ಯ' ಪಾತ್ರಗಳನ್ನು ಕಂದಾವರರು ಮನೋಜ್ಞವಾಗಿ ನಿರ್ವಹಿಸಿದ್ದಾರೆ. ಕಂದಾವರರು ಚರ್ಚೆಯಿಂದ ದೂರ; ಪಾತ್ರ ಮಂಡನೆಯ ಕಲಾಸಿದ್ಧಿ ಅವರಿಗಿತ್ತು. ಪಾತ್ರಗಳಲ್ಲಿ ಚರ್ಚೆಯಿರುವಲ್ಲಿ ಮಾತ್ರ ಅವರು ಚರ್ಚೆಗೆ ಮುಂದಾಗುತ್ತಿದ್ದರು. ತನ್ನ ಪಾಂಡಿತ್ಯ ಪ್ರದರ್ಶನಕ್ಕೆ ಅವರೆಂದೂ ಮುಂದಾದವರಲ್ಲ.

ಕುಂದಾಪುರ–ಉಡುಪಿಯ ಪರಿಸರದಲ್ಲಿ ತಾಳಮದ್ದಳೆಯ ಅರ್ಥದಾರಿಯಾಗಿ ಜನಪ್ರಿಯರಾದ ಶ್ರೀಯುತರು ಅನಿವಾರ್ಯ ಸಂದರ್ಭಗಳಲ್ಲಿ ಭಾಗವತರಾಗಿಯೂ

ಕಲಾಸೇವೆ ಮಾಡಿರುವುದನ್ನು, ಹವ್ಯಾಸಿ ನಟನಾಗಿ ವೇಷ ಮಾಡಿದ್ದನ್ನು ಕೇಳಿದ್ದೇನೆ, ಆದರೆ ನಾನದನ್ನು ಕಂಡಿಲ್ಲ. ಯಕ್ಷಗಾನವಲ್ಲದೆ ನಾಟಕರಂಗದಲ್ಲೂ ಕಂದಾವರರು ಹಾಸ್ಯಪಾತ್ರ ಮಾಡಿದ್ದಾರೆ. ಕಂಪೆನಿ ನಾಟಕಗಳಲ್ಲೂ ನಟರಾಗಿ ಮೆರೆದಾಡಿದ್ದಾರೆ. ಅಧ್ಯಾಪನದೊಂದಿಗೆ ನಟನೆಯೂ ಇವರಿಗೆ ಪ್ರಿಯವಾದುದು.

ಮಿತ್ರ ರಘುರಾಮ ಶೆಟ್ಟರು ಬಹುಜನಶ್ರುತರಾದುದು ಯಕ್ಷಗಾನ ಪ್ರಸಂಗಕರ್ತೃರಾಗಿ ಎಂಬುದರಲ್ಲಿ ಎರಡು ಮಾತಿಲ್ಲ. ಬೇರೆ ಬೇರೆ ಪ್ರಸಂಗಗಳಲ್ಲಿ ಅರ್ಥದಾರಿಯಾಗುತ್ತ ಅನಿವಾರ್ಯ ಸಂದರ್ಭಗಳಲ್ಲಿ ಭಾಗವತರಾಗಿಯೂ ಸೇವೆ ಸಲ್ಲಿಸಿದ ಇವರಿಗೆ ಹೆಚ್ಚಿನ ಎಲ್ಲ ಪ್ರಸಂಗಗಳ ಆಧ್ಯಯನದ ಅನುಭವವಿದೆ. ಕಲಾ ಶಿಕ್ಷಕರಾಗಿದ್ದುದರಿಂದ ವಿವಿಧ ಛಂದಸ್ಸುಗಳ, ಅಲಂಕಾರಗಳ ಪರಿಚಯವಿದೆ. ಜತೆಯಲ್ಲಿ ಪುರಾಣ ಪ್ರವಚನ ವ್ಯಾಖ್ಯಾನಗಳಲ್ಲಿ ಕ್ರಿಯಾಶೀಲರಾಗಿದ್ದರಿಂದ ವಿಪುಲ ಪುರಾಣಗಳ ಚಿಂತನೆಯಿದೆ. ಹೀಗಾಗಿ ಇವರಿಗೆ ಪ್ರಸಂಗ ರಚನೆ ಕ್ಲಿಷ್ಟವಾಗಲಿಲ್ಲ. ಆದರೂ ಇವರು ಪ್ರಸಂಗ ರಚನೆಗೆ ಮುಂದಾದುದು ಮೇಳದ ಯಜಮಾನರುಗಳ ಒತ್ತಾಯದಿಂದ. ಮೇಳಗಳಿಗೆ ಜನರ ಅಪೇಕ್ಷೆಯಂತೆ ವರ್ಷಕ್ಕೊಂದು ಹೊಸಪ್ರಸಂಗಗಳು ಬೇಕಾಗಿದ್ದುವು. ಸಾಲಿಗ್ರಾಮ ಮತ್ತು ಪೆರ್ಡೂರು ಮೇಳಗಳ ಯಜಮಾನರ ಒತ್ತಡದಿಂದ ಪ್ರಸಂಗ ರಚನೆಗೆ ಕೈ ಹಾಕಿದರು. ಕಂದಾವರರು ಅದರಲ್ಲೂ ಯಶಸ್ವಿಯಾದರು. ಅವರಿಂದ ರಚಿತವಾದ ಪ್ರಸಂಗಗಳ ಪ್ರದರ್ಶನವನ್ನು ನಾನು ನೋಡಿದ್ದೇನೆ ಹಾಡನ್ನು ಕಿವಿಗೊಟ್ಟು ಆಲಿಸಿದ್ದೇನೆ. ಅವರ ಪದಬಂಧಗಳು, ಸರಳವಾದವುಗಳು, ರಸವ್ಯಂಜಕವಾದ ಶಕ್ತಿ ಪದಗಳಿಗಿತ್ತು. ಅಭಿನಯವೆಂಬುದು ಕೇವಲ ನಟನಲ್ಲಿರುವುದಲ್ಲ. ಭಾಗವತರು ಬಗೆ ತುಂಬಿ ಹಾಡಿದಾಗ ನಟರು ಅಭಿನಯಿಸಿದಾಗ ನಮ್ಮಲ್ಲಿ ಕೆಲವು ಪ್ರಸಂಗಕರ್ತರ ಪದ್ಯ ರಚನೆ ನೋಡಿದಾಗ – ಅಲ್ಲಿನ ಛಂದಸ್ಸು, ಭಾಷಾ ದೋಷಗಳನ್ನು ಅವಲೋಕಿಸಿದಾಗ ಅಲ್ಲಿನ ಲಯಹೀನತೆಯನ್ನು ಗಮನಿಸಿದಾಗ " ಅದನ್ನು ಭಾಗವತರು ಹೇಗೆ ಹಾಡುತ್ತಾರೆ? ಎಂಬ ಚಿಂತೆ ನನ್ನನ್ನು– ನನ್ನಂತಹವರನ್ನೂ ಕಾಡುವುದಿದೆ. ಅದನ್ನು ಭಾಗವತರೇ ತಮ್ಮ ಪರಿಶ್ರಮದಿಂದ ಕೂಡಿಸಿ–ಕಳೆದು ಹಾಕಬೇಕಾಗುತ್ತದೆ. ಆದರೆ ಕಂದಾವರದವರ ಪದ್ಯಗಳನ್ನು ನಿರಾಯಾಸವಾಗಿ ಹಿಗ್ಗಿಸುತ್ತಾ ಹಾಡಬಹುದು; ಹಾಡುತ್ತ ಹಿಗ್ಗಬಹುದು, ಕಂದಾವರರಿಗೆ ನಟನಾಗಿ ರಂಗಪ್ರಜ್ಞೆಯಿದ್ದುದರಿಂದ– ಅವರ ಪ್ರಸಂಗಗಳೆಲ್ಲ 'ರಂಗಕೃತಿ'ಯಾಗಿ ಯಶಸ್ವಿಯಾದವುಗಳೇ, ಹೀಗಾಗಿ ಕಂದಾವರರು ಮೂವತ್ತ ಮೂರು ಪ್ರಸಂಗಗಳನ್ನು ಬರೆದರು. ಅವುಗಳಲ್ಲಿ ಶ್ರೀದೇವಿ ಬನಶಂಕರಿ, ಚೆಲುವೆ ಚಿತ್ರಾವತಿ, ರತಿರೇಖಾ,

ಶೂದ್ರ ತಪಸ್ವಿನಿ, ನಾಗನಂದನೆ ನೂರಾರು ಪ್ರದರ್ಶನಗಳನ್ನು ಕಂಡು ಜನಮಾನ್ಯವಾದುವುಗಳು.

ಶ್ರೀಯುತರ ಹತ್ತು ಪ್ರಸಂಗಗಳು "ದಶಮಿ" ಎಂಬ ಒಂದೇ ಸಂಕಲನದಲ್ಲಿ ಪ್ರಕಟವಾಗಿ, ಯಕ್ಷಗಾನ ಪ್ರಸಂಗ ಸಾಹಿತ್ಯದ ಅಧ್ಯಯನಕ್ಕೆ ಒದಗಿರುವುದು ಗಮನಾರ್ಹ. ನಮ್ಮಲ್ಲಿ ಕೆಲವರ ಪ್ರಸಂಗಗಳ ಆಯುಷ್ಯ ಕೇವಲ ಆರು ತಿಂಗಳು. ಅವು ಪ್ರಕಟವಾಗುವುದೂ ಇಲ್ಲ. ಮತ್ತೆ ಮತ್ತೆ ಪ್ರದರ್ಶನಗೊಳ್ಳುವುದೂ ಇಲ್ಲ. ಹೀಗಾಗಿ ಆ ಪ್ರಸಂಗಗಳು, ಪ್ರಸಂಗಕರ್ತರು ಒಂದು ದೃಷ್ಟಿಯಿಂದ "ವಿಮರ್ಶಾತೀತ" ರೇ ಸರಿ. ಕಂದಾವರರ ಪ್ರಸಂಗಗಳನ್ನು ಬಡಗು-ತೆಂಕು ತಿಟ್ಟಿನವರೂ ಪ್ರದರ್ಶಿಸಿದ್ದಾರೆ; ಪ್ರದರ್ಶಿಸುತ್ತಿದ್ದಾರೆಂಬುದು ಹೆಮ್ಮೆಯ ಸಂಗತಿ.

ನಮ್ಮಲ್ಲಿ ಯಕ್ಷಗಾನದ ಕವಿಗಳನ್ನು 'ಕವಿ'ಗಳೆಂದಾಗಲಿ, ಅವರಿಂದ ರಚನೆಗೊಂಡ ಪ್ರಸಂಗಗಳನ್ನು 'ಸಾಹಿತ್ಯ' ವೆಂದಾಗಲಿ ಕೊರಳೆತ್ತಿ ಹೇಳುವವರು ಇಂದಿಗೂ ವಿರಳ, ಇದೊಂದು ದುರಂತ. ನಿಧಾನವಾಗಿ ಯಕ್ಷಗಾನ ಕವಿಗಳನ್ನು ಸಾಹಿತ್ಯ ಸಮ್ಮೇಳನಗಳು ಗೌರವಿಸುತ್ತವೆ. ಗೋಷ್ಠಿಗಳಲ್ಲಿ ಭಾಗವಹಿಸಲು ಆಮಂತ್ರಿಸುತ್ತಿವೆ. ಕಂದಾವರ ರಘುರಾಮ ಶೆಟ್ಟರು ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷರಾಗಿಯೂ ಮೂರು ವರ್ಷ ಸೇವೆ ಸಲ್ಲಿಸಿರುವುದು ಗಮರ್ನಾಹ.

ಶಿಕ್ಷಕರಾಗಿ 'ಮಾದರಿ ಶಿಕ್ಷಕ' ಪ್ರಶಸ್ತಿ ಪುರಸ್ಕೃತರಾದ ಕಂದಾವರರು ಒಂದೇ ಶಾಲೆಯಲ್ಲಿ ಮೂವತ್ತೈದು ವರ್ಷಗಳ ಸುಧೀರ್ಘ ಸೇವೆ ಸಲ್ಲಿಸಿ ಎಲ್ಲರಿಂದ ಗೌರವಕ್ಕೆ ಪಾತ್ರರಾದವರು. ವಿದ್ಯಾರ್ಥಿಗಳ ಪಾಲಿಗೆ ಇಂದಿಗೂ 'ನಮ್ಮ ಗುರುಗಳು' ಕಂದಾವರದವರ ಮಹತ್ಸಾಧನೆಯನ್ನು ಸಮಾಜ ಗುರುತಿಸಿದೆ. ತಕ್ಕ ರೀತಿಯಲ್ಲಿ ಸಮ್ಮಾನಿಸಿ ಗೌರವಿಸಿದೆ. ಅದರ ಪಟ್ಟಿ ಬಲು ದೊಡ್ಡದು. ಇತರರ ಲೇಖನಗಳಲ್ಲಿ ಅದು ಪ್ರಸ್ತಾಪಿತವಾಗಿರುವುದರಿಂದ ಪುನಃ ನಾನಿಲ್ಲಿ ಉಲ್ಲೇಖಿಸುವ ಅಗತ್ಯ ಕಾಣುವುದಿಲ್ಲ. ಆದರೆ ಸರಕಾರವಾಗಲೀ, ಅಕಾಡೆಮಿಯಾಗಲೀ ಇವರ ಕಡೆಗೆ ಲಕ್ಷ್ಯ ಹರಿಸಿದಂತಿಲ್ಲ ಇನ್ನಾದರೂ ಸೂಕ್ತ ರೀತಿಯಲ್ಲಿ ಗೌರವಿಸುವುದು ಲೇಸು.

ಕಂದಾವರರು ಯಾವತ್ತೂ ಪ್ರಶಸ್ತಿಗಾಗಿ ಹಾತೊರೆದವರಲ್ಲ. ಯಾರನ್ನೂ ಓಲೈಸಿದವರಲ್ಲ. ಅವರು ದೊರಕ್ಕಿದ್ದರಲ್ಲೇ ಸಂತುಷ್ಟರು. ಸನ್ಮಿತ್ರ ಕಂದಾವರರಲ್ಲಿರುವ ಬಹುದೊಡ್ಡ ಗುಣವೆಂದರೆ ಸಾಟಿಯಿಲ್ಲದ ಶಿಷ್ಯವಾತ್ಸಲ್ಯ ಅವರ ಶಿಷ್ಯ ಸಂಪತ್ತು ದೊಡ್ಡದು. ಇನ್ನೊಂದು ಗುಣವೆಂದರೆ ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ಪ್ರೀತಿ

ಎಲ್ಲಕ್ಕೂ ಮೀರಿದ ಸೌಜನ್ಯ, ಕಂದಾವರರ ಒಡನಾಟಕ್ಕೆ ಬಂದವರು ಅವರನ್ನು ಮರೆತಿಲ್ಲ. ಕಂದಾವರರು ಅವರನ್ನು ಮರೆತಿಲ್ಲ. ಸದಾ ಗುಣಗ್ರಾಹಿಯಾದ ಸ್ನೇಹಜೀವಿ ಕಂದಾವರ ರಘುರಾಮ ಶೆಟ್ಟರನ್ನು ಸಾರ್ವಜನಿಕವಾಗಿ ಅಭಿನಂದನ ಗ್ರಂಥ ಗೌರವದೊಂದಿಗೆ ಸನ್ಮಾನಿಸುತ್ತಿರುವ ಈ ಸದವಸರದಲ್ಲಿ ಅವರೊಂದಿಗಿನ ಒಡನಾಟವನ್ನು ಮೆಲುಕುಹಾಕುತ್ತ ಅವರಿಗೆ ಶ್ರೀ ದೇವರು ಸನ್ಮಂಗಲ ಕರುಣಿಸುತ್ತಿರಲೆಂದು ಸಂಪ್ರಾರ್ಥಿಸುತ್ತೇನೆ.

ನಮ್ಮ ರಘು ಮಾಸ್ತ್ರು

ಡಾ। ಎಂ. ಪ್ರಭಾಕರ ಜೋಶಿ
ಯಕ್ಷಗಾನ ವಿದ್ವಾಂಸರು

1974ರಿಂದಲೇ ನನಗೆ ಕಂದಾವರ ರಘು ಮಾಸ್ಟರರ ಪರಿಚಯ. ಬಸ್ರೂರು, ಕಂಡ್ಲೂರುಗಳಲ್ಲಿ ಜರಗುತಿದ್ದ ನವರಾತ್ರಿ ತಾಳಮದ್ದಳೆ ಕೂಟಗಳಿಗೆ ಶೆಟ್ಟರು ಸಂಯೋಜಕರು. ಬಸರೂರು ಅಪ್ಪಣ್ಣ ಹೆಗ್ಡೆ, ಡಾ। ಶಾಂತಾರಾಮ್ ಮೊದಲಾದವರು ಪೋಷಕರು. ಆಗ ಆ ಕಾರ್ಯಕ್ರಮಗಳಿಗೆ ಅರ್ಥದಾರಿಯಾಗಿ ಹೋಗುತಿದ್ದ ನಮಗೆ ಹಲವರಿಗೆ ಅಂದರೆ ಶೇಣಿಯವರು, ಆನಂದ ಮಾಸ್ತರರು, ಎಂ.ಆರ್. ಲಕ್ಷ್ಮೀನಾರಾಯಣ, ಕುಂಬ್ಳೆ ಸುಂದರ ರಾವ್, ಮಾರೂರು ಮಂಜುನಾಥ ಭಂಡಾರಿ ಹೀಗೆ. ನಮಗೆ ಇವರು ಆಪ್ತರಾದರು. ಜತೆಗೆ ಸ್ಥಳೀಯರಾದ ಅವರ ಮಿತ್ರರು ಕೂಡಾ. ನಮಗೆ ಅವರು ಆಗ ಕಂಡ್ಲೂರು ರಘುರಾಮ ಶೆಟ್ರೆಂದೆ ಪರಿಚಿತರು. ಆ ಎರಡು ಊರುಗಳಲ್ಲಿ ಮತ್ತು ಹೊಂದಿಕೆಯಾದರೆ ಇನ್ನೂ ಒಂದೆರಡು ಕಡೆ ಹೀಗೆ ಮೂರ್‍ನಾಲ್ಕು ಕೂಟಗಳನ್ನು ಒಟ್ಟಾಗಿ ಜೋಡಿಸುತಿದ್ದರು. ಹಾಗಾಗಿ ನಮಗೆ ಅದೊಂದು ಒಳ್ಳೆಯ ಪ್ರವಾಸ; ಸ್ನೇಹಕೂಟ.

ಆ ಕೂಟಗಳೆಂದರೆ ಆ ಪ್ರದೇಶದ ಪ್ರತಿಷ್ಠಿತ ತಾಳಮದ್ದಳೆಗಳು ಹಿರಿಯ ಪೋಷಕರು, ಸಂಯೋಜಕರು ಸೇರಿ ಚರ್ಚಿಸಿ ಪಾತ್ರ ವಿತರಣೆ ಮಾಡುತಿದ್ದರು. ಸುಜ್ಞರಾದ ಪ್ರೇಕ್ಷಕರಿರುತಿದ್ದರು. ಶಿಸ್ತಿನ ಕಾರ್ಯಕರ್ತರ ಪಂಗಡವೇ ಇರುತಿತ್ತು. ಈ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಾಳಜಿ, ಆವೇಶಗಳ ಕಾರ್ಯದರ್ಶಿ ಬಸ್ರೂರು ರಮಾನಾಥ ಮಾಸ್ತರರು ನೆನಪಾಗುತ್ತಾರೆ. ಆ ಕೂಟಗಳಿಗೆ ಹೆಚ್ಚಾಗಿ ನಾರ್ಣಪ್ಪ ಉಪ್ಪೂರರು ಭಾಗವತರು. ಸ್ಥಳೀಯ ಕಲಾವಿದರೂ ಇರುತಿದ್ದರು. ಆಗಿಂದ, ಇಂದಿನ ತನಕ ನಮ್ಮ ರಘು ಮಾಸ್ಟರರಲ್ಲಿ ಕಂಡು ಬಂದ ಒಂದು ಗುಣ–ಸ್ವತಃ ಒಳ್ಳೆಯ ಅರ್ಥದಾರಿಯಾಗಿದ್ದು ತಾನು ಸಂಯೋಜಿಸುವ ಕೂಟಗಳಲ್ಲಿ

ಅರ್ಥದಾರಿಯಾಗಿ ಭಾಗವಹಿಸುವ ಉಮೇದು ಅವರಿಗಿರಲಿಲ್ಲ. ಅತಿ ಅಗತ್ಯವಾದರೆ ಒಂದು ಅರ್ಥ ಹೇಳಿಯಾರು.

ಹಿನ್ನೆಲೆ, ವಿದ್ಯೆ, ಯೋಗ್ಯತೆ, ಪ್ರತಿಭೆಗಳ ಗಣ್ಯ ಸಾಧಕರಾಗಿದ್ದು ಅಂದಿನಿಂದ ಇಂದಿನ ತನಕ ಅವರು ಓರ್ವ ಸಾಮಾನ್ಯ ಕಾರ್ಯಕರ್ತರಾಗಿಯೂ ಇರಬಲ್ಲವರು; ಇರುವವರು, ಆತಿಥ್ಯ, ವ್ಯವಸ್ಥೆಗಳಲ್ಲಿ ಅವರದು ತುಂಬಾ ಕಾಳಜಿ. ರಘು ಮಾಸ್ಟರ್ ಸಮರ್ಥ ಅರ್ಥ ದಾರಿ. ಕುಂದಾಪುರ ಪರಿಸರದ ಅವರ ಮಿತ್ರರ ಒಂದು ಒಳ್ಳೆಯ ತಾಳಮದ್ದಳೆಯ ಬಳಗದಲ್ಲಿ ಅವರು ಓರ್ವರು. ಕಿಬ್ಬೈಲು ಕರುಣಾಕರ ಹೆಗ್ಡೆ, ಹೆಗ್ಗೇರಿ ಕೊರಗಯ್ಯ ಶೆಟ್ಟಿ, ಆನಂದ ಮಾಸ್ತರ್, ಸರ್ವೋತ್ತಮ ಶೇಟ್, ಜಯವಂತ ಕಾಮತ್, ಫಾರೆಸ್ಟರ್ ನಾಗಪ್ಪ ಶೆಟ್ಟಿ ಇವರೆಲ್ಲಾ ಸೇರಿದ ಬಳಗದಲ್ಲೂ ಈ ಲೇಖಕನು ಭಾಗವಹಿಸಿದ್ದಿದೆ. ಈ ಬಳಗವು ತನ್ನ ಪ್ರದೇಶದಲ್ಲಿ ತಾಳಮದ್ದಳೆಯ ಸದಭಿರುಚಿಯನ್ನು ಪಸರಿಸುವ ಕಾರ್ಯವನ್ನು ದಶಕಗಳ ಕಾಲ ಮಾಡಿದೆ. ಈ ಬಳಗದ ಗೆಳೆತನ, ಐಕ್ಯ, ಸಾಮರಸ್ಯಗಳು ಒಂದು ಮಾದರಿ ಸಂಗತಿ.

ಸೌಮ್ಯ, ಸುಂದರ, ಹದವಾದ ಅರ್ಥಗಾರಿಕೆ ಮಾಸ್ಟರರದು. ಪದ್ಯದ ನಡೆಯಲ್ಲೇ ಚೊಕ್ಕ ವಿವರಣೆ ನೀಡುತ್ತ, ದೀರ್ಘವಲ್ಲದ ಮಾತು, ಮಿತವಾದ ಆದರೆ ಸೂಕ್ತವಾದ ಚರ್ಚೆಗಳಿಂದ ಒಳ್ಳೆಯ ಚಿತ್ರಣ ನೀಡುತಿದ್ದರು. ಕರ್ಣಪರ್ವದ ಶಲ್ಯ, ಕೃಷ್ಣ, ಕೃಷ್ಣ ಸಂಧಾನದ ಧರ್ಮರಾಜ, ವಿಧುರ, ಶರಸೇತು ಬಂಧನದ ಕೃಷ್ಣ, ವಾಲಿವಧೆಯ ರಾಮ, ಹನುಮಂತ ಮೊದಲಾದ ಅರ್ಥಗಳನ್ನು ನಾನು ಕೇಳಿದ್ದೇನೆ. ಕೇಳಿ ಮೆಚ್ಚಿದ್ದೇನೆ. ಆ ಕೂಟಗಳಲ್ಲಿ ಭಾಗವಹಿಸಿ ಖುಷಿ ಪಟ್ಟಿದ್ದೇನೆ. ಆ ಪೈಕಿ ಸಿದ್ಧಾಪುರದ ಹತ್ತಿರದ ಜನ್ಸಾಲೆಯ ತಾಳಮದ್ದಳೆಯಲ್ಲಿ ನಮ್ಮ ಕರ್ಣ-ಶಲ್ಯ ಸಂವಾದವು ತುಂಬಾ ಸ್ವಾರಸ್ಯಕರವಾಗಿ ನೆನಪಿನಲ್ಲುಳಿದು ಈಗಲೂ ನಮ್ಮ ಭೂಮಿಯಲ್ಲಿ ಪ್ರಸ್ತಾವಗೊಳ್ಳುತ್ತಿದೆ.

ರಘುರಾಮ ಶೆಟ್ಟರು ಓರ್ವ ಉತ್ತಮ ವಿಮರ್ಶಕರು ಕೂಡಾ. ಒಮ್ಮೆ ಕರ್ಣಪರ್ವದ ಪೂರ್ವಾರ್ಧಭಾಗದಲ್ಲಿ ನಾನು ಕರ್ಣನ ಪಾತ್ರ ನಿರ್ವಹಿಸಿದ್ದೆ. ಆ ದಿನ ಕೌರವ ಮತ್ತು ಶಲ್ಯನ ಪಾತ್ರಧಾರಿಗಳು ಅವರಿಗೆ ಆ ಭಾಗ ಹೊಸತಾಗಿರುವುದರಿಂದಲೋ ಪದ್ಯಗಳು ಸರಿಯಾಗಿ ತಿಳಿಯದಿರುವುದರಿಂದಲೋ ಪ್ರಸಂಗದ ನಡೆಗೆ ಸರಿಯಾಗಿ ಒದಗುತ್ತಿರಲಿಲ್ಲ. ವಿಷಯ ಗ್ರಹಿಸಿದ ನಾನು ಅವರನ್ನು

ಸಂಬಾಳಿಸಿಕೊಂಡು ಸಾಗಿದೆ. ಇದನ್ನು ಗಮನಿಸಿದ ಶೆಟ್ಟರು ತಾಳಮದ್ದಳೆ ಮುಗಿದ ಮೇಲೆ ಅಂದಿನ ತಾಳಮದ್ದಳೆಯ ಬಗೆಗೆ ಸವಿವರವಾಗಿ ವಿಮರ್ಶಿಸುತ್ತಾ ಒಬ್ಬ ಸಮರ್ಥ ಅರ್ಥದಾರಿ ಉಳಿದವರನ್ನು ಹೇಗೆ ಹೊಂದಿಸಿಕೊಂಡು ತನ್ನೊಂದಿಗೆ ಮುಂದೆ ತೆಗೆದುಕೊಂಡು ಹೋಗಿ ರಂಜಿಸಬಲ್ಲ ಎಂಬುದಕ್ಕೆ ನನ್ನ ಅರ್ಥವನ್ನು ಮಾದರಿಯಾಗಿ ತೋರಿಸಿಕೊಟ್ಟರು. ನಿಷ್ಪಕ್ಷಪಾತವಾಗಿ, ಸತ್ಯನಿಷ್ಠವಾಗಿ ನಿಷ್ಠುರವಾಗಿ ವಿಮರ್ಶಿಸುವ ಗುಣ ಇವರದಾಗಿದೆ.

ಬಡಗುತಿಟ್ಟಿನ ಯಕ್ಷಗಾನ ರಂಗವು ಬದಲಾವಣೆ ಮತ್ತು ಸ್ವರೂಪಗಳ ಸಂಘರ್ಷವನ್ನು ಇದಿರಿಸುತಿದ್ದ ತೊಳಲಾಟದ ಕಾಲ ಘಟ್ಟದಲ್ಲಿ (1975–1990) ಪಾರಂಪರಿಕ ಕಲಾರೂಪಕ್ಕೆ ಹೊಂದಿಕೊಂಡು ವಸ್ತು, ಮಂಡನೆ, ಕಥಾನಕಗಳಲ್ಲಿ ನಾವೀನ್ಯವನ್ನೂ ತರುವ ಕಷ್ಟಕರವಾದ ಜವಾಬ್ದಾರಿಯ ಭಾರ ಪ್ರಸಂಗಕರ್ತೃರ ಮೇಲಿತ್ತು. ಅದರ ಸೂಕ್ಷ್ಮವನ್ನು ಅರಿತು ಯಕ್ಷಗಾನದ ಮಿತಿಯಲ್ಲಿ ಹೊಸತು ಎಂದರೆ ಏನು ಎಂಬುದಕ್ಕೆ ಒಂದು ಮಾದರಿಯನ್ನು ಕಾಣಿಸಿದ ಪ್ರಮುಖರಲ್ಲಿ ಶೆಟ್ಟರು ಒಬ್ಬರು. ಅವರ ಶೂದ್ರ ತಪಸ್ವಿನಿ, ವಧೂ ಮಾಧವಿ, ಚಿತ್ರಾವತಿ, ನಾಗನಂದನೆ ಮೊದಲಾದ ಪ್ರಸಂಗಗಳು ಈ ವಿಚಾರಕ್ಕೆ ಸಾಕ್ಷಿಯಾಗಿವೆ. ಪದ್ಯ ಪ್ರಯೋಗ, ರಂಗನಾಟಕಾನುಕೂಲ, ಕಥಾ ನಿರ್ವಹಣೆ, ಪಾತ್ರ – ಸನ್ನಿವೇಶಗಳ ಸಮತೋಲನ ಮೊದಲಾದ ವಿಚಾರಗಳಲ್ಲಿ ಭಾಷೆ, ಕಲ್ಪನೆಗಳ ಅಂದದಲ್ಲಿ ಕಂದಾವರದವರು ಓರ್ವ ಸಮರ್ಥ ಯಶಸ್ವಿ ಮತ್ತು ಮರ್ಮವರಿತ ಪ್ರಸಂಗಕರ್ತೃ. ಚಿತ್ತೂರು ಕೃಷ್ಣಯ್ಯ ಶೆಟ್ಟಿ, ಶಿವಪುರ ಶ್ರೀನಿವಾಸ ಪಂಡಿತ, ಐರೋಡಿ ಕೃಷ್ಣ ಉಡುಪರ ಅರ್ಹ ಶಿಷ್ಯ.

ಯಕ್ಷಗಾನ ರಂಗದ ಕಳೆದ ಐದಾರು ದಶಕಗಳ ಇತಿಹಾಸದ ಒಳ್ಳೆಯ ತಿಳಿವು, ಬಹಳಷ್ಟು ನೆನಪುಗಳು ಕಂದಾವರ ಮಾಸ್ತರರಲ್ಲಿದೆ. ಬೆರಗುಗಣ್ಣಿಂದ ನೋಡುತ್ತಲೆ ವಿಮರ್ಶಿಸಬಲ್ಲ, ಪ್ರಾಂಜಲ ಪ್ರೀತಿಯಿಂದ ಎಲ್ಲದರಲ್ಲೂ ಕಣ್ಣು, ಕಿವಿ, ಎದೆ ತೆರೆದಿಡಬಲ್ಲ ಶೆಟ್ಟರು ಓರ್ವ ಮಾದರಿ ರಸಿಕ ಶ್ರೋತೃ. ವಿದ್ವತ್ತು, ಪ್ರತಿಭೆಗಳನ್ನು ನಿರಾಳ, ನಿರ್ಮತ್ಸರ ಗುಣದಿಂದ ಮೆಚ್ಚುವ, ಪ್ರೋತ್ಸಾಹಿಸುವ ಸುಸಂಸ್ಕೃತ ಹಳ್ಳಿಗ. ಇಂದಿಗೂ ದೂರದೂರುಗಳಿಗೆ ಬಂದು ಕುಳಿತು ನೋಡುವ ಅಭಿಮಾನಿ. ತಾನು

ಮೆಚ್ಚಿದುದನ್ನು ನೆನಪಿಟ್ಟು ಹೇಳುವ ಸ್ಪಂದನಶೀಲ, ಸೂಕ್ಷ್ಮ ಶರೀರ ಪ್ರಕೃತಿ, ಆಗಾಗ ಕಾಡುವ ಅನಾರೋಗ್ಯಗಳ ನಡುವೆಯೂ ಯಕ್ಷಗಾನ ಅಭಿರುಚಿ ಉಳಿಸಿಕೊಂಡು ಶ್ರಮ, ಪರಿಶ್ರಮ ಪಟ್ಟ ನೈಜ ಅಭಿಮಾನಿ. ಅವರದೆ ಭಾಷೆಯಲ್ಲಿ "ಹುಶಾರಿಲ್ಲದಿದ್ರೂ ಯಕ್ಷಗಾನದ ಮರ್ಲ್ ಬಿಡ್ತಿಲ್ಲೆ" ಹೌದು ಬಿಡುಕಾಗ.

ಕಂದಾವರ ರಘುರಾಮ ಮಾಸ್ತರರ ವ್ಯಕ್ತಿತ್ವ, ಅರ್ಥಗಾರಿಕೆ, ಕವಿತ್ವ, ಸ್ನೇಹಗಳು, ಅವರೊಂದಿಗೆ ಒಡನಾಡಿದ ತಾಳಮದ್ದಳೆಗಳ ಹಾಗೆ ಕುಂದಾಪುರ –ಬಸ್ರೂರು– ಕಂಡ್ಲೂರು ದಾರಿಯ ಉದ್ದದ ಸುಂದರ, ಸಮತಟ್ಟಾದ ಬಯಲಿನ ಹಾಗೆ, ಅವುಗಳ ಮೇಲೆ ಹಾದು ಬರುವ ಮೆಲುಗಾಳಿಯ ಹಾಗೆ, ಅಲ್ಲಿ ತೊನೆಯುವ ಪೈರಿನ ಹಾಗೆ ಸದಾ ಆಸ್ವಾದ್ಯ.

ಯಕ್ಷಗಾನ ಪ್ರಸಂಗ ಸಾಹಿತ್ಯ ಮತ್ತು ಕಂದಾವರ ಅವರ ಪ್ರಯೋಗಗಳು: ಕೆಲವು ಟಿಪ್ಪಣಿಗಳು

ಪ್ರತಾಪಚಂದ್ರ ಶೆಟ್ಟಿ ಹಳ್ನಾಡು

ಯಕ್ಷಗಾನ ಪ್ರಸಂಗ ಎಂಬುದು ಪದ್ಯಗಳ ಮೂಲಕ ಹೆಣೆಯಲ್ಪಡುವ ಕಥಾ ಸನ್ನಿವೇಶ. ಇದು ಪ್ರದರ್ಶನದ ಪಠ್ಯವೂ ಆಗಿದ್ದು ಕಥೆಯ ನಡಿಗೆಗೆ ಆಧಾರಸ್ತಂಭವಾಗಿ ಪರಿಣಮಿಸಿದೆ. ಯಕ್ಷಗಾನ ಅರ್ಥಗಾರಿಕೆಗೆ ಪ್ರಸಂಗಗಳೇ ಮೂಲ ಪಠ್ಯಗಳಾಗಿದ್ದು ಅದು ಪ್ರದರ್ಶನದ ಸಂವಿಧಾನವನ್ನು ರೂಪಿಸುತ್ತದೆ. ಯಾವುದೇ ಒಂದು ಪ್ರಸಂಗಕ್ಕೆ ಕತೆಯನ್ನು ಆರಿಸಿಕೊಳ್ಳುವಾಗ ಕವಿಯ ಹೊಣೆಗಾರಿಕೆ ಮಹತ್ವದ್ದು. ಅದು ಕೇವಲ ರಂಜನೆಯಾಗಿರದೆ ಸತ್ವಭರಿತವಾಗಿರಬೇಕು. ಪ್ರಸಂಗ ಸಾಹಿತ್ಯದಲ್ಲಿ ಮೌಲ್ಯಗಳು ಕಾಲ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಪಲ್ಲಟಗಳಿಗೆ ಒಳಗಾಗುತ್ತಿರುತ್ತವೆ. ಗತದ ಕೆಲವು ಸವಕಲು, ಅರ್ಥಶೂನ್ಯ ವಿಚಾರಗಳನ್ನು ಇಂದು ಮೌಲ್ಯಗಳೆಂದು ಪರಿಗಣಿಸುವುದು ಕಷ್ಟಸಾಧ್ಯ, ಇಂತಹ ಸಂದರ್ಭಗಳಲ್ಲಿ ವರ್ತಮಾನದ ದ್ರಷ್ಟಿ ದೋರಣೆಗಳಿಗೆ ಅನುಗುಣವಾಗಿ ಪೌರಾಣಿಕ ಘಟನೆಗಳನ್ನು ಮರುನಿರೂಪಿಸುವುದು ಹೆಚ್ಚು ಸೂಕ್ತ.

ಘಟನೆಯೊಂದರ ಪದ್ಯರೂಪದ ಅಭಿವ್ಯಕ್ತಿಯಾಗಿರುವ ಯಕ್ಷಗಾನ ಪ್ರಸಂಗಗಳು ಬಹುತೇಕವಾಗಿ ಛಂದಸ್ಸು ಅಥವಾ ಮಟ್ಟುಗಳನ್ನು ಆಧರಿಸಿ ರೂಪುಗೊಂಡಿವೆ. ತಾಳಲಯಕ್ಕೆ ಬದ್ಧವಾಗಿರುವುದರೊಂದಿಗೆ ರಸಾಭಿವ್ಯಕ್ತಿಗೆ ಅನುಕೂಲವಾಗುವಂತೆ ಪ್ರಸಂಗದ ಓಟವಿರುತ್ತದೆ. ಇಲ್ಲಿ ಪಾಂಡಿತ್ಯ ಪ್ರದರ್ಶನಕ್ಕೆ ಅವಕಾಶ ಮತ್ತು ಸಾಧ್ಯತೆಗಳು ಕಡಿಮೆ. ಜನಸಮುದಾಯದ ನಡುವೆ ಹರಿದುಬಂದ ಕಲಾಪ್ರಕಾರ ಇದಾಗಿದೆ. ಪುರಾಣ, ಮಹಾಕಾವ್ಯ, ಜಾನಪದ, ಐತಿಹಾಸಿಕ, ಸಾಮಾಜಿಕ ಮತ್ತು ಕಾಲ್ಪನಿಕ ಘಟನೆಗಳನ್ನು ಆಧರಿಸಿ ಪ್ರಸಂಗಗಳು ರೂಪುಗೊಂಡಿವೆ. ಭಕ್ತಿ, ಪಾತಿವ್ರತ್ಯ, ಕರ್ಮಸಿದ್ಧಾಂತ ಮೊದಲಾದ ಮೌಲ್ಯಗಳು ಪ್ರಸಂಗ ಸಾಹಿತ್ಯದಲ್ಲಿ ಮತ್ತೆ ಮತ್ತೆ ಸಂವಾದಕ್ಕೆ ಒಳಗಾಗುತ್ತಿರುತ್ತವೆ. ಇನ್ನೊಂದೆಡೆಯಲ್ಲಿ ಒಳ್ಳೆಯ ಮತ್ತು ಕೆಟ್ಟ ಮೌಲ್ಯಗಳು ಪರಸ್ಪರ ಸಂಘರ್ಷಕ್ಕೆ ಒಳಗಾಗುವುದನ್ನು ಸಹ

ಗಮನಿಸಿಕೊಳ್ಳಲು ಸಾಧ್ಯವಿದೆ. ಹೀಗೆ 0ಯಕ್ಷಗಾನ ಪ್ರಸಂಗಗಳು ಪ್ರೇಕ್ಷಕರಿಗೆ ಮನರಂಜನೆ0ಯನ್ನು ಒದಗಿಸುವುದರೊಂದಿಗೆ ವಿಚಾರ ಪ್ರಚೋದಕವೂ ಆಗಿದೆ.

ಹಿರಿ0ಯ ಜಾನಪದ ವಿದ್ವಾಂಸರಾದ ಪ್ರೊ. ಎಂ. ಮರಿಯಪ್ಪ ಭಟ್ಟರು ಯಕ್ಷಗಾನ ಪ್ರಸಂಗಗಳನ್ನು ಜಾನಪದ ವಾಙ್ಮಯ ಎಂದು ಕರೆದಿದ್ದಾರೆ. ಇದಕ್ಕೆ ಪೂರಕವಾಗಿ ರಾಘವ ನಂಬಿ0ಯಾರ್ ಅವರ ಅಭಿಪ್ರಾ0ಯವನ್ನು ಗಮನಿಸಿಕೊಳ್ಳಬಹುದು. "ಪ್ರಸಂಗ ಮೂಲತಃ ಒಂದು ಗೀತ ರೂಪಕ. ಸರಸ, ಸಂಭಾಷಣೆಯಿಂದ ಕೂಡಿದ ಸೊಗಸಾದ ರಂಗಪ್ರದರ್ಶನವನ್ನು ಏರ್ಪಡಿಸುವುದು ಇದರ ಉದ್ದೇಶವಾಗಿದೆ. ಕರ್ನಾಟಕದ ಕರಾವಳಿ ಹಾಗೂ ಮಲೆನಾಡಿನ ಕೆಲ ಭಾಗಗಳಲ್ಲಿ ಆಶು ವಚನಗಾರಿಕೆಯಲ್ಲಿ ಕಾಣಸುವ ಗದ್ಯಪದ್ಯ ಮಿಶ್ರಿತವಾದ ದೃಶ್ಯ ಕಾವ್ಯವಾಗಿ ಇದನ್ನು ಪರಿಭಾವಿಸಿಕೊಳ್ಳಬಹುದು". ವಿದ್ವಾಂಸರುಗಳು ಅಭಿಪ್ರಾ0ಯಪಡುವಂತೆ, ಯಕ್ಷಗಾನ ಸಾಹಿತ್ಯವು ದಾಸಸಾಹಿತ್ಯಕ್ಕಿಂತ ಪ್ರಾಚೀನ ಕಲೆಯಾಗಿ ಕಂಡು ಬರುತ್ತದೆ. ರಾಗ ತಾಳಬದ್ಧ ಕೀರ್ತನೆಗಳ ರೂಪದಲ್ಲಿ ಭಕ್ತಿ ಸಾಹಿತ್ಯವನ್ನು ನಿರ್ಮಿಸಿರುವ ಶಿವದಾಸರು, ಹರಿದಾಸರು, ಜಿನಭಕ್ತರು ಬಲುಮಟ್ಟಿಗೆ ಯಕ್ಷಗಾನ ಪದಗಳನ್ನೇ ಅನುಸರಿಸಿದಂತೆ ಕಂಡು ಬರುತ್ತದೆ. ಈ ಎಲ್ಲಾ ಅಭಿಪ್ರಾ0ಯಗಳು ಪ್ರಸಂಗ ಸಾಹಿತ್ಯದ ಭವ್ಯ ಪರಂಪರೆ ಮತ್ತು ಅನನ್ಯತೆ0ಯನ್ನು ಪ್ರಕಟಪಡಿಸುತ್ತದೆ.

0ಯಕ್ಷಗಾನ ಸಾಹಿತ್ಯವು ಸುಮಾರು ಐದು ಶತಮಾನಗಳ ಸುದೀರ್ಘ ಚರಿತ್ರೆ0ಯನ್ನು ಹೊಂದಿದ್ದು ಈ ಅವಧಿ0ಯಲ್ಲಿ ಪ್ರಕಟಗೊಂಡ ಸಾವಿರಾರು ಪ್ರಸಂಗಗಳು ಮುದ್ರಿತ ರೂಪದಲ್ಲಿ ಲಭ್ಯವಿದೆ. ಆದರೆ ಆಧುನಿಕ ಕನ್ನಡದ ವಿದ್ವತ್ ವಲ0ಯದಲ್ಲಿ 0ಯಕ್ಷಗಾನ ಸಾಹಿತ್ಯಕ್ಕೆ ವಿಶೇಷ ಮನ್ನಣೆ ಪ್ರಾಪ್ತವಾಗಿಲ್ಲ ಎಂಬುದು ವಿಷಾದನೀ0ಯ ಸಂಗತಿ. ಕನ್ನಡ ಸಾಹಿತ್ಯ ಚರಿತ್ರೆ0ಯ ಬೇರೆ ಬೇರೆ ರಚನೆಗಳು ಮತ್ತು ಆವೃತ್ತಿಗಳನ್ನು ಗಮನಿಸಿದಾಗ ಅಲ್ಲಿ 0ಯಕ್ಷಗಾನ ಸಾಹಿತ್ಯ ಮತ್ತು ಕೃತಿಗಳು ಅವಗಣನೆಗೆ ಒಳಗಾಗಿರುವುದಂತೂ ಸತ್ಯ. ಎಲ್ಲೋ ಒಂದೆರಡು ಕಡೆ ದೊರೆ0ಯುವ ಉಲ್ಲೇಖಗಳನ್ನು ಹೊರತುಪಡಿಸಿದರೆ ಈ ಕುರಿತಂತೆ ವಿಸ್ತೃತವಾದ ವಿವರಗಳು ಒದಗಿಬರುವುದಿಲ್ಲ. ಹಾಗೆ0ಯೇ 0ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ಪ್ರಕಟವಾದ ವಿಮರ್ಶಾ ಲೇಖನಗಳು, ಸಮೀಕ್ಷೆಗಳು ತೀರಾ ವಿರಳ ಎನ್ನಬಹುದು. ಪ್ರಸಂಗ ಕೃತಿಯು ಕಾವ್ಯದ ಗುಣಸ್ವರೂಪವನ್ನು ಹೊಂದಿರುವ ನಡುವೆ0ಯೂ ಅದನ್ನು ಕಾವ್ಯ ಅಥವಾ

ಸಾಹಿತ್ಯ ಕೃತಿ ಎಂಬುದಾಗಿ ಪರಿಗಣಿಸದಿರುವುದು ಬೇಸರ ಹುಟ್ಟಿಸುವ ಸಂಗತಿ ಎನಿಸಿದೆ. ಆದರೆ ಈ ಬಗೆಯ ಅವಗಣನೆಗೆ ಕಾರಣವಾದ ಸಂಗತಿಗಳು ಯಾವುವು? ಇದಕ್ಕೆ ಪೂರಕವಾಗಿ ಸಾಹಿತ್ಯ ಚರಿತ್ರೆಯನ್ನು ಹೇಗೆ ಪುನರ್ರಚನೆಗೆ ಒಳಪಡಿಸಬೇಕಾಗಿದೆ? ಈ ಹಂತದಲ್ಲಿ ಯಕ್ಷಗಾನ ಕೃತಿಗಳು ಕಂಡು ಅನುಭವಿಸಿದ ಹಿನ್ನಡೆ ಎಂಥದ್ದು? ಈ ಮೊದಲಾದ ವಿಚಾರಗಳು ಬೌದ್ಧಿಕ ವಲಯದಲ್ಲಿ ಒಂದಿಷ್ಟು ಸಂವಾದಕ್ಕೆ ಒಳಗಾಗಬೇಕಾಗಿದೆ.

ಕರಾವಳಿ ಕುಂದಾಪುರ ಪರಿಸರದಲ್ಲಿ ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೆ ಹೊಸ ಆಯಾಮ ಒದಗಿಸಿದ ಆಧುನಿಕ ಸಂದರ್ಭದ ಕೃತಿಕಾರರುಗಳ ಸಾಲಿನಲ್ಲಿ ಕಂದಾವರ ರಘುರಾಮ ಶೆಟ್ಟಿ ಅವರು ಪ್ರಮುಖವಾಗಿ ಕಂಡುಬರುತ್ತಾರೆ. ಪ್ರಸಂಗ ಸಾಹಿತ್ಯದ ಹೊಸಕಾಲದ ಒಲವು-ನಿಲುವುಗಳು ಮತ್ತು ಪಲ್ಲಟಗಳ ಕುರಿತಂತೆ ಚರ್ಚಿಸುವ ಸಂದರ್ಭದಲ್ಲಿ ಕಂದಾವರ ಅವರನ್ನು ಹೊರತುಪಡಿಸಿ ಯೋಚಿಸುವುದು ಕಷ್ಟಸಾಧ್ಯ ಛಂದೋಬದ್ಧವಾಗಿ ಪೌರಾಣಿಕ-ಸಾಮಾಜಿಕ ಆಕರಗಳನ್ನೇ ಬಳಸಿಕೊಂಡು ಇವರು ರಚಿಸಿದ ಬಹಳಷ್ಟು ಪ್ರಸಂಗಗಳು ಮೌಲ್ಯಾಧಾರಿತ ಮತ್ತು ಸುಸಂಬದ್ಧವೆನಿಸಿವೆ. ಈ ಹಿನ್ನೆಲೆಯಲ್ಲಿ ಕಂದಾವರ ಅವರು ಯಕ್ಷರಂಗವನ್ನು ಪ್ರವೇಶಿಸಿದ ಚಾರಿತ್ರಿಕ ಸಂದರ್ಭ ಮತ್ತು ಅವರು ಎದುರಿಸಿದ ಸಾಂಸ್ಕೃತಿಕ ಸವಾಲುಗಳ ಕುರಿತ ಕೆಲ ಸಂಗತಿಗಳನ್ನು ಅವಲೋಕಿಸುವುದು ಪ್ರಸ್ತುತ ಅನ್ನಿಸುತ್ತದೆ.

ಕಂದಾವರ ಅವರಿಗೆ ಪ್ರಸಂಗ ರಚನೆಗೆ ಪ್ರೇರಣೆ ಒದಗಿಸಿದ್ದು ಮುದ್ದಣನ ರತ್ನಾವತಿ ಕಲ್ಯಾಣ ಹಾಗೂ ಕುಮಾರ ವಿಜಯ ಪ್ರಸಂಗದ ಪದ್ಯಗಳು. ವಿದ್ಯಾರ್ಥಿ ದೆಸೆಯಲ್ಲಿ ಪಠ್ಯವಾಗಿ ಅಭ್ಯಸಿಸಿದ ಈ ಪದ್ಯಗಳು ಅವರಿಗೆ ಅಲಂಕಾರ ಮತ್ತು ಛಂದಸ್ಸಿನ ಸ್ವರೂಪವನ್ನು ಪರಿಚಯಿಸಿದವು. ಇದು ಅವರ ಪ್ರಸಂಗ ರಚನೆಗೆ ಭೂಮಿಕೆಯನ್ನು ಒದಗಿಸಿದ್ದು ಮಾತ್ರವಲ್ಲ ತಾಳ-ಲಯಗಳನ್ನು ಪ್ರಾಯೋಗಿಕವಾಗಿ ಅರಿತುಕೊಳ್ಳಲು ಸಾಧ್ಯವಾಯಿತು. ಮುಂದೆ, ಹಲವಾರು ಪ್ರಸಂಗಗಳನ್ನು ಓದಿ ಪದ್ಯ ರಚನೆಯ ಸೂಕ್ಷ್ಮವನ್ನು ಅರಿತುಕೊಂಡರು. ಚಾರಿತ್ರಿಕ ವಸ್ತುವನ್ನು ಆಧರಿಸಿ ಚಂದ್ರಗುಪ್ತ ವಿಜಯ ಎಂಬ ಪ್ರಸಂಗ ರಚಿಸಿದರು. ಆದರೆ ಅದು ಪ್ರದರ್ಶನಕ್ಕೆ ಬರುವ ಮೊದಲೇ ಕಳೆದು ಹೋಯಿತು. ವಿಶೇಷ ಯಶಸ್ಸು ಕಾಣಲಿಲ್ಲ. ಮುಂದೆ ಪ್ರಕಟಗೊಂಡದ್ದು ಸತೀ ಸೀಮಂತಿನಿ ಎಂಬ ಪ್ರಸಂಗ. ಇದು ಪ್ರಸಿದ್ಧ ಭಾಗವತ ಕಾಳಿಂಗ ನಾವಡರ ಕಂಠಸಿರಿಯಲ್ಲಿ ಕರಾವಳಿಯ ಉದ್ದಗಲಕ್ಕೂ ಅನುರಣಿಸಿತು.

ಸಾಲಿಗ್ರಾಮ ಮೇಳ ಇದರ ಪ್ರದರ್ಶನಕ್ಕೆ ಭೂಮಿಕೆಯನ್ನು ಒದಗಿಸಿತು. ಮುಂದೆ ಮೂಡಿಬಂದ ಸಾಲು ಸಾಲು ಪ್ರಸಂಗಗಳು ಕಂದಾವರ ಅವರ ಯಶಸ್ಸಿನ ಒಂದೊಂದು ತುಣುಕುಗಳೇ ಆಗಿವೆ. ಇವರ ಬಹುಪಾಲು ಪ್ರಸಂಗಗಳಲ್ಲಿ ಮೂಡಿಬಂದ ಪದ್ಯಗಳು ಸರಳವಾದ ಅಭಿವ್ಯಕ್ತಿಯೊಂದಿಗೆ ಸುಲಲಿತವಾಗಿದ್ದು ಛಂದೋಬದ್ಧವಾಗಿ ಅನಾವರಣಗೊಂಡಿವೆ. ಈ ಬಗೆಯ ಅಭಿವ್ಯಕ್ತಿ ಕಂದಾವರ ಅವರ ಪ್ರಸಂಗಗಳಲ್ಲಿ ದೊಡ್ಡದೊಂದು ಲವಲವಿಕೆಯನ್ನು ಸೃಷ್ಟಿಸಿದೆ.

ಕಂದಾವರ ಅವರ ಬಹುತೇಕ ಪ್ರಸಂಗಕೃತಿಗಳು ರಂಗಕೃತಿಗಳಾಗಿ ರೂಪ ಪಡೆದದ್ದು ಡೇರೆ ಮತ್ತು ಬಯಲಾಟ ಮೇಳಗಳಲ್ಲಿ. ಸುಮಾರು ಮೂರು ದಶಕಗಳ ಹಿಂದೆ ಹೊಸ ಸ್ವರೂಪದೊಂದಿಗೆ ಡೇರೆ ಮೇಳವಾಗಿ ರೂಪುಗೊಂಡಿದ್ದ ಪೆರ್ಡೂರು ಮೇಳ ಕಂದಾವರ ಅವರ ಪುತ್ರ ತಪಸ್ವಿನಿ ಪ್ರಸಂಗವನ್ನು ಪ್ರದರ್ಶಿಸಿತು. ವರ್ಷಪೂರ್ತಿ ವಿವಿಧೆಡೆಗಳಲ್ಲಿ ಪ್ರದರ್ಶನ ಕಂಡ ಈ ಪ್ರಸಂಗ ಕಂದಾವರ ಅವರಿಗೆ ಯಕ್ಷಲೋಕದಲ್ಲಿ ವಿಶೇಷ ಸ್ಥಾನವನ್ನು ಕಲ್ಪಿಸಿತು. ಹಾಗೆಯೇ ಇದೇ ಮಾದರಿಯ ಇನ್ನಷ್ಟು ಪ್ರಸಂಗಗಳ ರಚನೆಗೂ ನಾಂದಿ ಹಾಡಿತು. ಈ ಪ್ರಸಂಗವು ಒಂದೆಡೆಯಲ್ಲಿ ಪೆರ್ಡೂರು ಮೇಳದ ಆರ್ಥಿಕ ಸಂಪನ್ಮೂಲವನ್ನು ವೃದ್ಧಿಸಿದರೆ, ಇನ್ನೊಂದೆಡೆಯಲ್ಲಿ ಕಲಾಭಿಮಾನಿಗಳ ಹೃದಯದಲ್ಲಿ ಮಿಂಚಿನ ಸಂಚಾರವನ್ನು ಸೃಷ್ಟಿಸಿತು. ಮುಂದೆ, ಸಾಲಿಗ್ರಾಮ ಮೇಳದ ಮೂಲಕ ಇವರ ಚೆಲುವೆ-ಚಿತ್ರಾವತಿ, ರತಿ-ರೇಖಾ, ಸತೀಸೀಮಂತಿನಿ, ವಸುವರಾಂಗಿ ಪ್ರಸಂಗಗಳು ಪ್ರದರ್ಶನಗೊಂಡು ಅದ್ದೂರಿ ಯಶಸ್ಸು ಕಂಡವು. ಅದೇ ವೇಳೆಗೆ ಮೂಲ್ಕಿ ಮೇಳದ ಮೂಲಕ ಪ್ರದರ್ಶನಗೊಂಡ ಸೀತಾ ಪಾರಮ್ಯ ಮತ್ತು ಧರ್ಮಸ್ಥಳ ಮೇಳದಲ್ಲಿ ಪ್ರದರ್ಶನಗೊಂಡ ವಸುವರಾಂಗಿ ಪ್ರಸಂಗಗಳು ಯಕ್ಷಗಾನಕ್ಕೆ ಹೊಸಬಗೆಯ ಪ್ರೇಕ್ಷಕ ವೃಂದವನ್ನು ಪರಿಚಯಿಸಿತು. ಮಂದಾರ್ತಿ ಮತ್ತು ಮಾರಣಕಟ್ಟೆ ಮೇಳಗಳಲ್ಲಿ ಮೂಡಿಬಂದ ಇವರ ಪ್ರಸಂಗಗಳು ಯಕ್ಷರಂಗದ ಚರಿತ್ರೆಯಲ್ಲಿ ಸ್ಥಾಯಿಯಾಗಿ ಉಳಿದಿವೆ. ಇನ್ನು ಇವರ ಪ್ರಾತಿನಿಧಿಕ ಪ್ರಸಂಗಗಳಾದ ಶ್ರೀ ದೇವಿ ಬನಶಂಕರಿ, ವಧು ಮಾಧವಿ ಸಹಿತ ಹತ್ತು ಪ್ರಸಂಗಗಳ ಪದ್ಯಗಳನ್ನೊಳಗೊಂಡ ದಶಮಿ ಕೃತಿ ಪ್ರಕಟಗೊಂಡಿದೆ.

ಕಂದಾವರ ರಘುರಾಮ ಶೆಟ್ಟಿ ಅವರ ಬಹುತೇಕ ಯಕ್ಷಗಾನ ಕೃತಿಗಳು ಸಂವಾದ ಸ್ವರೂಪದಲ್ಲಿಯೇ ಆವೃತವಾಗಿರುವುದನ್ನು ಗಮನಿಸಬಹುದು. ಸಂವಾದವನ್ನು ರೂಪಿಸಿ, ಅಳವಡಿಸುವ ಸಂದರ್ಭದಲ್ಲಿ ಅವರು ಭಿನ್ನ ಭಿನ್ನ

ಛಂದಸ್ಸುಗಳಲ್ಲಿ ಆಯಾಯ ಪಾತ್ರಗಳ ಸ್ವಭಾವಕ್ಕನುಗುಣವಾದ ಶೈಲಿ, ಶಬ್ದಗಳನ್ನು ಪ್ರಯೋಗಿಸುತ್ತ ಬಂದಿದ್ದಾರೆ. ಒಂದೇ ತಾಳದಲ್ಲಿ ಹೆಣೆಯಲಾದ ಸುದೀರ್ಘ ಸಂಭಾಷಣೆ ಏಕತಾನತೆಯನ್ನು ಉಂಟುಮಾಡುವ ಸಾಧ್ಯತೆಯನ್ನು ಮನಗಂಡ ಅವರು ಅಲ್ಲಿಯೂ ವೈವಿಧ್ಯವನ್ನು ಕಾಯ್ದುಕೊಂಡು ಬಂದಿದ್ದಾರೆ. ಸುಮಾರು ಮೂರು-ನಾಲ್ಕು ದಶಕಗಳ ಹಿಂದೆ ಆಧುನಿಕ ಪ್ರಸಂಗಗಳ ಕುರಿತು ಅನೇಕರಲ್ಲಿ ಮಡಿವಂತಿಕೆಯ ಭಾವ ವ್ಯಕ್ತಗೊಂಡಿತ್ತು. ಈ ರೀತಿಯ ಪ್ರಸಂಗಗಳನ್ನು ಪ್ರದರ್ಶಿಸುವುದಾಗಲಿ, ನೋಡುವುದಾಗಲಿ ಪುರಾಣಗಳಿಗೆ ಎಸಗುವ ಅಪಚಾರ ಮಾತ್ರವಲ್ಲ ನೋಡುಗರನ್ನು ತಪ್ಪುದಾರಿಗೆ ಒಯ್ಯುವ ಪ್ರಯತ್ನ ಎಂಬ ಭಾವನೆ ವ್ಯಕ್ತವಾಗಿತ್ತು. ಆದರೆ ಕಾಲ ಮತ್ತು ಪರಿಸ್ಥಿತಿ ಬದಲಾದಂತೆ ಆಧುನಿಕ ಮಾದರಿಯ ಪ್ರಸಂಗಗಳನ್ನು ಸ್ವೀಕರಿಸುವ ಮನಸ್ಥಿತಿ ನಿಧಾನಗತಿಯಲ್ಲಿ ಬೆಳೆದುಬಂತು. ಯಕ್ಷಗಾನಕ್ಕೆ ಆಧುನಿಕ ಸ್ವರೂಪ ಒದಗಿಬಂದ ಜತೆಯಲ್ಲಿಯೇ ಪ್ರಸಂಗ ರಚನೆಯಲ್ಲಿಯೂ ಪರಿಷ್ಕರಣೆಯ ಅಗತ್ಯವನ್ನು ಮನಗಂಡ ಪ್ರಸಂಗಕರ್ತರಲ್ಲಿ ಕಂದಾವರ ಅವರು ಪ್ರಮುಖರಾಗಿ ಗುರುತಿಸಿಕೊಂಡಿದ್ದಾರೆ. ಪುರಾಣಾಂತರ್ಗತ ಪ್ರಸಂಗಗಳೊಂದಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಿಗೆ ಮುಖಾಮುಖಿಯಾಗಬಲ್ಲ ಪ್ರಸಂಗಗಳು ಸಹ ಕಂದಾವರ ಅವರ ಲೇಖನಿಯಿಂದ ಹರಿದುಬಂದಿವೆ. ವೃತ್ತಿ ಮೇಳಗಳಿಗೆ ಪೌರಾಣಿಕವಲ್ಲದ ಹೊಸ ಪ್ರಸಂಗಗಳ ಪ್ರದರ್ಶನ ಅನಿವಾರ್ಯವೆನಿಸಿದ ಸಂದರ್ಭದಲ್ಲಿ ಕಂದಾವರ ಅವರ ಹಲವು ಪ್ರಸಂಗಗಳು ಬಹುವಿಶೇಷವಾದ ಬೇಡಿಕೆಯನ್ನು ಪಡೆದುಕೊಂಡವು. ಈ ನಿಟ್ಟಿನಲ್ಲಿ ಅವರ 'ರತಿರೇಖ', 'ಬನಶಂಕರಿ', 'ಚೆಲುವೆ ಚಿತ್ರಾವತಿ', 'ಶೂದ್ರ ತಪಸ್ವಿನಿ', 'ವಧು ಮಾದವಿ', ಮೊದಲಾದವುಗಳು ಪ್ರಾತಿನಿಧಿಕ ಪ್ರಯೋಗಗಳೆನಿಸಿವೆ. ಇದೇ ವೇಳೆಗೆ ಬಡಗುತಿಟ್ಟಿನ ಕಾಳಿಂಗ ನಾವಡ ವಿರಚಿತ 'ನಾಗಶ್ರೀ' ಮತ್ತು ತೆಂಕುತಿಟ್ಟಿನ ಅನಂತರಾಮ್ ಬಂಗಾಡಿ ವಿರಚಿತ 'ಕಾಡಮಲ್ಲಿಗೆ' ಪ್ರಸಂಗಗಳು ದಾಖಲೆ ನಿರ್ಮಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ರಂಗಕೃತಿ ಮತ್ತು ಸಾಹಿತ್ಯಕೃತಿ-ಈ ಎರಡೂ ನೆಲೆಗಳಲ್ಲಿ ಗ್ರಹಿಸುವ ಕುರಿತು ವಿಚಾರ ವಿನಿಮಯ ನಡೆದಾಗಲೆಲ್ಲ ನೆನಪಾಗುವ ಮತ್ತು ಉಲ್ಲೇಖಿಗೊಳ್ಳುವ ಹೆಸರುಗಳಲ್ಲಿ ಕಂದಾವರ ರಘುರಾಮ ಶೆಟ್ಟಿ ಅವರ ಹೆಸರು ಸಹ ಮಹತ್ವದ್ದು. ಕಂದಾವರ ಅವರ ಒಂದಿಷ್ಟು ಪ್ರಸಂಗಗಳು ಕೇವಲ

ರಂಗಕೃತಿಗಳಾಗಿ ಮಾತ್ರವಲ್ಲ ಸಾಹಿತ್ಯಕೃತಿಗಳಾಗಿಯೂ ಗಮನ ಸೆಳೆಯುವುದರೊಂದಿಗೆ ಮನ್ನಣೆಗೂ ಪಾತ್ರವಾಗಿವೆ. ಅವರು ಯಕ್ಷಗಾನ ಪ್ರಸಂಗಗಳೊಂದಿಗೆ ರಂಗಗೀತೆಗಳು, ಶಿಶುಗೀತೆಗಳು, ಕವನಗಳು ಮತ್ತು ನಾಟಕಗಳನ್ನು ಆಗಾಗ ರಚಿಸಿಕೊಂಡು ಬಂದಿರುವುದನ್ನು ಇದಕ್ಕೆ ಪೂರಕವಾಗಿ ಗಮನಿಸಿಕೊಳ್ಳಬಹುದಾಗಿದೆ. ಸೃಜನಶೀಲ ಬರವಣಿಗೆಯ ಮೇಲೆ ಇವರು ಹೊಂದಿದ್ದ ನಿರಂತರವಾದ ಹಿಡಿತ ಪ್ರಸಂಗಕೃತಿಗಳನ್ನು ಪ್ರಭಾವಿಸಿರುವ ಸಾಧ್ಯತೆಗಳಿವೆ. ಇವರ ಹಲವಾರು ಪ್ರಸಂಗಗಳಲ್ಲಿ ವ್ಯಕ್ತಗೊಂಡ ಸಾಹಿತ್ಯಿಕ ಮೌಲ್ಯಗಳು ಮತ್ತು ಬರವಣಿಗೆಯ ಪ್ರಬುದ್ಧತೆ ಅವುಗಳನ್ನು ಸಾಹಿತ್ಯ ಕೃತಿಗಳನ್ನಾಗಿ ಗುರುತಿಸಿರುವುದರೊಂದಿಗೆ ಅಧ್ಯಯನಯೋಗ್ಯವೆನಿಸಿವೆ. ಛಂದೋಬದ್ಧವಾದ ಓದು ಮತ್ತು ಹಾಡು ಇವರ ಬಹುಪಾಲು ಪ್ರಸಂಗಗಳಲ್ಲಿ ಸಾಧ್ಯವಾಗಿರುವುದನ್ನು ಕಲಾವಿದರು, ವಿದ್ವಾಂಸರುಗಳು ಮತ್ತು ಸಾಹಿತ್ಯ ಚರಿತ್ರಕಾರರು ವಿಶೇಷವಾಗಿ ಗುರುತಿಸಿದ್ದಾರೆ.

ಸಂಪಾದಕರ ಸಂದರ್ಶನ
ಕೆಂದಾವರೆಯ ಎಸಳುಗಳು

ತಾರಾನಾಥ ವರ್ಕಾಡಿ

ಕುಸುಮ ಕೋಮಲ ಹೃದಯದ ಶ್ರೀ ಕಂದಾವರ ರಘುರಾಮ ಶೆಟ್ಟರು ಬಹುಮುಖ ಪ್ರತಿಭಾಸಂಪನ್ನರು. ಅಧ್ಯಾಪನದೊಂದಿಗೆ ಕಥೆ, ಕವನ, ಭಾವಗೀತೆ, ನಾಟಕ, ಪ್ರಸಂಗ ರಚನೆ, ಭಾಗವತಿಕೆ, ಅರ್ಥಗಾರಿಕೆ, ವೇಷ...ಹೀಗೆ ನಾನಾ ಕ್ಷೇತ್ರಗಳಲ್ಲಿ ಹರಡಿಕೊಂಡಿರುವ ಇವರ ಪ್ರತಿಭೆ ಬಿರಿದ ಕೆಂದಾವರೆಯ ದಳಗಳಂತೆ ಸುಮನೋಹರ. ಬಂಟ ಸಮುದಾಯದ ಪುಟ್ಟಮ್ಮ-ಸದಿಯಣ್ಣ ದಂಪತಿಯ ಪುತ್ರನಾಗಿ ಇವರು ಜನಿಸಿದ್ದು ನವಂಬರ್ 15, 1936ರಂದು. ಹಟ್ಟಿಯಂಗಡಿ ಸರಕಾರಿ ಶಾಲೆಯಲ್ಲಿ ಐದನೇ ತರಗತಿ ತನಕ ಓದಿ ಬಸ್ರೂರು ಹಿಂದೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಂಟನೇ ತರಗತಿಯ ತನಕ ಕಲಿತರು. ಬಳಿಕ ಕುಂದಾಪುರ ಬೋರ್ಡ್ ಹೈಸ್ಕೂಲಿನಲ್ಲಿ ಹನ್ನೊಂದನೇ ತರಗತಿಯ ಓದು ಪೂರೈಸಿ ಮಂಗಳೂರಿನ ಬುನಾದಿ ಶಿಕ್ಷಣ ಸಂಸ್ಥೆಯಲ್ಲಿ ಟಿ.ಸಿ.ಹೆಚ್. ತರಬೇತಿ ಪಡೆದು, ಕಂಡ್ಲೂರು ನೇತಾಜಿ ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಾಪಕರಾದರು.

ತಂದೆ ತಾಳಮದ್ದಳೆಗಳಲ್ಲಿ ಹವ್ಯಾಸಿ ಭಾಗವತರು. ಅಜ್ಜ ಚಿತ್ತೂರು ಕೃಷ್ಣಯ್ಯ ಶೆಟ್ಟರು, ಮಾವ ಕಂದಾವರ ಅಣ್ಣಪ್ಪ ಶೆಟ್ಟರು ಆ ಕಾಲದ ಅರ್ಥಧಾರಿಗಳು. ಅಳಿಯನನ್ನು ತಾಳಮದ್ದಳೆಗೆ ಕರೆದುಕೊಂಡು ಹೋಗಿ ಯಕ್ಷಗಾನದ ಹುಚ್ಚು ಹಿಡಿಸಿದ್ದು ಇದೇ ಮಾವ. ಹರೆಯ ಹನ್ನೆರಡರಲ್ಲಿ ಬಸ್ರೂರು ಹಿಂದೂ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮೊದಲ ಬಾರಿಗೆ ತಾಳ ಹಿಡಿದು ಹಾಡಿದ ರಘುರಾಮ ಶೆಟ್ಟರಿಗೆ ಯಕ್ಷಗಾನ ಕಲಾಸತ್ವ ರಕ್ತದಲ್ಲೇ ಹರಿದು ಬಂದಿತ್ತು. ಬಾಲಪ್ರತಿಭೆಯನ್ನು ಗುರುತಿಸಿದ ರಮಾನಾಥ ನಾಯಕ್‌ರು ಹುಡುಗ ರಘುರಾಮನಿಂದಲೇ ಪ್ರಸಂಗವೊಂದನ್ನು ಬರೆಸಿ ಆಟವನ್ನೂ ಮಾಡಿಸಿದರು. ಆಗಲೇ ಹಾಡು ಕೇಳಿದ ಪ್ರತೀ ಬಾಯಿಯೂ ಇವರನ್ನು ಬಾಲಭಾಗವತ ಎಂದು ಕೊಂಡಾಡುವಂತಾಯಿತು.

ತನ್ನ ಇಪ್ಪತ್ತನೇ ಹರಯಕ್ಕೆ 'ಭಾರ್ಗವ ವಿಜಯ' ಎಂಬ ನಾಟಕ ಬರೆದ ಕಂದಾವರರು ಮುಂದೆ ಅನೇಕ ನಾಟಕಗಳನ್ನು ಬರೆದಿದ್ದಾರೆ. ದಾಮೋದರ ಪೈಗಳಿಂದ ಕುಣಿತ ಕಲಿತ ಕಂದಾವರರು ಕೃಷ್ಣ, ಚಿತ್ರಕೇತ ಮುಂತಾದ ಪಾತ್ರಗಳನ್ನು ನಿರ್ವಹಿಸಿದ್ದಾರೆ. ನಾಟಕ ಬರೆಯಲು ಆರಂಭಿಸಿದ ವರುಷವೇ ಸುಧನ್ವಮೋಕ್ಷದ ಸುಧನ್ವನಾಗಿ ತಾಳಮದ್ದಳೆಯ ವೇದಿಕೆಯೇರಿ 'ಸೈ' ಎನಿಸಿಕೊಂಡ ಕಂದಾವರದವರ ಅರ್ಥಗಾರಿಕೆಯ ಅನುಭವ ಸುಮಾರು ಅರುವತ್ತು ವರುಷಗಳದ್ದು. ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಹೆಸರಾಂತ ಅರ್ಥಧಾರಿಗಳ ಜೊತೆ ಭಾಗವಹಿಸಿದ ಹೆಗ್ಗಳಿಕೆ ಇವರದ್ದು. ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳ ಜೊತೆ 'ಅಭಿಮನ್ಯು'ವಾಗಿ ಅರ್ಥ ಹೇಳಿ ಅವರ ಕೊಂಡಾಟಕ್ಕೆ ಪಾತ್ರರಾಗಿದ್ದಾರೆ.

'ಚಂದ್ರಗುಪ್ತ ಚಾಣಕ್ಯ' ಪ್ರಸಂಗ ರಚನೆಯೊಂದಿಗೆ ಪ್ರಸಂಗರಚನೆಯಲ್ಲಿ ಹೆಚ್ಚಿನ ಆಸ್ಥೆ ವಹಿಸಿದ ಕಂದಾವರ ಸಾಲಿಗ್ರಾಮ ಮೇಳಕ್ಕಾಗಿ ಬರೆದ 'ಸತಿ ಸೀಮಂತಿನಿ' ಪ್ರಸಂಗದ ಬಳಿಕ ಯಶಸ್ಸಿನ ಮೆಟ್ಟಲೇರುತ್ತಾ ಹೋದರು. ಸುಮಾರು ನಲ್ವತ್ತಕ್ಕೂ ಹೆಚ್ಚಿನ ಪ್ರಸಂಗ ಪುಷ್ಪಗಳು ಇವರ ಜ್ಞಾನತರುವಿನ ಸಮೃದ್ಧಿಗೆ ಸಾಕ್ಷಿಗಳಾಗಿವೆ. ಇವರಿಗೆ ಭಾಗವತಿಕೆ ಕಲಿಸಿದವರು ಗೋಪಾಲಾಚಾರಿ. ಐರೋಡಿ ಕೃಷ್ಣ ಉಡುಪರು ಛಂದಸ್ಸನ್ನು ಹೇಳಿಕೊಟ್ಟವರು. ದಕ್ಷಿಣೋತ್ತರಕನ್ನಡ ಜಿಲ್ಲೆಗಳ ಲಕ್ಷಾಂತರ ಕಲಾಭಿಮಾನಿಗಳ ಪ್ರೀತಿಯ ಪ್ರಶಸ್ತಿಯನ್ನು ಪಡೆದಿರುವ ಇವರ ಕೀರ್ತಿಕಿರೀಟವನ್ನು ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳು ಅಲಂಕರಿಸಿವೆ.

ಕಂದಾವರದವರೊಡನೆ ಹಾಗೂ ಅವರ ಮಡದಿ ಮತ್ತು ಮಗಳೊಡನೆ ಆತ್ಮೀಯ ಸಂದರ್ಶನ

ಪ್ರಶ್ನೆ:– ನೀವು ಶಿಕ್ಷಣರಂಗವನ್ನು ಪ್ರವೇಶಿಸುವ ಕಾಲಕ್ಕೂ ಈ ಕಾಲಕ್ಕೂ ಇರುವ ವ್ಯತ್ಯಾಸವೇನು?

ಉತ್ತರ:– ಅಂದು ಅಧ್ಯಾಪಕರಿಗೆ ಉದ್ಯೋಗದಲ್ಲಿ ವಿಮಲ ಶ್ರದ್ಧೆ ಇತ್ತು. ಹೊಡೆದು ಬಡಿದಾದರೂ ತನ್ನ ವಿದ್ಯಾರ್ಥಿಯನ್ನು ಉತ್ತಮ ನಾಗರಿಕನನ್ನಾಗಿ ರೂಪಿಸುವ ಶಿಷ್ಯವಾತ್ಸಲ್ಯವಿತ್ತು. ವಿದ್ಯಾರ್ಥಿಗಳೂ ಅಧ್ಯಾಪಕರನ್ನು ತುಂಬಾ ಗೌರವದಿಂದ ಕಾಣುತ್ತಿದ್ದರು. ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ತಾಳ–ಮೇಳ ಹೊಂದುತ್ತಿತ್ತು. ಆದರೆ ಇಂದು ಅಂತಹ ಬಾಂಧವ್ಯದ ಕೊರತೆ ಎಲ್ಲೆಡೆ ಕಾಣಸುತ್ತಿದೆ. ಪ್ರಾಯಶಃ ಇದಲ್ಲಾ ಕಾಲಪ್ರಭಾವವೆಂದೇ ಹೇಳಬೇಕು.

ಪ್ರಶ್ನೆ:- ಶಿಕ್ಷಣಕ್ಕೆ ಶಿಕ್ಷೆ ಅನಿವಾರ್ಯವೇ?
ಉತ್ತರ:- ಹೌದು! ವಿದ್ಯಾರ್ಥಿಯನ್ನು ತಿದ್ದಿ ರೂಪಿಸಬೇಕಾದರೆ ಶಿಕ್ಷೆ ಅನಿವಾರ್ಯ. ಹಾಗೆಂದು ಎಲ್ಲಾ ತಪ್ಪುಗಳಿಗೆ ದಂಡವೇ ಔಷಧವಲ್ಲ. ಉಕ್ತಲೇಖನದಲ್ಲಿ ತಪ್ಪು ಬಂದಾಗ ಹೊಡೆಯುವುದಕ್ಕಿಂತ ಆ ಶಬ್ದಗಳನ್ನು ವಿದ್ಯಾರ್ಥಿ ಸರಿಯಾಗಿ ಅರ್ಥಮಾಡಿಕೊಳ್ಳುವ ತನಕ ಬರೆಸುವುದೇ ಉತ್ತಮ. ಶಿಕ್ಷಣಕ್ಕೆ ಪೂರಕವಾದ ಶಿಕ್ಷೆ ಬೇಕೇ ಹೊರತು ವ್ಯಥಾ ಹಿಂಸಾತ್ಮಕವಾಗಿ ಅಲ್ಲ. ವಿದ್ಯಾರ್ಥಿಗೆ ಅಧ್ಯಾಪಕರಲ್ಲಿ ಭಯಬೇಕು. ಸಲುಗೆ ಸಲ್ಲ.

ಪ್ರಶ್ನೆ:- ನಲಿ-ಕಲಿ ಶಿಕ್ಷಣದ ಬಗ್ಗೆ ನಿಮ್ಮ ಅಭಿಪ್ರಾಯವೇನು?
ಉತ್ತರ:- ನಮ್ಮ ಕಾಲದಲ್ಲಿ ಅದು ಇರಲಿಲ್ಲ. ಏನಿದ್ದರೂ ಅದು ಸಣ್ಣ ಮಕ್ಕಳಿಗೆ ಕಲಿಸಲು ಅನುಕೂಲವಾಗಬಹುದೇನೋ. ಆದರೂ ಮಕ್ಕಳಿಗೆ ಗುರು-ಹಿರಿಯರಲ್ಲಿ ಭಯಭಕ್ತಿ ಹುಟ್ಟಿಸಲು ಅಸಮರ್ಥವಾದ ತಂತ್ರ ಫಲಕಾರಿ ಎನಿಸದು.

ಪ್ರಶ್ನೆ:- ಹೆತ್ತವರ ಪ್ರತಿಕ್ರಿಯೆ ಅಂದು ಹೇಗಿತ್ತು? ಇಂದು ಹೇಗಿದೆ?
ಉತ್ತರ:- ಅಂದು ಚೆನ್ನಾಗಿತ್ತು. ಹೆತ್ತವರಿಗೂ ಅಧ್ಯಾಪಕರ ಮೇಲೆ ಗೌರವವಿತ್ತು. ಮಕ್ಕಳನ್ನು ಶಿಕ್ಷಿಸಿದರೆ "ತುಂಬಾ ಚೆನ್ನಾಯಿತು. ಇನ್ನೂ ಒಂದೆರಡು ಬಾರಿಸಿ" ಎನ್ನುತ್ತಿದ್ದರು. ಇಂದು ಹಾಗಿಲ್ಲ. ಅತಿಮುದ್ದಿನ ಪರಿಣಾಮ ಶಿಕ್ಷಕರನ್ನೇ ದಬಾಯಿಸುತ್ತಾರೆ. ಇದರ ಪರಿಣಾಮ ಮನೆಯಲ್ಲೂ ಶಾಲೆಯಲ್ಲೂ ಮಕ್ಕಳು ನಿರ್ಭಯದಿಂದ ವ್ಯವಹರಿಸುತ್ತಾರೆ. ಈ ಸಲುಗೆ ಮಕ್ಕಳ ಭವಿಷ್ಯಕ್ಕೆ ಒಳ್ಳೆಯದಲ್ಲ. ಬಾಲ್ಯದಿಂದಲೇ ಬೆಳೆದು ಬರುವ ಸ್ವೇಚ್ಛಾ ವ್ಯವಹಾರ ಅವರಿಗೆ ವ್ಯಕ್ತಿತ್ವವನ್ನು ರೂಪಿಸಲು ಅಡ್ಡಗಾಲು ಹಾಕುತ್ತದೆ. ಮಕ್ಕಳು ಗುರುಹಿರಿಯರ ಮಾರ್ಗದರ್ಶನದಲ್ಲೇ ಬೆಳೆಯಬೇಕು. ಅಗತ್ಯ ಕಂಡರೆ ಶಿಕ್ಷೆಯೂ ಅನಿವಾರ್ಯ.

ಪ್ರಶ್ನೆ:- ಹೆತ್ತವರ ಈ ಹಸ್ತಕ್ಷೇಪದ ಬಗ್ಗೆ ನಿಮ್ಮ ಅಭಿಪ್ರಾಯವೇನು?
ಉತ್ತರ:- ಇದು ಒಳ್ಳೆಯ ಲಕ್ಷಣವಲ್ಲ. ಶಿಕ್ಷಕರಿಗೆ ತನ್ನ ವಿದ್ಯಾರ್ಥಿಯ ಬಗ್ಗೆ ವಿಶೇಷ ಕಾಳಜಿ ಇರುತ್ತದೆ. ಭಯವಿಲ್ಲದೇ ಕೇವಲ ಆಸಕ್ತಿಯಿಂದ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಅಂದು-ಇಂದು-ಎಂದೆಂದೂ ಕಡಿಮೆ.

ಹುಡುಗಾಟದಿಂದ ಮಕ್ಕಳ ಜೀವನ ಹಾಳಾಗದಿರಲಿ ಎಂಬುದಕ್ಕಾಗಿಯೇ ಶಿಕ್ಷೆ. ಮಾರ್ಕ್ ಕಡಿಮೆ ಬಂದರೆ ಹೆತ್ತವರು ಮಕ್ಕಳನ್ನು ಮಾತ್ರವಲ್ಲ ಅಧ್ಯಾಪಕ ವರ್ಗವನ್ನೂ ನಿಂದಿಸುತ್ತಾರೆ. ಇತ್ತೀಚೆಗೆ ಮಕ್ಕಳಿಗೆ ಕೊಂಡಾಟ ಹೆಚ್ಚಾಗಿರುವುದರಿಂದ ಅಪಮಾನಗಳನ್ನು ಸಹಿಸುವ ಶಕ್ತಿ ಇರುವುದಿಲ್ಲ. ಆದುದರಿಂದ ಸಣ್ಣ ಕಾರಣಕ್ಕೂ ಆತ್ಮಹತ್ಯೆ ಮಾಡುವ ಮಕ್ಕಳೂ ಇದ್ದಾರೆ. ಬಾಲ್ಯದಲ್ಲಿ ಶಿಕ್ಷಕರಿಗೇ ಪೂರ್ಣ ಹೊಣೆ ಕೊಟ್ಟರೆ ಇಂತಹ ದುರಂತಗಳನ್ನು ತಪ್ಪಿಸಬಹುದು.

ಪ್ರಶ್ನೆ:- ಕನ್ನಡ ಮಾಧ್ಯಮದ ಬಗ್ಗೆ ಏನನ್ನುತ್ತೀರಿ?

ಉತ್ತರ:- ಹತ್ತನೇ ತರಗತಿಯ ತನಕವಾದರೂ ಕನ್ನಡ ಶಿಕ್ಷಣ ಕಡ್ಡಾಯವಾಗಬೇಕು. ಸಂಪರ್ಕ, ವ್ಯವಹಾರಕ್ಕಾಗಿ ಇಂದಿನ ದಿನಗಳಲ್ಲಿ ಅನಿವಾರ್ಯವಾಗಿರುವ ಇಂಗ್ಲಿಷ್ ಕಲಿಕೆಯೂ ಜೊತೆಗಿರಬೇಕು. ಇದರಲ್ಲಿ ಸರಕಾರದ ಹೊಣೆ ಬಹಳ ಮುಖ್ಯ. ಬದುಕುವುದಕ್ಕೆ ಇಂಗ್ಲಿಷ್ ಬೇಕೇಬೇಕು ಎಂಬ ಹೆತ್ತವರ ಭ್ರಮೆ ನೀಗದೆ ನಿರ್ವಾಹವಿಲ್ಲ. ಕನ್ನಡ ಮಾಧ್ಯಮದವರಿಗೆ ಉದ್ಯೋಗದಲ್ಲಿ ವಿಶೇಷ ಆದ್ಯತೆ ಉದ್ಯೋಗದಲ್ಲಿ ನೀಡಬೇಕು. ಕನ್ನಡ ಅಧ್ಯಾಪಕರಿಗೆ ಶಾಲಾ ಕಾಲೇಜುಗಳಲ್ಲಿ ವಿಶೇಷ ಸ್ಥಾನಮಾನ ನೀಡಬೇಕು.

ಪ್ರಶ್ನೆ:- ಕನ್ನಡಕ್ಕಾಗಿ ಶಾಲೆಗಳು ಏನು ಮಾಡಲು ಸಾಧ್ಯ?

ಉತ್ತರ:- ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಆಸಕ್ತಿ ಹುಟ್ಟಿಸುವಂತಹ ಕಾರ್ಯಕ್ರಮಗಳನ್ನು ನೀಡಬೇಕು. ಪಾಠಗಳಲ್ಲಿ ಕನ್ನಡದ ವಿಭಿನ್ನ ಸಾಹಿತ್ಯ ಪ್ರಕಾರಗಳ ಸ್ವಾರಸ್ಯವನ್ನು ಮಕ್ಕಳಿಗೆ ತಿಳಿಸಬೇಕು.

ಪ್ರಶ್ನೆ:- ಬಾಲಕಾರ್ಮಿಕ ನಿಷೇಧ ಸರಿಯೆ?

ಉತ್ತರ:- ಸರಿ. ಬಾಲ್ಯ ಎಂಬುದು ಮಕ್ಕಳ ವಿದ್ಯಾರ್ಜನೆಯ ಕಾಲ. ಅಂತಹ ಕಾಲದಲ್ಲಿ ಅವರು ಕಾರ್ಮಿಕರಾದರೆ ಕಲಿಯುವುದು ಯಾವಾಗ?

ಪ್ರಶ್ನೆ:- ಪರೀಕ್ಷೆ ರಹಿತ ವಿದ್ಯಾರ್ಜನೆ?

ಉತ್ತರ:- ಇದು ತುಂಬಾ ಭಯಾನಕವಾದುದು. ಮಕ್ಕಳ ಭವಿಷ್ಯಕ್ಕೆ ಮಾರಕ. ಪರೀಕ್ಷೆ ರಹಿತ ವಿದ್ಯಾರ್ಜನೆ ಕೇವಲ ಆಟ.

ಪ್ರಶ್ನೆ:- ಎಂತಹ ಶಿಕ್ಷಣ ಬೇಕು ಅಂತೀರಿ?

ಉತ್ತರ:- ಶಿಕ್ಷಣ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿರಬೇಕು. ರಾಷ್ಟ್ರದ ಭವ್ಯ ಪರಂಪರೆ, ಕಲೆ, ಸಾಹಿತ್ಯ, ಸಂಸ್ಕೃತಿ, ಆಚಾರ-ವಿಚಾರಗಳನ್ನು ವಿದ್ಯಾರ್ಥಿಗಳು ಗೌರವಿಸುವಂತಹ ಶಿಕ್ಷಣ ನೀಡಬೇಕು. ರಾಷ್ಟ್ರಪ್ರೇಮ, ರಾಷ್ಟ್ರಾಭಿಮಾನಗಳು ಕಲಿಕೆಯೊಂದಿಗೆ ಬೆಳೆಯುತ್ತಾ ಹೋಗಬೇಕು. ಆತ ಸಮಾಜದ ಸತ್ಪ್ರಜೆಯಾಗಬೇಕು. ಇವುಗಳಿಲ್ಲದ ಶಿಕ್ಷಣ ಪರಿಪೂರ್ಣ ಅಲ್ಲ.

ಪ್ರಶ್ನೆ:- ರಂಗನಟರಾಗಿ ಪ್ರಸಿದ್ಧರಾಗಿದ್ದ ನೀವು ಇಂದಿನ ನಾಟಕಗಳ ಬಗೆಗೆ ಏನನ್ನುತ್ತೀರಿ?

ಉತ್ತರ:- ನಾಟಕಗಳು ಇಂದು ಕೇವಲ ಹಾಸ್ಯಪ್ರಧಾನವಾಗಿರುವುದು ವಿಷಾದನೀಯ. ನಾಟಕ ಕಂಪೆನಿಗಳು ಇಂದು ಈ ಕಡೆ ಇಲ್ಲ. ಹಾಗೆಯೇ ಒಳ್ಳೆಯ ನಾಟಕಗಳು ಇಂದು ಮರೆಯಾಗಿವೆ. ನಾಟಕಗಳಲ್ಲಿ ಪಾತ್ರವಹಿಸುವ ಮಕ್ಕಳ ಸಂಖ್ಯೆ ಕಡಿಮೆ ಆಗಿದೆ. ಸಿನಿಮಾ ಹಾಗೂ ವಾಹಿನಿಗಳು ನಾಟಕರಂಗಕ್ಕೆ ದೊಡ್ಡ ಹೊಡೆತ ನೀಡಿದೆ. ವೃತ್ತಿ ಕಲಾವಿದರು ಮೂಲೆಗುಂಪಾಗಿದ್ದಾರೆ. ನಾಟಕಗಳು ನವರಸಭರಿತವಾಗಿದ್ದರೆ ಚೆನ್ನ.

ಪ್ರಶ್ನೆ:- ನಿಮ್ಮ ಯಕ್ಷಗಾನ ಪ್ರಸಂಗಗಳ ವೈಶಿಷ್ಟ್ಯವೇನು?

ಉತ್ತರ:- ಸರಳ ಪದಬಂಧಗಳು, 'ಕಿರಿದರೊಳ್ ಪಿರಿದರ್ಥಂ' ಎಂಬ ಪದ್ಯಗಳು. ಉತ್ತಮ ಸಂಭಾಷಣೆಗೆ ಅನುಕೂಲವಾಗುವಂತಹ ಶಬ್ದಗಳ ಜೋಡಣೆ. ಛನ್ದೋಬದ್ಧ ರಚನೆ. ವಸ್ತು ಯಾವುದೇ ಇರಲಿ ಅದನ್ನು ರಂಜನೀಯವಾಗಿ ಪ್ರೇಕ್ಷಕರಿಗೆ ತಲುಪಿಸುವ ಕೌಶಲ, ಸಮಾಜಕ್ಕೆ ಏನಾದರೊಂದು ಸಂದೇಶ.

ಪ್ರಶ್ನೆ:- ಸರಳ ಭಾಷೆ ಬಳಸಲು ಕಾರಣ?

ಉತ್ತರ:- ಪ್ರೇಕ್ಷಕರೆಲ್ಲರೂ ಪಂಡಿತರಲ್ಲ. ಹೆಚ್ಚಾಗಿ ಸಾಮಾನ್ಯ ವರ್ಗದವರು. ಆದುದರಿಂದ ಹಾಡುವವರಿಗೂ ಅನುಕೂಲವಾಗುವಂತೆ ಬರೆದೆ. ಒಮ್ಮೆ ಕಡತೋಕಾ ಮಂಜುನಾಥ ಭಾಗವತರ ಸಂದರ್ಶನವೊಂದರಲ್ಲಿ ಸಂದರ್ಶಕನೋರ್ವ "ನಿಮಗೆ ಯಾರ ಹಾಡಿನ ರಚನೆ ಇಷ್ಟ?" ಎಂದು ಕೇಳಿದ್ದಕ್ಕೆ ಅವರು ನನ್ನ ಹೆಸರನ್ನು ಹೇಳಿದ್ದರು. ದಿವಂಗತ ಕಾಳಿಂಗ ನಾವಡರು ನನ್ನ ಹಾಡುಗಳನ್ನು ತುಂಬಾ ಮೆಚ್ಚಿಕೊಂಡಿದ್ದರು.

ಪ್ರಶ್ನೆ:– ಬದಲಾದ ಇಂದಿನ ಹಾಡುಗಾರಿಕೆಯ ಶೈಲಿಗೆ ಸಾಂಪ್ರದಾಯಿಕ ಮಟ್ಟುಗಳು ಅನಿವಾರ್ಯವೆ?

ಉತ್ತರ:–ಯಕ್ಷಗಾನ ಹಾಡುಗಳೆಂದ ಮೇಲೆ ಅದು ಛನ್ದೋಬದ್ಧವಾಗಿರಬೇಕು. ಅದನ್ನು ಹಾಡುವ ಕ್ರಮ ಭಾಗವತರಿಗೆ ಬಿಟ್ಟದ್ದು. ಈಗಿನ ಪ್ರೇಕ್ಷಕರ ಅಭಿರುಚಿಯನ್ನು ಅನುಸರಿಸಿ ಭಾಗವತಿಕೆಯ ಸ್ವರೂಪ ಬದಲಾಗಿದೆ. ಈ ಕಾರಣಕ್ಕಾಗಿ ಪ್ರಸಂಗಕರ್ತ ಛಂನ್ದೋವಿಲಂಘನೆ ಮಾಡಬೇಕೆಂದಿಲ್ಲ.

ಪ್ರಶ್ನೆ:– ಆಟ–ಕೂಟಗಳ ಪ್ರದರ್ಶನಗಳಲ್ಲಿ ಯಕ್ಷಗಾನ ಕವಿಗಳ ಹೆಸರು ಉಲ್ಲೇಖಿಸದಿರುವ ಸಂಪ್ರದಾಯದ ಬಗ್ಗೆ ಏನನ್ನುತ್ತೀರಿ?

ಉತ್ತರ:– ಇದು ಮಹಾಪರಾಧ. ವೈವಿಧ್ಯಮಯ ಛನ್ದಸ್ಸುಗಳಲ್ಲಿ ಹಾಡು ಹೊಸೆಯುವ ಯಕ್ಷಕವಿಯ ಪರಿಶ್ರಮ ಅಗಾಧವಾದುದು. ಅರ್ಥಗರ್ಭಿತವಾಗಿ ರಚಿಸುವ ಆತನ ಶ್ರಮಕ್ಕೆ ಗೌರವವೇ ಇಲ್ಲವೇ? ಪೂರ್ವಕವಿಗಳಲ್ಲಿ ಹೆಚ್ಚಿನವರು ಇಂದಿಲ್ಲ, ಆದ್ದರಿಂದ ಗೌರವ ಸಂಭಾವನೆ ಕೊಡಬೇಕಾಗಿಲ್ಲ. ಕೊನೇಪಕ್ಷ ಹೆಸರನ್ನಾದರೂ ಉಲ್ಲೇಖಿಸಲು ಹೇಸುವುದು ಅಕ್ಷಮ್ಯ ಅಪರಾಧ.

ಪ್ರಶ್ನೆ:– ಪ್ರಸಂಗಗಳ ಸ್ವರೂಪ?

ಉತ್ತರ:– ಪ್ರದರ್ಶನವೇ ಪ್ರಸಂಗಗಳ ಉದ್ದೇಶ. ಆದುದರಿಂದ ಅದು ಶ್ರಾವ್ಯಕಾವ್ಯಗಳಂತೆ ಶಬ್ದಾಡಂಬರಗಳಿಂದ ರಚನೆಯಾಗಬೇಕಾದ್ದಿಲ್ಲ. ದೃಶ್ಯಕಾವ್ಯಕ್ಕೆ ಬೇಕಾದ ಗೇಯಗುಣಗಳ ಸರಳಬಂಧಗಳ ರಚನೆಗಳು ಸಾಕು. ಭಾಗವತರುಗಳು ಕೂಡಾ ಪದ್ಯಗಳನ್ನು ಎರಡು ಅಥವಾ ಮೂರು ಬಾರಿ ಹಾಡಿದರೆ ಸಾಕೆನಿಸುತ್ತದೆ. ಅದಕ್ಕಿಂತ ಹೆಚ್ಚಾದರೆ ಓಘ ಕೆಡುತ್ತದೆ. ರಸಭಂಗವಾಗುತ್ತದೆ. ಔಚಿತ್ಯ ಮೀರುತ್ತದೆ. ಅತಿಯಾದರೆ ಅಮೃತವೂ ಹಾಳೆಂಬ ಮಾತು ಇದೆಯಲ್ಲಾ?

ಪ್ರಶ್ನೆ:– ಪೌರಾಣಿಕತೆಯೇ ಯಕ್ಷಗಾನವೆ?

ಉತ್ತರ:– ಯಕ್ಷಗಾನಕ್ಕೆ ಪೌರಾಣಿಕ ಪ್ರಸಂಗಗಳೇ ಉತ್ತಮ. ಪೌರಾಣಿಕ ಚೌಕಟ್ಟಿನೊಳಗಿರುವ ಹೊಸಕಥೆಗಳೂ ಆಗಬಹುದು. ಕಥಾವಸ್ತು ಇಲ್ಲಿನ ಆಹಾರ್ಯಕ್ಕೆ ಹೊಂದುವಂತಿರಬೇಕು. ನಾನು ಟೆಂಟ್ ಮೇಳಗಳ ಅಗತ್ಯಕ್ಕೆ ಹೊಸ ಪ್ರಸಂಗಗಳನ್ನು ಬರೆದೆನಷ್ಟೆ, ನನ್ನ ಕಾಲ್ಪನಿಕ ಪ್ರಸಂಗಗಳೂ ಪುರಾಣ ಪ್ರಸಂಗಗಳ ವಿನ್ಯಾಸದಲ್ಲಿದೆ.

ಪ್ರಶ್ನೆ:– ಚಾರಿತ್ರಿಕ ಪ್ರಸಂಗಗಳು?

ಉತ್ತರ:– ಚಾರಿತ್ರಿಕ ವ್ಯಕ್ತಿಗಳ ಚಿತ್ರಗಳನ್ನು ನೋಡಿದ್ದೇವೆ. ಅವರನ್ನು ಯಕ್ಷಗಾನದ ಆಹಾರ್ಯದಲ್ಲಿ ತರುವುದು ಹೇಗೆ? ಈ ದೃಷ್ಟಿಯಿಂದ ಚಾರಿತ್ರಿಕ ಪ್ರಸಂಗಗಳು ರಂಗಸ್ಥಳಕ್ಕೆ ಅಷ್ಟೊಂದು ಒಪ್ಪುವುದಿಲ್ಲ.

ಪ್ರಶ್ನೆ:– ಭಾಗವತಿಕೆಗೆ ಶಾಸ್ತ್ರೀಯ ಸಂಗೀತ ಬೇಕೆ?

ಉತ್ತರ:– ಖಂಡಿತಾ ಬೇಡ. ಅದು ಇದ್ರೆ ತೊಂದರೆ. ಯಕ್ಷಗಾನಕ್ಕೆ ಯಕ್ಷಗಾನದ್ದೇ ಶೈಲಿ ಇದೆ. ಸುಧಾರಣೆ ತಂದರೆ ಕಾಳಿಂಗ ನಾವಡರಂತೆ ತರಬೇಕು.

ಪ್ರಶ್ನೆ:– ಭಾಗವತನೇ ನಿರ್ದೇಶಕನಾಗಬೇಕೆ?

ಉತ್ತರ:– ಭಾಗವತ ಸಮರ್ಥನಾದರೆ ಆದೀತು. ಇಲ್ಲಾಂದ್ರೆ ಅವರು ಹಾಡು ಮಾತ್ರ ಮೆರೆಸಿಯಾರು. ನಿರ್ದೇಶಕನಿದ್ದರೆ ಆತನಿಗೆ ಯಾವ್ಯಾವುದು ಎಷ್ಟೆಷ್ಟು ಬೇಕೆಂಬ ಪರಿಜ್ಞಾನವಿರುತ್ತದೆ. ಹಿಂದೆ ಇಂತಹ ಜ್ಞಾನವಿದ್ದ ಭಾಗವತರೇ ಸ್ವಾರ್ಥತ್ಯಾಗದಿಂದ ಶ್ರೇಷ್ಠ ನಿರ್ದೇಶಕರೂ ಆಗಿದ್ದರು.

ಪ್ರಶ್ನೆ:– ಕಾಲಮಿತಿಯ ಬಗ್ಗೆ

ಉತ್ತರ:– ಇಂದಿನ ಕಾಲಕ್ಕೆ ಇದೇ ಸರಿ. ಎಲ್ಲವೂ ತುರ್ತಾಗಿ ಆಗಬೇಕು. ಪ್ರೇಕ್ಷಕರಿಗೆ ವ್ಯವಧಾನವೇ ಇಲ್ಲದಿದ್ದಾಗ ಕಾಲಮಿತಿಯೇ ಸೂಕ್ತ.

ಪ್ರಶ್ನೆ:– ತಾಳಮದ್ದಳೆಯ ಬಗ್ಗೆ ಏನನ್ನುತ್ತೀರಿ?

ಉತ್ತರ:– ಸಾಹಿತ್ಯ ತುಂಬಾ ಬೆಳೆದಿದೆ. ಆದರೆ ಮಾತುಗಾರರ ಸ್ವೇಚ್ಛಾಚಾರ ಅಲ್ಲಿಯೂ ಇದೆ. ವಾದಕ್ಕೂ ಮಿತಿಯಿದೆ. ಮುಖ್ಯವಾಗಿ ಪಾತ್ರಧಾರಿಗೆ ತನ್ನ ಪಾತ್ರದ ನಿರ್ವಹಣೆಯ ಔಚಿತ್ಯಪ್ರಜ್ಞೆ ಇರಬೇಕು. ಪಾತ್ರದ ಪರಿಜ್ಞಾನ ಬೇಕು.

ಪ್ರಶ್ನೆ:– ತಾಳಮದ್ದಳೆ ಅರ್ಥಪ್ರಧಾನವೋ? ಭಾವಪ್ರಧಾನವೋ?

ಉತ್ತರ:– ಅರ್ಥಪ್ರಧಾನವಾದರೂ ಅದು ಭಾವದಿಂದ ದೂರ ಸರಿಯಬಾರದು. ಅದು ವಾಚಿಕಾಭಿನಯವಾಗಿ ರಸ ಸೃಷ್ಟಿಸಬೇಕು.

ಪ್ರಶ್ನೆ:– ನೀವು ವೇಷ ಧರಿಸುವುದನ್ನು ಬಿಟ್ಟದ್ಯಾಕೆ?

ಉತ್ತರ:– ವೇಷಧಾರಿಕೆ ನರ್ತನ ಮುಖ್ಯ. ನರ್ತನದ ಸಿದ್ಧಿ ನನಗಾಗಲಿಲ್ಲ. ಆದುದರಿಂದ ವೇಷ ಧರಿಸುವುದು ನನಗೆ ಹಿತವೆನಿಸಲಿಲ್ಲ. ಅದ್ದರಿಂದ ಅದನ್ನು ಮುಂದುವರಿಸಲಿಲ್ಲ.

ಪ್ರಶ್ನೆ:– ಕಥೆ, ಕವನ...?

ಉತ್ತರ:– ವೃತ್ತಿಯ ಮಧ್ಯೆ ನನಗದನ್ನು ಮುಂದುವರಿಸಲಾಗಲಿಲ್ಲ. ನಾಟಕ ಮತ್ತು ಯಕ್ಷಗಾನವೇ ನನ್ನ ಅಸಕ್ತಿಯ ಕ್ಷೇತ್ರವಾದ್ದರಿಂದ ಬೇರೆಡೆ ಮನಸ್ಸು ಹೊರಳಲಿಲ್ಲ.

ಪ್ರಶ್ನೆ:– ಹಳೆಗಾಲ ವಾಸಿಯೇ ಹೊಸಗಾಲವೇ?

ಉತ್ತರ:– ಅದೇ ಸುಖವೆನಿಸುತ್ತದೆ. ಏನಿಲ್ಲವೆಂದ್ರೂ ಮನುಷ್ಯತ್ವ ಇತ್ತು. ಪ್ರಗತಿಯ ಜೊತೆ ಮಾನವೀಯ ಸಂಬಂಧಗಳೂ ಗಟ್ಟಿಯಾದರೆ ಎಲ್ಲಾ ಕಾಲವೂ ಒಳ್ಳೇದೇ. ಪರಿಸರ ಮತ್ತು ಕೃಷಿಯ ಬಗ್ಗೆ ಕಾಳಜಿ ವಹಿಸಬೇಕಾದುದು ಇಂದಿನ ತುರ್ತು ಅಗತ್ಯ.

ಪ್ರಶ್ನೆ:– ಹೊಸ ಕಲಾವಿದರಿಗೆ ನಿಮ್ಮ ಸಂದೇಶ?

ಉತ್ತರ:– ಕಲಾವಿದರು ಕಲಾನಿಷ್ಠೆ ಹೊಂದಿರಬೇಕು. ಕಲಾಸ್ವರೂಪ ತಿಳಿದಿರಬೇಕು. ಪರಿಶ್ರಮ ಬೇಕು. ಪಾತ್ರದ ಬಗ್ಗೆ ಜ್ಞಾನ, ಔಚಿತ್ಯಪ್ರಜ್ಞೆ ಗಳಿಸಿಕೊಳ್ಳಬೇಕು. ಅನುಕರಣೆ ಸಲ್ಲದು. ಯಕ್ಷಗಾನಕ್ಕೆ ಉತ್ತಮ ಭವಿಷ್ಯವಿದೆ. ಇದರ ಪಾವಿತ್ರ್ಯ ಉಳಿಸಿಕೊಂಡು ಮುನ್ನಡೆಸಿಕೊಂಡು ಹೋಗಬೇಕಾದ ಹೊಣೆ ಕಲಾವಿದರ ಮೇಲಿದೆ.

ನನ್ನವರು ತುಂಬಾ ಸಾಧು ಸ್ವಭಾವದವರು

ಹೇಳಿದ್ದು: ದೇವಕಿ ಆರ್.ಶೆಟ್ಟಿ, ಕಂದಾವರ

ನಿರೂಪಣೆ: ತಾರಾನಾಥ ವರ್ಕಾಡಿ

ನನಗೆ ಮದುವೆಯಾಗಿ ಐವತ್ತು ವರುಷಗಳಾಗುತ್ತಿದೆ. ದಾಂಪತ್ಯದ ಹೊನ್ನಹಬ್ಬದಲ್ಲಿ ಹಳೆಯ ನೆನಪುಗಳನ್ನು ಮಾಡುತ್ತಿದ್ದೇನೆ. ಗುಲ್ವಾಡಿ ಪಟೇಲರಾದ ಶಿವರಾಮ ಹೆಗ್ಡೆಯವರ ಮಗಳು ನಾನು. ಅಮ್ಮ ನರಸಮ್ಮ. ಹಳೆಗಾಲದಲ್ಲಿ ಹೊಸಗಾಲದ ಮದುವೆ ನನ್ನದು. ಅಂದರೆ ನವವಧುವಾಗಿ ಮದುವೆಯ ಮಂಟಪ ಏರುವಾಗ ನನ್ನ ಪ್ರಾಯ 25 ವರ್ಷ. ಕಾರಣವಿಷ್ಟೆ ನಾಲ್ಕು ಹೆಣ್ಣು, ಎರಡು ಗಂಡುಮಕ್ಕಳ ಸಂಸಾರ ಅಪ್ಪನದ್ದು. ನನಗೆ ಒಬ್ಬಳು

ಅಕ್ಕ, ಇಬ್ಬರು ತಂಗಿಯಂದಿರು. ಆ ಕಾಲದಲ್ಲಿ ಹೆಣ್ಣು ಮಕ್ಕಳ ಮದುವೆ ತುಂಬಾ ಕಷ್ಟ ಅಲ್ವಾ?

ಅಪ್ಪಯ್ಯನ ಸೊಸೆ ಗಂಡ ರಾಮ ಶೆಟ್ರು ಕೃಷಿಕರು. ಅವರು ನನ್ನಪ್ಪನಿಗೆ ನಿಮ್ಮ ಕಂದಾವರ ಮಾಸ್ಟ್ರನ್ನು ತೋರಿಸಿದ್ದು. ಅಪ್ಪ ಒಪ್ಪಿದರು. ಮೇಸ್ಟ್ರು ಅಂದಾಗ ನನಗೂ ಇಷ್ಟವಾಯಿತು. ಎರಡು ಗಂಡು ನಾಲ್ಕು ಹೆಣ್ಣುಗಳು ಇವರ ಒಡಹುಟ್ಟುಗಳು. ಸಾಧಾರಣ ಶ್ರೀಮಂತರು.

ನಾನು ನನ್ನವರ ಮನೆಯ ಹೊಸಿಲು ತುಳಿಯುವಾಗ ಅವರ ಓರ್ವ ತಂಗಿಗೆ ಮಾತ್ರ ಮದುವೆ ಆಗಿತ್ತು. ಉಳಿದ ತಂಗಿಯರ ಮದುವೆ, ತಮ್ಮಂದಿರ ವಿದ್ಯಾಭ್ಯಾಸ ಎಲ್ಲವನ್ನೂ ಇವರೇ ನಿಭಾಯಿಸಿದರು. ಹಿರಿಯ ಮಗನಾಗಿ ಅವರಿಗೆ ಆ ಕರ್ತವ್ಯ ಇತ್ತು. ತುಂಬಾ ಕಷ್ಟ ಪಟ್ಟರು ಪಾಪ. ಅವರದ್ದು ಅವಿಭಕ್ತ ಕುಟುಂಬ. ಮನೆಯಲ್ಲಿ ತುಂಬಾ ಸಾಮರಸ್ಯ ಇತ್ತು. ಇವರೆಂದರೆ ಎಲ್ಲರಿಗೂ ತುಂಬಾ ಪ್ರೀತಿ. ಆದುದರಿಂದ ನೆಮ್ಮದಿ ಕಳಕೊಳ್ಳುವ ಸಂದರ್ಭವಿರಲಿಲ್ಲ.

ಸುಮಧುರ ದಾಂಪತ್ಯದಲ್ಲಿ ನಾನು ಮೂರು ಮಕ್ಕಳ ತಾಯಿಯಾದೆ. ಎರಡು ಹೆಣ್ಣು ಒಂದು ಗಂಡು. ತಾಯ್ಮನೆಯಲ್ಲಿ ಪಾಲಾದ ಬಳಿಕ ನಾನು ನೂಜಾಡಿಗೆ ಬಂದೆ. ಮಕ್ಕಳ ವಿದ್ಯಾಭ್ಯಾಸ ನೂಜಾಡಿಯಲ್ಲಾಯಿತು. ಅವರ ಅಪ್ಪನ ಶಾಲೆ(ನೇತಾಜಿ ಶಾಲೆ)ಯಲ್ಲಿ ಒಂದೆರಡು ವರ್ಷ ಕಲಿತಿದ್ದಾರೆ. ಮಗ ವೈದ್ಯನಾಗಿ ಶಿವಮೊಗ್ಗದಲ್ಲಿ ಇದ್ದಾನೆ. ಹೆಣ್ಮಕ್ಕಳಿಗೆ ಮದುವೆ ಆಗಿದೆ.

ನನ್ನವರು ತುಂಬಾ ಸಾಧು. ಮಕ್ಕಳಿಗೆ ಕೂಡಾ ಹೊಡೆದವರಲ್ಲ. ಆಟ-ನಾಟಕ ಅಂತ ತಿರುಗಾಡಿದರೂ ನನಗೆ ಏನೂ ತೊಂದರೆ ಮಾಡಿಲ್ಲ. ಅದು ಅವರವರ ಇಷ್ಟ ಅಲ್ವಾ? ನನಗೆ ಯಕ್ಷಗಾನದಲ್ಲಿ ಆಸಕ್ತಿಯೇ ಇರಲಿಲ್ಲ. ಇವರ ಹಲವು ಪ್ರಸಂಗಗಳ ಆಟ ನೋಡಿದ್ದೇನೆ. ಅವರ ಸಂಮಾನಗಳಲ್ಲಿ ಜೊತೆಯಾಗಿ ಕುಳಿತು ಹೆಮ್ಮೆ ಪಟ್ಟಿದ್ದೇನೆ. ಮಗ, ಸೊಸೆ, ಮಕ್ಕಳು, ಮೊಮ್ಮಕ್ಕಳು ಎಲ್ಲರೂ ಚೆನ್ನಾಗಿದ್ದಾರೆ. ಸಂಪ್ರದಾಯಸ್ಥರ ಮನೆಯಲ್ಲಿ ಹುಟ್ಟಿದ ಕಾರಣ ನಾನು 6ನೇ ಕ್ಲಾಸಿಗೆ ಓದು ನಿಲ್ಲಿಸಬೇಕಾಗಿ ಬಂದರೂ ನನ್ನ ವಂಶದ ಕುಡಿಗಳು ಚೆನ್ನಾಗಿ ಕಲಿಯುತ್ತಿದ್ದಾರೆ ಎಂಬುದು ನನಗೆ ಅವರ್ಣನೀಯ ಆನಂದ.

ಪ್ರಾಯ ಎಪ್ಪತ್ತಾಯಿತು. ನನಗೆ ಸಮಸ್ಯೆಗಳೇನೂ ಇಲ್ಲ. ಬಿ.ಪಿ. ಮತ್ತು ಬೆನ್ನುನೋವು ತುಸು ತೊಂದರೆ ಕೊಡುತ್ತಿವೆ ಅಷ್ಟೆ. ಮುತ್ತೈದೆಯಾಗಿಯೇ ಕಣ್ಣು ಮುಚ್ಚುವಾಸೆ. ದೇವರು ಏನು ಮಾಡುತ್ತಾನೋ ನೋಡೋಣ.

ಅಪ್ಪ ಅಂದಾಗ ಹೆಮ್ಮೆಯಿಂದ ಬೀಗುತ್ತೇನೆ

ಶೈಲಜಾ ವಿಜಯಕುಮಾರ್ ಶೆಟ್ಟಿ

ಪ್ರಸಂಗಕರ್ತರಾಗಿ ನನ್ನಪ್ಪ ಹೆಚ್ಚು ಹೆಸರು ಪಡೆದವರು. ಅವರ ಪ್ರಸಂಗಗಳಲ್ಲಿರುವ ಸ್ತ್ರೀ ಸಂವೇದನೆಗಳು ನನಗೆ ತುಂಬಾ ಇಷ್ಟ. ಅಮ್ಮನಂತೆ ಮಮತೆಯ ಒರತೆಯಾದ ಅಪ್ಪನ ಹೃದಯ ಕೋಮಲವಾದುದು. ಮೃದು ಮನಸ್ಸಿನ ಅವರು ಹೆಣ್ಣಿನ ಭಾವನೆಗಳನ್ನು ಗೌರವಿಸುತ್ತಿದ್ದರು. ಅವರೊಂದು ಪ್ರೀತಿಯ ಚಿಲುಮೆ. ಆದುದರಿಂದ ಮನೆಯಲ್ಲಾಗಲೀ ಕುಟುಂಬದಲ್ಲಾಗಲೀ, ಸಮಾಜದಲ್ಲಾಗಲೀ ಅವರಿಗೆ ತುಂಬಾ ಗೌರವ.

ನನಗೆ ತುಂಬಾ ಓದಬೇಕಂತ ಆಸೆಯಿತ್ತು. ಹೇಗೋ ಎಸ್.ಎಸ್.ಎಲ್.ಸಿ ಪೂರೈಸಿದೆ. ಕಾಲೇಜು ಸೇರಬೇಕಾದರೆ ಕುಂದಾಪುರಕ್ಕೆ ಹೋಗಬೇಕು. ಮನೆಯಲ್ಲಿ ಅಪ್ಪ-ಅಮ್ಮನಿಗೆ ಅಸೌಖ್ಯ. ಬೇರೆಯವರ ಮನೆಯಲ್ಲಿ ನಿಂತು ಹಂಗಿಗೊಳಗಾಗಿ ಕಲಿಯಲು ನನಗೆ ಇಷ್ಟವಾಗಲಿಲ್ಲ. ನನ್ನನ್ನು ಓದಿಸಬೇಕಂತ ಅಪ್ಪನಿಗೆ ತುಂಬಾ ಆಸೆಯಿತ್ತು. ಪಾಪ ಅವರು ಎಷ್ಟಂತ ಕಷ್ಟಪಡುವುದು? ಅವರ ಪರಿಸ್ಥಿತಿ ಅರ್ಥ ಮಾಡಿಕೊಂಡ ನಾನು ನನ್ನ ಓದಿನ ಆಸೆಗೆ ಎಳ್ಳುನೀರು ಬಿಟ್ಟೆ. ಚೆನ್ನಾಗಿ ಓದಿ ಶಿಕ್ಷಕಿಯಾಗಬೇಕೆಂಬ ಕನಸುಗಳೆಲ್ಲಾ ನುಚ್ಚುನೂರಾಯಿತು.

ಹರೆಯ 24ಕ್ಕೆ ನನಗೆ ಮದುವೆ ಆಯಿತು. ಅವರು ಬಿ.ಎಸ್.ಸಿ. ಪದವೀಧರ. ಖಾಸಗಿ ಕಂಪೆನಿಯೊಂದರಲ್ಲಿ ಮೆನೇಜರ್. ತುಂಬಾ ಒಳ್ಳೆಯವರು. ಯಕ್ಷಗಾನದಲ್ಲಿ ಅವರಿಗೆ ಬಹಳ ಆಸಕ್ತಿ. ಮಕ್ಕಳಿಬ್ಬರನ್ನೂ ಚೆನ್ನಾಗಿ ಓದಿಸಬೇಕೆಂದಿದ್ದೇನೆ. ಮಗ ಬಿ.ಇ. ಓದುತ್ತಿದ್ದಾನೆ. ಮಗಳು ಎಂ.ಎಸ್.ಸಿ. ಮಾಡುತ್ತಿದ್ದಾಳೆ. ನನಗಂತೂ ಕಲಿಯಲಾಗಲಿಲ್ಲ. ಅವರಾದರೂ ಚೆನ್ನಾಗಿ ಕಲಿಯಲಿ.

ಮಕ್ಕಳಲ್ಲಿ ಅಜ್ಜನ ಕಲಾಪರಂಪರೆ ಮುಂದುವರಿಯುವ ಲಕ್ಷಣವಿದೆ. ಮಗ ಯಕ್ಷಗಾನದಲ್ಲಿ ವೇಷ ಮಾಡಿದ್ದಾನೆ. ಮಗಳು ಡ್ಯಾನ್ಸ್ ಕಲಿಯುತಿದ್ದಾಳೆ. ಕಥೆ, ಲೇಖನ ಬರೆಯುತ್ತಿದ್ದಾಳೆ. ಮಕ್ಕಳ ಕಲಾ ಚಟುವಟಿಕೆ ಕಂಡು ತುಂಬಾ ಖುಷಿ ಆಗುತ್ತದೆ.

ಬಾಲ್ಯದಲ್ಲಿ ಬಯಸಿದ್ದು ದಕ್ಕಲಿಲ್ಲ. ಭವಿಷ್ಯದಲ್ಲಿ ಏನಾದರೂ ಮಾಡಬೇಕೆಂದು ಕನಸು ಕಾಣುತ್ತಿದ್ದೇನೆ. ಅಪ್ಪನ ಹೆಸರಿನ ಪ್ರಶಸ್ತಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ಹೆಬ್ಬಯಕೆ ಇದೆ. ಜೊತೆಗೆ ನನ್ನಿಂದಾಗುವ ಸಹಾಯವೇನಾದರೂ ಮಾಡುವ ಮಹದಾಸೆ ನನ್ನದು.

ಕುಂದನಾಡಿನ ಯಕ್ಷಕವಿ ಕುಂದ ಕಂದಾವರ

ಸಿದ್ಧಕಟ್ಟೆ ವಿಶ್ವನಾಥ ಶೆಟ್ಟಿ
ಯಕ್ಷಗಾನ ಕಲಾವಿದ

ಪ್ರಸಂಗ ಎಂಬ ಶಬ್ದಕ್ಕೆ ಸಂದರ್ಭ, ಸನ್ನಿವೇಶವೆಂದರ್ಥ. ಪೌರಾಣಿಕ ಕಥೆಯ ನಿರ್ದಿಷ್ಟ ಸಂದರ್ಭವನ್ನು ಆಯ್ದು ಪ್ರದರ್ಶಿಸುವುದು ಎಂಬರ್ಥದಲ್ಲಿ ಯಕ್ಷಗಾನ ಪ್ರಸಂಗವೆಂಬ ಪದಪ್ರಯೋಗ ಬಳಕೆಯಾಯಿತೆನ್ನಬಹುದು. ಈ ದೃಷ್ಟಿಯಲ್ಲಿ ಪೌರಾಣಿಕ ಆಖ್ಯಾನಗಳಿಗೆ ಮಾತ್ರವೇ ಬಳಸಬಹುದಾದ ಈ ಪದ ಹೊಸಕಥೆಗಳಿಗೂ ಅನ್ವಯವಾಯಿತು. ಯಕ್ಷಗಾನ ಪ್ರಸಂಗಗಳಲ್ಲಿ ವಿಪುಲವಾದ ಸಾಹಿತ್ಯಿಕ ಶ್ರೀಮಂತಿಕೆಯಿದೆ. ಸ್ನಾತಕೋತ್ತರ, ಪದವಿ ತರಗತಿಗಳಿಗೂ ಪಠ್ಯವಾಗಬಲ್ಲ ಯೋಗ್ಯತೆಯುಳ್ಳ ಯಕ್ಷಗಾನ ಪ್ರಸಂಗಗಳು ಹಲವಿದ್ದರೂ, ಯಕ್ಷಗಾನ ಪ್ರಸಂಗವೊಂದು ಸಾಹಿತ್ಯಪ್ರಕಾರವೆಂದು ಗುರುತಿಸಲ್ಪಡದಿರುವುದು ದುರದೃಷ್ಟವಾದರೂ ಇದರ ಬಗ್ಗೆ ತಲೆ ಕೆಡಿಸಿಕೊಳ್ಳದೆ ಹಲವಾರು ಯಕ್ಷಗಾನ ಕವಿಗಳು ಪ್ರಸಂಗ ರಚನಾ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇಂತಹ ಯಕ್ಷಗಾನ ಕವಿಗಳಲ್ಲಿ ಕುಂದಾಪುರ ವಲಯದಲ್ಲಿ ಕೇಳಿಬರುವ ಪ್ರಸಿದ್ಧ ಹೆಸರೇ ಕಂದಾವರ ರಘುರಾಮ ಶೆಟ್ಟಿಯವರದು.

ಕುಂದಾಪುರ ಶಾಸ್ತ್ರಿ ಸರ್ಕಲ್ಲಿನ ಬಳಿ ಇರುವ ಫ್ಯಾನ್ಸಿ ಅಂಗಡಿಯೊಂದರ ಬಳಿ ಹೋದರೆ ವಾರದಲ್ಲಿ ಮೂರ್‍ನಾಲ್ಕು ದಿನವಾದರೂ ಕಂದಾವರರು ಭೇಟಿಯಾಗುತ್ತಾರೆ. ನೀಳಕಾಯದ ಎಣ್ಣೆಗಪ್ಪು ಬಣ್ಣದ ಬಿಳಿಪಂಚೆ ಅರ್ಧತೋಳು ಮಡಚಿದ ಆಕರ್ಷಕ ನಿಲುವಿನ ಶೆಟ್ಟರು ನಗುನಗುತ್ತಾ ಇದಿರಾಗುತ್ತಾರೆ. ಉಭಯ ಕುಶಲೋಪರಿಯಿಂದ ತೊಡಗಿದ ಮಾತುಕತೆ ಯಕ್ಷಗಾನದತ್ತ ವಾಲಿದರೆ ಅವರೊಂದಿಗೆ ಮಾತಿಗಿಳಿದ ಸಮಾನಮನಸ್ಕ ವ್ಯಕ್ತಿಗೆ ಒಂದೆರಡು ಬಸ್ಸು ತಪ್ಪಿಯೇ ತಪ್ಪುತ್ತದೆ. ಮುಂದುವರಿದು ಹೊಸ ಪ್ರಸಂಗಗಳತ್ತ ಹೊರಳಿದರೆ ಅದರಲ್ಲೇ ಬಹಳ ಹೊತ್ತು ಮುಂದುವರಿಯುತ್ತದೆ. ನಾನು ಅವರನ್ನು ಸುಮಾರು 25 ವರ್ಷಗಳಿಂದ ಬಲ್ಲೆ. ನಾನು ಕಂಡ ಒಬ್ಬ ಉತ್ತಮ ಪ್ರಸಂಗಕರ್ತ ರಘುರಾಮ ಶೆಟ್ಟರು.

ಕಲಾವಿದನ ಅಭಿವ್ಯಕ್ತಿ ಸಾಮರ್ಥ್ಯದ ಮಿತಿಯರಿತು ಪಾತ್ರ ಕಟ್ಟುವ ಕೌಶಲ, ರಂಗತಂತ್ರದ ಸ್ಪಷ್ಟ ಅರಿವು ಕಂದಾವರರ ಹೆಚ್ಚುಗಾರಿಕೆ. ಕಥೆಯಲ್ಲಿ ಸತ್ವದ ಕೊರತೆ ಇವರ ಕೃತಿಗಳಲ್ಲಿ ಕಾಣಸಿಗದು. ಪಾತ್ರ ತೊಳೆಯಲು ಬೂದಿ ಸಿಗಲಿಲ್ಲವೆಂಬ ಕಾರಣಕ್ಕೆ ಮಹಾರಾಣಿ ಅತ್ತಹತ್ತೆ ಮಾಡಿಕೊಳ್ಳುವಷ್ಟು ಲಘುತೆರನ ಪ್ರಸಂಗಗಳೂ ರಂಗದಲ್ಲಿ ಬಂದು ಹೋಗಿರಬಹುದು. ಆದರೆ ಶೆಟ್ಟರ ಪ್ರಸಂಗಗಳಲ್ಲಿ ಸತ್ವ ಕಲಾವಿದನನ್ನು ಚೆನ್ನಾಗಿ ದುಡಿಸಿಕೊಳ್ಳುತ್ತದೆಯೆಂಬುದು ನನ್ನ ಸ್ವಾನುಭವ. ಅವರ ಹೆಚ್ಚು ಪ್ರಸಂಗಗಳಲ್ಲಿ ಪಾತ್ರ ಮಾಡುವ ಅವಕಾಶ ನನಗೆ ಸಿಗದಿದ್ದರೂ ಸಿಕ್ಕ ಅವಕಾಶ ನನ್ನನ್ನು ಚೆನ್ನಾಗಿ ದುಡಿಸಿಕೊಂಡಿದೆಯೆಂದು ಧೈರ್ಯವಾಗಿ ಹೇಳಬಲ್ಲೆ. ಅವರ ಚೆಲುವೆ ಚಿತ್ರಾವತಿ ಪ್ರಸಂಗದಲ್ಲಿ ಹೀಗೊಂದು ಸನ್ನಿವೇಶವಿದೆ. ಒಬ್ಬ ಅರಸನ ಮೇಲೆ ಖಳನಾಯಕನಿಗೆ ದ್ವೇಷವಿರುತ್ತದೆ. ಆದರೆ ಅವನನ್ನು ವಿರೋಧಿಸುವ ಸಾಮರ್ಥ್ಯ ಅವನಲ್ಲಿಲ್ಲ. ಅದೇ ಅರಸನ ಶತ್ರುರಾಜನೊಬ್ಬ ಸಹಾಯಕ್ಕಾಗಿ ಖಳನಾಯಕನ ಬಳಿ ಸಾಗಿ ಅವನನ್ನು ಯುದ್ಧಕ್ಕೆ ಪ್ರಚೋದಿಸುತ್ತಾನೆ. ಆದರೆ ಆ ರಾಜನೂ ಹಿಂದೆ ಅವನಿಂದ ಸೋತಿದ್ದು ತನ್ನ ಬಲದ ಮೇಲಿನ ಅಪನಂಬಿಕೆಯನ್ನು ಖಳನಾಯಕನಲ್ಲಿ ತಿಳಿಸುತ್ತಾನೆ. ಇರುವವಳೊಬ್ಬಳೇ ಹೆಣ್ಣು ಮಗಳೆಂದು ಅಸಹಾಯಕತೆಯನ್ನು ಪ್ರಕಟಿಸುತ್ತಾನೆ. ಆಗ ಖಳನಾಯಕ ಈ ಸಂದರ್ಭವನ್ನು ತನಗೆ ಬೇಕಾದ ಹಾಗೆ ಬಳಸಿಕೊಳ್ಳಲು ಬಗೆದು ಹೀಗೆನ್ನುತ್ತಾನೆ.

॥ಅಷ್ಟ॥

ಹೆಣ್ಣಿಂದ ಹಿಮವಂತ ಜನಕರಾಜರು ಲೋಕ ಮಾನ್ಯರಾದಂತೆ ನೀವು॥ ಮುದ್ದು॥
ಕನ್ನೆಗೆ ಪಿತನಾಗಿ ತವಕೀರ್ತಿ ಹೆಚ್ಚಿತು । ಧನ್ಯರಾದಿರಿ ಸಂತಸ ॥ ೧॥

ಹೆಣ್ಣುಮಗಳನ್ನು ಶಿವನಿಗೆ ಕೊಟ್ಟು ಹಿಮವಂತ ಮಾನ್ಯನಾದ. ಜಾನಕಿಯನ್ನು ರಾಮನಿಗಿತ್ತು ಜನಕ ಧನ್ಯನಾದ. ನೀನೂ ಸಹ ನಿನ್ನ ಮಗಳನ್ನು ನನಗೆ ವಿವಾಹ ಮಾಡಿಕೊಡುವೆಯಾದರೆ ಯುದ್ಧದಲ್ಲಿ ನಿನಗೆ ಸಹಕರಿಸುತ್ತೇನೆನ್ನುತ್ತಾನೆ. ಇಲ್ಲಿ ಈ ಪದ್ಯ ಸಾಹಿತ್ಯಿಕವಾಗಿ ಎಷ್ಟು ವಿಚಾರಪರವಾಗಿದೆ ಎಂದು ಬಲ್ಲವರು ತಿಳಿದಾರು. ಇದು ಒಂದು ಉದಾಹರಣೆ ಮಾತ್ರ. ಇಂತಹ ಹಲವು ಸನ್ನಿವೇಶಗಳನ್ನು ಹೊಸೆದು ತನ್ನ ಪ್ರತಿಭೆಯನ್ನು ಮೆರೆಸಿದ ಕಂದಾವರರು ಕುಂದನಾಡುಕಂಡ ಅಪೂರ್ವ ಯಕ್ಷಕವಿ ಕುಂದ. ಅದರ ಕಂಪು ಬಹುಕಾಲ ಬೀರುತ್ತಿರಲೆಂಬ ಹಾರೈಕೆ ನನ್ನದು.

ಸ್ತ್ರೀ ಹೃದಯ ಸಂವೇದಿ ಪ್ರಸಂಗಕರ್ತ ಕಂದಾವರ ರಘುರಾಮ

ಡಾ. ಶುಭಾ ಮರವಂತೆ

ನಮ್ಮ ಭಾವಲೋಕದ ವಿಸ್ತಾರಕ್ಕೆ ಕಾರಣವಾಗುವ ಹಲವು ಕಲಾ ಸಾಮಗ್ರಿಗಳಲ್ಲಿ ಯಕ್ಷಗಾನವೂ ಒಂದು. ಕರಾವಳಿಯ ಬಹುಜನರ ಮನಸ್ಸು ಮತ್ತು ಹೃದಯವನ್ನು ಈ ಕಲೆ ಆಕ್ರಮಿಸಿಕೊಂಡಿರುವ ಹಿನ್ನೆಲೆಗೆ ದೈವಿಕ ಕಾರಣಗಳಿದ್ದರೂ ಅದರಾಚೆ ಉಳಿದಿರುವುದು ಅದರ ಮೌಲ್ಯ ಪ್ರಜ್ಞೆಯಿಂದ. ಯಕ್ಷಗಾನವನ್ನು ವಾಚಿಕ-ಆಂಗಿಕ ಸಾಮಗ್ರಿಯಾಗಿ ಅಧ್ಯಯನ ಮಾಡುವ ಯಾರಿಗೂ ಮನುಷ್ಯನೊಳಗಿನ ಧಾರ್ಮಿಕ, ನೈತಿಕ ಪ್ರಜ್ಞೆಯನ್ನು ಉದ್ದೀಪಿಸುವ ಸಾಧನವಾಗಿ ಅದು ಹೇಗೆ ಕೆಲಸ ಮಾಡುತ್ತದೆ ಎನ್ನುವುದು ಕುತೂಹಲದ ಸಂಗತಿಯಾಗಿರುತ್ತದೆ. ಯಕ್ಷಗಾನವೂ ನಮ್ಮ ಸಾಹಿತ್ಯ ಪಠ್ಯದ ಒಂದು ಭಾಗವಾಗಬೇಕಾದ ಅಗತ್ಯವನ್ನು ಪ್ರತಿಪಾದಿಸುವ ಹಿಂದೆ ಕೆಲವು ಸಾಂಸ್ಕೃತಿಕ ಉದ್ದೇಶಗಳಿವೆ. ಯಕ್ಷಗಾನ ಸಾಹಿತ್ಯ ಮೂಲತಃ ಪದ್ಯ ಸಾಹಿತ್ಯ. ಇದನ್ನು ರಚಿಸುವವನಿಗೆ ಪ್ರಸಂಗಕರ್ತ ಅಥವಾ ಕವಿ ಎಂದು ಕರೆಯಲಾಗುತ್ತದೆ. ಯಕ್ಷಗಾನ ಕೃತಿಯನ್ನು ಪ್ರಸಂಗವೆಂದು ಕರೆಯಲಾಗುತ್ತದೆ. ಇಂಗ್ಲೀಷಿನಲ್ಲಿ ಅದನ್ನು **'Plot'/'Episode'** ಎಂದು ಕರೆಯಲಾಗುತ್ತದೆ. ಇದರರ್ಥ, ಅದೊಂದು ಸಮಗ್ರ ಮಹಾಕಾವ್ಯವಲ್ಲ. ರಾಮಾಯಣ, ಮಹಾಭಾರತಗಳಿಂದ ಆಯ್ದ ಪುಟ್ಟ ಘಟನೆಗಳ ನಿರೂಪಣೆ ಎಂದು ಕರೆಯಬಹುದು. ಇತ್ತೀಚೆಗೆ ಪೌರಾಣಿಕ ಮಾತ್ರವಲ್ಲ, ಐತಿಹಾಸಿಕ, ಸಾಮಾಜಿಕ, ರಾಜಕೀಯ ವಿಷಯ ವಸ್ತುಗಳೂ ಪ್ರಸಂಗಗಳಾಗುತ್ತಿವೆ. ಯಕ್ಷಗಾನ ಕಾವ್ಯಗಳನ್ನು ಖಂಡ ಕಾವ್ಯಗಳೆಂದು ಕರೆಯಬಹುದು. ಆಶ್ಚರ್ಯವೆಂದರೆ ಸಾಹಿತ್ಯ ದೃಷ್ಟಿಯಲ್ಲಿ ಇದು ಮಹಾಕಾವ್ಯ ಅನ್ನಿಸಿಕೊಳ್ಳದಿದ್ದರೂ ಅದರ ಅನೇಕ ಗುಣಲಕ್ಷಣಗಳು ಮಹಾಕಾವ್ಯ ಪದ್ಧತಿಯನ್ನು ಹೋಲುತ್ತವೆ.

ಯಕ್ಷಗಾನ ಸಾಹಿತ್ಯವನ್ನು ಪದ್ಯಗಳೆಂದು ಕರೆಯುವುದು ವಾಡಿಕೆ. 'ಪ್ರಸಂಗ ಸಾಹಿತ್ಯ' ವೆಂಬ ಹೆಸರೂ ಇದೆ. ಇಂದಿಗೂ ಕನ್ನಡ ಸಾಹಿತ್ಯದಲ್ಲಿ ಛಂದಸ್ಸನ್ನು ಒಂದು ಶಕ್ತಿಯಾಗಿ ಉಳಿಸಿಕೊಂಡು ಬಂದಿರುವುದು ಪ್ರಸಂಗ ಸಾಹಿತ್ಯ ಮಾತ್ರ. ನಿರ್ದಿಷ್ಟ ಚೌಕಟ್ಟಿನಲ್ಲಿ ಭಾವ, ರಸ, ಅನುಭವ, ತಾಳ, ಲಯ, ಸನ್ನಿವೇಶ

ಪ್ರಜ್ಞೆಯಿಂದ ಪದ್ಯಕಟ್ಟುವ ಕಲೆ ಉಳಿದಿರುವುದಾದರೆ ಅದು ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಮಾತ್ರ. ವಿಪರ್ಯಾಸವೆಂದರೆ ಕನ್ನಡ ಸಾಹಿತ್ಯ ಪಠ್ಯಗಳಲ್ಲಿ ಯಕ್ಷಗಾನ ಪದ್ಯಗಳು ಸಾಹಿತ್ಯವೆಂದು ಗುರುತಿಸಲ್ಪಟ್ಟಿಲ್ಲ. ನಾಟಕದಂತೆ ಯಕ್ಷಗಾನವೂ ಒಂದು ರಂಗಕಲೆಯಾದರೂ ನಾಟಕದ ಪಠ್ಯವು ಸಾಹಿತ್ಯ ಪಠ್ಯವೆಂಬ ಗೌರವಕ್ಕೆ ಭಾಜನವಾಗಿದೆ. ಯಕ್ಷಗಾನಕ್ಕೆ ಅದು ಯಾಕೆ ಸಾಧ್ಯವಾಗಿಲ್ಲ ಎಂಬುದು ಗಂಭೀರವಾದ ಪ್ರಶ್ನೆ. ಒಂದು ಅದಕ್ಕಿರುವ ಪ್ರಾದೇಶಿಕತೆಯ ಮಿತಿ ಕಾರಣವಾಗಿರಬಹುದು; ಇನ್ನೊಂದು ಯಕ್ಷಗಾನವನ್ನು ಅದರ ತಾತ್ವಿಕ ಚೌಕಟ್ಟಿಗೆ ಒಗ್ಗಿಸಿ ಮಾತಾಡುವ ವಿಮರ್ಶಾ ಮಾನದಂಡಗಳ ಕೊರತೆಯೂ ಇರಬಹುದು. ಪ್ರಸಂಗ ಸಾಹಿತ್ಯವನ್ನು ಸಮಾಜವಾದಿ, ಮಾರ್ಕ್ಸ್‌ವಾದಿ, ಸ್ತ್ರೀವಾದಿ ದೃಷ್ಟಿಕೋನಗಳಿಂದ ನೋಡುವ ವಿಮರ್ಶಾ ಪರಿಕ್ರಮವೊಂದು ಪ್ರಾರಂಭವಾಗಿದೆ. ಅದರ ಸಾಹಿತ್ಯಿಕ, ಸಾಂಸ್ಕೃತಿಕ ಮಹತ್ವ ನಮಗೆ ಅರಿವಾಗದೆ ಹೋಗುವ ಸಾಧ್ಯತೆಯೂ ಇದೆ. ಆದ್ದರಿಂದ ಯಕ್ಷ ಸಾಹಿತ್ಯ ಪ್ರಕಾರದಲ್ಲಿ ಸಮೃದ್ಧ ಕೃಷಿ ಮಾಡಿರುವ ಶ್ರೀ ಕಂದಾವರ ರಘುರಾಮ ಶೆಟ್ಟಿಯವರಂತಹ ಹಿರಿಯ ಅನುಭವಿ ಕವಿಗಳ ಸಾಹಿತ್ಯವನ್ನು ಇಂತಹ ಆಲೋಚನೆಗಳ ಮೂಲಕ ಪ್ರವೇಶ ಮಾಡಬೇಕು ಎನ್ನುವ ಒತ್ತಾಸೆಗೆ ಪೂರಕವಾಗಿ ಈ ಪೀಠಿಕೆ ನೀಡಬೇಕಾಯಿತು.

ಯಕ್ಷಗಾನವು ಭಾವಾಭಿವ್ಯಕ್ತಿಗೆ ವ್ಯಂಜಕವಾದ ಒಂದು ಕಲೆ; ರಂಜಕವಾದ ಕಲೆ. ಇದಕ್ಕೆ ಪೂರಕವಾಗಿ ಪ್ರಸಂಗ ಸಾಹಿತ್ಯವಿರಬೇಕು. ರಂಗಪ್ರಜ್ಞೆ ಹಾಗೂ ಕಾವ್ಯಾನುಭೂತಿ ಇವೆರಡರ ಸಂಯೋಜನೆಯನ್ನು ಯಕ್ಷಗಾನ ಕೃತಿ ಪಡೆದಿರಬೇಕಾಗುತ್ತದೆ. ಇದರ ಜೊತೆಗೆ ಸಾಮಾಜಿಕ ಸಂವೇದನೆಯೊಂದು ಕಲಾಕೃತಿಯಲ್ಲಿ ಪಡೆದ ಸ್ಥಾನವೂ ಮುಖ್ಯವಾಗುತ್ತದೆ. ಸಾಮಾಜಿಕ ಸಂವೇದನೆ ಎಂದರೇನು? ಎಂದು ಕೇಳುವ ಕಾಲ ಬಂದಿದೆ. ಧರ್ಮ, ಜಾತಿ, ಲಿಂಗ ತಾರತಮ್ಯಗಳು ತಾಂಡವವಾಡುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಪರಸ್ಪರರ ಬದುಕು ಭಾವನೆಗಳನ್ನು ಗೌರವಿಸುವ, ಮೇಲು ಕೀಳು ಎಂಬ ಅಹಂ ನಿರಸನಗೊಂಡ ವಿಶಾಲವಾದ ಮಾನವತ್ವದ ನೆಲೆಯಲ್ಲಿ ಮನುಷ್ಯ ಮನುಷ್ಯನನ್ನು ಅರ್ಥೈಸುವ ವಾತಾವರಣವೊಂದು ರೂಪುಗೊಳ್ಳುವುದಕ್ಕೆ ನಡೆಸುವ ಎಲ್ಲಾ ಪ್ರಯತ್ನಗಳೂ ಸಾಮಾಜಿಕ ಸಂವೇದನೆಯ ಭಾಗವೇ ಆಗಿದೆ. ಹೆಣ್ಣು ಹೆಣ್ಣಿನ ಅಸ್ಮಿತೆಯ ನೆಲೆಗಳನ್ನು ಆಧರಿಸಿ ಬೆಳೆದಿರುವ ಈ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣಿನ ಸ್ಥಾನದ ಪ್ರಶ್ನೆ ಮಾನವೀಯವೆನಿಸುತ್ತದೆ. ಸ್ತ್ರೀಯರನ್ನೂ ಒಳಗೊಂಡು

ವಿಸ್ತಾರವಾಗುತ್ತಿರುವ ಯಕ್ಷಗಾನದಂತಹ ಕಲೆಯಲ್ಲಿ ಹೆಣ್ಣಿನ ಆಶಯ ಅಭಿವ್ಯಕ್ತಿಗೆ ದೊರೆತ ಮನ್ನಣೆಯನ್ನು ಗುರುತಿಸುತ್ತಾ ಸ್ತ್ರೀ ಕೇಂದ್ರಿತ ಪ್ರಸಂಗ ಸಿದ್ಧಾಂತವನ್ನು ರೂಪಿಸುವ ಹೊಣೆಗಾರಿಕೆ ನಮ್ಮ ಮೇಲಿದೆ. ಮೊದಲಿನಿಂದಲೂ ನಮ್ಮ ಕುಂದಾಪುರದ ಸಾಂಸ್ಕೃತಿಕ ಪರಿಸರದಲ್ಲಿ ಕಾಣಿಸುವ ಒಟ್ಟು ಕವಿಗಳಲ್ಲಿ ಯಕ್ಷಕವಿಗಳ ಸಂಖ್ಯೆಯೇ ಹೆಚ್ಚು, 17–18ನೇ ಶತಮಾನದಿಂದಲೂ ನಡೆದು ಬಂದ ಯಕ್ಷಕವಿಗಳ, ಕೃತಿಗಳ ಇತಿಹಾಸದ ಮೂಲಕವೇ ತಾಲೂಕಿನ ಸಾಹಿತ್ಯ ಚರಿತ್ರೆ ಆರಂಭಿಸಬೇಕಾಗುತ್ತದೆ. ಹಟ್ಟಿಯಂಗಡಿ, ಉಳ್ಳೂರು, ಕೊಲ್ಲೂರು, ಕುಂದಾಪುರ ಪರಿಸರದಲ್ಲಿ ಪುರುಷ ಪ್ರಸಂಗಕರ್ತರಿಗೆ ಸರಿಸಮನಾಗಿ ಮಹಿಳಾ ಪ್ರಸಂಗಕರ್ತರೂ ಕಾಣಿಸಿಕೊಂಡಿದ್ದಾರೆ ಎನ್ನುವುದು ಇನ್ನೊಂದು ವಿಶೇಷ. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯ ಅಳಿಯಕಟ್ಟು ಸಾಮಾಜಿಕ ವಾತಾವರಣವು ಸಹಜವಾಗಿಯೇ ಸ್ತ್ರೀ ಪ್ರಾಧಾನ್ಯತೆಯನ್ನು ಮೆರೆಯಿತು. ಬೇರೆ ಯಾವ ಮನರಂಜನೆಯೂ ಇಲ್ಲದ ಕಾಲದಲ್ಲಿ ಮಹಿಳೆಯರೇ ಯಕ್ಷಗಾನ ದೃಶ್ಯ ಮಾಧ್ಯಮದ ವೀಕ್ಷಕರಾದರು. (ಇಂದಿಗೂ ಟಿ.ವಿ ಯಂತಹ ದೃಶ್ಯ ಮಾಧ್ಯಮ ನಡೆಯುತ್ತಿರುವುದೇ ಸ್ತ್ರೀಯರೆಂಬ ಅಭಿಮಾನಿ ದೇವತೆಗಳ ಮೇಲೆ!) ದುಡಿತ ಹಾಗೂ ಬಿಡುವಿನ ಪರಿಕಲ್ಪನೆಯಲ್ಲಿ ಅರಳಿದ ಈ ಕಲಾ ಪರಿಭಾಷೆ ಸ್ತ್ರೀ ವೇಷಗಳನ್ನು ಒಳಗೊಂಡು ಬೆಳೆದಿರುವುದಕ್ಕೆ ಹೆಣ್ಣು ಮಕ್ಕಳನ್ನು ಆಕರ್ಷಿಸುವ ಉದ್ದೇಶವೂ ಒಂದು ಕಾರಣ. ಸೀತೆ, ದ್ರೌಪದಿಯರಂತಹ ಪೌರಾಣಿಕ ಪಾತ್ರಗಳು ಕರಾವಳಿಯಲ್ಲಿ ಜನಪ್ರಿಯವಾಗಲು ಅವು ಪ್ರತಿನಿಧಿಸುವ ಸ್ತ್ರೀ ಮೌಲ್ಯಗಳೇ ಪ್ರಮುಖವಾಗಿದ್ದವು. ಈ ದೃಷ್ಟಿಯಿಂದ ಪುರಾಣದ ಪಾತ್ರಗಳು ಜನ ಸಾಮಾನ್ಯರ ಬಳಿಗೆ ತರುವಲ್ಲಿ ಯಕ್ಷಗಾನದ ಪ್ರಯತ್ನ ಗಮನಾರ್ಹವಾದುದೇ ಆಗಿದೆ. ಇತ್ತೀಚಿನ ಸಾಮಾಜಿಕ ಕಥಾ ವಸ್ತು, ಹಂದರವಿರುವ ಪ್ರಸಂಗಗಳೂ ಕೂಡ ಸ್ತ್ರೀ ಪ್ರಾಧಾನ್ಯತೆಯನ್ನು ಎತ್ತಿ ಹಿಡಿದಿವೆ. ಬಹುತೇಕ ಪ್ರಸಂಗಗಳು ಹೆಣ್ಣಿನ ಹೆಸರಿನಿಂದಲೇ ಪ್ರಾರಂಭವಾಗುತ್ತವೆ. ಹೆಣ್ಣಿನ ಬದುಕನ್ನು ಕೇಂದ್ರೀಕರಿಸಿಯೇ ಕಥಾ ಪಾತ್ರ, ಸನ್ನಿವೇಶಗಳು ನಿರ್ಮಾಣವಾಗುತ್ತಿದೆ. ಧಾರವಾಹಿಯಲ್ಲಿ ತೋರಿಸುವ ಸ್ತ್ರೀ ಸ್ವಭಾವದ ಅತಿರಂಜನೆ ಯಕ್ಷಗಾನ ಪ್ರಸಂಗಗಳಿಗೂ ಬರುತ್ತಿರುವುದು ಜನಪ್ರಿಯ ಪ್ರಯೋಗವೆಂಬ ವಿಶೇಷಣಕ್ಕೆ ಒಳಗಾಗಿದೆ.

ನಮ್ಮ ಯಕ್ಷಗಾನ ಪ್ರಸಂಗಗಳಲ್ಲಿ ಹೆಣ್ಣಿನ ಮೂರು ನಾಲ್ಕು ಮಾದರಿಗಳು ಮತ್ತೆ ಮತ್ತೆ ಗೋಚರವಾಗುತ್ತದೆ. ಹೆಣ್ಣಿನ ವಿಷಯದಲ್ಲಿ ಪುರುಷ ಪ್ರಧಾನ ಸಮಾಜದ

ಮೌಲ್ಯಗಳೇ ವಿಜೃಂಭಿಸುವಂತೆ ಮಾಡುವುದು ಒಂದು ಮಾದರಿ. ಸಂಪ್ರದಾಯಿಕ ಚೌಕಟ್ಟಿನಲ್ಲಿ ಬಾಳುವ ಹೆಣ್ಣಿಗೆ ಸಮಾಜವು ಹೇಗೆ ರಕ್ಷಣೆಯನ್ನು ನೀಡುತ್ತದೆ ಎನ್ನುವುದನ್ನು ಪ್ರತಿನಿಧಿಸುವುದು ಸೀತೆಯ ಮಾದರಿಯಾದರೆ ಇನ್ನೊಂದು ಮಾದರಿ ದ್ರೌಪದಿಯ ಮಾದರಿ. ಶಶಿಪ್ರಭೆ, ದ್ರೌಪದಿ, ಮೀನಾಕ್ಷಿ ಇವರೆಲ್ಲ ಸ್ತ್ರೀ ಬಂಡಾಯದ ಒಳಗಿನಿಂದ ಕಾಣಿಸಿಕೊಳ್ಳುವವರು. ಇದು ಪೌರಾಣಿಕ ಪ್ರಸಂಗಗಳ ರೀತಿಯಾದರೆ ಆಧುನಿಕ ಸಾಮಾಜಿಕ ಪ್ರಸಂಗಗಳಲ್ಲಿ ಅತಿ ಆಧುನಿಕತೆಯ ಪ್ರಭಾವದಿಂದ ಹೆಣ್ಣಿನೊಳಗಿನ ಕ್ರೌರ್ಯದ ಮುಖವನ್ನು ಮತ್ತು ಆಧುನಿಕತೆ ಹೆಣ್ಣಿನ ಬದುಕಿಗೆ ಹೇಗೆ ಮಾರಕ ಎನ್ನುವುದನ್ನು ಚಿತ್ರಿಸುವ ಪ್ರಸಂಗಗಳು ನಮ್ಮಲ್ಲಿ ಹೆಚ್ಚು ಜನಪ್ರಿಯವಾಗುತ್ತವೆ. ಜೊತೆಗೆ ದೈನಂದಿನ ವಸ್ತು ಸಂಗತಿಗಳನ್ನು ಹೆಣ್ಣಿನ ಮೂಲಕ ಕಪ್ಪು ಬಿಳಿ ಪ್ರತಿಮೆಗಳಲ್ಲಿ ಕಾಣಿಸುವ ಪ್ರಯತ್ನವೂ ನಡೆಯುತ್ತಿದೆ. ಟಿ. ವಿ. ಧಾರವಾಹಿಯ ಪ್ರಭಾವ ಇವುಗಳಲ್ಲಿ ನಿಚ್ಚಳವಾಗಿದೆ.

ನನಗೆ ಮುಖ್ಯವಾಗುವುದು ಪರಿಪಕ್ವ ಪ್ರಸಂಗಕರ್ತರಾದ ಶ್ರೀ ಕಂದಾವರ ರಘುರಾಮ ಶೆಟ್ಟಿಯವರು ಮೇಲೆ ಹೇಳಿದ ಈ ಎರಡೂ extremityಗಳನ್ನು ಅವರು ಪ್ರಸಂಗ ಸಾಹಿತ್ಯದಲ್ಲಿ ಹೇಗೆ ನಿಭಾಯಿಸಿದರು ಎನ್ನುವುದು. ಪ್ರಸಂಗ ಸಾಹಿತ್ಯವನ್ನು ವಾಚಕ ಸಾಮಗ್ರಿಯಾಗಿ ಕಂಡುಕೊಳ್ಳುವ ಈ ಹಂತದಲ್ಲಿ ಅದರ ಪ್ರಾಯೋಗಿಕ ಮೌಲ್ಯಕ್ಕಿಂತಲೂ ಅದರ ಕಥಾ ಸಂವಿಧಾನವು ಕಟ್ಟಿಕೊಡುವ ಸ್ತ್ರೀತ್ವದ ಪರಾಮರ್ಶೆ, ಸಂವೇದನೆಗಳ ನೆಲೆಯನ್ನು ಗುರುತಿಸುವ ಪ್ರಯತ್ನಗಳಾಗಬೇಕಾಗಿದೆ. ಅವರ ದಶಮಿ ಸಂಕಲನದ ಹತ್ತು ಪ್ರಸಂಗಗಳನ್ನು ಓದುವ ಅವಕಾಶ ಜೊತೆಗೆ ಬಾಲ್ಯದಿಂದಲೂ ಅವರ ಪ್ರಸಂಗ ಪದ್ಯಗಳು ನಾಲಿಗೆಯ ಮೇಲೆ ನಲಿದ ಸಂಭ್ರಮದಿಂದಾಗಿ ಕಂದಾವರ ರಘುರಾಮ ಶೆಟ್ಟರ ಪ್ರಸಂಗಗಳೆಂದರೆ ಒಂದು ಬಗೆಯ ಕುತೂಹಲ. ಯಕ್ಷಗಾನ ಪ್ರಸಂಗ ಸಾಹಿತ್ಯದ ಅತ್ಯುತ್ತಮ ಕಥನ ಪ್ರತಿಭೆಯಾಗಿ ಅರ್ಧ ಶತಮಾನದ ಹಿಂದೆಯೇ ಗುರುತಿಸಲ್ಪಟ್ಟ ಅವರು ಯಕ್ಷರಂಗದಲ್ಲಿ ನಿರ್ಮಿಸಿದ ಕಥಾ ಸಂವಿಧಾನದ ಮಾದರಿ, ಪಾತ್ರಗಳ ಚಲನೆಯಲ್ಲಿ ಹುಟ್ಟಿಸಿದ ಗಾಂಭೀರ್ಯ, ಸನ್ನಿವೇಶ ನಿರ್ಮಾಣ, ರಸಜ್ಞತೆಯೇ ಮೊದಲಾದ ಕೌಶಲಗಳಿಂದ ಅವರು ಪ್ರಸಿದ್ಧರು. ತಮ್ಮ ಪ್ರಸಂಗಗಳ ಮೂಲಕ ಪ್ರಯೋಗಶೀಲತೆಯನ್ನು ಮೆರೆದ ಅವರು ಸ್ತ್ರೀತ್ವದ ಬಗೆಗೆ ಅಂತಸ್ಥ ಗೌರವವನ್ನು ರೂಢಿಸಿಕೊಂಡವರು. ಹಾಗಾಗಿ ಅವರನ್ನು ಸ್ತ್ರೀ ಹೃದಯದ ಪ್ರಸಂಗಕಾರನೆಂದೆ ಗುರುತಿಸಲಾಗುತ್ತದೆ. ಅಷ್ಟು ಸಶಕ್ತ ಸ್ತ್ರೀ ಪಾತ್ರಗಳನ್ನು ಅವರು ಸೃಷ್ಟಿಸಿದ್ದಾರೆ.

ಕಂದಾವರರ ಸಾಮಾಜಿಕ ಪ್ರಸಂಗಗಳಲ್ಲಿ ಕಾಣಿಸುವ ಸ್ತ್ರೀ ಪಾತ್ರಗಳು ಪುರಾಣದ ಪರಿಪ್ರೇಕ್ಷ್ಯದಲ್ಲಿ ಹಾದು ಹೋದಂತೆ ಭಾಸವಾಗಿ ಮನಸ್ಸಿನಾಳದಲ್ಲಿ ನೆಲೆ ನಿಲ್ಲಬಲ್ಲ ಧೀಮಂತಿಕೆಯನ್ನು ಪಡೆದಿವೆ. ಚೆಲುವೆ ಚಿತ್ರಾವತಿ, ಶ್ರೀದೇವಿ ಬನಶಂಕರಿ, ಸತಿ ಶೀಮಂತಿನಿ, ಶೂದ್ರ ತಪಸ್ವಿನಿ, ರತಿರೇಖಾ, ವಧೂ ಮಾಧವಿ ಮೊದಲಾದ ಎಲ್ಲಾ ಪ್ರಸಂಗಗಳೂ ಸ್ತ್ರೀ ಪ್ರಧಾನವೇ ಆಗಿವೆ. ಸುಮಾರು ತೊಂಬತ್ತನೆಯ ದಶಕಕ್ಕಿಂತ ಮೊದಲೇ ಬರೆದ ಈ ಪ್ರಸಂಗಗಳು ಸಾರ್ವಕಾಲೀಕ ಮೌಲ್ಯ ಪಡೆದು ಇಂದಿಗೂ ಜನ ಮಾನಸದಲ್ಲಿ ನೆಲೆ ನಿಂತಿವೆ.

ಕಂದಾವರ ರಘುರಾಮ ಶೆಟ್ಟರ ಪ್ರಸಂಗಗಳ ವೈಶಿಷ್ಟ್ಯವೇ ಅದು. ಸ್ತ್ರೀ ಪ್ರಧಾನ ಕಥಾನಕದ ಸುತ್ತ ಹೆಣೆಯಲ್ಪಟ್ಟಿರುವುದು. ಕೌಟುಂಬಿಕ ಬದುಕಿನ ಸಾಮಗ್ರಿಗಳನ್ನು ಅವರು ಕಥನಕ್ಕೆ ಒಗ್ಗಿಸಿಕೊಳ್ಳುವ ರೀತಿ ನಿಜಕ್ಕೂ ಅಪೂರ್ವ. ಮಾತೃ ಪ್ರಧಾನ ಕುಟುಂಬದ ಹಿನ್ನೆಲೆಯಿಂದ ಬಂದ ಅವರಿಗೆ ಹೆಣ್ಣಿನ ಶಕ್ತಿ ಮತ್ತು ದೌರ್ಬಲ್ಯಗಳನ್ನು ಗುರುತಿಸುವುದು ಸಹಜವೆನಿಸಿದೆ. ಸುಮಾರು ಎಪ್ಪತ್ತು–ಎಂಬತ್ತರ ದಶಕದಲ್ಲಿ ಸ್ತ್ರೀ ಜೀವನದ ಮೌಲ್ಯಗಳನ್ನು ಪ್ರಸಾರ ಮಾಡುವಲ್ಲಿ ಟಿ.ವಿ ಯಂತಹ ಮಾಧ್ಯಮಗಳು ಇನ್ನೂ ಪ್ರಚಾರ ಪಡೆಯದ ಕಾಲದಲ್ಲಿ ಯಕ್ಷಗಾನ ಪ್ರಸಂಗಗಳು ವಹಿಸಿದ ಶ್ರಮವನ್ನು ಗಮನಿಸಿದರೆ ಕಂದಾವರ ಅವರ ಪ್ರಸಂಗಗಳ ಔಚಿತ್ಯ ಸ್ಪಷ್ಟವಾಗುತ್ತದೆ. ಮನುಷ್ಯ ಸ್ವಭಾವಗಳನ್ನು ಸೂಕ್ಷ್ಮವಾಗಿ ಅವಲೋಕಿಸುವತ್ತ ಅವರ ಗಮನವಿದೆ. ಪುರಾಣ ಕಾಲದ ಸ್ತ್ರೀಯರು ಆರಿಸಿಕೊಂಡ ಜೀವನ ಮೌಲ್ಯಗಳನ್ನು ಸಂವಹನಗೊಳಿಸುವಲ್ಲಿ ಯಕ್ಷಗಾನ ಪ್ರಸಂಗಗಳು ಪ್ರಧಾನ ಪಾತ್ರ ವಹಿಸಿದರೂ ಕಂದಾವರ ಅವರ ಪ್ರಸಂಗಗಳಲ್ಲಿ ಹೆಣ್ಣಿನ ಅಸ್ಮಿತೆಯ ಪ್ರಶ್ನೆಯೂ ಅಷ್ಟೇ ನಿಚ್ಚಳವಾಗಿ ಪ್ರತಿಪಾದಿಸಲ್ಪಟ್ಟಿದೆ.

'ವಧೂ ಮಾಧವಿ' ರಘುರಾಮ ಶೆಟ್ಟರ ಮಹತ್ವದ ಪೌರಾಣಿಕ ಪ್ರಸಂಗ. ಯಯಾತಿಯ ಮಗಳು ಮಾಧವಿ ಪುರಾಣ ಕಥಾ ಪ್ರಸಂಗಗಳಲ್ಲಿ ಕಂಡೂ ಕಾಣದೇ ಇರುವ ಒಂದು ಪಾತ್ರ, ಡಾ। ಅನುಪಮಾ ನಿರಂಜನ ಅವರ 'ಮಾಧವಿ' ಕಾದಂಬರಿ ಬರುವವರೆಗೂ ಮಾಧವಿಯನ್ನು ಮಾನವೀಯ ನೆಲೆಯಲ್ಲಿ ನೋಡಲು ಸಾಧ್ಯವಾಗಿಲ್ಲ. ಆ ಕಾದಂಬರಿಯನ್ನು ಓದಿ ಪ್ರಭಾವಿತರಾದ ರಘುರಾಮ ಶೆಟ್ಟರು 'ವಧೂ ಮಾಧವಿ' ಎಂಬ ಪ್ರಸಂಗ ರಚಿಸಿದ್ದಾರೆ. ಸಂಪ್ರದಾಯ ನಿಷ್ಠ, ಸಂಸ್ಕೃತಿ ಬದ್ಧ ಪಾತ್ರವೊಂದನ್ನು ಆಧುನಿಕ ಸ್ತ್ರೀ ಸಂವೇದನೆಯ ನೆಲೆಯಲ್ಲಿ ಪುನಾರಚಿಸುವ ಅವರ ಪ್ರಯತ್ನ ಶ್ಲಾಘನೀಯವಾದುದು. ಹಲವು ಗಂಡಸರೊಡನೆ ಉಪಭೋಗದ ವಸ್ತುವಾಗುವ

ಮಾಧವಿಯ ಮನದಾಳದ ಭಾವನೆಯನ್ನು ಮೊದಲು ನಿರೂಪಿಸಿದವರು ಅನುಪಮಾ ನಿರಂಜನ. ಕಾರ್ನಾಡರ 'ಯಯಾತಿ' ನಾಟಕ ಕೂಡ ಮಾಧವಿಯ ಕುರಿತು ಮಾತನಾಡುವುದಿಲ್ಲ. ಅನುಪಮಾ ಅವರ ಕಾದಂಬರಿಯನ್ನು ಹೊರತು ಪಡಿಸಿದರೆ ಯಕ್ಷಗಾನದಂತಹ ಕಲಾ ಮಾಧ್ಯಮದಲ್ಲಿ ಅದೇ ಬಗೆಯ ಸಂವೇದನೆಯನ್ನು ಸೆರೆಹಿಡಿದ ಧೀಮಂತರೆಂದರೆ ಅದು ರಘುರಾಮ ಶೆಟ್ಟರು ಮಾತ್ರ, ಆ ಪ್ರಸಂಗದ ಕ್ಯಾಸೆಟ್ಟನ್ನು ಕೇಳಿದ ಹಲವು ಮಹನೀಯರ ಅಭಿಪ್ರಾಯವೂ ಇದೇ ಆಗಿದೆ.

ಗುರು ದಕ್ಷಿಣೆಗಾಗಿ ಗಾವಲ ಬೇಡಿದ ಎಂಟುನೂರು ಜಾತಿ ಕುದುರೆಗಳಿಲ್ಲದೆ ಇರಲು ಮಾಧವಿಯ ಮಲತಾಯಿ ದೇವಯಾನಿಯ ಮಾತಿಗೆ ಯಯಾತಿ ಒಪ್ಪಿ ತನ್ನ ಮಗಳನ್ನೇ 'ಬಳಕೆ'ಯ ವಸ್ತುವಿನಂತೆ ಅಡವಿಡುವ ಸಂದರ್ಭ ತಿಳಿದು ಮಾಧವಿ ದುಃಖಿಸುವ ಸನ್ನಿವೇಶ ಹೀಗಿದೆ: ಕೊಟ್ಟೆಯಾ ತಂದೆ ಬಾಳಿನ ಬಗೆಗಾಗಿ ನಾ/ ಕಟ್ಟಿದ ಕನಸೆಲ್ಲಾ ಹೋಯ್ತೇ? ಕೊಟ್ಟಿಗೆ ಹಸುವು ನಾನಾದನೆ ಮಗಳನ್ನು/ಅಟ್ಟಿದೆಯಲ್ಲಾ ಕಾನನಕೆ ಕೊಟ್ಟಿಗೆ ಹಸುವಿನಂತೆ ಅನ್ಯರ ಆಕಾಂಕ್ಷೆಗೆ ದುಡಿಯುವ ಜೀವಂತ 'ವಸ್ತು'ವಾದೆನೆಂಬ ಅವಳ ನೋವು ಹೆಣ್ಣಾದ ದೇವಯಾನಿಗಾದರೂ ಅರ್ಥವಾಗಬಾರದೆ? ಎಂದು ಚಿಂತಿಸುತ್ತಾ ತನ್ನ ರತ್ನಾಭರಣಗಳನ್ನೆಲ್ಲಾ ಕಳಚಿ ಕಣ್ಣೀರು ಸುರಿಸಿ ಮಾಧವಿ ನಮ್ಮ ಅಂತರಂಗದಲ್ಲಿ ನೆಲೆ ನಿಲ್ಲುತ್ತಾಳೆ. 'ಮದ್ಯಪತಿ!'ಯಾದ ಹರ್ಯಶ್ವನಲ್ಲಿ ಒಂದು ವರ್ಷ ಕಳೆದು ಮಗನನ್ನು ಪಡೆದು ಹೆಂಡತಿಯಾಗಿ ಬಾಳಲಾರದೆ ಅನಿವಾರ್ಯವಾಗಿ ಹೊರನಡೆಯುವ ಮಾಧವಿ, ಹೆತ್ತ ಮಗನನ್ನಾದರೂ ಕೊಡು ಎಂದು ಬೇಡುತ್ತಾಳೆ. 'ಹೆತ್ತ ಕರುಳನು ನಿಷ್ಕರುಣೆಯಲಿ ಕಿತ್ತುಕೊಳುವೆಯಾ' ಎಂದು ಚೀರುತ್ತಾಳೆ. ಅವಳ ಈ ಚೀರಾಟಕ್ಕೆ ಗಾವಲನಲ್ಲಾಗಲಿ, ಹರ್ಯಶ್ವನಲ್ಲಾಗಲಿ ಉತ್ತರ ದೊರೆಯದೇ ಅವಳು ಮುಂದಿನ ಗಂಡಸಿನ ಭೋಗದ ವಸ್ತುವಾಗಬೇಕಾಗುತ್ತದೆ. 'ಎಲ್ಲಾ ಮೋಹ ತೊರೆದ ಕಲ್ಲು ಹೃದಯದವಳಾಗಿ' ಮತ್ತೆ ಮೂವರಲ್ಲಿ ಇದೇ ಬಗೆಯ ಯಾತನೆ ಅನುಭವಿಸುತ್ತಾಳೆ. ಕಾನನದ ಮಧ್ಯದಲ್ಲಿ ನಡೆಯಲಾಗದ ಸಂಕಟದಲ್ಲಿ ನೀರೆಂದು ಕೂಗುವ ಅವಳ ದುಸ್ಥಿತಿ ಯಾವ ಹೆಣ್ಣಿಗೂ ಬೇಡ. ಸೂಳೆತನದ ಪದವಿಯನ್ನೂ ನಿಷ್ಕಾರುಣವಾಗಿ ಅವಳು ಹೊರಬೇಕಾಗುತ್ತದೆ. ಕೊನೆಯಲ್ಲಿ ವಿಶ್ವಾಮಿತ್ರನೂ ಕಾಮುಕನಾದಾಗ ತಪಸ್ವಿಗಳೂ ಕಾಮುಕರೇ? ಎಂಬ (ಸಮಕಾಲೀನವೆನಿಸುವ) ಪ್ರಶ್ನೆ ಎತ್ತಿ ಪ್ರತಿಭಟಿಸಲು ಮುಂದಾಗುತ್ತಾಳೆ.

ಆದರೂ ವಿಶ್ವಾಮಿತ್ರ ಬಲಾತ್ಕಾರವಾಗಿ ಅವಳನ್ನು ಭೋಗಿಸುತ್ತಾನೆ. ಅಸಹಾಯಕ ಹೆಣ್ಣಿನ ನರಳಾಟ ಮಾತ್ರ ಕಿವಿಗೆ ಕೇಳುತ್ತದೆ. 'ಕಾಮಕ್ರೋಧ ಹಿಂಗದವರು ಋಷಿಗಳಾಗರು' ಎಂಬುದು ಕವಿಯ ತೀರ್ಮಾನವಾಗುತ್ತದೆ. ಕೊನೆಯಲ್ಲಿ ತನ್ನ ಸ್ವಯಂವರವನ್ನು ಧಿಕ್ಕರಿಸಿ ಹೂಮಾಲೆ ಬಿಸುಟು ಕಾಡಿಗೆ ಓಡುವ ಮಾಧವಿಯ ಚಿತ್ರ ಅಪೂರ್ವವಾಗಿ ಕಾಣುತ್ತದೆ. ಪುಣ್ಯ ವಿಹೀನನಾಗಿ ಸ್ವರ್ಗದಿಂದ ಧರೆಗಿಳಿಯುವ ಯಯಾತಿಯನ್ನು ಕ್ಷಮಿಸಿ ಮತ್ತೆ ಪುನಃ ಸ್ವರ್ಗಕ್ಕೆ ಕಳುಹುವ ಮಾಧವಿಯ ವ್ಯಕ್ತಿತ್ವ ಪ್ರಸಂಗದಲ್ಲಿ ಉದಾತ್ತವೆನಿಸುತ್ತದೆ.

ಸತಿ ಸೀಮಂತಿನಿ, ಸೀತಾ ಪಾರಮ್ಮ, ನಾಗನಂದನೆ, ವಧೂ ಮಾಧವಿ, ವಸುವರಾಂಗಿ ಇವು ಮೂರು ಪೌರಾಣಿಕ ಪಾತ್ರಗಳಾದರೂ ಸಮಕಾಲೀನ ಸ್ತ್ರೀಯರ ಪ್ರತಿಮೆಗಳಾಗಿಸುವಲ್ಲಿ ಕವಿಯ ಪರಿಶ್ರಮ ಎದ್ದು ಕಾಣುತ್ತದೆ. ಹೆಣ್ಣನ್ನು ಗೌರವಯುತವಾಗಿ ಚಿತ್ರಿಸುವುದು ಅವರಿಗೆ ಸಾಧ್ಯವಾಗಿದೆ. ಸೀತೆ, ಸೀಮಂತಿನಿಯರು ಇಹದ ಬದುಕಿನ ಜಂಜಡಗಳಿಗೆ ಬೆಸತ್ತರೂ ಜೀವನ ಶ್ರದ್ಧೆಯನ್ನು ಉಳಿಸಿಕೊಳ್ಳುವ ತಾಪಸಿಯರಂತೆ ಅವರನ್ನು ಚಿತ್ರಿಸುತ್ತಾರೆ. ವಸುವರಾಂಗಿಯಲ್ಲಿ ಅಂಬೆಗೆ ಭೀಷ್ಮನಿಂದ ದ್ರೋಹವಾಯಿತೆಂದು ತಿಳಿದು ಭಾರ್ಗವನ ಮೂಲಕ ಹೇಳುವ ಮಾತು, 'ತರುಣಿ ಒಡಲುರಿ ನಿನ್ನ ಬಿಡದು' ಎನ್ನುತ್ತ ಹೆಣ್ಣನ್ನು ನೋಯಿಸುವುದು ಅಕ್ಷಮ್ಯವೆಂದು ಸಾರುತ್ತಾರೆ.

ಈ ಪುರಾಣ ಪ್ರಪಂಚದಲ್ಲಿ ಎಲ್ಲಾ ಮನುಷ್ಯ ಸಂವೇದನೆಗಳಿಗೂ ಒಂದೊಂದು ಪಾತ್ರ, ಭಾವ ಜಗತ್ತಿದೆ. ಹೆಣ್ಣು – ಗಂಡಿನ ಪಾತ್ರಗಳಂತೆ ತೃತೀಯ ಲಿಂಗಿ ಸಂವೇದನೆಗೂ ಬೆಲೆ ಇದೆ. 'ನಾನು ಅವನಲ್ಲ ಅವಳು' ಎನ್ನುವುದು ಈ ಕಾಲದ ಸಂಗತಿಗಳಷ್ಟೇ ಅಲ್ಲ, ಎಂದಿನಿಂದಲೂ ಅದು ನಮ್ಮ ಸಂಸ್ಕೃತಿಯ ಭಾಗವೆನ್ನುವುದನ್ನು ಕಂದಾವರರ ಪ್ರಸಂಗಗಳು ಪ್ರುತಪಡಿಸುತ್ತ, ಜೀವಪರ ಸಂವೇದನೆಯನ್ನು ನಮ್ಮ ಮುಂದಿಡುತ್ತವೆ. ಇಬ್ಬರು ಬ್ರಾಹ್ಮಣ ಕುಮಾರರು ಸತಿ ಪತಿಯರಂತೆ ವೇಷ ಧರಿಸಿ ಸತಿ ಸೀಮಂತಿನಿಯನ್ನು ಪರೀಕ್ಷಿಸಿ ಧನವನ್ನು ಅರ್ಜಿಸಲು ಬರುತ್ತಾರೆ. ಸೀಮಂತಿನಿಯ ತಪೋಬಲದಿಂದ ಸತಿಯಂತೆ ನಟಿಸಿದ ಸೋಮವಂತ ನಿಜಕ್ಕೂ ಹೆಣ್ಣೇ ಆಗಿ ಲಿಂಗ ಬದಲಾವಣೆಗೆ ಒಳಗಾಗುತ್ತಾನೆ. ಸತಿ ಸೀಮಂತಿನಿಯಾಗಲಿ ದೇವಿ ಪಾರ್ವತಿಯಾಗಲಿ ಅವನ ಹೆಣ್ಣುತನವನ್ನು ಬದಲಿಸುವುದು ಸಾಧ್ಯವಾಗದೆ ಅವನು ಹೆಣ್ಣಾಗಿಯೇ ಉಳಿದು ಪುತ್ರನೊಬ್ಬನನ್ನು ಪಡೆಯುವಂತಾಗುತ್ತದೆ. "ಜಗಕೆ ಹೊಸಪರಿಯಾಯಿತು" ಎಂದು ಸತ್ಯವನ್ನು ಒಪ್ಪಿಕೊಳ್ಳುವ ಮನೋಭೂಮಿಕೆಯೊಂದನ್ನು ಪ್ರಸಂಗಗಳ ಮೂಲಕ ನೀಡುವುದು

ನಿಜಕ್ಕೂ ಸಂತಸ ತರುತ್ತದೆ. ವಸುವರಾಂಗಿಯಲ್ಲಿ ದ್ರುಪದ ಕುಮಾರ ಶಿಖಂಡಿಯ ಭಾವನೆಗಳನ್ನು ಸೂಕ್ಷ್ಮವಾಗಿ ವಿವೇಚಿಸುವ ಮೂಲಕ ಲಿಂಗ ಸಂವೇದನೆಗೆ ಹೊಸ ಆಯಾಮ ಅವರ ಪ್ರಸಂಗಗಳಿಗೆ ದೊರೆತಿದೆ ಎನ್ನುವುದು ನನ್ನ ಭಾವನೆ.

ಶ್ರೀದೇವಿ ಬನಶಂಕರಿ ಪ್ರಸಂಗಕ್ಕೆ ಜಾನಪದ ಕಥೆ ಮೂಲವಾದರೆ, ಚೆಲುವೆ ಚಿತ್ರಾವತಿ, ರತಿ ರೇಖಾ, ಶೂದ್ರ ತಪಸ್ವಿನಿ ಕನ್ನಡ ಸಾಹಿತ್ಯದ ವಿವಿಧ ಮೂಲಗಳಿಂದ ವಿಷಯ ಸಂಗ್ರಹಿಸಿ ಸ್ವಂತಿಕೆ ಕಲ್ಪನೆಗಳನ್ನು ಸೇರಿಸಿ ಪುನಾರಚಿಸಿದ್ದಾರೆ. ಶೂದ್ರ ತಪಸ್ವಿನಿಯಲ್ಲಿ ಕೆಳಜಾತಿ ಹೆಣ್ಣು ಮಕ್ಕಳನ್ನು ಪ್ರಬಲ ವರ್ಗ ಹೇಗೆ ಬಳಸಿಕೊಂಡು ಮೋಸ ಮಾಡುತ್ತದೆ ಎನ್ನುವ ಚಿತ್ರಣವಿದೆ. ನ್ಯಾಯ ಕೇಳಿದರೆ ಹೇಗೆ ಗುಡುಗಿ ಬಾಯಿ ಮುಚ್ಚಿಸುತ್ತದೆ ಎನ್ನುವುದಕ್ಕೆ ಇಲ್ಲಿಯ ಇಂದಿರೆಯ ಪಾತ್ರ ಉದಾಹರಣೆ. ಜಯದೇವನೆಂಬ ಅರಸು ಇಂದಿರೆಗೆ ಮನಸೋತು ಅವಳ ಮಗನಿಗೆ ರಾಜ್ಯಾಧಿಕಾರ ನೀಡುವ ಭರವಸೆ ನೀಡಿ ಅವಳಿಗೊಂದಿಗೆ ದೈಹಿಕ ಸಂಪರ್ಕ ಬೆಳೆಸುತ್ತಾನೆ. ಮಗು ಹುಟ್ಟಿದ ಮೇಲೆ "ತುಚ್ಛಳ ಮಗನಿಗೆ ಪಟ್ಟವೇ?" ಎಂದು ಕೇಳಿ ಮಗುವನ್ನು ಆವಳಿಂದ ಕಸಿದುಕೊಂಡು ತಿಪ್ಪೆಗೆ ಎಸೆಯುವಂತೆ ದಾಸಿಗೆ ಸೂಚಿಸುತ್ತಾನೆ. ಮುಂದೆ ಅರಸನ ವಂಶದ ಮೇಲೆ ಸೇಡು ತೀರಿಸಿಕೊಳ್ಳಲು ಮುಂದಾಗುವ ಇಂದಿರೆಯೇ ಶೂದ್ರ ತಪಸ್ವಿನಿ. ಗಂಡಿನ ಕ್ರೌರ್ಯದ ಮುಖವನ್ನು ಪರಿಚಯಿಸುವ ಶೂದ್ರ ತಪಸ್ವಿನಿ ಯಶಸ್ವಿ ರಂಗ ಪ್ರಯೋಗವೆಂದು ಗುರುತಿಸಲ್ಪಟ್ಟಿದೆ. ಚೆಲುವೆ ಚಿತ್ರಾವತಿಯಂತೂ ದಾಖಲೆ ನಿರ್ಮಿಸಿದ ಅವರ ಪ್ರಸಂಗಗಗಳಲ್ಲಿ ಒಂದು. ವಿಧಿವಾದಕ್ಕೆ ಶರಣಾಗುವ ಚಿತ್ರಾವತಿ ಪ್ರಸಂಗ ಕಥನ ಅವರ ಕಲ್ಪನಾ ಶಕ್ತಿಯ ಹಿರಿಮೆಗೆ ಸಾಕ್ಷಿ.

ಹೆಣ್ಣು ಹೆಣ್ಣನ್ನು ದ್ವೇಷಿಸುವ ಪಾತ್ರಗಳಿಗಿಂತಲೂ ಹೆಣ್ಣು ಹೆಣ್ಣನ್ನು ಅರ್ಥೈಸುವಿಕೆಯ ಸನ್ನಿವೇಶಗಳು ಅವರ ಪ್ರಸಂಗಗಳಲ್ಲಿ ಹೆಚ್ಚು ಕಾಣಸುತ್ತವೆ. ಅವರ ಕೆಲವು ಪ್ರಸಂಗಗಳಲ್ಲಿ ಹೆಣ್ಣು ಹೆಣ್ಣಿಗೆ ವೈರಿ ಎಂಬ ಪರಂಪರೆಯ ತಿಳುವಳಿಕೆ ಸುಳ್ಳಾಗುತ್ತದೆ. ಅಷ್ಟರ ಮಟ್ಟಿಗೆ ಕಂದಾವರ ರಘುರಾಮ ಶೆಟ್ಟರ ಪ್ರಸಂಗಗಳು ಸ್ತ್ರೀ ಸಂವೇದನೆಗೆ ಮಿಡಿಯುತ್ತವೆ; ತುಡಿಯುತ್ತವೆ. ಪ್ರಭುತ್ವ ರಾಜಕಾರಣ ಸಾಮಾನ್ಯ ಹೆಣ್ಣುಗಳ ಮೇಲೆ ಎಸಗಿದ ದೌರ್ಜನ್ಯದ ಅನೇಕ ಕಥಾ ಭಿತ್ತಿಗಳನ್ನು ಹೊಂದಿರುವ ಅವರ ಕಥಾ ಪ್ರಸಂಗಗಳಲ್ಲಿ ಎದ್ದು ಕಾಣುವ ಅಂಶವೆಂದರೆ ಹೆಣ್ಣಿನ ಸಹನೆ ಮತ್ತು ತಾಳ್ಮೆ. ಅಗತ್ಯವೆನಿಸಿದರೆ ಪ್ರತಿಭಟನೆ, ಸೇಡು. ಜೊತೆಗೆ ಪರಂಪರೆಯು ಸೃಷ್ಟಿಸಿದ ಮೌಲ್ಯ ಚೌಕಟ್ಟಿನಲ್ಲಿ ಬದುಕುವ ಕಾಲದ ಅನಿವಾರ್ಯತೆಯನ್ನು ಒಪ್ಪಿಕೊಂಡು ಜೀವನ ಶ್ರದ್ಧೆ ತೋರುವ ಪಾತ್ರಗಳು. ಪೌರಾಣಿಕ– ಕಾಲ್ಪನಿಕ ಎರಡೂ ನೆಲೆಯಲ್ಲಿ ಸ್ತ್ರೀ ಪಾತ್ರಗಳ ವೈವಿಧ್ಯತೆಯನ್ನು ಇಷ್ಟು ಶಕ್ತವಾಗಿ ಕಾಯ್ದುಕೊಂಡ ಇನ್ನೊಬ್ಬ ಪ್ರಸಂಗಕರ್ತನಿಲ್ಲ. ಆ ಮಟ್ಟಿಗೆ ಅವರಿಗೆ ಅವರೇ ಸಾಟಿ.

****

ಯಕ್ಷಶಿಲ್ಪಿ ಕಂದಾವರದವರು

ದಿವಾಕರ ಶೆಟ್ಟಿ, ಬಸ್ರೂರು
ಹವ್ಯಾಸಿ ಕಲಾವಿದರು

ಕುಂದಾಪುರ ಗ್ರಾಮೀಣ ಬಂಟರ ನೈಜ ನಡೆ-ನುಡಿ, ಆಚಾರ-ವಿಚಾರ, ವಸ್ತ್ರ ವಿನ್ಯಾಸ, ಸಾಹಿತಿಗಳ ಹಾಗೂ ಕಲಾವಿದರ ಒಡನಾಟ ಇವುಗಳಿಂದ ತಮ್ಮ ಇಳಿ ವಯಸ್ಸಿನಲ್ಲೂ ನವಚೈತನ್ಯಯುತರಾಗಿ ಕಾಣುತ್ತಾರೆ. ಕಂದಾವರ ರಘುರಾಮ ಶೆಟ್ಟರು ಇವರು ಹೋದಲ್ಲೆಲ್ಲಾ ಗೌರವಿಸುವ, ಪ್ರೀತಿಸುವ, ಸ್ವಾಗತಿಸುವ ದೊಡ್ಡ ಬಳಗವೇ ಇದೆ. ಇದು ಸದಾ ಇವರ ಹರ್ಷ ಜೀವನಕ್ಕೆ ಕಾರಣವಾಗಿದೆ. ಶ್ರೀಯುತರು ಮಾದರಿ ಶಿಕ್ಷಕ, ನೈಜ ಹಾಸ್ಯ ನಟ, ಉತ್ತಮ ಅರ್ಥಧಾರಿಗಳೆಂಬ ಕಾರಣಗಳಿದ್ದರೂ ಅದು ಪ್ರಾದೇಶಿಕ ಮಿತಿಗೆ ಒಳಗಾದುದು. ಹಾಗಿದ್ದರೂ ಅವರನ್ನು ಜನತೆ ಅಭಿಮಾನದಿಂದ, ಎತ್ತರದಲ್ಲಿ ನೋಡಲು ಕಾರಣ ಅವರ ಜನಪ್ರಿಯತೆಗೆ ಕಾರಣ ಅವರ ಯಕ್ಷಗಾನ ಪ್ರಸಂಗಗಳು. ಕೆಲವು ದಶಕಗಳಿಂದ ಯಕ್ಷಗಾನ ಕ್ಷೇತ್ರದ ಒಡನಾಡಿಯಾಗಿ ತಿಳಿದುಕೊಂಡದ್ದೂ ಕಂದಾವರದವರ ಪ್ರಸಂಗಗಳು ತಾಲೂಕು, ಜಿಲ್ಲೆಗೆ ಸೀಮಿತವಾಗಿಲ್ಲ, ಕರಾವಳಿ, ಮಲೆನಾಡು ಜಿಲ್ಲೆಗಳ ಯಕ್ಷಗಾನ ಪ್ರೇಕ್ಷಕರ ಮನೆ ಮಾತಾಗಿದೆ. ಬೆಂಗಳೂರು, ಮುಂಬಯಿ ಮಾತ್ರವಲ್ಲದೆ ದೇಶ, ವಿದೇಶಗಳ ಯಕ್ಷಗಾನ ಅಭಿಮಾನಿಗಳಿಗೆ ಪ್ರಿಯರಾಗಿದ್ದಾರೆ. ಇದರಿಂದ ಕಂದಾವರದವರ ಪ್ರಸಂಗಗಳ ಶ್ರೇಷ್ಠತೆ ಅರಿವಾಗುತ್ತದೆ.

ಹಿಂದಿನ ಒಂದೆರಡು ದಶಕಗಳತ್ತ ಗಮನ ಹರಿಸಿದಾಗ ಯಕ್ಷಗಾನ ಒಂದು ಪ್ರಭಾವಿ ಮಾಧ್ಯಮವಾಗಿದ್ದು ಹಳೆ ಮತ್ತು ಹೊಸ ಪ್ರಸಂಗಗಳ ಬಗೆಗೆ ಪ್ರೇಕ್ಷಕರಲ್ಲಿ ವಾದ-ವಿವಾದದ ವಿಷಯವಾಗಿತ್ತು. ಗದ್ದೆ ಬಯಲಿನಿಂದ ಆಟದ ಮೈದಾನದವರೆಗೆ

ಜಿಜ್ಞಾಸೆಯ ವಿಚಾರವಾಗಿತ್ತು. ಅಂದು ಯುವ ಪ್ರೇಕ್ಷಕರಿಗಾಗಿ ಹೊಸ ಹೊಸ ಪ್ರಸಂಗಗಳು ರಂಗಕ್ಕೆ ಬಂದುವು. ಪ್ರಸಂಗಗಳ ಮೌಲ್ಯಮಾಪನ ಮತ್ತು ಯುವ ಪ್ರೇಕ್ಷಕರ ರಸಸೃಷ್ಠಿಯ ಗೊಂದಲಗಳು ಮೇಳಗಳನ್ನು ಕಾಡುತಿದ್ದುವು. ಈ ಎಲ್ಲಾ ವಾದ-ವಿವಾದಗಳ ಚಂಡೆ ಸಪ್ಪಳಕ್ಕೆ ಖಚಿತವಾದ ಉತ್ತರ ನೀಡಿದ್ದು ಕಂದಾವರದವರ ಪ್ರಸಂಗಗಳು. ಮೌಲ್ಯ ಸೃಷ್ಠಿ ಮತ್ತು ರಸಸೃಷ್ಠಿಗಳನ್ನು ಪ್ರಸಂಗಗಳಲ್ಲಿ ತುಂಬಿಸಿ ಎಲ್ಲಾ ವರ್ಗದ ಪ್ರೇಕ್ಷಕರನ್ನು ಸಂತೃಪ್ತಿಗೊಳಿಸಿದರು. ಹಿರಿಯರು, ಕಿರಿಯರು, ಮಹಿಳೆಯರು, ಮಕ್ಕಳು, ವಿದ್ವಾಂಸರೆನ್ನದೆ ಎಲ್ಲಾ ವರ್ಗದ ಪ್ರೇಕ್ಷಕರ ಮನಸ್ಸನ್ನು ತಣಿಸಿದರು. ಅವರ ಪ್ರತಿಭಾ ಸಂಪತ್ತು ಈ ಮೂಲಕ ಪ್ರಕಟಗೊಂಡಿತು. ಹಿರಿಯರಿಗೆ ಮೌಲ್ಯ, ಕಿರಿಯರಿಗೆ ಹಾಸ್ಯ, ಮಹಿಳೆಯರಿಗೆ ಮಾರ್ಗದರ್ಶನ ಇವರ ಪ್ರಸಂಗಗಳಿಂದ ದೊರೆಯಿತು.

ಜನಪದ-ಶಾಸ್ತ್ರೀಯ ತಿಕ್ಕಾಟ, ತಿಟ್ಟು-ಮಟ್ಟುಗಳ ಮೇಲಾಟ ಇವುಗಳ ನಡುವೆ ಇದರ ಪ್ರಸಂಗಗಳು ಸ್ಪಟಿಕದಂತೆ ಪ್ರಕಾಶಗೊಂಡವು. ಶಿಲ್ಪಿ ತಾನು ಕೆತ್ತುವ ದೇವರ ಚಿತ್ರ ಇಟ್ಟುಕೊಂಡಿರುತ್ತಾನೆ. ಆದರೆ ಕಂದಾವರದವರು ಕೇವಲ ಕಲ್ಪನೆ, ರಂಜನೆಯನ್ನು ಮುಖ್ಯವಾಗಿರಿಸಿಕೊಳ್ಳದೆ ಕಥಾ ಮೌಲ್ಯ ರಂಗದೃಷ್ಠಿ, ಕಲಾವ್ಯಾಕರಣಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸಂಗ ರಚಿಸುತಿದ್ದರು. ಸಮಯ ಪ್ರಜ್ಞೆ, ಪ್ರಸಿದ್ಧ ಹಾಗೂ ಯುವ ಉದಯೋನ್ಮುಖ ಕಲಾವಿದರನ್ನು ಗಮನದಲ್ಲಿರಿಸಿಕೊಂಡು, ಅವರಿಗೆ ಸೂಕ್ತ ತರಬೇತಿ ಕೊಡುತ್ತಿದ್ದರು. ಯುವ ಪ್ರಸಂಗಕರ್ತರು ಇವರ ಪ್ರಸಂಗಗಳಿಂದ ಕಥಾ ಸಂವಿಧಾನ ಪಾತ್ರಗಳ ಸೃಷ್ಠಿ, ಛಂದಸ್ಸಿನ ವೈವಿಧ್ಯತೆಯನ್ನು ಮಾದರಿಯಾಗಿ ಸ್ವೀಕರಿಸುವಷ್ಟು ಪರಿಪೂರ್ಣವಾಗಿತ್ತು ಇವರ ಕೃತಿಗಳು. ಯಕ್ಷಗಾನ ಕೇವಲ ಧರ್ಮಪ್ರಸಾರದ ಸಾಧನವಾಗಿರದೆ ರಂಜನೆ, ಸಂಸ್ಕೃತಿ, ಕಲಾಮೌಲ್ಯ ಸಾರುವ ಸಾಧನವಾಗಿರಬೇಕೆಂಬುದು ಕಂದಾವರದವರ ಅಪೇಕ್ಷೆಯಾಗಿತ್ತು.

ಕಂದಾವರದವರು ಕಥಾಶಿಲ್ಪಿ ಮಾತ್ರವಾಗಿರದೆ ಕಲಾವಿದರ ಶಿಲ್ಪಿಗಳೂ ಆಗಿದ್ದಾರೆ. ಅವರ ಪ್ರಸಂಗಗಳಲ್ಲಿ 2ನೇ ವೇಷ, ಪುರುಷ ವೇಷ, 3ನೇ ವೇಷ ಮುಖ್ಯ ಸ್ತ್ರೀ ವೇಷ, ಸಖೀ ಸ್ತ್ರೀ ವೇಷ, ಹಾಸ್ಯ, ಬಣ್ಣ ಹೀಗೆ ಎಲ್ಲಾ ವಿಧದ

ವೇಷಧಾರಿಗಳಿಗೆ ಅವಕಾಶವಿರುತಿತ್ತು. ಮಾತ್ರವಲ್ಲ ರಂಜನೆಗೂ, ಉತ್ತಮ ಸಂದೇಶಕ್ಕೂ ಕಾರಣವಾಗುತ್ತವೆ.

ಕಂದಾವರದವರ ಪ್ರಸಂಗಗಳ ಬಗ್ಗೆ ಹಿರಿಯ ಪ್ರಸಿದ್ಧ ಕಲಾವಿದರು ಉತ್ತಮ ಅಭಿಪ್ರಾಯ ಹೊಂದಿರುವುದರಿಂದ ಅವರ ಪ್ರಸಂಗಗಳು ತೆಂಕುತಿಟ್ಟಿನ ಧರ್ಮಸ್ಥಳ, ಕಟೀಲು ಮುಂತಾದ ಮೇಳದವರು ಆಡುತಿದ್ದಾರೆ. ಯಶಸ್ವಿ ಪ್ರಯೋಗ ನೀಡಿ ಜನಪ್ರಿಯುಗೊಳಿಸಿದ್ದಾರೆ. ಅವರ ಪದ್ಯಗಳು ಸಾಹಿತ್ಯ ಪೂರ್ಣವಾಗಿ, ಛಂದೋಬದ್ಧವಾಗಿದ್ದೂ ಹಾಡಲು ಸುಖಕರವೆನಿಸಿವೆ. ಸರಳ ಶಬ್ಧಗಳಿಂದ, ಅಭಿನಯಕ್ಕೆ ಚೆನ್ನಾಗಿ ಒದಗುವ ಶಬ್ಧಗಳಿಂದ ಕೂಡಿದ್ದೂ ಪಾತ್ರಧಾರಿಗಳಿಗೆ ಅರ್ಥವಿಸಲು, ಅಭಿನಯಿಸಲು ಸೂಕ್ತವೆನಿಸಿವೆ. ಈ ಕಾರಣಗಳಿಂದ ಇವರ ಪ್ರಸಂಗಗಳು ಹಾಡಲು, ಆಡಲು ಹಾಗೂ ನೋಡಲು ಸೂಕ್ತವೆನಿಸಿವೆ.

ಕಂದಾವರ ರಘುರಾಮ ಶೆಟ್ರನ್ನು ನಾಟಕ ಕ್ಷೇತ್ರಕ್ಕೆ ಹಾಗೂ ಯಕ್ಷಗಾನ ಕ್ಷೇತ್ರಕ್ಕೆ ನೀಡಿದವರು ಬಸ್ರೂರು ರಮಾನಾಥ ನಾಯಕರು. ಅವರು ಪ್ರಾಥಮಿಕ ಶಾಲೆಯಲ್ಲಿ ಕಲಿಯುತ್ತಿರುವಾಗಲೇ ಸ್ಕೌಟ್ ಕ್ಯಾಂಪಿನ ಮೂಲಕ ಅಭಿನಯದಲ್ಲಿ ತೊಡಗಿಸಿ, ಮುಂದೆ ನಾಟಕಗಳಲ್ಲಿ ಅಭಿನಯಿಸುವಂತೆ ಒತ್ತಾಸೆ ನೀಡಿದರು. ಮಕ್ಕಳ ಮೇಳಕ್ಕೆ ಭಾಗವತಿಕೆ ಮಾಡಿಸುವುದರ ಮೂಲಕ ಯಕ್ಷರಂಗಕ್ಕೆ ಅಣಿಗೊಳಿಸಿದರು. ಈ ಕಾರಣಗಳಿಂದ ಕಂದಾವರದವರು ರಮಾನಾಥ ನಾಯಕರನ್ನು ತಮ್ಮ ಕಲಾ ಗುರುವೆಂದೇ ಗೌರವದಿಂದ ಕಾಣುತ್ತಾರೆ. ಅವರ ಪ್ರಕಟಿತ ಕೃತಿಯಾದ 'ದಶಮಿ' ಯನ್ನು ರಮಾನಾಥ ನಾಯಕರಿಗೆ ಅರ್ಪಣೆ ಮಾಡಿರುತ್ತಾರೆ.

ಮುದ್ದಣನ ಪ್ರಸಂಗಗಳಿಂದ ಪ್ರೇರಿತವಾದ ಕಂದಾವರದವರು ತಾನು ಪ್ರಸಂಗ ರಚಿಸಬೇಕೆಂಬ ಬಯಕೆಯಿಂದಿರುವಾಗ ದಿ. ಡಾ| ವೈ ಚಂದ್ರಶೇಖರ ಶೆಟ್ರು ಸೀಮಂತಿನಿಯ ಕಥೆಯನ್ನಿತ್ತು ಇವರಿಗೆ ಪ್ರಸಂಗ ರಚಿಸಲು ಪ್ರೋತ್ಸಾಹಿಸಿದರು. ಅಂತೆಯೇ ಇವರು ರಚಿಸಿದ ಸತಿ ಸೀಮಂತಿನಿ ಪ್ರಸಂಗ ಇವರ ಪ್ರಥಮ ಕೃತಿಯಾಗಿ ರಂಗವೇರಿ ಯಶಸ್ವಿ ಪ್ರಸಂಗವಾಯಿತು.

ಪ್ರಸಂಗಕ್ಕೆ ಆಯ್ದುಕೊಳ್ಳುವ ಕಥೆಗಳು ಜಾನಪದ, ಕಾಲ್ಪನಿಕ ಚಾರಿತ್ರಿಕ ಕಥೆಗಳಾಗಿದ್ದರೂ ಅವುಗಳು ಪೌರಾಣಿಕ ಆವರಣದಲ್ಲೇ ಸಾಗಬೇಕೆಂಬುದು ಕಂದಾವರದವರ ನಿಲುವು. ಕಾರಣ ಯಕ್ಷಗಾನದ ವೇಷಭೂಷಣಗಳು ಪೌರಾಣಿಕ ವ್ಯಕ್ತಿಗಳನ್ನು ಚಿತ್ರಿಸುವ ಸಾಧನಗಳಾಗಿವೆ. ಈ ಸೂಕ್ಷ್ಮತೆಯನ್ನು ಅರಿತಿರುವ ಕಂದಾವರದವರು ತಮ್ಮ ಪ್ರಸಂಗಗಳಲ್ಲಿ ಅದಕ್ಕೆ ಹೊಂದಿಕೆಯಾಗುವ ಪಾತ್ರಗಳನ್ನೇ ಸೃಷ್ಟಿಸುತ್ತಾರೆ. ರಂಗದೆಡೆಗೆ ಅನುಕೂಲವಾಗುವಂತಹ ಸನ್ನಿವೇಷಗಳನ್ನು ಅಳವಡಿಸುತ್ತಾರೆ ಯಕ್ಷಗಾನಕ್ಕೆ ಯೋಗ್ಯವೆನಿಸುವ ಶೃಂಗಾರ, ವೀರ, ಕರುಣ, ಹಾಸ್ಯ, ಶಾಂತ ರಸಗಳನ್ನು ಸಮ ಪ್ರಮಾಣದಲ್ಲಿ ನೀಡುತ್ತಾರೆ. ಹೀಗಾಗಿ ಇವರ ಪ್ರಸಂಗಗಳು ಸರ್ವಜನ ಮಾನ್ಯವಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ ಇವರನ್ನು ಯಕ್ಷಶಿಲ್ಪಿಯೆಂದು ಕರೆದರೆ ಅದು ಅತಿಶಯೋಕ್ತಿಯ ಮಾತಾಗಲಾದೆಂದು ನನ್ನ ಪ್ರಾಮಾಣಿಕ ಅನಿಸಿಕೆಯಾಗಿದೆ.

ಸ್ವಸ್ತಿ ನಿಲಯ

ಎಂ. ಆರ್. ಲಕ್ಷ್ಮೀನಾರಾಯಣ
ಯಕ್ಷಗಾನ ಅರ್ಥದಾರಿ, ಅಮಚಿ

ಜೀವನ ನಿರ್ವಹಣೆಗಾಗಿ ಯಾವುದಾದರೂ ವೃತ್ತಿಯನ್ನವಲಂಬಿಸುವುದು ಅನೇಕರಿಗೆ ಅನಿವಾರ್ಯ, ಇದರಿಂದ ಅಶನ, ವಸನ, ವಸತಿ ಔಷಧ ಇತ್ಯಾದಿ ಸೌಲಭ್ಯಗಳನ್ನು ಹೊಂದಿ ಹಸನಾಗಿ ಬದುಕಬಹುದು. ಹಾಗೆ ಬದುಕುವವರೇ ಬಹುಮಂದಿ. ಇನ್ನು ಕೆಲವರಿಗೆ ಅಂತರಂಗದ ಹಸಿವೆಯನ್ನು ತಣಿಸಲು ಸಾತ್ವಿಕ ಹವ್ಯಾಸದ ಅವಶ್ಯಕತೆ ಇರುತ್ತದೆ. ಅವಶ್ಯಕತೆಗಿಂತ ಮಿಗಿಲಾಗಿ ತುಡಿತವೇ ಇರುತ್ತದೆ. ಹೀಗೆ ವೃತ್ತಿ-ಪ್ರವೃತ್ತಿಗಳಲ್ಲಿ ತೊಡಗಿಸಿಕೊಂಡು ಯಾವುದಕ್ಕೂ ಅನ್ಯಾಯವೆಸಗದೆ ಎರಡರಲ್ಲೂ ಯಶಸ್ವಿಯಾಗಿ ಸಮುದಾಯದ ಗೌರವ, ಪ್ರೀತಿ, ಅಭಿಮಾನಗಳಿಗೆ ಪಾತ್ರರಾದ ವಿರಳಾತಿವಿರಳರಲ್ಲಿ ಶ್ರೀ ಕಂದಾವರ ರಘುರಾಮ ಶೆಟ್ಟರೂ ಒಬ್ಬರು.

ಇವರು ಕಂಡ್ಲೂರಿನಲ್ಲಿ ಅಧ್ಯಾಪಕರಾಗಿದ್ದರು. ಇವರ ಪ್ರೀತಿಯ ಹವ್ಯಾಸ ಯಕ್ಷಗಾನ. ಕಂಡ್ಲೂರಿನಲ್ಲಿ ಜರಗುವ ಬಹುತೇಕ ಸಾಂಸ್ಕೃತಿಕ ಚಟುವಟಿಕೆಗಳಿಗೆ ಇವರೇ ಕೇಂದ್ರ ಬಿಂದು. ಶಾಲಾ ಪಠ್ಯವಲ್ಲದೆ ವಿದ್ಯಾರ್ಥಿಗಳಿಗೆ ನಾಟಕ, ಸಂಗೀತ, ಕ್ರೀಡೆ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಆಸಕ್ತಿ, ಅಭಿರುಚಿ, ಪರಿಣತಿಯುಂಟಾಗುವ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ, ಮಕ್ಕಳ ಮತ್ತು ಪಾಲಕರ ಪ್ರಶಂಸೆ, ಕೃತಜ್ಞತೆಗಳಿಗೆ ಪಾತ್ರರಾಗಿದ್ದಾರೆ. ಇವರ ಶಿಕ್ಷಕ ವೃತ್ತಿಗೆ ಸಂದ ಸಂಮಾನವೋ ಎಂಬಂತೆ ಎಲ್ಲರೂ ಇವರನ್ನು ರಘುಮಾಸ್ತರ್ ಎಂದೇ ಸಂಬೋಧಿಸುತ್ತಾರೆ. ಕಂಡ್ಲೂರಿನಲ್ಲಿ ಹಲವು ಜಾತಿಗೆ ಸೇರಿದ ನಿವಾಸಿಗಳಿದ್ದಾರೆ. ಎಲ್ಲ ಜಾತಿಯವರೂ ರಘು ಮಾಸ್ತರ್ ಅವರನ್ನು ಗೌರವಾದರಗಳಿಂದ ಕಾಣುತ್ತಿದ್ದರು.

ಅಂಥಾ ಜನಪ್ರಿಯ ಉಪಾಧ್ಯಾಯರಾಗಿದ್ದರು.

ರಘು ಮಾಸ್ತರ್ ಅವರು ನನಗೆ ಮೊದಲು ಪರಿಚಯವಾಗಿದ್ದು ತಾಳ ಮದ್ದಲೆ ಅರ್ಥದಾರಿಗಳಾಗಿ. ದಕ್ಷಿಣ ಕನ್ನಡ ಜಿಲ್ಲೆಗೆ ನಾನು ಪ್ರಪ್ರಥಮವಾಗಿ 1972ರಲ್ಲಿ ಪ್ರವೇಶ ಮಾಡಿದಾಗ ನನ್ನನ್ನು ಅಲ್ಲಿಗೆ ಬರಮಾಡಿಕೊಳ್ಳಲು ಕಾರಣೀಭೂತರಾದ ಆತ್ಮೀಯ ಸ್ನೇಹಿತರು ರಘುರಾಮ ಶೆಟ್ಟರು, ಆರೂರು ಸರ್ವೋತ್ತಮ ಶೇಟರು, ಸಂಕಾಪುರದ ಶಿವರಾಮ ಶೆಟ್ಟರು, ಹೆಚ್. ಕೊರಗಯ್ಯ ಶೆಟ್ಟರು ಎಂಬುದು ತಿಳಿಯಿತು. ಇವರೆಲ್ಲರ ಪ್ರೀತಿಯ ಒತ್ತಾಸೆಗಳೊಂದಾಗಿ ದಕ್ಷಿಣ ಕನ್ನಡ (ಅವಿಭಜಿತ) ಜಿಲ್ಲೆಯ ಹಲವು ಸ್ಥಳಗಳ ತಾಳಮದ್ದಲೆಗಳಲ್ಲಿ ಭಾಗವಹಿಸುವ, ಅಲ್ಲಿಯವರ ಆದರ ವಿಶ್ವಾಸಗಳಿಗೆ ಭಾಜನನಾಗುವ ಸೌಭಾಗ್ಯ ನನಗೆ ದೊರೆಯಿತು. ನಾನು ಆ ಜಿಲ್ಲೆಯಲ್ಲಿ ಭಾಗವಹಿಸಿದ ಬಹುತೇಕ ತಾಳಮದ್ದಲೆ ಸಂದರ್ಭಗಳಲ್ಲಿ ಈ ಆತ್ಮೀಯ ಮಿತ್ರರಲ್ಲಿ ಕನಿಷ್ಟ ಒಬ್ಬರೋ ಇಬ್ಬರೋ ಜೊತೆಯಲ್ಲೇ ಇದ್ದು ನನಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಂಡ ಅವರ ಒಲುಮೆಯನ್ನು ಮರೆಯಲು ಸಾಧ್ಯವೇ ಇಲ್ಲ. ದ.ಕ. ಜಿಲ್ಲೆಗೆ ಕರೆಸಿ, ಅಲ್ಲಿಯ ದಿಗ್ಗಜರ ಕೂಟಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿ, ತಾಳಮದ್ದಳೆಯ ನನ್ನ ಅನುಭವ ವಿಶಾಲವೂ ಆಳವೂ ಆಗಲು ಅನುವು ಮಾಡಿಕೊಟ್ಟ ರಘುರಾಮ ಶೆಟ್ಟರು ಮತ್ತು ಅವರ ಬಳಗಕ್ಕೆ ಕೃತಜ್ಞತೆ ಹೇಳಲು ಶಬ್ದಗಳೇ ಸಿಗುತ್ತಿಲ್ಲ.

ರಸ ಮತ್ತು ತರ್ಕ ಎರಡೂ ಹದವಾಗಿ ಮಿಶ್ರಣಗೊಂಡ ಚಿಕ್ಕ ಚೊಕ್ಕ ಮಾತುಗಳಲ್ಲಿ ಪಾತ್ರವನ್ನು ಕಟ್ಟಿಕೊಡುವ ರಘು ಮಾಸ್ತರರ ಪ್ರತಿಭೆ ತಾಳಮದ್ದಳೆಗಳಲ್ಲಿ ಮಿಂಚುತ್ತಿತ್ತು. ಪಾತ್ರಗಳ ಅಂತರಂಗವನ್ನು ಬಿಚ್ಚಿಡುವ ಅವರ ಸಾಹಿತ್ಯ ಪೂರ್ಣ ಮಾತಿನಮೋಡಿ ತುಂಬಾ ಆಕರ್ಷಕವಾಗಿದೆ. ಪಾತ್ರದ ವಕಾಲತ್ತು ಮಾಡದೆ ಅದರ ಏಳು-ಬೀಳುಗಳನ್ನು, ಬಲ-ದೌರ್ಬಲ್ಯಗಳನ್ನು ಪ್ರಾಂಜಲವಾಗಿ ವಿವರಿಸುತ್ತಾ ಪಾತ್ರಗಳನ್ನು ನೈಜವಾಗಿ ಕಡೆದು ನಿಲ್ಲಿಸುತ್ತಿದ್ದರು. ಸಾತ್ವಿಕ - ಸೌಮ್ಯ ಅರ್ಥಗಳನ್ನು ಅವರು ಇಷ್ಟ ಪಡುತ್ತಿದ್ದರು. ಬಹುಶಃ ಅವರ ಜೀವನ ಮೌಲ್ಯಗಳಿಗೆ ತಾಳೆಯಾಗುವ ಪಾತ್ರಗಳನ್ನೇ ಬಯಸುತ್ತಿದ್ದರೇನೋ! ಅವರನ್ನು ಅವರ ಬಳಗದೊಂದಿಗೆ ಸಾಗರ - ಸಿರಿವಂತೆ ಪ್ರಾಂತ್ಯಕ್ಕೂ ಆಹ್ವಾನಿಸಿ ತಾಳಮದ್ದಳೆ ಏರ್ಪಡಿಸುತ್ತಿದ್ದೆವು. ಈ ಭಾಗದ

ಕಲಾಸಕ್ತರು ಅವರ ಬಳಗದ ಕಾರ್ಯಕ್ರಮಗಳನ್ನು ಆಸ್ವಾದಿಸಿ "ಭಲೇ" ಎಂದಿದ್ದಾರೆ. ದಕ್ಷಿಣ ಕನ್ನಡದ ಯಾವುದೇ ದೊಡ್ಡ ಕೂಟದಲ್ಲಿ ರಘುಮಾಸ್ತರ್ ಅವರ ಹೆಸರು ಇದ್ದೇ ಇರುತ್ತಿತ್ತು. ಹೆಸರಾಂತ ಅರ್ಥದಾರಿಗಳೊಂದಿಗೆ ಸರಿಸಾಟಿಯಾಗಿ ಸಂವಾದ ನಡೆಸಿ 'ಸೈ' ಎನಿಸಿಕೊಳ್ಳುವ ಅವರ ಸಾಮರ್ಥ್ಯ ಯಕ್ಷಗಾನ ಕ್ಷೇತ್ರದಲ್ಲಿ ಅವರಿಗೆ ಸ್ಥಿರವಾದ ಸ್ಥಾನ - ಮಾನ ದೊರಕಿಸಿತ್ತು.

ರಘು ಮಾಸ್ತರ್ ಅವರು ಶಿಕ್ಷಕ ವೃತ್ತಿಯಿಂದ ನಿಷ್ಕಳಂಕರಾಗಿ ನಿವೃತ್ತರೇನೋ ಆದರು, ಆದರೆ ಕೆಲಸವೇನೂ ಕಡಿಮೆಯಾಗಲಿಲ್ಲ. ಮತ್ತಷ್ಟು ಹೆಚ್ಚೇ ಆಯಿತು. ಸಂಸಾರ ಸಮೇತ ನೂಜಾಡಿಯಲ್ಲಿ ನೆಲೆಯಾದರು. ಯಕ್ಷಗಾನ ಕೈಂಕರ್ಯ ಬಿರುಸಾಯಿತು. ಬಿರುಸಾಗಿದಷ್ಟೇ ಅಲ್ಲ, ವಿಶಾಲವೂ ತೀಕ್ಷ್ಣವೂ ಆಗಿ ಹರಡಿಕೊಂಡಿತು. ಆಟ-ಕೂಟಗಳಲ್ಲಿ ಮಾತ್ರವಲ್ಲ ಯಕ್ಷಗಾನದ ಬಗ್ಗೆ ಕಿಂಚಿತ್ ಸಹೃದಯತೆಯುಳ್ಳ ಸರ್ವರಿಗೂ ರಘುರಾಮ ಶೆಟ್ಟರ ಹೆಸರು ಪರಿಚಿತವೂ ಪ್ರಿಯವೂ ಆಯ್ತು.

ರಘುರಾಮ ಶೆಟ್ಟರು ಯಕ್ಷಗಾನ ಪ್ರಸಂಗಗಳನ್ನು ಬರೆಯಲು ಯಾವಾಗ ಪ್ರಾರಂಭಿಸಿದರೋ ಗೊತ್ತಿಲ್ಲ. ನಿವೃತ್ತರಾದ ಮೇಲೆ ಅವರ ಬರವಣಿಗೆಯ ಕಾಯಕ ವೇಗವಾಗಿ, ತೀವ್ರವಾಗಿ ಪ್ರವರ್ಧಮಾನಕ್ಕೆ ಬಂದಿರಬೇಕು. ಆಡಿದ್ದೇ ಆಡಿ ಆಕರ್ಷಣೆ ಕಡಿಮೆಯಾದ ಕೆಲವು ಮೇಳಗಳು ರಘು ಮಾಸ್ತರ್ ಅವರ ಪ್ರಸಂಗಗಳನ್ನು ಬಯಲಾಟದಲ್ಲಿ ಪ್ರದರ್ಶನ ಮಾಡಿದವು. ಅಂಥಾ ಪ್ರದರ್ಶನಗಳ ಯಶಸ್ಸಿನಿಂದ ಪ್ರೇರಿತರಾದ ಇನ್ನೂ ಹಲವು ಮೇಳಗಳ ಮುಖ್ಯಸ್ಥರು ನಮಗೊಂದು ಪ್ರಸಂಗ ಕೊಡಿ, ನಮಗೊಂದು ಬರೆದು ಕೊಡಿ ಎಂದು ಮಾಸ್ತರ್ ಅವರಿಗೆ ದುಂಬಾಲು ಬಿದ್ದರು. ಕೇವಲ ಮೇಳದವರ ಒತ್ತಾಯಕ್ಕೆ ಅವರು ಪ್ರಸಂಗ ಬರೆದರೆಂದು ಇದರ ಅರ್ಥವಲ್ಲ. ಸ್ವಯಂ ಆಸಕ್ತಿಯಿಂದ, ಅಧ್ಯಯನಶೀಲರಾಗಿ, ರಾಗ - ತಾಳ - ಲಯಗಳಲ್ಲಿ ಸಿದ್ಧಹಸ್ತರಾಗಿ ರಚಿಸಿದ ಅನೇಕ ಪ್ರಸಂಗಗಳಲ್ಲಿ ಕೆಲವನ್ನು ಆಟದಲ್ಲಿ ಪ್ರದರ್ಶಿಸಿದಾಗ ಅವುಗಳ ಯಶಸ್ಸು, ಜನಪ್ರಿಯತೆಗಳನ್ನು ಕಂಡು ಕಂಗಾಲಾದ ಬೇರೆ ಮೇಳಗಳು ತಮಗೊಂದು ಪ್ರಸಂಗ ಬೇಕೆಂದು ಮಾಸ್ತರ್ ಅವರನ್ನು ಅಂಗಾಲಾಚಿರಬಹುದು. ಅಂಥಾ ಒತ್ತಾಯಕ್ಕೆ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಒಂದೆರಡು

ಪ್ರಸಂಗಗಳನ್ನು ಬರೆದುಕೊಟ್ಟಿರಬಹುದು. ಆದರೆ ಅವು ಕೇವಲ ಕಾಟಾಚಾರಕ್ಕೆ ಬರೆದವುಗಳಾಗಿಲ್ಲ. ಅವರು ಬರೆದ ಎಲ್ಲ ಪ್ರಸಂಗಗಳೂ ರಸ, ರುಚಿ, ಸಾಹಿತ್ಯ, ಗೇಯತೆಗಳಿಂದ ತುಂಬಿವೆ. ಛಂದಸ್ಸು, ಅಲಂಕಾರ, ಅರ್ಥ ಪುಷ್ಟಿಗಳಿಂದ ಮೈದಾಳಿವೆ. ಸರಳ, ಸುಂದರ ಭಾಷಾ ಶೈಲಿಯಿಂದ, ಪೌರಾಣಿಕ ಆವರಣದ ಉಡುಪು-ತೊಡಪುಗಳಿಂದ, ಶಾಸ್ತ್ರ-ಶಿಷ್ಟಾಚಾರ-ಜೀವನ ಮೌಲ್ಯಗಳ ಲಲಿತ ಶೃಂಗಾರದಿಂದ ಕಂಗೊಳಿಸುತ್ತಿವೆ. ರಂಗಭೂಮಿಯ ಎಲ್ಲ ಶಿಸ್ತುಗಳಿಗೂ ಹೊಂದಿಕೊಳ್ಳುವ, ಸಂವಾದ –ತರ್ಕ – ಜಿಜ್ಞಾಸೆಗಳಿಗೆ ವಿಪುಲ ಅವಕಾಶವಿರುವ, ಗಾದೆ –ನಾಣ್ಣುಡಿ–ಸುಭಾಷಿತಗಳ ಭರಪೂರ ಸಂಗ್ರಹವಿರುವ ಸಾಹಿತ್ಯ ರಚನೆಗಳಾಗಿವೆ. ಕಂದಾವರ ರಘುರಾಮ ಶೆಟ್ಟರು ಅತ್ಯುತ್ತಮ ಶಿಕ್ಷಕರು, ಸುಕೋಮಲ ಅರ್ಥಧಾರಿಗಳು, ಯಶಸ್ವೀ ಸಂಘಟಕರು ಎಂಬ ಎಲ್ಲ ಬಿರುದುಗಳನ್ನು ಹಿಂದಿಕ್ಕಿ ಅವರೊಬ್ಬ ಶ್ರೇಷ್ಠ ಪ್ರಸಂಗಕರ್ತೃರು ಎಂಬ ಶುಭ ನಾಮಾಂಕಿತವಾಗಿ ಮನೆ ಮಾತಾಗಿದೆ. ಇದು ನಮಗೆಲ್ಲ ಹರ್ಷದ ಹೆಮ್ಮೆಯ ಸಂಗತಿಯಾಗಿದೆ.

ರಘುರಾಮ ಶೆಟ್ಟರು ವೃತ್ತಿ – ಪ್ರವೃತ್ತಿಗಳೆರಡರಲ್ಲೂ ಅನನ್ಯ ಸಾಧನೆ ಮಾಡಿದ್ದಾರೆಂದರೆ ಉತ್ಪ್ರೇಕ್ಷೆಯಲ್ಲ, ಹವ್ಯಾಸ ಯಾವುದೇ ಇರಲಿ, ಬಿಡುವಿದ್ದಾಗ, ಮನೋ ಧರ್ಮ ಕೂಡಿ ಬಂದಾಗ, ನಿತ್ಯ ಜೀವನದ ಯಾಂತ್ರಿಕತೆ ಕಿರಿಕಿರಿ ಎನ್ನಿಸಿದಾಗ ಬದಲಾವಣೆಯನ್ನು ಬಯಸಿ ಅಂಥಾ ಹವ್ಯಾಸದಲ್ಲಿ ತೊಡಗಿಸಿಕೊಳ್ಳುವವರಿಂದ ವಿಶಿಷ್ಟ ಸಾಧನೆ – ಸಿದ್ಧಿ ದೊರಕುವುದು ಕಷ್ಟವೇ ಸರಿ. ಹವ್ಯಾಸ ಹುಚ್ಚಾಗಬೇಕು. ಅದರಲ್ಲಿ ಮುಳುಗಬೇಕು. ಅದರಲ್ಲೇ ಏಕಾಗ್ರ ಚಿತ್ತರಾಗಬೇಕು. ನಾವು ಕಾಣುತ್ತಿರುವ ಅದ್ಭುತ ಆವಿಷ್ಕಾರಗಳು, ಅಮೂಲ್ಯ ಸಂಶೋಧನೆಗಳೆಲ್ಲ ಇಂಥಾ ಹುಚ್ಚರಿಂದಲೇ ಬಂದಿವೆ. ಹಾಗೆಯೇ ರಘು ಮಾಸ್ಟರ್ ಅವರು ಪ್ರಸಂಗ ರಚನೆಯಲ್ಲಿ ತೀವ್ರ ನಿಷ್ಠೆಯಿಂದ ತೊಡಗಿಸಿಕೊಂಡಿದ್ದರಿಂದಲೇ ಉತ್ತಮವಾದ ಮೂವತ್ತಮೂರು ಪ್ರಸಂಗಗಳನ್ನು ಯಕ್ಷಗಾನ ಕ್ಷೇತ್ರಕ್ಕೆ ಕೊಟ್ಟು ಕೃತಾರ್ಥರಾಗಿದ್ದಾರೆ. ಅವರಿಂದ ಇನ್ನೂ ಹೆಚ್ಚಿನ ಕೊಡುಗೆಗಳನ್ನು ನಿರೀಕ್ಷಿಸುವುದು ಸಹಜವೇ ಆಗಿದೆ.

ಈಗಾಗಲೇ ರಘುಮಾಸ್ಟರಿಗೆ ಹಲವು ಪ್ರಶಸ್ತಿ ಸಂಮಾನಗಳು ತಾನಾಗಿ ಹುಡುಕಿಕೊಂಡು ಬಂದಿವೆ; ಬರುತ್ತಲೂ ಇವೆ. ಬಂದಾಗ ಬೀಗಿದವರೂ ಅಲ್ಲ;

ಬರಬೇಕಾದ್ದು ಬರಲಿಲ್ಲವೆಂದು ಕುಗ್ಗಿದವರೂ ಅಲ್ಲ. ಅವರ ವ್ಯಕ್ತಿತ್ವವೇ ಅಂಥಹುದು. ನಾನು ಅವರನ್ನು ಮೊದಲು ಕಂಡಾಗ ಗುರುತಿಸಿದ ಸಾತ್ವಿಕ ಸ್ವಭಾವಗಳೆಲ್ಲವೂ ಈಗ ಮತ್ತಷ್ಟು ಸಾಂದ್ರವಾಗಿವೆ. ಒನಪು-ವೈಯಾರಗಳಿಲ್ಲದ ಸರಳತೆ, ಬಿಂಕ-ಬಿನ್ನಾಣಗಳಿಲ್ಲದ ಸಜ್ಜನಿಕೆ, ಅಂಕು-ಡೊಂಕುಗಳಿಲ್ಲದ ಸ್ನೇಹಪರತೆ, ಹಮ್ಮು-ಬಿಮ್ಮುಗಳಿಲ್ಲದ ಆತ್ಮವಿಶ್ವಾಸ, ಭಯ-ಬಿಡೆಯಗಳಿಲ್ಲದ ಪ್ರಾಮಾಣಿಕತೆ ಎಲ್ಲವೂ ಹಾಗೇ ಇವೆ. ವಯಸ್ಸಾದಂತೆ ಇವು ಮತ್ತಷ್ಟು ಪಕ್ವಗೊಂಡಿವೆಯೇ ವಿನಾ ಕೊರತೆಯೂ ಕಾಣಲಿಲ್ಲ; ಹಳಸಲೂ ಆಗಲಿಲ್ಲ. ಈಗ ಶುಚಿ-ರುಚಿ ಎರಡೂ ಹೆಚ್ಚಾಗಿವೆ.

ವೃತ್ತಿ - ಪ್ರವೃತ್ತಿಗಳಲ್ಲಿ ಉತ್ತುಂಗ ಶೃಂಗಕ್ಕೇರಿದಾಗಲೂ ರಘು ಮಾಸ್ಟರ್ ಅವರು ಅಪ್ಪಟ ಮನುಷ್ಯರಾಗಿಯೇ ಉಳಿದಿದ್ದಾರೆಂಬುದು ನನಗೆ ಅತ್ಯಂತ ಹೃದ್ಯವಾದ ವಿಷಯ. ಕೆ.ವಿ.ಸುಬ್ಬಣ್ಣ ಅವರು ವ್ಯಂಗ್ಯ ಮಾಡಿದ "ಶ್ರೇಷ್ಠತೆಯ ವ್ಯಸನ"ಕ್ಕೆ ಬಲಿಯಾಗದೆ ಮನುಷ್ಯತ್ವ ಕಾಪಾಡಿಕೊಂಡು ಬರುವುದು ಬಹು ದೊಡ್ಡ ತಪಸ್ಸೇ ಸರಿ.

ಇವರ ಮನೆಯ ಹೆಸರು "ಸ್ವಸ್ತಿ ನಿಲಯ" ಸ್ವಸ್ತಿ ಎಂದರೆ ಮಂಗಳ, ಕ್ಷೇಮ, ಒಳ್ಳೆಯ ಎಂಬ ಅರ್ಥಗಳಿವೆ. ಇವುಗಳೇ ರಘು ಮಾಸ್ಟರ್ ನಿಲಯದಲ್ಲಿ ಕಿಕ್ಕಿರಿದು ತುಂಬಿದ ಸರಕುಗಳು. ಒಳಗೆ ಸ್ಥಳ ಸಾಕಾಗದೆ ಉಕ್ಕಿ ಹರಿವ ಸರಕುಗಳನ್ನು ಶೆಟ್ಟರು ಕೊಡುಗೈಯಿಂದ ಹಂಚುತ್ತಿದ್ದಾರೆ. ನಮ್ಮ ಶಕ್ತಿ-ಯೋಗ್ಯತೆಗನುಸಾರವಾಗಿ ನಾವು ಹಿಡಿದುಕೊಂಡೇ ಇರುವ ಗಾತ್ರದ ಪಾತ್ರೆಗಳಲ್ಲಿ ಅವರು ಹಂಚುತ್ತಿರುವುದನ್ನು ತುಂಬ ತುಂಬಿಸಿಕೊಂಡು ಬರೋಣ.

ನನ್ನ ಹೆಮ್ಮೆಯ ಭಾವ

ಎನ್. ಸಚ್ಚಿದಾನಂದ ಹೆಗ್ಡೆ
ನಿವೃತ್ತ ಮುಖ್ಯೋಪಾಧ್ಯಾಯರು,
ನೂಜಾಡಿ

ಕಂದಾವರ ರಘುರಾಮ ಶೆಟ್ಟರು ನನ್ನ ಅಕ್ಕನ ಕೈ ಹಿಡಿಯುವ ಮೂಲಕ ನನಗೆ ಭಾವನಾಗಿ ಬಂದರು. ಆದರೆ ಅವರು ಕೇವಲ ಸಂಬಂಧದಿಂದಲೇ ಭಾವನಾಗಿ ಉಳಿಯಲಿಲ್ಲ. ನಮ್ಮೆಲ್ಲರ ಭಾವಕೋಶದಲ್ಲಿ ಎಂದೆಂದಿಗೂ ಮರೆಯಲಾಗದ ಭಾವನಾಗಿಯೇ ಉಳಿಯುವಂತಾದರು. ವೃದ್ಧಾಪ್ಯದಲ್ಲಿರುವ ನನ್ನ ತಂದೆಗೆ ಸಹಾಯಕರಾಗಿ ನಿಂತು ಅವರ ಕಾರ್ಯಕ್ಷೇತ್ರದಲ್ಲಿ ಹೆಗಲೆಣೆಯಾಗಿ ದುಡಿದರು. ಕಿರಿಯರಾದ ನಮಗೆ ಮಾರ್ಗದರ್ಶಕರಾಗಿ ನಮ್ಮ ಯಶಸ್ವಿಗೆ ಕಾರಣೀಭೂತರಾದರು. ಅವಿವಾಹಿತರಾಗಿ ಉಳಿದಿದ್ದ ನನ್ನ ಇಬ್ಬರು ಅಕ್ಕಂದಿರ ಮದುವೆ ಕಾರ್ಯದಲ್ಲಿ ಮುಂದಾಗಿ ನಿಂತು ಜವಾಬ್ಧಾರಿಯುತವಾಗಿ ನಡೆಸಿಕೊಟ್ಟವರು. ಹೀಗಾಗಿ ಅವರು ನಮ್ಮ ಸಂಸಾರಕ್ಕೆ ಆಧಾರಸ್ಥಂಭವಾಗಿದ್ದರೆಂದರೆ ಅದು ಅತಿಶಯೋಕ್ತಿಯ ಮಾತಾಗಲಾರದು.

ಇವರು ಕೇವಲ ಓರ್ವ ಮಾದರಿ ಶಿಕ್ಷಕರಾಗಿ ಉಳಿದಿಲ್ಲ. ಸಂಗೀತ, ಸಾಹಿತ್ಯ, ನಾಟಕ, ಯಕ್ಷಗಾನ ಕಲೆಗಳಲ್ಲಿ ಅಪಾರ ಸಾಧನೆ ಮಾಡಿದವರು. ತಮ್ಮ ಪರಿಣಾಮಕಾರಿ ಪಾಠಗಳಿಂದ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾದವರು. ವಿದ್ವತ್ಪೂರ್ಣ ಅರ್ಥಗಾರಿಕೆ ಯಿಂದ ಸಹಸ್ರಾರು ಮಂದಿ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದರು. ತಮ್ಮ ಮೌಲ್ಯಾಧಾರಿತ ಪ್ರಸಂಗಗಳಿಂದ ನಾಡಿನಾದ್ಯಂತ ಲಕ್ಷೋಪಲಕ್ಷ ಪ್ರೇಕ್ಷಕರ ಪ್ರೀತ್ಯಾದರಕ್ಕೆ ಪಾತ್ರರಾದರು. ಇವರ ಸಾಧನೆಗೆ ಸಮಾಜವು ಕೂಡಾ ತಕ್ಕ ರೀತಿಯಲ್ಲಿ ಗೌರವಿಸಿದೆ. ನೂರಾರು ಕಡೆಗಳಲ್ಲಿ ಸನ್ಮಾನ ಸಂದಿವೆ. ಹತ್ತಾರು ಪ್ರಶಸ್ತಿಗಳು ಬಂದಿವೆ.

ಸ್ವರ್ಣ, ರಜಕ ಪದಕಗಳು ಇವರ ಮುಡಿಯೇರಿವೆ. ಅವರ ಅಪಾರ ಜನಪ್ರಿಯತೆಗೆ ಅವರ 75ನೇ ಹುಟ್ಟು ಹಬ್ಬ (ಅಮೃತ ಮಹೋತ್ಸವ) ಸಾಕ್ಷಿಭೂತವಾಗಿ ನಿಂತಿದೆ.

ಕ್ರಿ.ಶ. 2011ನೇ ಇಸ್ವಿ ನವಂಬರ 15ನೇ ತಾರೀಕಿನಂದು ಅವರ ಮನೆಯ ವಠಾರದಲ್ಲಿ ಕುಲದೇವರಾದ ಶ್ರೀ ಗೋಪಾಲಕೃಷ್ಣ ಸ್ವಾಮಿಯ ಸನ್ನಿಧಿಯಲ್ಲಿ ಬಸ್ರೂರು ಶ್ರೀ ಅಪ್ಪಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಉತ್ಸವ ಜರಗಿತು. ಹಟ್ಟಿಯಂಗಡಿ ಶ್ರೀ ರಾಮಚಂದ್ರ ಭಟ್ಟರ ಆಶೀರ್ವಾದದೊಂದಿಗೆ ಸಮಾರಂಭ ಆರಂಭವಾಗಿ, ಕುಂಬ್ಳೆ ಶ್ರೀ ಸುಂದರರಾವ್ ಹಾಗೂ ಕೆ. ರಾಜೀವ ಶೆಟ್ರ ಅಭಿನಂದನಾ ಭಾಷಣದ ಅನಂತರ ಊರವರಿಂದ ಅಭಿಮಾನ ಪೂರ್ವಕವಾದ ಸನ್ಮಾನ ಸಂದಿತು. ಸೇರಿದ ಸಹಸ್ರಾರು ಮಂದಿ ಅಭಿಮಾನಿಗಳು ಹಾರಾರ್ಪಣೆ ಮಾಡುವ ಮೂಲಕ ತಮ್ಮ ಗೌರವ ಸೂಚಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಜರಗಿದ ತಾಳಮದ್ದಳೆಯಲ್ಲಿ ಶ್ರೀಯವರು ಧರ್ಮರಾಯನ ಅರ್ಥ ಹೇಳುವ ಮೂಲಕ ಪ್ರೇಕ್ಷಕರನ್ನು ತೃಪ್ತಿ ಪಡಿಸಿದರು.

ಅದೇ ದಿನ ರಾತ್ರಿ 9–00 ಗಂಟೆಗೆ ಅವರು ಅಧ್ಯಾಪನ ಗೈದ ಕಂಡ್ಲೂರು ನೇತಾಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅದ್ದೂರಿ ಸಮಾರಂಭ ಜರಗಿತು. ಸಹಸ್ರಾರು ಸಂಖ್ಯೆಯಲ್ಲಿ ಅವರ ವಿದ್ಯಾರ್ಥಿಗಳು, ಅಭಿಮಾನಿಗಳು ನೆರೆದಿದ್ದರು. ಸಾಲಿಗ್ರಾಮ ಮಕ್ಕಳ ಮೇಳದ ಸಂಚಾಲಕರಾದ ಶ್ರೀ ಶ್ರೀಧರ ಹಂದೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭಾ ಕಾರ್ಯಕ್ರಮದಲ್ಲಿ ಶಾಲಾ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಸುಬ್ರಾಯ ಉಡುಪರು ಆಶೀರ್ವಾದ ಭಾಷಣಗೈದರು. ಕಟೀಲು ಶ್ರೀ ದುರ್ಗಾಪರಮೇಶ್ವರಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೆ. ಬಾಲಕೃಷ್ಣ ಶೆಟ್ಟರು ಹಾಗೂ ಸೌಪರ್ಣಿಕಾ ಕಾರ್ಖಾನೆಯ ಮಾಲಿಕರಾದ ಶ್ರೀ ಬಿ.ಎಂ. ಸುಕುಮಾರ ಶೆಟ್ರು ಕಂದಾವರದವರ ವಿಭಿನ್ನ ಕ್ಷೇತ್ರದ ಸಾಧನೆಯ ಕುರಿತು ಮಾತಾಡಿದರು. ಅವರ ಅಪಾರ ವಿದ್ಯಾರ್ಥಿ ವೃಂದದವರು ತಮ್ಮ ನೆನಪಿನ ಕಾಣಿಕೆಯನ್ನಿತ್ತು ಗೌರವಿಸಿದರು. ಅವರ ಶಿಷ್ಯರಲ್ಲಿ ಒಬ್ಬರಾದ ಉದ್ಯಮಿ ಹಳ್ನಾಡು ಶೇಖರ ಶೆಟ್ರು ಗುರುವಿನ ಬೆರಳಿಗೆ ವಜ್ರದುಂಗುರ ತೊಡಿಸಿ ತನ್ನ ಗೌರವ

ನಮನ ಸಲ್ಲಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಜರಗಿದ ನಾಟಕ ಹಾಗೂ ಯಕ್ಷಗಾನದಲ್ಲಿ ಸನ್ಮಾನಿತ ಕಂದಾವರದವರು ತಮ್ಮ ಶಿಷ್ಯ ಗಡಣದೊಂದಿಗೆ ಪಾತ್ರವಹಿಸಿ, ತಮ್ಮ ನಟನಾ ಚಾತುರ್ಯವನ್ನು ಮೆರೆದರು.

ಹೀಗೆ ಆಹೋ ರಾತ್ರಿ ನಡೆದ ನನ್ನ ಭಾವನ ಅಮೃತ ಮಹೋತ್ಸವವು ನಭೂತೋ ನಭವಿಷ್ಯತಿ ಎಂಬಂತಿತ್ತು. ಚಿರಕಾಲ ಸ್ಮೃತಿಪಟಲದಲ್ಲಿ ಸ್ಥಿರವಾಗಿ ನಿಲ್ಲುವಂತಿತ್ತು. ಇಂಥಾ ಮಹೋನ್ನತ ವ್ಯಕ್ತಿತ್ವವುಳ್ಳ ಭಾವನನ್ನು ಪಡೆದುದು ನನಗೆ ತುಂಬಾ ಹೆಮ್ಮೆಯ ವಿಷಯವಾಗಿದೆ.

ಕವಿ-ಕಲಾವಿದ ಕಂದಾವರದವರು

ಡಾ। ಕೋಳ್ಯೂರು ರಾಮಚಂದ್ರ ರಾವ್
ಯಕ್ಷಗಾನ ಕಲಾವಿದರು, ಇನ್ನಂಜೆ

ಕಂಡಾಕ್ಷಣ ಕೈಗಳನ್ನು ಜೋಡಿಸುತ್ತಾ, ಸ್ನೇಹಪೂರ್ಣ ನಗುವಿನೊಂದಿಗೆ ಹಸ್ತಲಾಘವವನ್ನಿತ್ತು ಬರಮಾಡಿಕೊಳ್ಳುವ ಒಬ್ಬ ಸಹೃದಯಿ ಅಧ್ಯಾಪಕರು ನಮ್ಮ ರಘುರಾಮ ಶೆಟ್ಟರು. ಇವರು ಬರಿಯ ಅಧ್ಯಾಪಕರು ಮಾತ್ರವಲ್ಲ ; ಕವಿ, ಕಲಾವಿದ, ಅರ್ಥಧಾರಿ, ಪ್ರವಚನಕಾರರಾಗಿ ಎಲ್ಲರಿಗೂ ಪರಿಚಿತರು. ಅಧ್ಯಾಪಕ ವೃತ್ತಿಯಲ್ಲಿ ಎಷ್ಟೋ ಮಂದಿ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಪಾಠವನ್ನು ಹೇಳಿ, ತನ್ನ ಗುರುತ್ವವನ್ನು ಸಾರ್ಥಕ ಪಡಿಸಿಕೊಂಡುದಲ್ಲದೆ, ವಿದ್ಯಾರ್ಥಿಗಳು ವಿದ್ಯಾವಂತರಾಗಿ ಗುರುಗಳನ್ನು ಮರೆಯದಂತೆ ಮಾಡಿದವರು. ಹಾಗೆಯೇ ಸಹೋದ್ಯೋಗಿ ಅಧ್ಯಾಪಕ ವೃಂದದವರಿಗೆಲ್ಲಾ ಆತ್ಮೀಯತೆಯಿಂದ ಅಚ್ಚುಮೆಚ್ಚಿನ ಸ್ನೇಹಿತರಾದರು. ಇಷ್ಟರಿಂದಲೇ ತೃಪ್ತರಾಗದೆ ಕೆಲವು ಕಿರುನಾಟಕಗಳನ್ನೂ ಅಭಿನಯಗೀತೆಗಳನ್ನು ರಚಿಸಿ, ವಿದ್ಯಾರ್ಥಿಗಳನ್ನು ಕುಣಿಸಿ, ದಣಿಸಿ ಆದರ್ಶ ಅಧ್ಯಾಪಕರಾಗಿ 'ಮಾದರಿ ಶಿಕ್ಷಕ' ಪ್ರಶಸ್ತಿಗೆ ಪಾತ್ರರಾದರು. ಈ ಸಾಧನೆಗಳೆಲ್ಲಾ ಬಾಯಾರಿದವನು ಉಪ್ಪುನೀರನ್ನು ಕುಡಿದ ಹಾಗಾಯಿತೇ ಹೊರತು ಇವರ ದಾಹ ಇಂಗಲಿಲ್ಲ.

ನಮ್ಮ ಭಾರತೀಯ ಸಂಸ್ಕೃತಿಯ ಸಾರವಾದ ರಾಮಾಯಣ, ಭಾರತ, ಭಾಗವತಾದಿ ಪುರಾಣಗಳ ವಾಚನ, ಪ್ರವಚನಕಾರರಾಗಿ, ತನ್ನ ಪ್ರತಿಭೆಯಿಂದ ಪಂಡಿತ, ಪಾಮರರಾದಿ ಶ್ರೋತೃಗಳ ಆಕರ್ಷಣೆಗೆ ಕಾರಣರಾದರು. ಇವರ ಆಸಕ್ತಿ ಕೆರೆಯ ನೀರಾಗಿ ಉಳಿಯದೆ ತೊರೆಯಾಗಿ ಹರಿಯಿತು. ಇನ್ನೇನು? ರಂಗವನ್ನೇರಿದರೆ ಸಾವಿರಾರು ಮಂದಿ ಪ್ರೇಕ್ಷಕರ ಮನಸೂರೆಗೊಳ್ಳಬಹುದೆಂದು ಭಾವಿಸಿ ರಂಗ ಕಲಾವಿದರೂ ಆದರು. ಶ್ರೇಷ್ಠ ಹಾಸ್ಯ ಪಟುವೆಂಬ ಕೀರ್ತಿಗೆ ಭಾಜನರಾದರು.

ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದರೂ ಕಲಾಸಕ್ತಿ ವಿಸ್ತಾರವಾಗಿ ಮುಂದುವರಿದು ತಾಳಮದ್ದಳೆಯ ಕೂಟದಲ್ಲಿ ಅರ್ಥಧಾರಿಯೂ ಆದರು. ಪ್ರವಚನಕಾರರಾದ ಇವರಿಗೆ ಅರ್ಥಧಾರಿಯಾಗುವುದಕ್ಕೆ ಭಯವೇನು ? ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಪ್ರತಿವರ್ಷದ ರಾಜ್ಯೋತ್ಸವದಂದು ನಡೆಯುವ ಘಟಾನುಘಟಿಗಳ ತಾಳಮದ್ದಳೆ ಕೂಟದಲ್ಲಿ ನಿರ್ಭೀತಿಯಿಂದ ಭಾಗವಹಿಸಿ ಪ್ರಸಿದ್ಧ ಅರ್ಥಧಾರಿಗಳ ಸಾಲಿನಲ್ಲಿ ತನ್ನ ಹೆಸರನ್ನು ದಾಖಲಿಸಿದರು. ಆಟದಲ್ಲಿ ಹಾಗೂ ಕೂಟದಲ್ಲಿ ಸ್ತ್ರೀ ಪಾತ್ರ ನಿರ್ವಹಿಸಲು ಎಲ್ಲರೂ ಸಮ್ಮತಿಸುವುದಿಲ್ಲ. ಸ್ತ್ರೀ ಪಾತ್ರ ಮಂಡನೆಗೆ ಪಾಂಡಿತ್ಯವಿದ್ದರೆ ಸಾಲದು, ಅದರೊಂದಿಗೆ ಪ್ರಕೃತಿ ಸಹಜವಾದ ಸ್ತ್ರೀ ಕಂಠ, ಭಾವನೆ, ಸಂವಾದ ಸಾಮರ್ಥ್ಯಗಳಿರಬೇಕು. ನಮ್ಮ ರಘು ಮಾಸ್ತರರು ಇದಕ್ಕೂ ಹಿಂಜರಿಯದೆ ಹಲವಾರು ಸ್ತ್ರೀ ಪಾತ್ರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದ್ದಾರೆ. ಇದಕ್ಕೆ ಒಂದು ಉತ್ತಮ ನಿದರ್ಶನ ಕೊಡಬಲ್ಲೆ.

ಕಂಡ್ಲೂರಿನಲ್ಲಿ ಶ್ರೀ ಕನ್ನಿಕಾ ಪರಮೇಶ್ವರೀ ಯಕ್ಷಗಾನ ಸಂಘಕ್ಕೆ ಇವರು ಸ್ಥಾಪಕಾಧ್ಯಕ್ಷರು. ಸಂಘ ಸ್ಥಾಪನೆಯಾದ 2ನೇ ವರ್ಷ ನನ್ನನ್ನು ಕರೆಸಿ ಪ್ರೀತ್ಯಾದರಗಳಿಂದ ಸನ್ಮಾನಿಸಿ ಗೌರವಿಸಿದರು. ಸಮಾರಂಭದ ಅಂಗವಾಗಿ ಜರಗಿದ ತಾಳಮದ್ದಳೆ ಕೂಟದಲ್ಲಿ ನನಗಾಗಿಯೇ ಎಂಬಂತೆ ಕೃಷ್ಣಾರ್ಜುನ ಕಾಳಗ ಪ್ರಸಂಗ ಇರಿಸಿದ್ದರು. ನನ್ನದು ಸುಭದ್ರೆಯ ಪಾತ್ರ ಮಾಸ್ತರರದ್ದು ರುಕ್ಮಿಣಿ, ನಮ್ಮೊಳಗೆ ಕೆಲಕಾಲದ ಸ್ನೇಹವಿದ್ದರೂ, ದಯೆ ದಾಕ್ಷಿಣ್ಯವಿಲ್ಲದೆ, ನಿಜವಾದ ರುಕ್ಮಿಣಿಯೇ ಆಗಿ ಜಗಳವಾಡಿ, ದಿಟ್ಟೆ ರುಕ್ಮಿಣಿಯಾಗಿಯೇ ವಿಜ್ರಂಭಿಸಿದರು. ತಾನು ವಹಿಸಿದ ಪಾತ್ರದ ಗುಣ ಸ್ವಭಾವ, ಪ್ರಸಂಗದಲ್ಲಿ ಆ ಪಾತ್ರದ ನಡೆಯ ಬಗ್ಗೆ ಅವರಿಗೆ ಹೆಚ್ಚಿನ ಕಾಳಜಿ. 'ವಾದದಲ್ಲಿ ಗೆಲ್ಲಬೇಕೆಂಬ ಹಠವಿಲ್ಲ, ಆದರೆ ಪಾತ್ರಕ್ಕೆ ನ್ಯಾಯ ಒದಗಿಸಬೇಕು' ಇದು ಅವರ ಅರ್ಥಗಾರಿಕೆಯ ಜಾಡು.

ವಾಡಿಕೆಯಲ್ಲಿ 'ಕವಿಗೆ ಕವಿ ಮುನಿವ' ಎಂಬ ಮಾತೊಂದಿದೆ. ಆದರೆ ರಘುರಾಮ ಮಾಸ್ತರರು ಇದಕ್ಕೆ ಅಪವಾದ. ಅವರು ಸ್ವತಃ ಉತ್ತಮ ಕಲಾವಿದರಾದರೂ ಮತ್ತೋರ್ವ ಕಲಾವಿದನ ಹೆಚ್ಚುಗಾರಿಕೆಯನ್ನು ಮೆಚ್ಚುವವರು. ಒಮ್ಮೆ 'ರಾಜಮುದ್ರಿಕಾ' ಪ್ರಸಂಗದಲ್ಲಿ ನಿಮ್ಮ ಪದ್ಮಾವತಿ ಪಾತ್ರದ ಅಭಿನಯ ತುಂಬಾ ಉತ್ಕೃಷ್ಟವಾಗಿತ್ತು ರಾಯರೇ; ನನಗೆ ಕಣ್ಣೀರನ್ನು ಒರೆಸಿಕೊಳ್ಳುವುದೇ ದೊಡ್ಡ ಕೆಲಸವಾಯ್ತು" ಎಂದು

ಪ್ರಾಂಜಲ ಮನಸ್ಸಿಂದ ಹೊಗಳಿದರು. 'ಕವಿಗೆ ಕವಿ ಒಲಿವ' ಎಂಬ ಹೊಸ ಗಾದೆಗೆ ನಾಂದಿ ಹಾಡಿದರು.

ಕಲಾವಿದನು ಕವಿಯಾಗುವುದು ದುರ್ಲಭ. ಆದರೆ ಕವಿಯಾದವನು ಕಲಾವಿದನಾಗಿರಲೇಬೇಕು. ಕಾಂಚನ, ಕಾಮಿನಿ, ಕಾವ್ಯ ಈ ಮೂರು ಒಲಿದು ಬರಬೇಕೇ ಹೊರತು ಈ ಮೂರರ ಮೇಲೆ ಬಲತ್ಕಾರ ಸಲ್ಲದು. ಮಾಸ್ತರರ ಪ್ರಸಂಗಗಳನ್ನು ಓದಿ ನೋಡಿದರೆ ಸರಳ, ಸುಂದರ, ಭಾವನಾತ್ಮಕವಾದ ಪದ್ಯಗಳ ರಚನೆಯಾಗಿದೆ. ಇವರಿಗೆ ಕಾವ್ಯಕಾಮಿನಿ ಒಲಿದು ಬಂದಿದ್ದಾಳೆ. ಇವರ ಪ್ರಸಂಗಗಳಲ್ಲಿ ಪ್ರಧಾನವಾಗಿ ಶೃಂಗಾರ, ವೀರ, ಕರುಣ ಹಾಸ್ಯ ರಸಗಳ ಸನ್ನಿವೇಶಗಳು, ಅದಕ್ಕೊಪ್ಪುವ ಪಾತ್ರಗಳ ರಚನೆ, ಪದ್ಯಗಳ ಜೋಡಣೆ ಪರಿಣಾಮಕಾರಿಯಾಗಿ ಬಂದಿವೆ. ಪೌರಾಣಿಕ ಪ್ರಸಂಗಗಳಿಗೆ ಮೂಲಕಥೆಯ ಆಧಾರವಿರುವುದರಿಂದ ಇದಕ್ಕೆ ಸಾಮಾನ್ಯ ಸಾಧನೆ ಸಾಕಾದೀತು. ಆದರೆ ಕಾಲ್ಪನಿಕ ಪ್ರಸಂಗಗಳ ರಚನೆಗೆ ಕಥಾ ಸಂವಿಧಾನ, ಪಾತ್ರಗಳ ಕಲ್ಪನೆ, ಪಾತ್ರೋಚಿತವಾದ ಪದ್ಯರಚನೆ, ಸಾಹಿತ್ಯಪೂರ್ಣ ಪದಬಂಧಗಳು ಇವೆಲ್ಲವೂ ಕೂಡಿ ಬಂದಲ್ಲಿ ಮಾತ್ರ ಅದು ಯಶಸ್ವಿ ಪ್ರಸಂಗವಾದೀತು. ಇಂತಹ ಕವಿತಾ ಸಾಮರ್ಥ್ಯ ರಘುರಾಮ ಮಾಸ್ತರರಲ್ಲಿ ಕಾಣಬಹುದು. ಇದಕ್ಕೆ ಒಂದು ನಿದರ್ಶನ ಇವರ "ಸತಿ ಸೀಮಂತಿನಿ" ಪ್ರಸಂಗದಿಂದ ಕೊಡಬಹುದಾಗಿದೆ.

ರಾಜಾ ಚಿತ್ರವರ್ಮನು ತನ್ನ ಮಗಳಾದ ಸೀಮಂತಿನಿಯ ವೈಧವ್ಯದ ದುರ್ಯೋಗ ಕಳೆಯಲು ಸಲಹೆ ಕೇಳುವುದಕ್ಕಾಗಿ ಯಾಜ್ಞವಲ್ಕರ ಆಶ್ರಮಕ್ಕೆ ತೆರಳುತ್ತಾನೆ. ಅಲ್ಲಿ ಅವನು ಕಂಡ ಅವರ ಆಶ್ರಮದ ವರ್ಣನೆ.

ಕಾಂಭೋದಿ ಅಷ್ಟ

ಕಂಡನು। ಭೂಪ। ಕಂಡನು ॥ಪ॥

ಕಂಡನು ಮುನಿಯಾಜ್ಞವಲ್ಕ್ಯರಾಶ್ರಮವ। ಹೆಂಡತಿಯೊಡಗೂಡಿ ಕುಳಿತ ವಿಭ್ರಮವ ॥ ಅ.ಪ॥

ದಂಡ ಕಮಂಡಲದಿಂದೊಡಗೂಡಿ। ಮಂಡಿಸಿರುವ ಮುನಿ ಜೋಡಿಯನ್ನೋಡಿ॥
ಮಂಡೆಯ ಮಣಿದು ಕಾಣಿಕೆಯ ತಾ ನೀಡಿ। ಕೊಂಡಾಡಿನುತಿಸಿದ ಗುಣಗಾನ ಪಾಡಿ॥ ೧ ॥

ಈ ಪದ್ಯ ಹಾಡುವವರಿಗೆ ಭಾವನಾತ್ಮಕವಾಗಿ, ಪಾತ್ರಧಾರಿಗೆ ಅಭಿನಯ ಯೋಗ್ಯವಾಗಿ, ಅರ್ಥಧಾರಿಗೆ ಸಾಹಿತ್ಯ ಪೂರ್ಣವಾಗಿ ಎಷ್ಟು ಸುಂದರವಾಗಿ ಪಾತ್ರ ಚಿತ್ರಣ ನೀಡುತ್ತದೆ! ನೋಡಿ, ಕಾಣಿಕೆ ನೀಡಿ, ಗುಣಗಾನ ಪಾಡಿ, ಈ ಪ್ರಾಸ ಸಾಹಿತ್ಯ ನೋಡಿದರೆ ಮಹಾ ಕವಿ ಮುದ್ದಣನ ಕುಮಾರ ವಿಜಯದ ಪದ್ಯಗಳನ್ನು ನೆನಪಿಸುವುದಿಲ್ಲವೇ ? ಇಂಥ ಸುಂದರವಾದ ಪದಬಂಧಗಳಿಂದ ಕೂಡಿದ ಪದ್ಯವನ್ನು ಭಾವಜ್ಞನಾದ ಭಾಗವತನು ಹಾಡಿದರೆ, ಆತ್ಮೀಯ ಸ್ನೇಹಿತರಿಬ್ಬರು ನೇರದಾರಿಯಲ್ಲಿ ಸರಸವಾಡುತ್ತಾ ಸಾಗಿದಂತೆ ಭಾಸವಾಗುತ್ತಿದೆಯಷ್ಟೇ ? ಇವರ ಇನ್ನೊಂದು ಪ್ರಸಂಗ ಮಹಾಭಾರತದಿಂದ ಆಯ್ದುಕೊಂಡ ಕಥಾನಕ "ವಧೂ-ಮಾಧವಿ" ಈ ಪ್ರಸಂಗವನ್ನು ಓದುತ್ತಾ ಹೋದರೆ ಯಾವುದೇ ಸನ್ನಿವೇಶಗಳು ರಂಗದಲ್ಲಿ ನೀರಸವಾಗದೆ, ಪ್ರೇಕ್ಷಕರ ಕುತೂಹಲವನ್ನು ಕೆರಳಿಸುತ್ತಾ ಸಾಗುತ್ತವೆ. ಅದರಲ್ಲೂ ಮಾಧವಿಯ ಪಾತ್ರ, ಭಾವನಾತ್ಮಕವಾಗಿ ಸಮರ್ಥರಾದ ಸ್ತ್ರೀ ಪಾತ್ರಧಾರಿಗಳಿಗೂ ಕೂಡಾ ಸವಾಲನ್ನೊಡ್ಡುವ ಸನ್ನಿವೇಶಗಳಿಂದ ಕೂಡಿದೆ.

ಹಾಗೆಯೇ ಇನ್ನೊಂದು ಪ್ರಸಂಗ ಶ್ರೀದೇವಿ ಬನಶಂಕರಿ. ಇದು ಜಾನಪದ ಆಧಾರಿತ ಕಥೆಯಾಗಿದ್ದರೂ ಬಯಲಾಟಕ್ಕೆ ಯೋಗ್ಯವಾಗಿ, ರಂಜನೆಯೊಂದಿಗೆ ಧಾರ್ಮಿಕತೆಯನ್ನೂ, ದೈವಭಕ್ತಿಯನ್ನೂ ಮೂಡಿಸುವ ಪ್ರಸಂಗವಾಗಿದೆ. ಅದರಲ್ಲೂ ವಿನಯವತಿಯ ಪಾತ್ರವಂತೂ ವಿಶಿಷ್ಠವಾಗಿದೆ. ಆದರ್ಶವಾಗಿದೆ. ತನಗೆ ಸಂತಾನ ಭಾಗ್ಯವಿಲ್ಲವೆಂದು ತಿಳಿದು, ತನ್ನ ಗಂಡನಿಗೆ ಮತ್ತೊಬ್ಬಳನ್ನು ತಾನೆ ಮದುವೆ ಮಾಡಿಸುವ ಹೆಂಗಸೊಬ್ಬಳು ಸಾವಿರ ಕೊಟ್ಟರೂ ಸಿಗಲಾರಳು.ಈ ಪ್ರಸಂಗವನ್ನು ಕಟೀಲು ಮೇಳದಲ್ಲಿ ಆಡುತಿದ್ದಾಗ ನಾನು ವಿನಯವತಿಯ ಪಾತ್ರದಲ್ಲಿ ಭಾವನಾತ್ಮಕವಾಗಿ ಅಭಿನಯಿಸಿ ಯಶಸ್ವಿಯಾಗಿದ್ದೆ.

ಪ್ರತಿಭಾ ಸಂಪನ್ನರಾದ ಕಂದಾವರದವರ ಎಲ್ಲಾ ಪ್ರಸಂಗಗಳು ಯಕ್ಷಗಾನ ಪ್ರಪಂಚದಲ್ಲಿ ಸ್ಥಿರವಾಗಿ ಉಳಿದು, ಪರಂಪರೆಯ ಪ್ರಸಿದ್ಧ ಪ್ರಸಂಗಕರ್ತೃರ ಸರಮಾಲೆಯಲ್ಲಿ ಇವರ ಹೆಸರು ಪೋಣಿಸಲ್ಪಟ್ಟು ಇವರ ಕವಿತಾ ಸಾಮರ್ಥ್ಯ ಕುಂಠಿತಗೊಳ್ಳದೆ ಹಳೆಯದನ್ನು ಮರೆಯದೆ ಹೊಸದನ್ನು ಸೃಷ್ಠಿಸಿ ಕಲಾವಿದರನ್ನು, ಕಲಾಪ್ರೇಮಿಗಳನ್ನು ರಂಜಿಸುವಂತಾಗಲೆಂದು ಹಾರೈಸುತ್ತಾ, ಕಲಾಮಾತೆಯನ್ನು ಪ್ರಾರ್ಥಿಸುತ್ತಾ ವಿರಮಿಸುತ್ತೇನೆ.

ನನ್ನ ಮೆಚ್ಚಿನ ಕವಿ ಕಂದಾವರದವರು

ಆರ್ಗೋಡು ಮೋಹನದಾಸ ಶೆಣೈ
ಪ್ರಸಿದ್ಧ ಯಕ್ಷಗಾನ ಕಲಾವಿದರು

ಸರಳ, ಸಜ್ಜನ, ಸಾತ್ವಿಕರಾದ ಕಂದಾವರದ ಮಾಸ್ತರರು ಯಕ್ಷಗಾನ ಕಲಾವಿದರ ಹೃದಯಕ್ಕೆ ಹತ್ತಿರವಾದವರು. ಸ್ವತಃ ಕಲಾವಿದರಾದ ಅವರಿಗೆ ಇತರ ಕಲಾವಿದರ ನೋವು, ನಲಿವುಗಳ ಅರಿವಿದೆ. ತಮ್ಮ ಪ್ರಸಂಗಗಳ ತರಬೇತಿ ಕಾಲದಲ್ಲಾಗಲೀ ಪ್ರದರ್ಶನ ಸಮಯದಲ್ಲಾಗಲೀ ಕಲಾವಿದನ ಮೇಲೆ ಯಾವುದೇ ಒತ್ತಡ ಹೇರದೆ, ಕೊಡಬೇಕಾದ ಸೂಚನೆ ಮಾತ್ರ ಕೊಟ್ಟು ಉಳಿದಂತೆ ಅವರ ಸಂಪೂರ್ಣ ಸ್ವಾತಂತ್ರ್ಯಕ್ಕೆ ಅನುವು ಮಾಡಿಕೊಡುತ್ತಾರೆ. ಹೀಗಾಗಿ ಇವರ ಪ್ರಸಂಗಗಳಲ್ಲಿ ಭಾಗವಹಿಸಲು ಅಭಿನಯಿಸಲು ಕಲಾವಿದನಿಗೆ ಯಾವುದೇ ಅಡೆತಡೆಯಿಲ್ಲದೆ ನಿರಾಳವಾಗಿ ಭಾಗವಹಿಸುವಂತಾಗುತ್ತದೆ. ಮೇಲಾಗಿ ಇವರ ಪ್ರಸಂಗಗಳು ನೇರವಾದ ಕಥೆ, ಸರಳ ಶಬ್ದ, ಸಾಹಿತ್ಯಪೂರ್ಣವಾದ ಪದ್ಯಗಳಿಂದ ಕೂಡಿದ್ದು ಕಲಾವಿದನಿಗೆ ಸುಲಭವಾಗಿ ಅರ್ಥವಿಸಲು ಸಾಧ್ಯವಾಗುವಂತಹದು. ಈ ಎಲ್ಲಾ ಗುಣಲಕ್ಷಣಗಳಿಂದಾಗಿ ಇವರ ಪ್ರಸಂಗಗಳು ಹಾಡುವವರಿಗೆ, ಆಡುವವರಿಗೆ, ನೋಡುವವರಿಗೆ ಹಿತದಾಯಕವಾಗಿ ಯಶಸ್ವಿ ಪ್ರಸಂಗಗಳೆನಿಸಿವೆ.

ಕಂದಾವರದವರ ಪ್ರಸಂಗಗಳು ವೈವಿಧ್ಯಮಯವಾಗಿವೆ. ಶ್ರೀಯುತರು ಪೌರಾಣಿಕ, ಜಾನಪದ, ಕಾಲ್ಪನಿಕ, ಐತಿಹಾಸಿಕ ಪ್ರಸಂಗಗಳನ್ನು ರಚಿಸಿದ್ದಾರೆ. ಮೇಲಾಗಿ ಕೆಲವು ಕ್ಷೇತ್ರ ಮಹಾತ್ಮೆಗಳು ಇವರಿಂದ ರಚಿಸಲ್ಪಟ್ಟಿವೆ. ಅಲ್ಲದೆ ಆಕಾಶವಾಣಿಗೆ, ವಿಡಿಯೋ ಮುದ್ರಣಕ್ಕೆ, ಕಾಲಮಿತಿಗೆ ಅನುಕೂಲವಾದ ಕಿರುಕಥಾನಕದ ಪ್ರಸಂಗಗಳನ್ನು ರಚಿಸಿದ್ದಾರೆ. ಪ್ರತಿಯೊಂದು ಪ್ರಸಂಗವೂ ಅವುಗಳ ವ್ಯಾಪ್ತಿಗೆ ಅನುಕೂಲಕರವಾಗಿದ್ದು, ಗುಣಮಟ್ಟವನ್ನು ಕಾಯ್ದುಕೊಂಡಿವೆ. ಶ್ರೀಯುತರು ನಾಟಕದಲ್ಲಿ ಹಾಸ್ಯನಟರಾದರೂ

ಪ್ರಸಂಗಗಳಲ್ಲಿ ಹಾಸ್ಯಕ್ಕೆ ಹೆಚ್ಚು ಒತ್ತುಕೊಟ್ಟವರಲ್ಲ. ಕಥೆಗೆ ಪೂರಕವಾಗಿ ಹಿತಮಿತವಾಗಿ ಹಾಸ್ಯ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಆಶ್ಲೀಲ, ಅಭಾಸಗಳಿಗೆ ಎಲ್ಲಿಯೂ ಎಡೆಯಿರದಂತೆ ನೋಡಿಕೊಂಡಿದ್ದಾರೆ. ಯಕ್ಷಗಾನಕ್ಕೆ ಒಪ್ಪುವಂತೆ ವೀರ, ಕರುಣ, ಶೃಂಗಾರ ಸನ್ನಿವೇಶಗಳಿಗೆ ಹೆಚ್ಚಾಗಿ ಒತ್ತುಕೊಟ್ಟಿದ್ದಾರೆ. ಉತ್ತಮ ಕಲಾವಿದನಿಗೆ ತನ್ನ ಅಭಿನಯವನ್ನೂ ಅರ್ಥಗಾರಿಕೆಯನ್ನೂ ತೋರ್ಪಡಿಸಲು ಇವರ ಪ್ರಸಂಗಗಳಲ್ಲಿ ಸಾಕಷ್ಟು ಅವಕಾಶಗಳಿವೆ.

ಕಂದಾವರದವರ ಬಹುತೇಕ ಪ್ರಸಂಗಗಳಲ್ಲಿ ನಾನು ಅಭಿನಯಿಸಿದವನು. ಪ್ರತಿಯೊಂದು ಪಾತ್ರದಲ್ಲೂ ಯಶಸ್ಸನ್ನೂ ಕಂಡಿದ್ದೇನೆ. ಪಾತ್ರದಲ್ಲಿ ತಲ್ಲೀನನಾಗಿ ಸುಖವನ್ನು ಅನುಭವಿಸಿದ್ದೇನೆ. ಸೀತಾ ಪಾರಮ್ಯದ ರಾಮ, ಲಕ್ಷ್ಮಣ ಎರಡೂ ಪಾತ್ರಗಳೂ ನನಗೆ ತುಂಬಾ ಹೆಸರು ತಂದುಕೊಟ್ಟಿವೆ. ಸೀತೆಯ ಅಗ್ನಿ ಪ್ರವೇಶ ಪ್ರಕರಣದಲ್ಲಿ ರಾಮನ ಕೋಪಾವೇಶ, ಆಕೆಯ ಪರಿತ್ಯಾಗದ ಸನ್ನಿವೇಶದ ಲಕ್ಷ್ಮಣನ ಭಾವವೇಶ ಸಂದರ್ಭದಲ್ಲಿ ನನ್ನನ್ನು ನಾನು ಮರೆತು ಅಭಿನಯಿಸುವಂತಾಗಿದೆ. ಉತ್ತರ ಕನ್ನಡದ ಪ್ರೇಕ್ಷಕರಿಗೆ ನನ್ನ ನಟನಾ ಸಾಮರ್ಥ್ಯವನ್ನು ತೋರಿಸಿಕೊಟ್ಟಿದೆ. ವಧು-ಮಾಧವಿ ಪ್ರಸಂಗದಲ್ಲಿ ಗುರುದಕ್ಷಿಣೆಗಾಗಿ ಮಾಧವಿಯನ್ನು ಶೋಷಣೆಗೆ ಒಳಪಡಿಸುವ ಗಾಲವನ ನನ್ನ ಅಭಿನಯಕ್ಕೆ ಪ್ರೇಕ್ಷಕರು ಕೋಪಗೊಂಡು ಬೈದದ್ದೂ ಇದೆ. ಶೂದ್ರ ತಪಸ್ವಿನಿಯ ಉತ್ತರಾರ್ಧದಲ್ಲಿ ನನ್ನ ಹಾಗೂ ನಗರದವರ ಅರುಣ ಮತ್ತು ಉದಯ ಪ್ರೇಕ್ಷಕರಲ್ಲಿ ತುಂಬಾ ಪರಿಣಾಮ ಬೀರಿದ ಪಾತ್ರಗಳು. ಕೊನೆಯಲ್ಲಿ ಅವರಿಬ್ಬರ ಮನಕರಗುವ ಮಾತುಗಳು ಪ್ರೇಕ್ಷಕರ ಕಣ್ಣುಗಳಲ್ಲಿ ನೀರು ತರಿಸುವಂತಹದು. ಅಂತೆಯೇ ಚೆಲುವೆ ಚಿತ್ರಾವತಿಯ ಸ್ವಾಮಿನಿಷ್ಠ ಸಚಿವ ಧರ್ಮನಿಧಿಯ ಪಾತ್ರವೂ ಕೂಡಾ ನನ್ನ ಮೆಚ್ಚಿನ ಪಾತ್ರವಾಗಿದೆ. ನನ್ನನ್ನು ಉತ್ತಮ ಕಲಾವಿದನನ್ನಾಗಿ ರೂಪಿಸುವಲ್ಲಿ ಕಂದಾವರದವರ ಪ್ರಸಂಗಗಳು ಪ್ರಮುಖ ಪಾತ್ರವಹಿಸುತ್ತವೆ. ಹೀಗಾಗಿ ನನಗೆ ಅವರು ನೆಚ್ಚಿನ, ಮೆಚ್ಚಿನ ಕವಿಗಳಾಗಿದ್ದಾರೆ.

ನನ್ನ ಊರಾದ ಆರ್ಗೋಡಿಗೂ ಕಂದಾವರದವರಿಗೂ ನಿಕಟ ಸಂಬಂಧವಿದೆ. ನನ್ನ ತಂದೆಯವರಾದ ಗೋವಿಂದ್ರಾಯ ಶೆಣೈಯವರು ಇವರ ತಾಳಮದ್ದಳೆ ಕೂಟದ ನೆಚ್ಚಿನ ಭಾಗವತರು. ಅವರ ಬಗ್ಗೆ ಕಂದಾವರದವರಿಗೆ ತುಂಬಾ ಗೌರವ. ಅಂತೆಯೇ ಕಂದಾವರದವರ ಬಗ್ಗೆ ನಮ್ಮ ತಂದೆಯವರಿಗೂ ಅತೀವ ಅಭಿಮಾನ.

ನಮ್ಮಲ್ಲಿ ವರ್ಷಂಪ್ರತಿ ಜರಗುವ ಚೌತಿ ತಾಳಮದ್ದಳೆಗೆ ಸಾಧಾರಣ 40 ವರ್ಷಗಳಿಂದ ಬಂದು ಭಾಗವಹಿಸುತಿದ್ದಾರೆ. ಸ್ವಾಭಿಮಾನಿಗಳಾದ ಕಂದಾವರದವರ ಬಾಳುವೆ ಆರೋಗ್ಯಕರವಾಗಿ ನೂರು ಕಾಲ ಕಳೆಯುವಂತಾಗಲೆಂದು ಅವರ ಆರಾಧ್ಯ ದೇವನಾದ ಶ್ರೀ ವೇಣುಗೋಪಾಲನಲ್ಲಿ ಬೇಡಿಕೊಳ್ಳುತ್ತೇನೆ.

ಕಂದಾವರದವರಿಗೆ ಕವಿತಾ ಕಾಣಿಕೆ

ಕಂದಾವರ ರಘುರಾಮ ಶೆಟ್ಟರನು
ಚೆಂದದಿ ಹೊಗಳಲು ಬೇಕಣ್ಣಾ
ಅಂದದ ಕವಿಗಳು, ಇವರಣ್ಣಾ
ಸುಂದರ ಕೃತಿ ನೀಡಿಹರಣ್ಣಾ ॥೧॥
ಸತಿ ಸೀಮಂತಿನಿ ಸೀತಾ ಪಾರಮ್ಯವು
ರತಿರೇಖಾ ಬನಶಂಕರಿಯು
ಅತಿಶಯ ವಧುಮಾಧವಿ ವಸುವರಾಂಗಿ
ಕಥೆಗಳಲ್ಲಿ ಮುದವಿಹುದಣ್ಣಾ ॥೨॥
ನಾಗನಂದನೆ ತ್ಯಾಗ ತಪಸ್ವಿ ಸ
ರಾಗದಿ ಆಡುವ ಕಥೆಯಣ್ಣಾ
ತ್ಯಾಗಶೀಲೆ ಚಿತ್ರಾವತಿ ಶಾಪಸಂ
ಯೋಗ ಶೂದ್ರ ತಪಸ್ವಿನಿಯಣ್ಣಾ ॥೩॥

ಕಂದಾವರದ ಕೆಂದಾವರೆ

ಇಟಗಿ ಮಹಾಬಲೇಶ್ವರ ಭಟ್
ಯಕ್ಷಗಾನ ಕಲಾವಿದರು, ಇಟಗಿ

ಅಂದೊಂದು ದಿನ ಮಾರಣಕಟ್ಟೆ ಮೇಳದ ಆಟ ನಡೆಯುತಿತ್ತು. 12 ಗಂಟೆ ಸುಮಾರಿಗೆ ಬಿಳಿಪಂಚೆ, ಅಂಗಿ ತೊಟ್ಟ ಹಿರಿಯರೊಬ್ಬರು ಚೌಕಿಗೆ ಬಂದರು. ಪರಿಚಿತ ಕಲಾವಿದರೆಲ್ಲರೂ ಅವರನ್ನು ಗೌರವ ಪೂರ್ವಕವಾಗಿ ಆದರಿಸಿದರು. ಪಕ್ಕದಲ್ಲಿದ್ದ ಸ್ನೇಹಿತರಲ್ಲಿ ವಿಚಾರಿಸಿದಾಗ ತಿಳಿಯಿತು. ಇವರೆ ಕಂದಾವರ ರಘುಮಾಸ್ತ್ರ ಎಂದು. ಚಂಗನೆ ಎದ್ದ ನಾನು ಆಗಷ್ಟೆ ಬರೆದು 4–6 ಪ್ರಯೋಗ ಕಂಡ ನನ್ನ 'ಅಶ್ವಿನಿ ವಿಜಯ'ವನ್ನು ಶ್ರೀ ಕಂದಾವರದವರ ಎದುರು ಹಿಡಿದೆ. ಗಣಪತಿ ಪೆಟ್ಟಿಗೆ ಬಳಿ ಕುಳಿತು ಇಡೀ ಪ್ರಸಂಗವನ್ನು ಆಗಲೆ ಓದಿದರು. ನನಗೋ ಕುತೂಹಲ. ಏನು ಹೇಳ್ತಾರೋ ಎಂಬ ಚಿಕ್ಕ ಆತಂಕ. ಆದರೆ ಅವರು ಪ್ರೀತಿಯಿಂದ ಹೇಳಿದ್ದು ನನಗಿಂದೂ ಕಿವಿಯಲ್ಲಿದೆ. 'ಭಟ್ರೆ, ಸಾಹಿತ್ಯ ಲಾಯಕ್ ಇತ್, ಛಂದಸ್ಸು ಸರಿ ಇಲ್ಲೆ, ಮಳೆಗಾಲದಲ್ಲಿ ಒಂದು ಸಾರಿ ನಮ್ಮಲ್ಲಿಗೆ ಬನ್ನಿ, ನಾನು ಹೇಳಿಕೊಡ್ತೆ ಆಗದsss'

ನನ್ನ ಪ್ರಸಂಗ ಬರೀಬೇಕು ಎಂಬ ತುಡಿತವನ್ನು ಹುಟ್ಟು ಹಾಕಿದವರು ಪುತ್ತೂರಿನಲ್ಲಿದ್ದ ಶ್ರೀ ಬೆಣ್ಣೆಮನೆ ಗೋಪಾಲಕೃಷ್ಣ ಭಟ್ ಎಂಬ ಮಹನೀಯರು. ಹತ್ತಾರು ಪ್ರಸಂಗಗಳನ್ನು ಬರೆದು ತಾಳ ಮದ್ದಲೆ ಅರ್ಥದಲ್ಲಿ ಪರಿಣಿತರಾಗಿದ್ದ ಅವರ ಜತೆಗಿನ ಎರಡು ವರ್ಷಗಳ ಒಡನಾಟ ನನ್ನ ಯಕ್ಷಗಾನ ಬದುಕಿನ ತಾಯಿಬೇರು. ಅವರ ಜತೆಗಿನ ಚರ್ಚೆ-ಮಾತುಗಳ ಪರಿಣಾಮವಾಗಿ ತೆಂಕು-ಬಡಗು ಯಕ್ಷನಾಟ್ಯವನ್ನು ಕಲಿತು, ನಾನು ಯಕ್ಷಗಾನ ಜೀವಿಯಂತಾದದ್ದು. ಪ್ರಸಂಗ ಬರೆಯಬೇಕೆಂಬ ಅಭಿಲಾಷೆ ಆಗಲೇ ಹುಟ್ಟಿತ್ತು. ಕಾಲಾಂತರದಲ್ಲಿ ಡಾ॥ ಸಿ.ಎಸ್. ಸೋಮಯಾಜಿ ಎಂಬ ಆಯುರ್ವೇದ ಪರಿಣಿತರು ಋಗ್ವೇದದ ಅಶ್ವಿನಿ ಸೂಕ್ತದ

ಕತೆಯನ್ನು ಕೊಟ್ಟು ಯಕ್ಷಗಾನ ಪ್ರಸಂಗ ಬರೆಯಬೇಕೆಂದು ಪ್ರೇರೇಪಿಸಿದರು. ನಾನು ಬರೆದೆ. ಮಾರಣಕಟ್ಟೆ ಮೇಳದಲ್ಲಿ ಪ್ರಯೋಗಗಳನ್ನೂ ಕಂಡಿತು.

ಕಂದಾವರರ ಆಹ್ವಾನದಂತೆ ಮಳೆಗಾಲದಲ್ಲಿ ನೂಜಾಡಿಯ ಅವರ ಮನೆಗೆ ತೆರಳಿದೆ. ಛಂದಸ್ಸು-ಮಾತ್ರೆ ಮೊದಲಾದ ಮೂಲ-ಭೂತ ಅಂಶಗಳೇ ನನಗೆ ಗೊತ್ತಿಲ್ಲವೆಂದು ಆಗ ಗೊತ್ತಾಯಿತು. 2-3 ದಿನ ಅವರಲ್ಲಿಯೆ ಇದ್ದು ಯಕ್ಷಗಾನ ಛಂದಸ್ಸಿನ ಮೂಲ ಪಾಠಗಳನ್ನು ಹೇಳಿಸಿಕೊಂಡೆ. ಹೀಗೆ ಎರಡು ಮಳೆಗಾಲ ಕಳೆಯುವಷ್ಟರಲ್ಲಿ ನಾನೂ ಒಬ್ಬ ಪ್ರಸಂಗಕರ್ತೃನಾಗಿ ರೂಪುಗೊಳ್ಳಲು ಸಾಧ್ಯವಾಯಿತು. ಸೊನ್ನೆಯಾದ ನಾನು ಸನ್ನೆಯಾದದ್ದು ಶ್ರೀ ಕಂದಾವರದವರ ಉಪದೇಶದಿಂದ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ಪ್ರೊ. ಎಂ.ಎ. ಹೆಗಡೆ ಸಿದ್ಧಾಪುರ ಹಾಗೂ ಡಾ| ವಸಂತ ಭಾರದ್ವಾಜ ಇವರೊಂದಿಗಿನ ಚರ್ಚೆಯು ನನ್ನನ್ನು ಶ್ರೀಮಂತಗೊಳಿಸಿತು.

ರಘು ಮಾಸ್ತರಲ್ಲಿ ನಾನು ಕಂಡಿದ್ದು ಪ್ರೀತಿ ಹಾಗೂ ವಾತ್ಸಲ್ಯ. ಒಬ್ಬ ಒಳ್ಳೆಯ ಸಾಹಿತಿಯೋ, ಕಲಾವಿದನೋ ಆಗದಿದ್ದರೆ ಯಾವ ಊರೂ ಹಾಳಾಗುವುದಿಲ್ಲ. ಒಳ್ಳೆಯ ಮನುಷ್ಯನಾಗದಿದ್ದರೆ ಮಾತ್ರ ಊರಿಗೇನು, ಎಲ್ಲರಿಗೂ ನಷ್ಟ. ಒಳ್ಳೆಯ ಮನುಷ್ಯ ಹಾಗೂ ಒಳ್ಳೆಯ ಯಕ್ಷಗಾನ ಸಾಹಿತಿ ಶ್ರೀ ಕಂದಾವರದವರು ಹಾಗಾಗಿಯೇ ಅಭಿನಂದನೀಯರು. ಎಲ್ಲರನ್ನೂ ಪ್ರೀತಿಯಿಂದ ಮಾತನಾಡಿಸುವ ಅವರ ಗುಣ ಅತ್ಯಂತ ಪ್ರಶಂಸನೀಯವಾಗಿದೆ. ಅವರ ಪ್ರೀತಿಯನ್ನು ಹತ್ತಿರದಿಂದ ಕಂಡುಂಡವನು ನಾನು. ತಾಳ ಮದ್ದಳೆಯ ಅರ್ಥ, ಯಕ್ಷಗಾನ ಪ್ರಸಂಗ ರಚನೆ, ನಾಟಕ ಹೀಗೆ ಹಲವು ಸಾಂಸ್ಕೃತಿಕ ಆಯಾಮಗಳಲ್ಲಿ ಸಾರ್ಥಕವಾಗಿ ತೊಡಗಿಸಿಕೊಂಡು, ಒಂದು ಧೀಮಂತ ವ್ಯಕ್ತಿತ್ವವನ್ನು ರೂಪಿಸಿಕೊಂಡವರು ಶ್ರೀ ಕಂದಾವರದವರು. ಇವರ ಸುಲಲಿತವಾದ ಪದ್ಯ ರಚನಾ ಕ್ರಮ ಆಕರ್ಷಣೀಯವಾದುದು. ರಂಗವನ್ನು ಕಣ್ಣ ಮುಂದಿಟ್ಟುಕೊಂಡು ಪದ್ಯ ರಚಿಸಬೇಕಾದ ಅನಿವಾರ್ಯತೆ ಪ್ರಸಂಗ ಕರ್ತೃನಿಗಿದೆ. ಕ್ಲಿಷ್ಟವಲ್ಲದ ಸರಳ ಶಬ್ಧಗಳು ಇದರ ಜೀವಾಳ, ಹಾಗೆಂದು ಜಾಳಾಗಿಸುವಂತಿಲ್ಲ. ಇವೆರಡರ ಮಧ್ಯೆ ಸಾಗಬೇಕು.ಇಂತಹ ನೈಪುಣ್ಯತೆಯು ಇವರಿಗೆ ಸಿದ್ಧಿಸಿದೆ. ಚೆಲುವೆ ಚಿತ್ರಾವತಿಯ 'ಭಳಿರೆ ಶಾಭಾಸು ದೂತ.........' ಶ್ರೀದೇವಿ ಬನಶಂಕರಿಯಲ್ಲಿ ಬಳಕೆ ಯಲ್ಲಿರುವ ಅತ್ಯಂತ ಜನಪ್ರಿಯ ಪದ್ಯ, ವಸುವರಾಂಗಿ, ಸತಿಸೀಮಂತಿನಿ, ಸೀತಾಪಾರಮ್ಯ ಮೊದಲಾದ ಇವರ ಪ್ರಸಂಗಗಳು ಯಕ್ಷರಂಗವನ್ನು ಶ್ರೀಮಂತ ಗೊಳಿಸಿವೆ.

ಶಿಕ್ಷಕನಾದವನು ಆದರ್ಶದ ವ್ಯಕ್ತಿತ್ವವುಳ್ಳವನಾಗಿರಬೇಕೆಂದು ಸಮಾಜ ನಿರೀಕ್ಷೆ ಮಾಡುತ್ತದೆ. ಅದಕ್ಕೆ ತಕ್ಕವರು ಶ್ರೀ ಕಂದಾವರ ರಘು ಮಾಸ್ಟ್ರು. ಶಿಸ್ತಿನ ಮನುಷ್ಯ, ನಿಸ್ಸಂದೇಹವಾಗಿ ಉಳಿದವರಿಗೆ ಅನುಕರಣೀಯರು. ಇಂತಹ ಧೀಮಂತ ಗುಣಾನ್ವಿತರನ್ನು ಅಭಿನಂದಿಸುವುದು ಸಮಾಜದ ಕರ್ತವ್ಯ ಹಾಗೂ ಸೌಭಾಗ್ಯ. ಇವರಿಗೆ ಶ್ರೀ ದೇವರು ಆಯುಷ್ಯ ಆರೋಗ್ಯ ಐಶ್ವರ್ಯಗಳನ್ನು ದಯ ಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ಅಭಿನಂದನೆ (ಪರಿವರ್ಧಿನಿ)

ಕಂದಾವರದೀ ಕೆಂದಾವರೆಯೂ। ಬಂಧುರವೆನಿಪ ಸ್ವಭಾವದೊಳರಳಿದೆ।
ಸುಂದರ ಸೌಜನ್ಯದೆ ವ್ಯಕ್ತಿತ್ವವು ಕಂಗೊಳಿಸುತಲೆಸೆಯೆ॥
ಇಂದಿರೆಯಾಣ್ಮನು ಸಕಲೈಶ್ವರ್ಯವ। ಕುಂದದ ಸುಖವಂ ನೀಡುತ ಪೊರೆಯಲಿ।
ಇಂದಿವರನ್ನಭಿನಂದಿಸೆ ಮಹದಾನಂದವನನುಭವಿಸೆ ॥೧॥

ಕುಟುಂಬ ಮಿತ್ರರು

ಎನ್. ಶಂಕರ ಪೈ
ಜ್ಯೋತಿಷಿ, ನೇರಳಕಟ್ಟೆ

ಕಂದಾವರ ರಘುರಾಮ ಶೆಟ್ಟರು ಅಹಂ, ದರ್ಪಗಳಿಲ್ಲದ ನಿಗರ್ವಿ, ಸಜ್ಜನ, ಕಲಾತಪಸ್ವಿ, ಕಲಾವಿದರ ಬಗೆಗೆ ಅದರಲ್ಲೂ ಯಕ್ಷಗಾನ ಕಲಾವಿದರ ಬಗ್ಗೆ ತುಂಬು ಗೌರವ ಹಿರಿಯ ಕಿರಿಯನೆಂಬ ಭೇದವಿಲ್ಲ; ಪ್ರಸಿದ್ಧ ಸಾಮಾನ್ಯ ಎಂಬ ತಾರತಮ್ಯವಿಲ್ಲ. ಎಲ್ಲರನ್ನೂ ಸಮಭಾವದಿಂದ ಕಾಣುವ ಇವರ ಮನಸ್ಸು ಇವರು ಧರಿಸುವ ಶ್ವೇತವಸನದಂತೆ ಶುಭ್ರ; ಸ್ವಚ್ಛ, ಅದರಲ್ಲೂ ಅಶಕ್ತ ಕಲಾವಿದರ ಬಗ್ಗೆ ಇವರಿಗೆ ತುಂಬ ಕಾಳಜಿ. ಆರ್ಥಿಕವಾಗಿ ಇವರೇನು ಅಷ್ಟೊಂದು ಸಬಲರಾಗಿಲ್ಲವಾದರೂ ಅಶಕ್ತರಿಗೆ ತನ್ನಿಂದಾದ ಸಹಾಯ ಹಸ್ತ ನೀಡುವವರು ಅವರಿಂದ ಉಪಕೃತರಾದ ಕಲಾವಿದರು ನನ್ನೊಡನೆ ಈ ವಿಚಾರ ತಿಳಿಸಿದ್ದಿದೆ.

ಶ್ರೀಯುತರು ಈಗಿನ ಸಮರ್ಥ ಪ್ರಸಂಗಕರ್ತರಲ್ಲಿ ಓರ್ವರು. ಅವರ ಎಲ್ಲಾ ಪ್ರಸಂಗಗಳು ರಂಗದಲ್ಲಿ ಯಶಸ್ವಿಯಾಗಿವೆ. ಸರಳ ಶಬ್ಧಗಳಿಂದ, ಛಂದೋಬದ್ಧವಾಗಿ ಇವರು ರಚಿಸಿ ಪದ್ಯಗಳು ಹಾಡಲು ತುಂಬಾ ಸುಲಭ; ಸುಖದಾಯಕ. ಕವಿ ಮುದ್ದಣನಂತೆ ಇವರು ಪ್ರಾಸಪ್ರಿಯರು; ಅಲಂಕಾರಪ್ರಿಯರು ಇದಕ್ಕೆ ಇವರ ಚಿತ್ರಾವತಿ ಪ್ರಸಂಗದ ಪದ್ಯಗಳನ್ನು ಉದಾಹರಿಸಬಹುದು. ಈ ಪ್ರಸಂಗದ ಆಟ ಆಡಿಸಿದ ಅನುಭವದಿಂದ ನಾನು ಈ ಮಾತನ್ನು ಹೇಳುತಿದ್ದೇನೆ.

ಉದಾ: **ಚಿತ್ರಧ್ವಜನ ಕುವರಿ ಚಿತ್ರಾವತಿಯು ಷೋಡಶಿ।**

ಸುತ್ತವೆಲ್ಲಾ ಖ್ಯಾತಿ ಪಡೆದ ಜಾಣೆ ರೂಪಸಿ ॥ ಇತ್ಯಾದಿ.

ಮುದ್ದಣನ ಪ್ರಸಂಗಗಳಿಂದ ಪ್ರೇರಿತರಾದ ಇವರು ಆತನಂತೆ ಸೊಗಸಾದ ಪದ್ಯಗಳನ್ನು ರಚಿಸಿದ್ದಾರೆ. ಆತನಂತೆ ಇವರು ಕೂಡಾ ಅಧ್ಯಾಪಕರು. ಸೂಡಾದಲ್ಲಿ ಜರಗಿದ ಯಕ್ಷ ಕವಿ ಸಮ್ಮೇಳದಲ್ಲಿ ಕವಿ ಮುದ್ದಣ ಪ್ರಶಸ್ತಿಯನ್ನು ಇವರಿಗಿತ್ತು ಸನ್ಮಾನಿಸಿದ್ದಾರೆ.

ಈ ಎಲ್ಲಾ ಕಾರಣಗಳಿಂದ ಇವರನ್ನು "ಅಭಿನವ ಮುದ್ದಣ"ನೆಂದು ಕರೆದರೆ ಸೂಕ್ತವಾದೀತೆಂಬುದು ನನ್ನ ಅಭಿಪ್ರಾಯ.

ಇವರನ್ನು ದೂರದೂರಿನ ಅಭಿಮಾನಿಗಳು ಕೂಡಾ ಕರೆದು ಸನ್ಮಾನಿಸಿದ್ದಾರೆ. ಪ್ರತಿಷ್ಠಿತ ಸಂಘ-ಸಂಸ್ಥೆಗಳು ಪ್ರಶಸ್ತಿಯನ್ನಿತ್ತು ಗೌರವಿಸಿವೆ. ಆದರೆ ಯಕ್ಷಗಾನ ಅಕಾಡೆಮಿಯವರಾಗಲೀ, ನಮ್ಮ ಘನ ಸರಕಾರವಾಗಲೀ, ಇದುವರೆಗೆ ಇವರ ಕಡೆಗೆ ಗಮನ ಹರಿಸಿಲ್ಲ. ಹಾಗೆಂದು ಅವರನ್ನು ಕಾಡಿಬೇಡಿ ಪ್ರಶಸ್ತಿ ಪಡೆಯುವ ಜಾಯಮಾನ ಇವರದ್ದಲ್ಲ. ಅಭಿಮಾನಿಗಳ ಪ್ರೀತಿ, ಗೌರವವೇ ತನಗೆ ದೊಡ್ಡ ಪ್ರಶಸ್ತಿ ಎಂದು ತಿಳಿಯುವವರು ಅವರು. ಅವರಿಗೇನಾದರೂ ಅಂತಹ ಪ್ರಶಸ್ತಿ ದೊರಕಿತಾದರೆ ಆ ಪ್ರಶಸ್ತಿಯ ಬೆಲೆ ಹೆಚ್ಚಿದಂತೆಯೇ ಸರಿ.

ಕಂದಾವರದವರು ನನ್ನ ಬಾಲ್ಯದಿಂದಲೂ ನನಗೆ ಪರಿಚಿತರು. ನನ್ನ ತಂದೆ ಅಚ್ಚುತ ಪೈಯವರ ಆತ್ಮೀಯ ಗೆಳೆಯರು. ಒಡನಾಡಿಗಳು ಕೂಡಾ. ನಮ್ಮ ಮನೆಯಲ್ಲಿ ಆಗುತಿದ್ದ ಆಟ, ತಾಳಮದ್ದಳೆಗಳಿಗೆ ತಪ್ಪದೆ ಬಂದು ಭಾಗವಹಿಸುತಿದ್ದರು. ಹೆಚ್ಚಾಗಿ ಆಟಕ್ಕೆ ಇವರದೇ ಉಸ್ತುವಾರಿ. ತಾಳ ಮದ್ದಳೆಯಲ್ಲಿ ಪ್ರಧಾನ ಅರ್ಥಧಾರಿಯಾಗಿ ಭಾಗವಹಿಸಿ, ಸಹ ಕಲಾವಿದರನ್ನು ಕಡೆಗಣಿಸದೆ, ಸಹಕರಿಸಿ ಅರ್ಥ ಹೇಳುವ ಇವರ ರೀತಿ ಇತರರಿಗೆ ಮಾದರಿಯಾಗಿದೆ. ನಮ್ಮಲ್ಲಿ ನಡೆಯುವ ಯಾವತ್ತೂ ಶುಭ ಸಮಾರಂಭಗಳಿಗೆ ಮುಂದಾಗಿ ಬಂದು ನಮ್ಮೊಂದಿಗೆ ಸಂಭ್ರಮಿಸುವ ದೊಡ್ಡಗುಣ ಇವರದು. ಯಾವುದೇ ಕಾರ್ಯನಿಮಿತ್ತ ಕರ್ಕುಂಜೆಗೆ ಬಂದರಾದರೆ ತಪ್ಪದೆ ನಮ್ಮಲ್ಲಿಗೆ ಬಂದು ಕ್ಷೇಮ ಸಮಾಚಾರ ತಿಳಿದು ಹೋಗುವ ಪದ್ಧತಿ ಇವರದು. ಹೀಗಾಗಿ ಇವರನ್ನು ನಾವು ನಮ್ಮ ಕುಟುಂಬ ಮಿತ್ರರೆಂದೇ ಪರಿಭಾವಿಸುತ್ತೇವೆ.

ಕಂದಾವರ ರಘುರಾಮ ಶೆಟ್ಟರಿಗೆ ಈಗ ಎಂಬತ್ತರ ಹರೆಯ. ಅವರು ಇನ್ನೂ ಬಹುಕಾಲ ಬಾಳಿ ಯಕ್ಷಗಾನ ಕ್ಷೇತ್ರಕ್ಕೆ ಅನರ್ಘ್ಯ ಕೃತಿಗಳನ್ನು ನೀಡುವಂತಾಗಬೇಕೆಂಬುದು ನನ್ನ ಹಾರೈಕೆ. ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯ ಕರುಣಿಸುವಂತೆ ನಮ್ಮ ಶ್ರೀ ಮಹಾಲಕ್ಷ್ಮೀ ಸತ್ಯನಾಥ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಯಕ್ಷ ಸಾಹಿತ್ಯಸಿರಿ ಸನ್ನಿಧಿ

ಬೇಳೂರು ವಿಷ್ಣುಮೂರ್ತಿ ನಾಯಕ್
ಯಕ್ಷಗಾನ ಪ್ರಸಂಗಕರ್ತರು

ಕುಂದನಾಡಿನ ಯಕ್ಷಲೋಕದಲ್ಲಿ ಯಕ್ಷಗಾನವೆ ವ್ರತವಾಗಿ, ನಿತ್ಯ ಯಕ್ಷೋಪಾಸನೆಗೆ ಛಂದೋಸಮನ್ವಿತ, ಮಕರಂದ ಭರಿತ ಸೌಗಂಧಸೂಸುವ ಸಾಹಿತ್ಯಕ ಕಲಾಕುಸುಮಗಳನ್ನು ಯಕ್ಷಮಾತೆಯ ಪಾದಪಂಕಜಕ್ಕರ್ಪಿಸಿದ ಹಟ್ಟಿಯಂಗಡಿ ರಾಮ ಭಟ್, ಕೊರ್ಗಿ ಸೂರ್ಯನಾರಾಯಣ ಉಪಾಧ್ಯಾಯ, ಧ್ವಜಪುರ ನಾಗಪ್ಪಯ್ಯ, ವಾರಂಬಳ್ಳಿ ವಿಷ್ಣು, ಪಾಂಡೇಶ್ವರ ವೆಂಕಟರೇ ಮುಂತಾದ ಹಿರಿಯ ಯಕ್ಷಕಬ್ಬಿಗರ ತಲೆಮಾರಿನ ಮುಂದುವರಿಕೆಯಲ್ಲಿ ಯಕ್ಷಗಾನ ಬಾನಂಗಳದಲ್ಲಿ ಪ್ರಜ್ವಲಿಸುವ ಪ್ರದೀಪ ತೇಜೋಮಯದಿಂದ ತಾನು ರಚಿಸಿದ ಅಖ್ಯಾನವನ್ನು ಪ್ರದರ್ಶನಗೈದ ಮೇಳವನ್ನೂ, ತನ್ನ ಸಾಹಿತ್ಯಕ್ಕೆ ಮಧುರ ಕಂಠದಿಂದ ಸ್ವರವನ್ನು ಒದಗಿಸಿ ಮಾಧುರ್ಯಗೊಳಿಸಿದ ಭಾಗವತವನ್ನು ಕೀರ್ತಿಯ ಶಿಬಿರದಲ್ಲಿ ವಿರಾಜಿಸುವಂತೆ ಮಾಡಿದ ಯಕ್ಷ ಸಾಹಿತ್ಯದ ಸರ್ವಾಂಗ ಶ್ರೀಮಂತ, ಧೀಮಂತ ಕವಿ ಕಂದಾವರ ರಘುರಾಮ ಶೆಟ್ಟರು.

ಇಲ್ಲದೆ ಇರುವುದನ್ನು ಇದೆ ಎಂದು ಬಣ್ಣಿಸಿ ಅತಿಶಯವಾಗಿಸುವುದಕ್ಕಿಂತ ಸಮೃದ್ಧವಾದ ಸಹಜತೆಯನ್ನು ವರ್ಣಿಸಿ, ವಾಸ್ತವಿಕತೆಯ ಸವಿಯುಂಡು ಸಂತೋಷದ ಸಂತೃಪ್ತಿಯನ್ನು ಹೊಂದುವುದು ಲೇಸು ಎನ್ನುವ ಹಾಗೆ ನನ್ನ ಹೃತ್ಕಮಲ ಪೀಠದಲ್ಲಿ ಗುರುವಾಗಿ ಸ್ಥಿತರಾಗಿ, ನನ್ನ ಚಿತ್ತಭಿತ್ತಿಯಲ್ಲಿ ಅಚ್ಚೊತ್ತ ಕಲ್ಪನೆಯ ಕಥನಗಳನ್ನು ಸಾಹಿತ್ಯಮಾಲೆಗಳನ್ನಾಗಿ ಪೋಣಿಸುವಾಗ ಪದಪುಂಜಗಳ ಸಾಕ್ಷಾತ್ತಾರಕ್ಕೆ ಈ ಗುರುವಿನ ಸ್ಮರಣೆ ಚೈತ್ರ ಮಾಸದ ಪೌರ್ಣಮಿಯ, ಚಂದ್ರಕಳೆಯ ದಿವ್ಯಕಾಂತಿ, ಗುರು, ಲಘು ಮೊದಲಾದ ಛಂದೋ ವ್ಯಾಕರಣವನ್ನು ಸೊಗಸಾಗಿ ಹೊಂದಿಸಲ್ಪಟ್ಟ, ಸಾಹಿತ್ಯದಿಂದ ಮಾಧುರ್ಯತೆಯು ಹೊಂದುವಂತೆ ಮಾನಸಕ್ಕೆ ಪ್ರೇರಕ ಶಕ್ತಿಯಾಗಿ, ಬದುಕಿಗೆ

ಆದರ್ಶವ್ಯಕ್ತಿಯಾಗಿ, ವಯಸ್ಸು ವಿದ್ವತ್ತುಗಳಲ್ಲಿ ಅಗ್ರಮಾನಿತರಾದವರನ್ನು ಗುರುವೆಂದು ಪೂಜಿಸಿದಾಗ ಸಾಧನೆಯ ಸಂಗ್ರಾಮದಲ್ಲಿ ಸಫಲತೆಯ ವಿಜಯವಧು ಒಲಿದು ಬರುತ್ತಾಳೆ ಎನ್ನುವುದು ನನ್ನ ಮಾನಸ ಗುರುಗಳಾದ ರಘುರಾಮ ಶೆಟ್ಟರ ವಿಚಾರದಲ್ಲಿ ಸತ್ಯವಾಗಿದೆ. ಇವರ ಯಕ್ಷ ಸಾಹಿತ್ಯದ ಪ್ರೇರಣೆಯೇ ನಾನಿಂದು ಪ್ರಸಂಗಕರ್ತನಾಗಿ ರೂಪುಗೊಳ್ಳಲು ಸ್ಫೂರ್ತಿಯ ಸೆಲೆಯಾದುದು.

ಆಹಾ ಎನ್ನುವ ಆಹ್ಲಾದ, ಅಬ್ಬಾ ಎನ್ನುವ ಆಶ್ಚರ್ಯ, ವಿಚಲಿತಗೊಳ್ಳದ ವಿಸ್ಮಯತೆ, ಗುಂಯ್‌ಗುಟ್ಟುವ ಗುಂಗುವತೆಯಲ್ಲಿ ನವರಸಪಾಕದ ಷಡ್ರಸಪೂರ್ಣ ಸವಿರುಚಿ ಭೋಜನದಂತಿರುವ ಇವರ ಯಕ್ಷಗಾನ ಕೃತಿ ಯಕ್ಷಲೋಕದಲ್ಲಿ ಸುಗಂಧ ಸೌರಭ ಬೀರಿತು. ಕಾಣುವ ಜಗತ್ತು ತನ್ನ ಇಚ್ಛೆಗನುಗುಣವಾಗಿ ನಿಯಮಗಳನ್ನು ರೂಪಿಸಿಕೊಂಡಾಗ ಕಾಣುವ ಕಣ್ಣುಗಳು ತನ್ನ ಇಚ್ಛೆಗನುಗುಣವಾಗಿ, ಅದನ್ನು ಅನುಕೂಲಕ್ಕೆ ಬಳಸಿಕೊಳ್ಳುವಂತೆ ಕವಿಯ ಕಲ್ಪನೆಯು ಕಥನವಾಗಿ, ರಂಗದಲ್ಲಿ ಪಾತ್ರವು ಕಲಾವಿದನ ಮುಖೇನ ಜೀವದಳೆದು ಕಾವ್ಯಲೋಕದ ಮರುಸೃಷ್ಠಿಯಾಗಿ ರಸಿಕ ಮಾನಸವನ್ನು ಏಕಾಗ್ರತೆಯ ತೊಟ್ಟಿಲಲ್ಲಿ ತೂಗಿಸಬಲ್ಲುದು ಎನ್ನುವುದು ರಘುರಾಮ ಶೆಟ್ಟರ ಸತಿ ಸೀಮಂತಿನಿ, ವಧು ಮಾಧವಿ, ಚೆಲುವೆ ಚಿತ್ರಾವತಿ, ರತಿರೇಖಾ, ಶೂದ್ರ ತಪಸ್ವಿನಿ, ಶ್ರೀದೇವಿ ಬನಶಂಕರಿ ಮುಂತಾದ ಪ್ರಸಂಗಗಳ ಕಥೆ ಮತ್ತು ಸಾಹಿತ್ಯ ಸೌಂದರ್ಯಗಳನ್ನು ಕಣ್ಮನಗಳಲ್ಲಿ ತುಂಬಿಕೊಂಡ ಯಕ್ಷಪ್ರೇಮಿಯ ಮನದಲ್ಲಿ ಇಂದಿಗೂ ನಿತ್ಯ ಹರಿದ್ವರ್ಣಮಯವಾಗಿರುವುದರಿಂದಲೆ ಯಕ್ಷಗಾನ ಪ್ರಸಂಗ ಜಗತ್ತಿನ ದಿಗ್ಗಜ ಕವಿ "ಮುದ್ದಣ" ಪ್ರಶಸ್ತಿ ಕಂದಾವರದವರ ಮುಡಿಗೇರಿರುವುದು ಅವರ ಸಾಹಿತ್ಯ ಕೃಷಿಯ ಸಾಧನೆಗೆ ಹಿಡಿದ ಕೈಗನ್ನಡಿ.

ತಮ್ಮೊಳಗಿರುವ ಸಂಪನ್ಮೂಲವನ್ನು ಗುರುತಿಸಿಕೊಂಡು ಅದನ್ನು ಸರಿಯಾಗಿ ಬೆಳೆಸಿ ಬಳಸಿಕೊಂಡಾಗ ಬದುಕಿಗೊಂದು ಅರ್ಥ ಸಿಗುವುದರೊಂದಿಗೆ ವ್ಯಕ್ತಿತ್ವವು ಅರಳಿ ಮಾನವ ಬದುಕು ಸಾರ್ಥಕತೆಯನ್ನು ಹೊಂದಿ, ಮಾನವ ಜನ್ಮ ದೊಡ್ಡದು ಎನ್ನುವುದನ್ನು ವಿಶ್ವಮಾನ್ಯಗೊಳಿಸುತ್ತದೆ. ಆ ನಿಟ್ಟಿನಲ್ಲಿ ರಘುರಾಮ ಶೆಟ್ಟರು ವೃತ್ತಿಯಲ್ಲಿ ಅಧ್ಯಾಪಕರಾಗಿ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಗುರು. ಪ್ರವೃತ್ತಿಯಲ್ಲಿ ಪ್ರಖರ ಪಾಂಡಿತ್ಯಪೂರ್ಣ ಪ್ರಸಂಗಕರ್ತರಾಗಿ, ಯಕ್ಷಗಾನದ ಅರ್ಥಧಾರಿಯಾಗಿ, ಸಮಾಜದಲ್ಲಿ ಬಹುಮಾನಿತರಾಗಿ ಆದರ್ಶನೀಯ ವ್ಯಕ್ತಿತ್ವದಿಂದ ನಮ್ಮಂಥಹ ಹಲವಾರು

ಯುವ ಪ್ರಸಂಗಕರ್ತೃರುಗಳ ಉದಯಕ್ಕೆ ಪ್ರೇರಕ ಶಕ್ತಿಯಾಗಿ ಬೆಳೆದು ನಿಂತ ಯಕ್ಷ ಸಾಹಿತ್ಯ ವಸುಂಧರೆಯ ವಿಶಾಲವಾದ ವೃಕ್ಷ. ಈ ವೃಕ್ಷದ ನೆರಳಿನಲ್ಲಿ ಅರಳುತ್ತಿರುವ ನಮ್ಮಂತಹ ಯುವ ಪ್ರತಿಭಾ ಕುಸುಮಗಳ ಬದುಕು ಈ ದಿನ ಪಾವನವಾಗುವ ಪುಣ್ಯಗಳಿಗೆ, ಸಮಾಜದ ಬಹುಮಾನ್ಯರಿಂದ ಮಾನಿತರಾಗುವ ಈ ಶುಭಾವಸರದಲ್ಲಿ ನನ್ನ ಮಾನಸ ಗುರುವಿಗೊಂದು ಅಭಿನಂದನ ಪೂರ್ಣ ಗುರುದಕ್ಷಿಣೆ ಸಲ್ಲಿಸುವ ಸುವರ್ಣಾವಕಾಶ ಲಭಿಸಿರುವುದು ನನ್ನ ಪೂರ್ವ ಜನ್ಮದ ಸುಕೃತ ಫಲವೆಂದು ಭಾವಿಸಿ ಈ ಸಾಹಿತ್ಯ ನಮನದೊಂದಿಗೆ ಸಾಷ್ಟಾಂಗ ಎರಗುತ್ತೇನೆ.

ವಾರ್ಧಿಕ

ಕಡಲಿನಾಳವ ಅಳೆದು ತಿಳಿದ ಮಾನವರುಂಟೇ ಉಡುಗಡಣವನು ನಭದಿ ಎಣಿಸಿ ಕೊಂಡವರುಂಟೆ । ಕಡಲಂತೆ ಪಾರವಿಲ್ಲದ ತಮ್ಮ ಕವಿತತ್ವ ಸಾಹಿತ್ಯ ಸೌರಭವು॥
ಪೊಡವಿರಂಗದಿ ನಿತ್ಯ ರಸಿಕಜನನಿಕರವನು। ಬಿಡದೆ ರಂಜಿಸುತಿರಲಿ
ಮೃಡನೊಲುಮೆಯಲಿ ತಮಗೆ ದೃಢವಾದ ಕೀರ್ತಿ ಸಂಪದ ದೊರೆತು ಶಾಂತಿ ಸಮೃದ್ಧಿ ಸ್ಥಿರವಾಗಿ ನಿಲಲಿ ॥೧॥

ಕೇದಾರ ಗೌಳ ಅಷ್ಟ

ಗುರುವೆ ನಿಮ್ಮಯ ಕೃತಿ ಓದಿ ಮೈಮರೆತೆನು। ಸುರಸ ಸುಂದರಪದಕೆ॥ ಬರೆದೆನ್ನ ಕವಿತೆಗೆ ಪ್ರೇರಕವಾಗಿದೆ । ಶಿರಬಾಗುವೆನು ಪದಕೆ ॥೧॥

ಮಿತ್ರಲಾಭ

ಮಹ್ಮದ್ ರಫಿಕ್ ಸಾಹೇಬ್
ಅಪ್ಸರಾ ಫ್ಯಾಶನ್ ಕೋರ್ನರ್, ಕುಂದಾಪುರ

ಕಂದಾವರ ರಘುರಾಮ ಶೆಟ್ರ ಚೆಲುವೆ ಚಿತ್ರಾವತಿ ಪ್ರಸಂಗ ಕುತೂಹಲಕಾರಿ ಘಟನೆಗಳಿಂದ ಕೂಡಿದ ಕಥಾವಸ್ತು ಸಾಹಿತ್ಯ ಪೂರ್ಣವಾದ ಪದ್ಯಗಳು ಹಾಗೂ ಯುವ ಭಾಗವತ ಕಾಳಿಂಗ ನಾವಡರ ಕಂಠಶ್ರೀಯಿಂದ ಅಭೂತಪೂರ್ವ ಯಶಸ್ಸುಗಳಿಸಿತು. ಇಂತಹ ಅಪೂರ್ವ ಪ್ರಸಂಗವನ್ನು ನನ್ನ ಊರಾದ ಅವಾಸೆಬೈಲಿನಲ್ಲಿ ಆಡಿಸಬೇಕೆಂಬ ಅಸೆಯಿಂದ ಆಟ ವಹಿಸಿಕೊಳ್ಳಲು ಮನಮಾಡಿದರೂ ಆ ವರ್ಷ ನಮಗೆ ಆಟ ಸಿಗಲಿಲ್ಲ. ಛಲ ಬಿಡದ ತಿವಿಕ್ರಮನಂತೆ ಮರುವರ್ಷ ಕೆಲಮಂದಿ ಗೆಳೆಯರೊಂದಿಗೆ ಆಟ ವಹಿಸಿಕೊಂಡೆವು. ನಿರೀಕ್ಷೆಯಂತೆ ಜನಸಾಗರ ಹರಿದು ಬಂತು. ಒಳಗಿನ ಆಸನಗಳು ಭರ್ತಿಯಾಗುತ್ತಾ ಬಂತು. ಆದರೆ ಡೇರೆಯ ಹೊರಗೆ ನೂರಾರು ಮಂದಿ ಟಿಕೇಟಿಗಾಗಿ ಕಾಯುತ್ತಿದ್ದರು. ಆಗ ನಾನು ಗೆಳೆಯರೊಂದಿಗೆ ಕುರ್ಚಿ, ಬೇಂಚು ತರಲು ಹತ್ತಿರದ ಶಾಲೆಗೆ ಹೋಗಿ ಲಾರಿಯಲ್ಲಿ ತುಂಬಿಸಿಕೊಂಡು ಆಟದ ಬಳಿ ಬಂದರೆ ಹೊರಗೆ ನಿಂತಿದ್ದ ಜನರೆಲ್ಲಾ ಕಾಣೆಯಾಗಿದ್ದರು. ನಾವು ಆಸನ ತರಲು ಹೋದಾಗ ಜನರೆಲ್ಲಾ ಡೇರೆಯ ಒಳಗೆ ನುಗ್ಗಿ ಕೆಲವರು ಆಸನದಲ್ಲಿ ಕುಳಿತಿದ್ದರೆ, ಕೆಲವರಿಗೆ ಸೀಟು ಇಲ್ಲದೆ ನಿಂತಿದ್ದರು ಟಿಕೇಟಿಗಾಗಿ ವಿಚಾರಿಸಿದರೆ ಗಲಾಟೆಯಾದೀತೆಂಬ ಭಯದಿಂದ ಏನೂ ಕೇಳದೆ ನಿಂತಿದ್ದವರಿಗೆ ತಂದ ಆಸನಕೊಟ್ಟು ಕುಳ್ಳಿರಿಸಿದೆವು. ಇದರಿಂದಾಗಿ ಆಟದಿಂದ ಲಾಭವಾಗದಿದ್ದರೂ ನಷ್ಟವಾಗಲಿಲ್ಲವಲ್ಲ ಎಂದು ಸಮಾಧಾನ ಪಟ್ಟೆವು. ನಮ್ಮ ಊರಿನವರಿಗೆ ಒಂದು ಒಳ್ಳೆಯ ಆಟ ತೋರಿಸಿದ ತೃಪ್ತಿ ನಮ್ಮದಾಯಿತು.

ಇಂತಹ ಉತ್ತಮ ಪ್ರಸಂಗ ರಚಿಸಿದ ಕಂದಾವರದವರನ್ನು ನೋಡಿ ಮಾತಾಡಬೇಕು, ಅವರ ಸ್ನೇಹ ಸಂಪಾದನೆ ಮಾಡಿಕೊಳ್ಳಬೇಕೆಂಬ ಉತ್ಕಟ ಹಂಬಲ ನನ್ನಲ್ಲಿ ಉಂಟಾಯಿತು. ಇಂತಹ ಸಂದರ್ಭದಲ್ಲಿ ಒಂದು ದಿನ 3-4 ಮಂದಿ

ನನ್ನ ಅಂಗಡಿಗೆ ಬಂದು ಉಡುಗೊರೆ ನೀಡುವ ವಸ್ತುಗಳನ್ನು ಖರೀದಿಸಿ ಬೆಲೆ ತೆತ್ತು, ಅವುಗಳ ಮೇಲೆ ತಮ್ಮ ಹೆಸರು ಬರೆದುಕೊಡಲು ಕೇಳಿದರು. ಆಗ ಒಬ್ಬರು ಕಂದಾವರ ರಘುರಾಮ ಶೆಟ್ಟಿ ಎಂದು ಬರೆಯಿರಿ ಎಂದಾಗ ಆಶ್ಚರ್ಯದಿಂದ ತಲೆಯೆತ್ತಿ ನೋಡಿದೆ. ಸಾಮಾನ್ಯರಲ್ಲಿ ಸಾಮಾನ್ಯರಂತಿದ್ದ ವ್ಯಕ್ತಿ ನಗುಮುಖದಿಂದ ನಿಂತಿದ್ದರು. ಅವರೇ ಕಂದಾವರದವರೆಂದು ತಿಳಿದರೂ ಎಲ್ಲಾ ಬರೆದಾದ ಮೇಲೆ ಮಾತಾಡಿಸಿದರಾಯಿತೆಂದು ಬರೆಯುವುದರಲ್ಲೇ ಮಗ್ನನಾದೆ. ಎಲ್ಲಾ ಹೆಸರು ಬರೆದಾದ ಮೇಲೆ ನೋಡಿದರೆ ಅವರು ಆಗಲೇ ಹೊರಟು ಹೋಗಿಯಾಗಿತ್ತು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬ ಸ್ಥಿತಿ ನನ್ನದಾಯಿತು. ಮನೆಗೆ ಬಂದರೂ ಮಾತಾಡಿಸದಾದೆನೆಂದು ನೋವು ಪಡುವಂತಾಯ್ತು.

ಆದರೆ ನನ್ನಾಸೆ ಭಗ್ನವಾಗಲಿಲ್ಲ. ಒಂದು ದಿನ ಕಂದಾವರದವರೇ ಗ್ರಾಹಕರಾಗಿ ನನ್ನ ಅಂಗಡಿಗೆ ಬಂದರು. ಈ ಬಾರಿ ತಪ್ಪಿಬೀಳಬಾರದೆಂದು ಅಂಗಡಿಗೆ ಬಂದೊಡನೆ ನಮಸ್ಕರಿಸಿ, ಕುಳಿತುಕೊಳ್ಳಲು ಆಸನವಿತ್ತೆ. ಉಭಯ ಕುಶಲೋಪರಿ ಮಾತಾಡಿದೆವು ಸಾಧಾರಣ $5^1/_2$" ಅಡಿ ಎತ್ತರದ ಎಣ್ಣೆ ಕಪ್ಪು ಬಣ್ಣದ ಸರಳ ವ್ಯಕ್ತಿತ್ವ ಅವರದು. ಶುಭ್ರವಾದ ಬಿಳಿ ಬಣ್ಣದ ಪಂಚೆ ಮತ್ತು ಜುಬ್ಬ. ಕಣ್ಣಿಗೊಂದು ಕನ್ನಡಕ; ಕಾಲಿಗೊಂದು ಚಪ್ಪಲಿ. ಕಿಸೆಯಲ್ಲಿ ಎದ್ದು ಕಾಣಬಹುದಾದ ಒಂದು ಪೆನ್ನು. ಇದು ಅವರ ವೇಷಭೂಷಣ. ಇದರಲ್ಲಿ ಅಂದಿನಿಂದ ಇಂದಿನವರೆಗೂ ಯಾವುದೇ ಬದಲಾವಣೆಯಿಲ್ಲ. ಸ್ವಲ್ಪ ಹೊತ್ತು ಆತ್ಮೀಯವಾಗಿ ಮಾತಾಡಿದೆವು. ಯಾವುದೇ ಅಹಂಭಾವ ತೋರದೆ ಸ್ನೇಹಪೂರ್ವಕವಾಗಿ ಮಾತಾಡಿದರು. ಅವರು ಹೊರಟು ನಿಂತಾಗ ಸ್ವಲ್ಪ ದಿನದಲ್ಲೇ ನಮ್ಮ ಮಿತ್ರ ಕೂಟದಿಂದ ನಡೆಯುವ ತಾಳಮದ್ದಳೆಗೆ ಆತ್ಮೀಯವಾಗಿ ಸ್ವಾಗತಿಸಿ, ಬೀಳ್ಕೊಟ್ಟೆ. ನೆನಪಿಟ್ಟುಕೊಂಡು ನಮ್ಮ ತಾಳಮದ್ದಳೆಗೆ ಬಂದು ಕೊನೆಯವರೆಗೆ ಕುಳಿತು ನೋಡಿ, ಮೆಚ್ಚುಗೆ ಸೂಚಿಸಿ ಹೊರಟುಹೋದರು.

ಆಮೇಲೆ ಅವರು ಕುಂದಾಪುರಕ್ಕೆ ಬಂದಾಗಲೆಲ್ಲಾ ನನ್ನ ಅಂಗಡಿಗೆ ಬಂದು ಹೋಗುವುದು ರೂಢಿಯಾಯಿತು. ನಮ್ಮೊಳಗಿನ ಸ್ನೇಹ ಬಲಗೊಂಡಿತು. ಕುಂದಾಪುರದಲ್ಲಿ ಯಾರಾದರೂ ಅವರನ್ನು ಭೇಟಿಯಾಗುವುದಿದ್ದರೆ ನಮ್ಮ ಅಂಗಡಿಯೇ ಅವರಿಗೆ ನಿಲ್ದಾಣವಾಯಿತು. ಅವರಿಗೆ ಬರುವ ಕೊರಿಯರಿಗೆ ನಮ್ಮ ಅಂಗಡಿಯೇ ವಿಳಾಸವಾಯಿತು. ಕೊನೆಗೆ ನಮ್ಮ ಮಿತ್ರಕೂಟಕ್ಕೆ ಖಾಯಂ ಸದಸ್ಯರೇ

ಆದರು. ಮುಂದಿನ ನಮ್ಮ ಎಲ್ಲಾ ತಾಳಮದ್ದಳೆಕೂಟಕ್ಕೆ ಅವರೇ ಮಾರ್ಗದರ್ಶಕರಾದರು. ಕೂಟಕ್ಕೆ ಅರ್ಥಧಾರಿಗಳ ಕೊರತೆಯಾದಾಗ ಆಪದ್ಬಾಂಧವರಾಗಿ ಅರ್ಥಹೇಳಿ ಸಹಕರಿಸುತಿದ್ದರು. ಕರ್ಣಾರ್ಜುನ ಕಾಳಗ ಕೃಷ್ಣ, ವಾಲಿವಧೆಯ ತಾರೆ, ಗದಾಯುದ್ಧದ ಧರ್ಮರಾಯ, ಕೃಷ್ಣಾರ್ಜುನ ಕಾಳಗದ ಭೀಮನ ಅರ್ಥ ಹೇಳಿ ಸಭಿಕರನ್ನು ಮೆಚ್ಚಿಸಿದರು. ಪ್ರಸಿದ್ಧ ಅರ್ಥಧಾರಿಗಳಾದ ಜಬ್ಬಾರ್ ಸುಮೋರವರು ತಮ್ಮ ವಾಲಿಗೆ ಕಂದಾವರದವರೇ ತಾರೆ ಹೇಳಲಿ ಎಂದು ಪ್ರಾಯೋಜಕರಲ್ಲಿ ಹೇಳುವಷ್ಟು ಪರಿಣಾಮಕಾರಿ ಅರ್ಥ ಅವರದಾಗಿತ್ತು. ವರ್ಷಕ್ಕೊಬ್ಬ ಕಲಾವಿದರನ್ನು ಗೌರವಿಸುವ ನಮ್ಮ ಮಿತ್ರಕೂಟದ ಸಂಪ್ರದಾಯದಂತೆ ಒಂದು ವರ್ಷ ಕಂದಾವರದವರನ್ನು ಆತ್ಮಿಯವಾಗಿ ಸನ್ಮಾನಿಸಿ ನಮ್ಮ ಗೌರವ ಸಲ್ಲಿಸಿದೆವು.

ಕಂದಾವರದವರು ಮೃದು ಸ್ವಭಾವದ ವ್ಯಕ್ತಿಯಾದರೂ ಯಾವತ್ತೂ ತನ್ನ ಆತ್ಮಾಭಿಮಾನಕ್ಕೆ ಧಕ್ಕೆ ಬಂದರೆ ಸಹಿಸಲಾರರು. ಇತರರಿಗೆ ಆದಾಗಲೂ ಸಹಿಸರು. ಒಮ್ಮೆ ಕುಂದಾಪುರದ ಒಂದು ಸಮಾರಂಭದಲ್ಲಿ ಇವರಿಗೆ ಸನ್ಮಾನ ನೀಡುವುದೆಂದು ಕಾರ್ಯಕರ್ತರು ನಿಶ್ಚಯಿಸಿಕೊಂಡು ಇವರಲ್ಲಿ ಬಂದು ಕೇಳಿದಾಗ ಒಪ್ಪಿಕೊಂಡು ಸಮಯಕ್ಕೆ ಸರಿಯಾಗಿ ಅಲ್ಲಿಗೆ ಹೋಗಲು ನನ್ನ ಅಂಗಡಿಯಲ್ಲಿ ಬಂದು ಕುಳಿತಿದ್ದರು. ಆಗ ಅವರಿಗೆ ಆ ದಿನದ ಕಾರ್ಯಕ್ರಮದ ಕುರಿತಾದ ಕರಪತ್ರವನ್ನು ನಾನು ನೀಡಿದೆ. ಅದರಲ್ಲಿ ಮೂರು ಮಂದಿಗೆ ಸನ್ಮಾನವಿದ್ದು ಮೇಲ್ಭಾಗದಲ್ಲಿ ಓರ್ವ ಕಿರಿಯ ಪ್ರಸಂಗಕರ್ತೃ, ಅದರೊತ್ತಿಗೆ ಇವರ ಹೆಸರು ಕೊನೆಯಲ್ಲಿ ಶ್ರೇಷ್ಠ ಹಿರಿಯ ರಂಗನಟರಾದ ಬಾಲಕೃಷ್ಣ ಪೈ (ಕುಳ್ಳಪ್ಪು)ಯವರ ಹೆಸರು ನಮೂದಿಸಲಾಗಿತ್ತು. ಇದನ್ನು ನೋಡಿದ ಶೆಟ್ಟರು ಕೋಪಗೊಂಡು 'ನಾನು ಅಲ್ಲಿಗೆ ಹೋಗಲಾರೆ' ಎಂದು ನನ್ನಲ್ಲಿ ಹೇಳಿ ಮನೆಗೆ ಹೊರಟೇ ಬಿಟ್ಟರು. ಆ ಹೊತ್ತಿಗೆ ಸರಿಯಾಗಿ ಅಲ್ಲಿಗೆ ಬಂದ ಕಾರ್ಯಕರ್ತರು ತಮ್ಮ ತಪ್ಪಿಗೆ ಕ್ಷಮೆಯಾಚಿಸಿದರು. ಆಗ ಕಂದಾವರದವರು ಮೊದಲು ಬಾಲಕೃಷ್ಣ ಪೈಗಳಿಗೆ ಆ ಮೇಲೆ ನಮ್ಮಿಬ್ಬರಿಗೆ ಸನ್ಮಾನಿಸಬೇಕೆಂದು ಹೇಳಿದಾಗ ಅವರು ಒಪ್ಪಿಕೊಂಡ ಮೇಲೆ, ಅಲ್ಲಿಗೆ ಹೋಗಿ ಸನ್ಮಾನ ಸ್ವೀಕರಿಸಿದರು. ಇವರು ಇತ್ತೀಚೆಗೆ ಬರೆದ ಒಂದು ಪ್ರಸಂಗದಲ್ಲಿ ಪ್ರಧಾನ ವೇಷಧಾರಿಯೋರ್ವ ಉದ್ಧೇಶಪೂರ್ವಕವಾಗಿ ಅಭಿನಯದಲ್ಲಿ ಅಸಡ್ಡೆತೋರಿ ಪ್ರಸಂಗ ಹಾಳ್ಗೆಡಹಿದಾಗ ಪ್ರಸಂಗ ಆಡದಂತೆ ತಡೆಹಿಡಿದ ಸ್ವಾಭಿಮಾನಿ ಅವರು.

ಯಕ್ಷಗಾನ ವಲಯದಲ್ಲಿ ಯಾರನ್ನೂ ನೋಯಿಸದ, ಯಾರನ್ನೂ ಕೀಳಾಗಿ ನೋಡದ, ಯಾರಲ್ಲೂ ನಿಷ್ಠುರ ಕಟ್ಟಿಕೊಳ್ಳದ ವಿಶಾಲ ಹೃದಯಿ, ತರ್ಕದ ಕೂಟವೆಂದೇ ಬಿಂಬಿತವಾಗಿರುವ ತಾಳಮದ್ದಳೆಯಲ್ಲಿ ಕೂಡಾ ಯಾರಲ್ಲೂ ಚರ್ಚೆಗಿಳಿಯದೆ ತನ್ನ ಪಾತ್ರ ಪೋಷಣೆ ಮಾತ್ರ ಮಾಡುವ ಜಾಯಮಾನ ಅವರದು. ಹಾಗೆಂದು ಬೇಕಂತಲೇ ಏರಿಬಂದವರಿಗೆ ತಕ್ಕ ಉತ್ತರ ನೀಡದೆ ಇರಲಾರರು. ಹೀಗಾಗಿ ಯಕ್ಷಗಾನ ವಲಯದಲ್ಲಿ ಇವರನ್ನು ಅಜಾತಶತ್ರುವೆಂದೇ ಮಾನಿಸುತ್ತಾರೆ. ಒಳ್ಳೆಯ ಮಿತ್ರರನ್ನು ಪಡೆಯಲು ಪುಣ್ಯ ಮಾಡಿರಬೇಕಂತೆ. ಆ ದೃಷ್ಟಿಯಲ್ಲಿ ನಾನು ಪುಣ್ಯವಂತನೇ ಸರಿ.

ನನ್ನ ಜೀವನದಲ್ಲಿ ಅಜ್ಜನ ಪಾತ್ರ

ಅಭಿರಾಮ್ ಶೆಟ್ಟಿ
ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ,
ಬೆಂಗಳೂರು

ಯಕ್ಷಗಾನ, ನಾಟಕ ಕಲಾವಿದರಾಗಿ, ಅಧ್ಯಾಪಕರಾಗಿ ಅಜ್ಜ ಪ್ರಸಿದ್ಧ ವ್ಯಕ್ತಿಯಾಗಿದ್ದರೂ, ಅಪಾರ ಮಿತ್ರವರ್ಗವನ್ನು ಹೊಂದಿರಲು ಅವರ ಸ್ನೇಹಶೀಲ, ಸಹನಾಶೀಲ, ಸೌಮ್ಯ, ಸರಳ ವ್ಯಕ್ತಿತ್ವವೇ ಕಾರಣವೆಂದರೆ ಅದು ಖಂಡಿತಾ ಅತಿಶಯೋಕ್ತಿಯಲ್ಲ. ಏಕೆಂದರೆ ಚಿಕ್ಕ ವಯಸ್ಸಿನಿಂದ ಅಜ್ಜನ ಸಾಂಗತ್ಯದಲ್ಲಿ ಬೆಳೆದವನು ನಾನು. ಅವರನ್ನು ಅತಿ ಹತ್ತಿರದಿಂದ ಬಲ್ಲೆ. ನನ್ನ ಆಟ, ಪಾಠ, ನಡತೆಯಲ್ಲಿನ ದೋಷಗಳನ್ನು ತಿದ್ದಿ, ನನ್ನ ಜೀವನದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದವರು ಅಜ್ಜ ಎನ್ನುವುದರಲ್ಲಿ ಎರಡು ಮಾತಿಲ್ಲ.

ಅಜ್ಜನೊಂದಿಗೆ ನಾನು ಕಳೆದ ಹನ್ನೆರಡು ವರ್ಷಗಳನ್ನು ನಾನು ಸುವರ್ಣ ದಿನಗಳೆಂದೇ ಕರೆಯಲು ಇಚ್ಛಿಸುತ್ತೇನೆ. ನಮ್ಮ ಮನೆಯ ಆಸುಪಾಸಿನಲ್ಲಿ ನನಗೆ ಸ್ನೇಹಿತರಾರೂ ಇರದ ಕಾರಣ ಅಜ್ಜ ನನಗೆ ಮಿತ್ರ, ಬಂಧು, ಎಲ್ಲವೂ ಆಗಿದ್ದರು. ಪಠ್ಯ, ಪಠ್ಯೇತರ ಚಟುವಟಿಕೆಗಳಲ್ಲಿ ಸದಾ ನನಗೆ ಪ್ರೋತ್ಸಾಹ ನೀಡಿದವರು. ನನಗೆ ಪ್ರೌಢಶಾಲಾ ದಿನಗಳಲ್ಲಿ ಅಜ್ಜ ಹಳೇಗನ್ನಡ, ವ್ಯಾಕರಣ, ಛಂದಸ್ಸು ಮುಂತಾದವುಗಳಿಗೆ ಸಂಬಂಧಿಸಿದ ಪಾಠಗಳನ್ನು ಮನೆಯಲ್ಲಿ ಸರಳ, ಸುಂದರ, ಆಸಕ್ತಿದಾಯಕವಾಗಿ ಹೇಳಿಕೊಡುತ್ತಿದ್ದರು. ಇದರಿಂದ ವೃತ್ತಿಯಲ್ಲಿ ಅವರು ಎಂಥಾ ಆದರ್ಶ ಅಧ್ಯಾಪಕರಾಗಿದ್ದರು ಎಂಬುವುದನ್ನು ಅರ್ಥೈಸಿಕೊಂಡೆ ನಿಜಕ್ಕೂ ಕಲಿಸುವಲ್ಲಿನ ಅವರ ತಾಳ್ಮೆ ಮೆಚ್ಚುವಂಥದ್ದು.

ಅಜ್ಜನ ಒಡನಾಟದಿಂದಲೇ ನನಗೆ ಯಕ್ಷಗಾನ ಕುರಿತಾಗಿ ಆಸಕ್ತಿ ಮೂಡಿದ್ದು. ಆಸುಪಾಸಿನಲ್ಲಿ ನಡೆಯುತ್ತಿದ್ದ ಬಯಲಾಟಗಳಿಗೆ ಅಜ್ಜನ ಜೊತೆಗೆ ಹೋಗುತ್ತಿದ್ದೆ.

ನನಗೆ ತಿಳಿಯದ ಅನೇಕ ವಿಷಯಗಳನ್ನು ಅವರೊಂದಿಗೆ ಚರ್ಚಿಸುತ್ತಿದ್ದೆ. ಅನುಮಾನಗಳನ್ನು ಪರಿಹರಿಸಿಕೊಳ್ಳುತ್ತಿದ್ದೆ. ನನಗೆ ಯಕ್ಷಗಾನ ಕಲಿಯಬೇಕೆಂಬ ಹಂಬಲವನ್ನು ಅವರಲ್ಲಿ ತೋಡಿಕೊಂಡಾಗ ಅದಕ್ಕೆ ವ್ಯವಸ್ಥೆ ಸೂಕ್ತ ತರಬೇತಿಯನ್ನು ಕೊಡಿಸಿದ್ದರು. ಅಜ್ಜನ ಬಳಿ ಅಪಾರವಾದ ಗ್ರಂಥ ಸಂಗ್ರಹಾಲಯವೇ ಇದೆ. ಅಜ್ಜ ಸದಾ ಅಧ್ಯಯನಶೀಲರು ದಿನವಿಡಿ ಓದುವುದು, ಅಭ್ಯಸಿಸುವುದೇ ಅವರ ದಿನ ನಿತ್ಯದ ಕೆಲಸ. ಇದರಿಂದ ನನಗೂ ಕೂಡ ಪ್ರೇರಣೆಯಾಗಿತ್ತು. ಓದುವುದು ನನಗೆ ಮೆಚ್ಚಿನ ಹವ್ಯಾಸವಾಯಿತು. ಅಜ್ಜನ ಗ್ರಂಥ ಸಂಗ್ರಹ ಕೂಡ ಇದಕ್ಕೆ ಪುಷ್ಠಿ ನೀಡಿ, ನನ್ನ ಹವ್ಯಾಸಕ್ಕೆ ಸಹಕಾರ ನೀಡಿತು. ಇದು ನನಗೆ ಅಜ್ಜನಿಂದ ಬಂದಿರುವ ಬಹುದೊಡ್ಡ ಬಳುವಳಿ ಎಂದು ಭಾವಿಸುತ್ತೇನೆ.

ಅಜ್ಜನಿಗೆ ಮೊಮ್ಮಕ್ಕಳೆಂದರೆ ಅಪಾರವಾದ ಪ್ರೀತಿ, ಕಾಳಜಿ. ಶಾಲಾದಿನಗಳಲ್ಲಿ ಶಾಲೆಯಿಂದ ನಾನು ಮನೆಗೆ ಮರಳುವುದು ಸ್ವಲ್ಪ ವಿಳಂಬವಾದರೂ ಅಜ್ಜ ತುಂಬಾ ಕಳವಳ ಪಡುತ್ತಿದ್ದರು. ಪ್ರಸ್ತುತ ನಾನು ವೃತ್ತಿ ಶಿಕ್ಷಣದ ಸಲುವಾಗಿ ಬೆಂಗಳೂರಿನಲ್ಲಿ ನೆಲೆಸಿದರೂ, ಸದಾ ದೂರವಾಣಿ ಮೂಲಕ ಕ್ಷೇಮ ಸಮಾಚಾರಗಳನ್ನು ವಿಚಾರಿಸುತ್ತಿರುತ್ತಾರೆ. ನಮಗೆ ಅನಾರೋಗ್ಯವಾದಾಗ ನಮ್ಮ ಸ್ವರದಿಂದಲೇ ಗುರುತಿಸಿ ನಮಗಿಂತಲೂ ಹೆಚ್ಚು ಕಳವಳ ಹೊಂದಿ ಪದೇ ಪದೇ ಆರೋಗ್ಯವನ್ನು ವಿಚಾರಿಸುತ್ತಿರುತ್ತಾರೆ. ಅಜ್ಜನ ಮುಗ್ಧ ನಿಸ್ವಾರ್ಥ ಪ್ರೀತಿಗೆ ಸಾಟಿಯಿಲ್ಲ. ಸದಾ ಅಜ್ಜನ ಆರೋಗ್ಯ ನೆಮ್ಮದಿ, ನವಚೈತನ್ಯವನ್ನು ಭಗವಂತನಲ್ಲಿ ಬೇಡುತ್ತೇನೆ.

ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ, ಗೌರವ ಸನ್ಮಾನಗಳು ಅಜ್ಜನ ತುರಾಯಿಗೆ ಸಂದಿರುವುದರ ಜೊತೆಗೆ, ಅಪಾರವಾದ ಮಿತ್ರವರ್ಗವನ್ನೂ, ಅಭಿಮಾನಿಗಳನ್ನೂ ಹೊಂದಿದ್ದಾರೆ. ಕೌಟುಂಬಿಕವಾಗಿಯೂ ಅವರದು ನೆಮ್ಮದಿಯ ಜೀವನ. ಹಾಸಿಗೆ ಇದ್ದಷ್ಟೇ ಕಾಲು ಚಾಚು ಎಂಬ ಮಾತಿನಂತೆ ಇದ್ದುದರಲ್ಲೆ ಸಂತಸದ ಜೀವನ ನಡೆಸುತ್ತಿರುವ ಅವರ ಪರಿ ನಮಗೆ ಮಾದರಿ.

ಆದರ್ಶ ವ್ಯಕ್ತಿತ್ವದ ಪ್ರಸಂಗಕರ್ತೃರು

ರಮಾಕಾಂತ ಮಡಿವಾಳ
ಪ್ರಧಾನ ಸ್ತ್ರೀ ವೇಷಧಾರಿ, ಮೂರೂರು

ಬಲ್ಲಿರೇನಯ್ಯಾ ಪತ್ರಿಕೆಯಲ್ಲಿ "ಮಾಹಿತಿ ನೀಡಿ ಸಹಕರಿಸಿ" ಎಂಬ ಪ್ರಕಟನೆಯಲ್ಲಿ ಪ್ರಸಂಗಕರ್ತೃ ಕಂದಾವರ ರಘುರಾಮ ಶೆಟ್ರಿಗೆ ಸಾರ್ವಜನಿಕ ಸಂಮಾನ ಮತ್ತು ಅಭಿವಂದನಾ ಗ್ರಂಥ ಬಿಡುಗಡೆಯಾಗುವುದೆಂಬ ವಿಷಯ ತಿಳಿದು ತುಂಬಾ ಸಂತೋಷವಾಯ್ತು. ನಾನು ತಿಳಿದ ಹಾಗೆ ಶ್ರೀಯುತ ಶೆಟ್ಟರು ತುಂಬಾ ಅಪರೂಪದ ವ್ಯಕ್ತಿತ್ವಯುಳ್ಳವರು.

ಒಬ್ಬ ವ್ಯಕ್ತಿಯನ್ನು ಅವರ ಆಚಾರ, ವಿಚಾರ, ಪ್ರಚಾರ ಹಾಗೂ ಅಪ ಪ್ರಚಾರ ಹೀಗೆ ನಾಲ್ಕು ವಿಧವಾಗಿ ಗುರುತಿಸುವುದಕ್ಕೆ ಸಾಧ್ಯವಂತೆ. ಶ್ರೀಯುತ ಕಂದಾವರದವರ ಬಗ್ಗೆ ಹೇಳುವುದಾದರೆ ಅವರ ಆಚಾರ ಯಾವತ್ತೂ ನಮ್ಮಂಥವರಿಗೆ ಆದರ್ಶ ವಿಚಾರದ ಬಗ್ಗೆ ಹೇಳಲು ಚಿಕ್ಕವನಾದ ನನಗಂತೂ ಅಸಾಧ್ಯವಾದ ವಿಚಾರ. ಉನ್ನತ ಧ್ಯೇಯವಾದಿಗಳಾದ ಶ್ರೀಯುತರ ವಿಚಾರಧಾರೆ ನನ್ನಂಥವರ ಮತಿಗೆ ನಿಲುಕಲಾರದು. ಪ್ರಚಾರದ ಬಗ್ಗೆ ಹೇಳುವುದಕ್ಕೆ ತುಂಬಾ ಹೆಮ್ಮೆ ಎನಿಸುತ್ತದೆ. ಯಕ್ಷಗಾನ ವಲಯದಲ್ಲಿ ದೇಶ–ವಿದೇಶಗಳಲ್ಲೂ ಇವರ ಕುರಿತಾದ, ಇವರ ಪ್ರಸಂಗಗಳ ಕುರಿತಾದ ಪ್ರಶಂಸೆಯನ್ನು ಕೇಳಿ ಆನಂದಪಟ್ಟವನು ನಾನು. ಅದನ್ನು ತಿಳಿಸಲು ನನ್ನಲ್ಲಿ ಶಬ್ದಗಳೇ ಸಾಲದು. ಇನ್ನು ಇವರ ಬಗ್ಗೆ ಅಪಪ್ರಚಾರ ಇದುವರೆಗೆ ಯಾರ ಬಾಯಲ್ಲೂ ಕೇಳಿದ್ದನ್ನು ನಾನರಿಯೆ. ಹಾಗೇನಾದರೂ ಇದ್ದರೆ ಅದು ಶಶಿಯನ್ನು ಚೋರನಿಂದಿಸಿದಂತೆ. ಹೀಗೆ ಒಬ್ಬ ವ್ಯಕ್ತಿ ತನ್ನ ಬದುಕನ್ನು ಸಾಗಿಸುತ್ತಾನೆಂದರೆ ಅವನು ಮಾನವ ಮಟ್ಟವನ್ನು ಮೀರಿದ ಅತಿಮಾನವನೆಂದರೆ ಅದು ಅತಿಶಯೋಕ್ತಿಯ ಮಾತಾಗಲಾದೆಂಬುದು ನನ್ನ ಪ್ರಾಮಾಣಿಕ ಅಭಿಪ್ರಾಯ.

ಕಂದಾವರ ರಘುರಾಮ ಶೆಟ್ರು ಯಕ್ಷಗಾನ ರಂಗಕ್ಕೆ ವಿಶೇಷ ಕೊಡುಗೆ ನೀಡಿದವರು. ಹವ್ಯಾಸಿ ಭಾಗವತರಾಗಿ, ಅರ್ಥಧಾರಿಯಾಗಿ ಸಾರ್ಥಕ ಸೇವೆ ಅವರಿಂದಾಗಿದೆ. ಅನೇಕ ಉತ್ತಮ ಪ್ರಸಂಗಗಳನ್ನು ನೀಡಿ ಕಲೆಯನ್ನು ಶ್ರೀಮಂತಗೊಳಿಸಿದ್ದಾರೆ. ಅವರ ಪ್ರಸಂಗಗಳಿಂದ ನನ್ನಂಥ ಅನೇಕ ಕಲಾವಿದರು ಬೆಳಕಿಗೆ ಬಂದಿದ್ದಾರೆ. ಅವರು ರಚಿಸಿದ ಸೀತಾಪಾರಮ್ಯದ ಸೀತೆಯ ಪಾತ್ರ ಬಯಲಾಟದಲ್ಲಿ ನನಗೆ ತುಂಬಾ ಹೆಸರು ತಂದು ಕೊಟ್ಟಿದೆ. ಹಾಗೆಯೇ ' ನಾಗನಂದನೆ' ಯ ನನ್ನ ಬಹುಳೆಯ ಪಾತ್ರ ನೋಡಿದ ಅನೇಕ ಪ್ರೇಕ್ಷಕರು ಈಗಲೂ ನನಗೆ ಬಹುಳೆ ಎಂತಲೇ ಕರೆಯುತ್ತಾರೆ. ಅಷ್ಟೊಂದು ಪ್ರಭಾವಶಾಲಿ ಪಾತ್ರಗಳು ಅವರಿಂದ ಸೃಷ್ಟಿಯಾಗಿವೆ.

ಶ್ರೀಯುತ ಕಂದಾವರದವರಿಗೆ ತಮ್ಮ ಪ್ರಸಂಗದ ಬಗ್ಗೆ ವಿಶೇಷ ಕಾಳಜಿ. ಒಮ್ಮೆ ನಮ್ಮ ಮೇಳಕ್ಕೆ (ಮಂದಾರ್ತಿ ಮೇಳಕ್ಕೆ) ತಮ್ಮ ಪ್ರಸಂಗದ ಟ್ರಾಯಲ್ಲಿಗೆ ಬಂದಿದ್ದರು. 'ವಧು-ಮಾಧವಿ' ಪ್ರಸಂಗದ ವಿಚಾರ ಬಂದಾಗ ಅವರು ನನ್ನನ್ನು ಒಳಗೆ ಕರೆದು 'ನೀನು ಮಾಧವಿ ಪಾತ್ರ ಮಾಡುವುದಾದರೆ ಮಾತ್ರ ಅದನ್ನು ಆಡಬಹುದು. ಇಲ್ಲವಾದರೆ ಆ ಪ್ರಸಂಗ ಆಡುವುದು ಬೇಡ" ಎಂದು ತಿಳಿಸಿದರು. ಅದನ್ನು ಕೇಳಿ ನನ್ನ ಜನ್ಮ ಸಾರ್ಥಕವಾಯ್ತು ಎಂದುಕೊಂಡೆ. ಕಾರಣ ಒಬ್ಬ ಪ್ರಸಿದ್ಧ ಪ್ರಸಂಗಕರ್ತೃರು ಹಾಗೂ ವಿಮರ್ಶಕರು ನನ್ನನ್ನು ಗುರುತಿಸಿದ್ದಾರಲ್ಲ ಎಂದು. ಅವರಿಗೆ ವ್ಯಕ್ತಿ ಮುಖ್ಯರಲ್ಲ. ವ್ಯಕ್ತಿತ್ವ ಮುಖ್ಯ. ಪ್ರತಿಯೊಂದು ಪಾತ್ರವೂ ಅರ್ಥಪೂರ್ಣವಾಗಿ ಮೂಡಿ ಬರಬೇಕು, ತನ್ಮೂಲಕ ಪ್ರಸಂಗವು ಯಶಸ್ವಿಯಾಗಬೇಕು ಎಂಬುದು ಅವರ ಆಶಯವಾಗಿತ್ತು.

ಶ್ರೀಯುತ ರಘುರಾಮ ಶೆಟ್ರ ಬಗ್ಗೆ ಹೇಳಹೊರಟರೆ ಸಮಯ ಸಾಲದು. ಪುಟ ಬೆಳೆಯಬಹುದು. ಆದರೂ ಅದು ಅಪೂರ್ಣವೇ ಆದೀತು. ನುಡಿನೇರ; ನಡೆಸರಳ, ಬದುಕು ಸಮುದ್ರದಂತೆ ಗಂಭೀರ, ಅವರಿಗೆ ಶ್ರೀ ಮಂದಾರ್ತಿ ಮಹಾಮಾತೆ ದೀರ್ಘಾಯುಷ್ಯ ನೀಡಲಿ. ಅವರು ಶತಾಯುಷಿಗಳಾಲಿ ಎಂದು ಹಾರೈಸುತ್ತೇನೆ. ಅಭಿನಂದನಾ ಸಮಿತಿಯವರು ಇಂಥಾ ಉತ್ತಮಕಾರ್ಯ ಹಮ್ಮಿಕೊಂಡ ಬಗ್ಗೆ ಅಭಿನಂದನೆ ಸಲ್ಲಿಸುತ್ತಾ ಕಾರ್ಯಕ್ರಮವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಹವ್ಯಾಸಿ ಯಕ್ಷಗಾನ ತಂಡದ 'ಸಾಮಗ'

ಎಚ್. ಶ್ರೀಧರ ಹಂದೆ
ಸಂಚಾಲಕರು,
ಸಾಲಿಗ್ರಾಮ ಮಕ್ಕಳ ಮೇಳ, ಕೋಟ

ಸುಮಾರು 60ವರುಷಗಳ ಹಿಂದಿನ ನೆನಪು. ಪ್ರತಿಷ್ಠಿತ ವ್ಯಕ್ತಿಗಳು, ವಿದ್ಯಾವಂತರು, ಮಡಿವಂತ ಉತ್ತಮ ವರ್ಗದವರು ಯಕ್ಷಗಾನದ ಕಡೆ ಮುಖ ಎತ್ತಿ ನೋಡುತ್ತಿರಲಿಲ್ಲ. ಅಕಸ್ಮಾತ್ ರಾತ್ರಿ ಇಡೀ ಬಯಲಾಟ ನೋಡಿ ವಾಪಾಸು ಬೆಳಿಗ್ಗೆ ಮನೆ ಒಳಗೆ ಹೋಗುವ ಮುಂಚೆ ತೊಟ್ಟ ಬಟ್ಟೆ ಬಿಚ್ಚಿ, ಸ್ನಾನ ಮಾಡಿ, ಪರಿಶುದ್ಧರಾಗಬೇಕಿತ್ತು. ಸ್ವತಃ ವೇಷ ಕಟ್ಟಿ ಕುಣಿಯುವ ಮಾತೇ ಇಲ್ಲವಾಗಿತ್ತು. ಈ ಕಲೆಯಿಂದ ಆಕರ್ಷಿತರಾಗಿ ತಾವೂ ವೇಷ ಕಟ್ಟಿ ಕುಣಿಯಬೇಕೆಂಬ ಮಹದಾಸೆಯ ಯುವಕರಿಗೆ ಒಂದು ರೀತಿಯ ಅಳುಕು, ಮುಜುಗರ. ಮೇಲಾಗಿ ಅಂತಹ ಯಾವ ಅವಕಾಶವೂ ಆಗ ಇಲ್ಲವಾಗಿತ್ತು. ಆ ಸಂದರ್ಭ ಈ ಉದ್ದೇಶಕ್ಕಾಗಿಯೇ ಏನೋ ಕುಂದಾಪುರ ವಕೀಲ ಮುತ್ತಯ್ಯ ಹೆಗ್ಡೆಯವರ ನೇತೃತ್ವದ 'ವಿದ್ಯಾವರ್ಧಕ ಸಂಘ' ಉದಿಸಿತು. ಅವಕಾಶ ವಂಚಿತ ಹವ್ಯಾಸಿ ಕಲಾವಿದರಿಗೆ ಪ್ರೋತ್ಸಾಹವಿತ್ತು, ಧೈರ್ಯ ತುಂಬಿ ವೇಷಕಟ್ಟಿ ರಂಗಸ್ಥಳದಲ್ಲಿ ಪ್ರದರ್ಶನ ನೀಡುವಂತೆ ತಮ್ಮ ಸಂಘದ ಆಶ್ರಯದಲ್ಲಿ ಮುಂದಾದವರು ಶ್ರೀಯುತ ಎಂ.ಎಂ. ಹೆಗ್ಡೆಯವರು. ಒಂಟಾಟ, ವೃತ್ತಿಪರ ಮೇಳಗಳ ಜೋಡಾಟ, ರಾಜ್ಯದಾದ್ಯಂತ ಹಾಗೂ ಮುಂಬಯಿ ಮದ್ರಾಸುಗಳಲ್ಲಿ ಅನೇಕ ಯಕ್ಷಗಾನ ಪ್ರದರ್ಶನಗಳನ್ನು ನೀಡಿದ ಹೆಮ್ಮೆ ಈ ಸಂಸ್ಥೆಯದು. ಆ ಸಂದರ್ಭ ಹಲವಾರು ಗಣ್ಯರೊಂದಿಗೆ ಶ್ರೀ ಕಂದಾವರ ರಘುರಾಮ ಶೆಟ್ಟಿಯವರ ಪರಿಚಯ, ಒಡನಾಟ ನನಗಾಗಿತ್ತು.

ಇತರ ಪ್ರೇರಣೆ, ಪ್ರಭಾವಗಳ ಜೊತೆ ಎಂ.ಎಂ.ಹೆಗ್ಡೆ ಇವರ ಪ್ರೋತ್ಸಾಹವೂ ಕೂಡಿ ಇಲ್ಲಿನ ಹವ್ಯಾಸಿ ಕೆಲವು ಕಲಾವಿದರಿಂದ ಯಕ್ಷಗಾನ ಕ್ಷೇತ್ರಕ್ಕೆ ದೊರಕಿದ ಕೊಡುಗೆ ಗಮನಾರ್ಹವಾದವುಗಳು. ಕಂಬದಕೋಣೆ ಸಂಜೀವ ರಾಯರು ನಂತರ

ತಾಳಮದ್ದಳೆಯ ಉತ್ತಮ ಅರ್ಥಧಾರಿಗಳೂ ಸಂಘಟಕರೂ ಆದರು. ಪಾರಂಪಳ್ಳಿ ಶ್ರೀಧರ ಹಂದೆಯವರು ಉತ್ತರಕನ್ನಡದ ಹಿರಿಯ ಕಲಾವಿದರನ್ನು ನಮ್ಮಲ್ಲಿಗೆ ಕರೆತಂದು ಡೇರೆಯ ಮೇಳವನ್ನು ಉತ್ತುಂಗ ಸ್ಥಿತಿಯಲ್ಲಿ ನಡೆಸಲು ಶಕ್ತರಾದರು. ಕಾರ್ಕಡ ಶ್ರೀನಿವಾಸ ಉಡುಪ ಮತ್ತು ಹಂದಟ್ಟು ಶ್ರೀಧರ ಹಂದೆ ಜೋಡಿ ಪ್ರಪ್ರಥಮ ಯಕ್ಷಗಾನವನ್ನು ವಿದೇಶಕ್ಕೊಯ್ದ ಖ್ಯಾತಿಯ ಸಾಲಿಗ್ರಾಮ ಮಕ್ಕಳ ಮೇಳವನ್ನು ಸ್ಥಾಪಿಸಿ ಹಾರಾಡಿ-ಮಟ್ಪಾಡಿ ತಿಟ್ಟುಗಳನ್ನು ಮೆರೆಸುತ್ತಿದ್ದಾರೆ. ಎಲ್ಲಕ್ಕೂ ಮೇಲಾಗಿ ಡಾ। ಚಂದ್ರಶೇಖರ ಶೆಟ್ಟಿ ಮತ್ತು ಕಂದಾವರ ರಘುರಾಮ ಶೆಟ್ಟಿ ಇವರೀರ್ವರು ಪ್ರಸಿದ್ದ ಪ್ರಸಂಗಕರ್ತೃರಾಗಿ ಯಕ್ಷಗಾನ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಸಫಲರಾಗಿದ್ದಾರೆ.

ಇಂದೀಗ ಯಕ್ಷಗಾನ ಕವಿಗಳಿಗೇನೂ ಕೊರತೆ ಇಲ್ಲ. ಪ್ರತಿ ವರುಷ ಮೇಳದಲ್ಲಿರುವ ಕಲಾವಿದರನ್ನೇ ಗಮನದಲ್ಲಿರಿಸಿ, ಅವರಿಗೊಪ್ಪುವ ಪ್ರಸಂಗಗಳನ್ನು ಬರೆದು ಕೊಡುವ ಕವಿಗಳು ಕೆಲವರಾದರೆ ಜನಾಕರ್ಷಣೆಗೆ ಬೇಕಾಗಿ ಹೊಸ ಹೊಸ ಗಿಮಿಕ್ಸ್, ಸಿನೆಮಾ ಮಾದರಿಯ ಕಥೆಗಳನ್ನು ಹೆಣೆದು ಪ್ರಸಂಗ ರಚಿಸುವ ಕವಿಗಳು ಹಲವರು. ಆದರೆ ಕಂದಾವರದವರ ದಾರಿಯೇ ಬೇರೆ. ಹಿಂದಿನ ಪ್ರಸಂಗ ಕರ್ತೃರಂತೆ ಕಥಾಭಾಗಕ್ಕೆ ಕೊರತೆಯಾಗದಂತೆ, ಉತ್ತಮ ಸಂದೇಶ ನೀಡುತ್ತ ಪ್ರಸಂಗ ರಚನೆ ಮಾಡುವುದರಲ್ಲಿ ಅವರ ಕೌಶಲ್ಯ ಕಾಣಬಹುದಾಗಿದೆ. ಶ್ರೀಯುತರು ವರುಷಕ್ಕೊಂದು ಪ್ರಸಂಗ ಬರೆಯುವ ಸಾಹಸಕ್ಕೆ ಇಳಿದವರಲ್ಲ. ಆದರೆ ಅವರು ರಚಿಸದ ಎಲ್ಲ ಆಖ್ಯಾನಗಳೂ ಹಿಂದಿನ ಶ್ರೇಷ್ಠ ಕವಿಗಳು ಬರೆದ ಕೃತಿಗಳಿಗೆ ಸಮಾನವಾದವುಗಳೆಂದರೆ ತಪ್ಪಾಗದು. ಪ್ರಸಂಗಗಳ ವಸ್ತು, ರಂಗತಂತ್ರ, ಪದ್ಯಗಳ ಹಳೆಯ ಮಟ್ಟು-ಬಂಧ, ಭಾಷೆ, ಪ್ರಾಸ ಇತ್ಯಾದಿ ಎಲ್ಲವೂ ಕಲಬೆರಕೆಯಿಂದ ಹೊರತಾದವುಗಳು. ಶ್ರೀಯುತರ ಎಲ್ಲ ಕೃತಿಗಳೂ ಒಂದೇ ವರುಷಕ್ಕೆ ಆಡಿ ಮರೆಯುವಂತಹದಲ್ಲ. ಅವುಗಳು ನಿತ್ಯ ನೂತನ. ಶೂದ್ರ ತಪಸ್ವಿನಿಯಂತಹ ಪ್ರಸಂಗಗಳು ಕೆಲವು ಮೇಳಗಳಿಗೆ ಕಾಯಕಲ್ಪ ನೀಡಿ ಉಳಿಸಿ ಬೆಳೆಸಿವೆ. 'ಸಾಲಿಗ್ರಾಮ ಕ್ಷೇತ್ರೋತ್ಪತ್ತಿ' ಪ್ರಸಂಗ ರಚಿಸುವ ಸಂದರ್ಭ ನನಗೊದಗಿದಾಗ ಉತ್ತಮ ಮಾರ್ಗದರ್ಶನ ನೀಡಿ ನನ್ನಿಂದ ಆ ಕೆಲಸ ಮಾಡಿಸಿದ 'ಗುರು' ಸಮಾನ ಶೆಟ್ಟರನ್ನು ನಾನು ಎಂದೆಂದಿಗೂ ಮರೆಯಲಾರೆ.

ದ್ರೌಪದಿ ಪ್ರತಾಪ ಪ್ರಸಂಗದಲ್ಲಿ ಕಂದಾವರದವರ ನಾರದ, ನನ್ನದು ಕೃಷ್ಣನ ಪಾತ್ರ. ಮಾತುಗಾರಿಕೆಯಲ್ಲಿ ಕೊಂಚ ಹಿಂದುಳಿದ ನನ್ನನ್ನು ತಿದ್ದಿ ತೀಡಿ ಸರಿದಾರಿಗೆ ತರುತಿದ್ದರು ಶೆಟ್ಟರು. ತಮ್ಮ ಮಾತುಗಾರಿಕೆಯ ಜಾಣ್ಮೆಯಲ್ಲಿ ಪ್ರೇಕ್ಷಕರನ್ನು ತಮ್ಮತ್ತ ಸೆಳೆಯುತ್ತಿದ್ದ ಕಂದಾವರದವರು ಇಂದಿನ ಯಾವ ಪಾತ್ರಗಳನ್ನೂ ಕಡಿಮೆ ಮಾಡಿ ತೋರಿಸುತ್ತಿರಲಿಲ್ಲ. ಬದಲು ಜೊತೆಯಲ್ಲೇ ಕರೆದೊಯ್ಯುವ ಹೃದಯವಂತಿಕೆ ತೋರುತಿದ್ದರು. ಹಾಗಾಗಿಯೇ ಅವರನ್ನು ಹವ್ಯಾಸಿ ರಂಗದ 'ಸಾಮಗ' ಎಂದೇ ಜನ ಆಡಿಕೊಳ್ಳುತಿದ್ದರು. ಅನಂತರದ ದಿನಗಳಲ್ಲಿ ಖ್ಯಾತ ಹಿರಿಯ ಅರ್ಥದಾರಿಗಳ ಕೂಟದಲ್ಲಿ ಸಮರ್ಥವಾಗಿ ತಾಳಮದ್ದಳೆಯಲ್ಲೂ ಶೆಟ್ಟರು ಭಾಗವಹಿಸುತಿದ್ದರು.

ಶ್ರೀ ಕೃಷ್ಣ, ಶ್ರೀರಾಮ, ನಾರದ, ಅಕ್ರೂರ, ಸಂಜಯ ಮುಂತಾದ ಸೌಮ್ಯ ಪಾತ್ರಗಳನ್ನು ತಮ್ಮ ಸರಳ ಶುದ್ಧ ಭಾಷಾ ಶೈಲಿಯಲ್ಲಿ ತುಂಬಿಸುವ ಪ್ರತಿಭೆ ಅವರದ್ದು.

ಅಪೂರ್ವಭಾಷಿ, ಸ್ನೇಹಶೀಲ, ವಿನಯ ಸಂಪನ್ನ, ವಾಗ್ಮಿ, ಪ್ರಸಂಗಕರ್ತೃ ಶ್ರೀ ರಘುರಾಮ ಶೆಟ್ಟರು ರಾಮಾಯಣ, ಮಹಾಭಾರತ, ಭಾಗವತ ಇತ್ಯಾದಿ ಪುರಾಣಗಳಲ್ಲಿ ಅಪಾರ ಜ್ಞಾನ ಸಂಪನ್ನರೂ ಹೌದು. ರಾಷ್ಟ್ರ ಪ್ರಶಸ್ತಿ ಪುರಸ್ಕೃತ 'ಶ್ರೀ ಹಾರಾಡಿ ರಾಮ ಗಾಣಿಗ' ಗ್ರಂಥದ ಸಂಪಾದಕರಾಗಿಯೂ ತಮ್ಮತನ ತೋರಿಸಿದವರು ಶೆಟ್ಟರು. ಜೋಡಾಟಗಳಲ್ಲಿ ತೀರ್ಪುಗಾರರಾಗಿ ಎರಡೂ ಮೇಳಗಳ ಕಲಾವಿದರಿಂದ 'ಸೈ' ಎನಿಸಿಕೊಂಡ ನಿಷ್ಪಕ್ಷಪಾತ ಕಲಾವಿದರು ಇವರೆಂಬುದರಲ್ಲಿ ಎರಡು ಮಾತಿಲ್ಲ. ಪರಂಪರೆಯ ಯಕ್ಷಗಾನ ಪ್ರೇಮಿಗಳಾದ ಕಂದಾವರ ರಘು ಮಾಸ್ತರರ ಮುಂದಿನ ಬಾಳು ನೆಮ್ಮದಿಯಿಂದ ಕೂಡಿರಲಿ ಹಾಗೂ ಇನ್ನೂ ಹೆಚ್ಚಿನ ಯಕ್ಷಗಾನ ಸೇವೆ ಇವರು ಮಾಡುವಂತಾಗಲಿ, ಎಂದು ಹಾರೈಸುತ್ತೇನೆ.

ಮೌಲ್ಯಾಧಾರಿತ ಪ್ರಸಂಗ ಕರ್ತರು

ಕಂದಾವರ ರಘುರಾಮ ಶೆಟ್ಟರು

ಪ್ರೊ. ಉದಯಕುಮಾರ ಶೆಟ್ಟಿ
ಎಂ.ಐ.ಟಿ. ಮಣಿಪಾಲ

ಯಕ್ಷಗಾನ ಕ್ಷೇತ್ರದ ಮೌಲ್ಯಾದಾರಿತ ಪ್ರಸಂಗಕರ್ತ ಆದರ್ಶ ಅಧ್ಯಾಪಕ ಕುಂದಾಪುರ ತಾಲೂಕಿನ ಹೆಮ್ಮೆಯ ವರಪುತ್ರ ಕಂದಾವರ ರಘುರಾಮ ಶೆಟ್ಟರು 80ನೇ ಸಂವತ್ಸರಕ್ಕೆ ಕಾಲಿಡುತಿದ್ದಾರೆ.

ಪರಿಸರ ಹಾಗೂ ಪರಂಪರೆಯ ಪ್ರಭಾವದಿಂದ ರೂಪುಗೊಂಡು ಪರಿಶ್ರಮದಿಂದ ಪ್ರಸಿದ್ಧಿಗೇರಿದ ಸಿದ್ಧಿಯ ಕಲಾವಿದ ಕಂದಾವರ ರಘುರಾಮ ಶೆಟ್ಟರು. ಛಂದೋಬದ್ಧವಾಗಿ ಪೌರಾಣಿಕ ಆಕರಗಳನ್ನೇ ಬಳಸಿಕೊಂಡು ಸುಮಾರು 33 ಪ್ರಸಂಗ ರಚಿಸಿದ ಇವರ ಎಲ್ಲಾ ಪ್ರಸಂಗಗಳು ಮೌಲ್ಯಾಧಾರಿತ ಮತ್ತು ಸುಸಂಬದ್ಧವಾಗಿವೆ. ಎಲ್ಲವೂ ಡೇರೆ ಮೇಳಕ್ಕಾಗಿ ರೂಪುಗೊಂಡು ಪೆರ್ಡೂರು ಮೇಳಕ್ಕೆ ಇವರು ನೀಡಿದ ಪ್ರಥಮ ಪ್ರಸಂಗ ಶೂದ್ರ ತಪಸ್ವಿನಿ. ಯಜಮಾನರ ಗಲ್ಲಾಪೆಟ್ಟಿಗೆ ತುಂಬಿಸಿ ವರ್ಷವಿಡೀ ಜಯಭೇರಿ ಬಾರಿಸಿದೆ. ಸಾಲಿಗ್ರಾಮ ಮೇಳದಲ್ಲಿ ಇವರ ಚೆಲುವೆ ಚಿತ್ರಾವತಿ, ರತಿರೇಖಾ. ಸತಿಸೀಮಂತಿನಿ, ವಸುವರಾಂಗಿ ಮತ್ತು ಮೂಲ್ಕಿ ಮೇಳದಲ್ಲಿ ಸೀತಾ ಪಾರಮ್ಯ ಪ್ರಸಂಗವೂ ಜಯಭೇರಿ ಪಡೆದಿವೆ. ಇವರ ಶ್ರೀ ದೇವಿ ಬನಶಂಕರಿ, ವಧುಮಾಧವಿ ಸಹಿತ ಹತ್ತು ಪ್ರಸಂಗಗಳ ಬೃಹತ್ ಹೊತ್ತಗೆ ಪ್ರಕಟಗೊಂಡಿದೆ.

ರಘುರಾಮ ಶೆಟ್ಟರ ಅಜ್ಜ ಚಿತ್ತೂರು ಕೃಷ್ಣಯ್ಯ ಶೆಟ್ಟರು, ಮಾವ ಕಂದಾವರ ಅಣ್ಣಪ್ಪ ಶೆಟ್ಟರು ಆ ಕಾಲದ ಪ್ರಸಿದ್ಧ ಅರ್ಥಧಾರಿಗಳು. ಅವರ ತಂದೆ ಕರ್ಕಿ ಸದಿಯಣ್ಣ ಶೆಟ್ಟರು ಯಕ್ಷಗಾನ ಕಲಾಭಿಮಾನಿ ಅಲ್ಲದೆ ಹಲವಾರು ಕೂಟಗಳಲ್ಲಿ ಭಾಗವತಿಕೆ ಮಾಡಿದವರು. ಈ ಪರಂಪರೆ ಶೆಟ್ಟರಿಗೆ ನೆರವಾಗಿದೆ. ಬಾಲ್ಯದಲ್ಲಿ

ಅವರಿಗಿದ್ದ ಯಕ್ಷಗಾನ ಆಸಕ್ತಿ ಮತ್ತು ಲಯಗಾರಿಕೆ ಗುರುತಿಸಿದ ಅವರ ಗುರುಗಳಾದ ಬಿ. ರಮಾನಾಥ ವೈ. ನಾಯಕರು ಶಂಬೂಕವಧೆ ಎಂಬ ಕಿರು ಯಕ್ಷಗಾನ ಬಯಲಾಟದಲ್ಲಿ ಭಾಗವತಿಕೆ ಮಾಡಲು ಪ್ರೇರೇಪಿಸಿದರು. ಬಳಿಕ ನಾಲ್ಕಾರು ಪ್ರದರ್ಶನಗಳಲ್ಲಿ ಅವರದ್ದೇ ಭಾಗವತಿಕೆ. ಹತ್ತನೇ ತರಗತಿಯಲ್ಲಿ ಪಾದ್ರಿ ಸಂಧಾನವೆಂಬ ಬಯಲಾಟಕ್ಕೆ ಅವರದ್ದೇ ಭಾಗವತಿಕೆ. ಅಂದಿನ ಹಾಡುಗಾರಿಕೆಗೆ ಸಭಿಕರೊಬ್ಬರು ನೀಡಿದ ಪದಕ ಅವರ ಬಾಲ ಪ್ರತಿಭೆಗೆ ಸಂದ ಗೌರವ. ಇವರ ಅಜ್ಜ ಮತ್ತು ಮಾವ ಅರ್ಥಗಾರಿಕೆಯ ಸೂಕ್ಷ್ಮವನ್ನೂ ತಿಳಿಯ ಹೇಳಿ ತಮ್ಮೊಂದಿಗೆ ಹಲವಾರು ಕೂಟಗಳಿಗೆ ಕರೆದುಕೊಂಡು ಹೋಗಿ ಚಿಕ್ಕ ಚಿಕ್ಕ ಪಾತ್ರಗಳನ್ನು ಅವರಿಗೆ ಕೊಡಿಸಿದರು. ಮುಂದೆ ಶಿವಪುರ ಪಂಡಿತರನ್ನು ಗುರುಗಳಾಗಿ ಸ್ವೀಕರಿಸಿ, ಅವರ ಮಾರ್ಗದರ್ಶನದಲ್ಲಿ ಮುಂದುವರಿದು ಪ್ರಭಾವಿ ಅರ್ಥಧಾರಿಗಳಾಗಿ ಮೂಡಿ ಬಂದರು.

ಶೆಟ್ಟರು ಹೈಸ್ಕೂಲಿನಲ್ಲಿ ಓದುತಿದ್ದ ಸಂದರ್ಭ ಮುದ್ದಣನ ರತ್ನಾವತಿ ಕಲ್ಯಾಣ ಹಾಗೂ ಕುಮಾರ ವಿಜಯ ಪ್ರಸಂಗದ ಕೆಲವು ಪದ್ಯಗಳನ್ನು ಅಭ್ಯಸಿಸುವ ಸಂದರ್ಭ ಬಂದಾಗ ಅದರ ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳಿಗೆ ಮಾರು ಹೋಗಿ ಅವರು ಪ್ರಸಂಗ ರಚನೆಯತ್ತ ಮನಮಾಡಿದರು. ಹಲವಾರು ಪ್ರಸಂಗಗಳನ್ನು ಓದಿ ಪದ್ಯ ರಚನೆಯ ಸೂಕ್ಷ್ಮ ಅರಿತುಕೊಂಡರು. ಚಾರಿತ್ರಿಕ ಕಥಾವಸ್ತುವಾದ ಚಂದ್ರಗುಪ್ತ ವಿಜಯ ಎಂಬ ಪ್ರಸಂಗ ರಚಿಸಿದರು. ಅದು ಪ್ರದರ್ಶನಕ್ಕೆ ಬರುವ ಮುನ್ನ ಕಳೆದು ಹೋಯಿತು. ಖ್ಯಾತ ಪ್ರಸಂಗಕರ್ತ ಡಾ। ವೈ. ಚಂದ್ರಶೇಖರ ಶೆಟ್ಟಿಯವರ ಸಲಹೆಯಂತೆ ಸತೀ ಸೀಮಂತಿನಿ ಎಂಬ ಪ್ರಸಂಗ ರಚಿಸಿದರು. ಅದು ಕಾಳಿಂಗ ನಾವಡರ ಭಾಗವತಿಕೆಯಲ್ಲಿ ಸಾಲಿಗ್ರಾಮ ಮೇಳದಲ್ಲಿ ಯಶಸ್ವಿಯಾಯಿತು. ಇದು ಅವರ ಪ್ರಸಂಗ ರಚನೆಯತ್ತ ಮುನ್ನುಗ್ಗಲು ಸಹಕಾರಿಯಾಯಿತು.

ಶ್ರೀ ಸಾಲಿಗ್ರಾಮ ಮೇಳದಲ್ಲಿ ಸತಿ ಸೀಮಂತಿನಿ, ಚೆಲುವೆ ಚಿತ್ರಾವತಿ, ಶ್ರೀದೇವಿ ಬನಶಂಕರಿ, ರತಿರೇಖಾ, ಪೆರ್ಡೂರು ಮೇಳದಲ್ಲಿ ಶೂದ್ರ ತಪಸ್ವಿನಿ, ಚಾರುಚಂದ್ರಿಕೆ, ಪುಷ್ಪಾಂಜಲಿ, ಶ್ರೀ ಧರ್ಮಸ್ಥಳ ಮೇಳದಲ್ಲಿ ವಸುವರಾಂಗಿ, ಮೂಲ್ಕಿ ಮೇಳದಲ್ಲಿ ಸೀತಾ ಪಾರಮ್ಯ, ನಾಗನಂದನೆ ಅತ್ಯಂತ ಯಶಸ್ವಿಯಾಯಿತು. ಶ್ರೀ ಮಂದಾರ್ತಿ, ಮಾರಣಕಟ್ಟೆ ಮೇಳಗಳಲ್ಲೂ ಅವರ ಪ್ರಸಂಗಗಳು ಯಶಸ್ವಿಯಾಗಿವೆ. ಶೆಟ್ಟರ ಪದ್ಯಗಳು ಸರಳವಾಗಿ, ಸುಲಲಿತವಾಗಿದ್ದು, ಉತ್ತಮವಾದ ಛಂದಸ್ಸಿನಿಂದ ಕೂಡಿದ್ದು ಪಾತ್ರಗಳು ಲವಲವಿಕೆಯಿಂದಿರುವುದೇ ಅವರ ಪ್ರಸಂಗಗಳ ಯಶಸ್ಸಿನ ಗುಟ್ಟು.

ಉಭಯತಿಟ್ಟುಗಳ ಸವ್ಯಸಾಚಿ ಭಾಗವತ ಕಡತೋಕ ಮಂಜುನಾಥ ಭಾಗವತರು ಅವರ ಸಂದರ್ಶನದಲ್ಲಿ ಶೆಟ್ಟರ ಪದ್ಯಗಳ ಬಗ್ಗೆ ಮೆಚ್ಚುಗೆಯ ಮಾತನ್ನು ಹೇಳಿದ್ದಾರೆ. ಅವರ ಪ್ರಥಮ ಪ್ರಸಂಗ ಸತೀ ಸೀಮಂತಿನಿಯ ಪದ್ಯಗಳನ್ನು ಮೆಚ್ಚಿ ಪ್ರೋತ್ಸಾಹಿಸಿದ ಅಂದಿನ ಸಾಲಿಗ್ರಾಮ ಮೇಳದ ಮೇರು ಭಾಗವತ ಕಾಳಿಂಗ ನಾವಡರು ಮುಂದಿನ ಪ್ರಸಂಗ ರಚನೆಗೆ ಮಾರ್ಗದರ್ಶನ ಮಾಡಿದ್ದರು. ಸುಬ್ರಹ್ಮಣ್ಯ ಧಾರೇಶ್ವರರಂತಹ ಉತ್ತಮ ಭಾಗವತರು ಹಾಗೂ ಆಗಿನ ಮೇರು ಕಲಾವಿದರ ಉತ್ತಮ ದುಡಿತವೂ ನನ್ನ ಪ್ರಸಂಗಗಳ ಯಶಸ್ಸಿಗೆ ಕಾರಣವೆನ್ನುವ ಇವರು ತೀರಾ ನಿಗರ್ವಿಗಳೂ.

ಸ್ವಂತಿಕೆಯಿಂದ ಪ್ರಸಂಗ ರಚಿಸಬೇಕು. ಯಾರದ್ದೋ ಕಥೆಗೆ ಯಾರದ್ದೋ ಪದ್ಯ ರಚನೆಯಾಗಬಾರದು, ಪದ್ಯ ಹಾಡುವಂತಿರಬೇಕು. ಉತ್ಕೃಷ್ಟ ಸಾಹಿತ್ಯ ಮತ್ತು ಛಂದಸ್ಸು ಮೇಳೈಸಬೇಕು. ಜನರಂಜನೆಗಾಗಿ ಅಶ್ಲೀಲ ಅಸಂಬದ್ಧ ಹಾಸ್ಯ ಇರಕೂಡದು. ಮಾತ್ರಾಗಣ, ಅಕ್ಷರಗಣ, ಅಂಶಿಗಣ ಗೊತ್ತಿರುವವರು ಮಾತ್ರ ಪ್ರಸಂಗ ರಚಿಸಬೇಕು ಎನ್ನುವುದು ಶೆಟ್ಟರ ನಿಲುವು. ಯುವ ಪ್ರಸಂಗಕರ್ತರಿಗೆ ಶೆಟ್ಟರ ಕಿವಿಮಾತು.

ಯಕ್ಷಗಾನ ಕ್ಷೇತ್ರದ ಇವರ ಸಾಧನೆಯನ್ನು ಗುರುತಿಸಿ, ನಾಡಿನಾದ್ಯಂತ ರಾಜ್ಯಮಟ್ಟದಲ್ಲೂ ಅನೇಕ ಸನ್ಮಾನಗಳು ನೆರವೇರಿವೆ. ಕಂದಾವರ ರಘುರಾಮ ಶೆಟ್ಟಿ ಪ್ರತಿಷ್ಠಾನದ ಮೂಲಕ ಪ್ರತಿ ವರ್ಷ ಅರ್ಹ ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಉಡುಪಿ ರಾಜಾಂಗಣದ ತಾಳ ಮದ್ದಳೆಯ ಮಟ್ಟಿ ಮುರಳೀದರ ರಾವ್ ಪ್ರಶಸ್ತಿ, ಸೀತಾನದಿ ಗಣಪಯ್ಯ ಶೆಟ್ಟಿ ಪ್ರಶಸ್ತಿ, ಕವಿ ಮುದ್ದಣ ಪ್ರಶಸ್ತಿ, ಹುಟ್ಟೂರ ಸನ್ಮಾನ ಸಹಿತ ದೂರದ ಮುಂಬೈಯಲ್ಲಿ ಕಣಂಜಾರು ಪ್ರಶಸ್ತಿ ಇವರಿಗೆ ಲಭಿಸಿದೆ. ಕುಂದಾಪುರ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಸದ್ಯ 80ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಅವರ ಸಾಧನೆಯನ್ನು ಬಿಂಬಿಸುವ ಅಭಿನಂದನಾ ಗ್ರಂಥ ಬಿಡುಗಡೆಯಾಗುತ್ತಿರುವುದು ಸ್ತುತ್ಯಾರ್ಹ.

ಕಂದಾವರದವರೂ, ಕಾಳಿಂಗನಾವಡರು

ಡಾ। ಎ. ರಾಜೇಶ್ ಕುಮಾರ ಶೆಟ್ಟಿ
ಮಿತ್ರ ಕ್ಲಿನಿಕ್, ಕೋಟೇಶ್ವರ

ಕಂದಾವರ ಎಂಬ ಹೆಸರು ನಮ್ಮ ಕುಂದಾಪುರ ಭಾಗದಲ್ಲಿ ಮತ್ತು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಕ್ಷಗಾನ ಸಾರಸ್ವತ ಲೋಕದಲ್ಲಿ ದೊಡ್ಡ ಹೆಸರು. ಆಧುನಿಕ ಯಕ್ಷಗಾನ ಕವಿಗಳಲ್ಲಿ ಕುಂದಾಪುರ ಭಾಗದಲ್ಲಿ ಸಾಹಿತ್ಯಕ ಮತ್ತು ಮೌಲ್ಯಾತ್ಮಕ ಪ್ರಸಂಗವನ್ನು ಜನರಿಗೆ ಕೊಟ್ಟವರು ಮೂರು ಜನ ಕವಿಗಳು. ಕಂದಾವರ ರಘುರಾಮ ಶೆಟ್ರು, ದಿ। ಡಾ। ವೈ. ಚಂದ್ರಶೇಖರ ಶೆಟ್ರು ಮತ್ತು ದಿ. ಜಿ.ಆರ್. ಕಾಳಿಂಗ ನಾವಡರು. ಅದರಲ್ಲೂ ಕಂದಾವರದವರು ಉತ್ತಮ ಕಥಾವಸ್ತು, ಅತ್ಯಂತ ಕ್ಲಿಷ್ಟವೂ ಅಲ್ಲದ, ನವಿರಾದ ಸ್ಪಷ್ಟ ಸಾಹಿತ್ಯವನ್ನೂ, ಸ್ಫುಟವಾದ ಛಂದಸ್ಸನ್ನು ನೀಡಿದ ಮಹಾಮೇಧಾವಿ. ಆದ್ದರಿಂದಲೇ ಆ ಕಾಲದ ಪ್ರಸಿದ್ಧ ತರುಣ ಭಾಗವತ ದಿ। ಜಿ.ಆರ್ ಕಾಳಿಂಗ ನಾವಡರಿಂದಲೇ ಭೇಷ್ ಎನಿಸಿಕೊಂಡು ಇನ್ನಷ್ಟು ಸ್ಫೂರ್ತಿಯನ್ನು ಪಡೆದು ಮತ್ತೆ ಮತ್ತೆ ಪ್ರಸಂಗವನ್ನು ರಚಿಸಲು ಪ್ರೇರಣೆ ಪಡೆಯುವಂತಾಯಿತು.

ರಘುರಾಮ ಶೆಟ್ಟರ ಕಟ್ಟಾ ಅಭಿಮಾನಿಯಾದ ನಾನು ಯಕ್ಷಗಾನದ ಮೂಲಕವೇ ಅವರನ್ನು ಕಂಡವನು. ಗೌರವದಿಂದ ನೋಡಿದವನು. ನಾಟಕದಲ್ಲಿ ಅವರ ಹಾಸ್ಯ ಪಾತ್ರಗಳನ್ನು ನೋಡಿ ಹೊಟ್ಟೆ ಹುಣ್ಣಾಗುವಂತೆ ನಕ್ಕವನು. ಸತಿ ಸೀಮಂತಿನಿ ಪ್ರಸಂಗದಿಂದ ಹಿಡಿದು ಮಾತೃದೇವೋಭವದವರೆಗಿನ ಎಲ್ಲಾ ಲಭ್ಯ ಕ್ಯಾಸೆಟ್, ಸಿ.ಡಿ. ಸಂಗ್ರಹವಿಲ್ಲದ ಯಕ್ಷಾಭಿಮಾನಿಗಳ ಮನೆಯಿಲ್ಲ. ಅವುಗಳು ನನ್ನಲ್ಲೂ ಇವೆ. ಅವರ ಪದ್ಯಗಳನ್ನು ಗುನುಗದ ಅಭಿಮಾನಿಗಳಿಲ್ಲ. ಅವರ 'ದಶಮಿ' (ಹತ್ತು ಪ್ರಸಂಗಗಳ ಸಂಗ್ರಹ) ಯನ್ನು ಹೊಂದದ ಹವ್ಯಾಸಿ ಕಲಾವಿದರಿಲ್ಲ,

ಪ್ರಾಯಶಃ ಇವತ್ತಿಗೂ ಅವರ ಎವರ್‌ಗ್ರೀನ್ ಪ್ರಸಂಗಗಳಾದ ಚೆಲುವೆ ಚಿತ್ರಾವತಿ, ಶ್ರೀ ದೇವಿ ಬನಶಂಕರಿ, ರತಿರೇಖಾ, ಶೂದ್ರ ತಪಸ್ವಿನಿ, ಸೀತಾಪಾರಮ್ಯ, ಸತಿಸೀಮಂತಿನಿ ಮುಂತಾದ ಪ್ರಸಂಗಗಳು ಭೀಷ್ಮ ವಿಜಯ, ಕೃಷ್ಣ ಸಂಧಾನದಂತಹ ಪ್ರಸಂಗಗಳಿಗೆ ಸಾಹಿತ್ಯದಲ್ಲಿ, ಛಂದಸ್ಸಿನಲ್ಲಿ ಯಾವತ್ತೂ ಕಡಿಮೆಯಿಲ್ಲ. ಯಾಕೆಂದರೆ ಇವತ್ತಿಗೂ ಅವರ ಎಲ್ಲಾ ಸೂಪರ್‌ಹಿಟ್ ಪ್ರಸಂಗಗಳು ಬಯಲಾಟ ಮೇಳಗಳಲ್ಲಿ 20–30 ವರ್ಷಗಳ ನಂತರವೂ ದಿನಾಲೂ ಆಡುತ್ತಿರುವುದೇ ಆ ಪ್ರಸಂಗಗಳ ಗಟ್ಟಿತನಕ್ಕೆ ಸಾಕ್ಷಿಯಾಗಿದೆ.

ಕಾಳಿಂಗ ನಾವಡರ ಮತ್ತು ಇವರ ಪ್ರಸಂಗಗಳ ಪದ್ಯಗಳು ಅಭಿಮಾನಿಗಳಿಗೆ ಬಾಯಿಪಾಠವೇ.

ಉದಾ :– **ಜಂಜೂಟಿ ರೂಪಕ**

ನೋಡೆ ನೋಡೆ ಸಖಿಯೆ ನೀರ ಮೇಲೆ ತೇಲುವಾ
ಮೋಡಿಗಾರ ಸುಂದರಾಂಗ ಸ್ಮರನ ಪೋಲುವಾ ॥

ಹಿಂದೋಳ ತ್ರಿವುಡೆ

ಕಂಡು ರೂಪವನ್ನು ಮೋಹ । ಗೊಂಡು ತಂದೆ ಮನ್ನಿಸೆನ್ನ ।
ಗಂಡನಾಗು ಬೇಡುವೆ ಉ। ದ್ಧಂಡ ಸಾಹಸಿ ॥

ಕಾಂಬೋಧಿ ಏಕ

ಚಿತ್ರವರ್ಮಕುವರಿಯಿವಳು ವೀರಕೇಳು। ಬಲುವಿ।
ಚಿತ್ರವಯ್ಯ ಇವಳ ಕಥೆಯು ವೀರಕೇಳು ॥

(ಸತಿ ಸೀಮಂತಿನಿ)

ಜಂಜೂಟಿ ರೂಪಕ

ಕಮಲ ವಿಮಲ ಜಲಜ ವನಜ ಬನ್ನಿರೀಕಡೆ ।
ನಿಮಗೆ ಮುದದ ವಾರ್ತೆಯೊಂದ ಪೇಳ್ವೆನಾದೊಡೆ ॥

ಮೋಹನ ತ್ರಿವುಡೆ

ಬಾಲೆ ಬನಶಂಕರಿಯು ಸಖಿಯರ ಮೇಳದೊಂದಿಗೆ

(ಶ್ರೀ ದೇವಿ ಬನಶಂಕರಿ)

ಅವಂತಿಗರಸನಾಗುವ ವೀರ ತಾನೆಂದು ।
ಅವತ್ತು ನೀನೆಂದ ನುಡಿಯು ॥

(ಚೆಲುವೆ ಚಿತ್ರಾವತಿ)

ಗೋವಿನ ಹಾಡನ್ನು ಈ ಪ್ರಸಂಗದಲ್ಲಿ ಅಳವಡಿಸಿರುವುದು ಕೂಡಾ ಒಂದು ಅದ್ಭುತ ಕಲ್ಪನೆ. ಪ್ರಾಯಶಃ ಶಾಲಾ ಮಕ್ಕಳನ್ನು ಯಕ್ಷಗಾನಕ್ಕೆ ಆಕರ್ಷಿಸಲು ಒಲವು ತೋರಿಸಲಿಕ್ಕೆ ಇರಬಹುದೆಂದು ಕಾಣುತ್ತದೆ.

ಕಂದಾವರದವರನ್ನು ಮನಸ್ಸಿನಲ್ಲಿ ಎಣಿಸಿದಾಗಲೆಲ್ಲಾ ಇನ್ನೋರ್ವ ವ್ಯಕ್ತಿ ನಮ್ಮ ಮನಸ್ಸಿನಲ್ಲಿ ಬರುವವರೆಂದರೆ ಯಕ್ಷಗಾನದ ಧ್ರುವತಾರೆ ಎನಿಸಿಕೊಂಡ ದಿ| ಜಿ. ಆರ್. ಕಾಳಿಂಗ ನಾವಡರು. ಸೀಮಂತಿನಿ, ಬನಶಂಕರಿ, ಚಿತ್ರಾವತಿ, ರತಿರೇಖಾ, ವಸುವರಾಂಗಿ ಪ್ರಸಂಗಗಳನ್ನು ಪ್ರಸಿದ್ಧಿಗೊಳಿಸಿರುವುದು ಕಾಳಿಂಗ ನಾವಡರೇ. ಆ ಸಮಯ ಇಬ್ಬರಿಗೂ ಹೆಸರು ಮಾಡುವ ಒಂದು ಸಂಕ್ರಮಣ ಕಾಲವಾಗಿತ್ತು. ನನ್ನ ಪ್ರಕಾರ ಆ ಕಾಲವೇ ಯಕ್ಷಗಾನದ ಸುವರ್ಣಯುಗ. ಆ ಕಾಲದಲ್ಲಿ ಕಂದಾವರದವರಿಂದ ಹಾಗೂ ನಾವಡರಿಂದ ಪ್ರಸಂಗ ರಚನೆಯಾಯ್ತು. ಇಬ್ಬರೂ ಪರಸ್ಪರ ಒಬ್ಬರಿಗೊಬ್ಬರು ಉತ್ತೇಜನಕಾರಿಯಾಗಿದ್ದು ಒಳ್ಳೊಳ್ಳೆಯ ಕೃತಿಗಳನ್ನು ರಚಿಸಿದರು. ಒಬ್ಬರಿಗೊಬ್ಬರು ಪ್ರೇರಣೆಯಾಗಿದ್ದರು. ಇವರಿಬ್ಬರ ಗೌರವ ಪೂರ್ವಕ ಗಾಢ ಸ್ನೇಹವು ಯಕ್ಷಗಾನ ಕ್ಷೇತ್ರದಲ್ಲಿ ಕೃಷಿ ಮಾಡಲು ಅನುವಾಯಿತು. ಅಂದು ಪ್ರಚಲಿತದಲ್ಲಿಲ್ಲದ ಕೆಲವೊಂದು ರಾಗಗಳನ್ನು ಜೋಡಿಸಿರುವುದು, ಕೆಲವು ಹೊಸ ರಾಗಗಳನ್ನು(ಹಿಂದುಸ್ಥಾನಿ) ಕಂಪೋಸ್ ಮಾಡಿರುವುದು ಒಬ್ಬ ಸೃಜನಶೀಲ ಭಾಗವತನ ಕೈಯಲ್ಲಿ ಆ ಪ್ರಸಂಗ ಸಿಕ್ಕಿ ರಂಗದಲ್ಲಿ ಅಷ್ಟು ಸುಂದರವಾಗಿ ಬಹುಕಾಲ ಮೂಡಿಬರಲು ಸರಾಯವಾಯ್ತು.

ಕಾಳಿಂಗ ನಾವಡರ ನಿರ್ದೇಶನ ಹೇಗಿತ್ತೆಂದರೆ ಕೇವಲ ತನ್ನ ಪದ್ಯ ಮಾತ್ರ ಚೆನ್ನಾಗಿದ್ದರೆ ಸಾಲದು. ಎಲ್ಲಾ ಪಾತ್ರಗಳೂ ಚೆನ್ನಾಗಿ ಮೂಡಿ ಬರಬೇಕು. ಯಾವ ಭಾಗವೂ ಸಪ್ಪೆಯಾಗಬಾರದು. ಅದಕ್ಕೆ ರಘು ಮಾಸ್ತರರ ಸಾಥ್ ಕೂಡಾ ಪೂರಕವಾಗಿತ್ತು. ರಘುಮಾಸ್ತರರ ಪ್ರಸಂಗವೆಂದರೆ ಪ್ರೇಕ್ಷಕರ ಗಡಣವೇ ನೆರೆಯುತಿತ್ತು. ಸದಾ ಗಲ್ಲಾ ಪೆಟ್ಟಿಗೆ ತುಂಬುವಷ್ಟು ಕಲೆಕ್ಷನ್ ಆಗುತಿತ್ತು.

ರಘು ಮಾಸ್ತರರು ಸಿಕ್ಕಿದಾಗಲೆಲ್ಲಾ ನಾನು ನಾವಡರ ಹಾಗೂ ಅವರ ಸ್ನೇಹದ ಬಗ್ಗೆ ಕೇಳುತ್ತಾ ಇರುತ್ತೇನೆ. ಆಗ ಅವರು " ನನಗೆ ಸ್ಫೂರ್ತಿಯಾಗಿದ್ದ ನಾವಡರು ಸಣ್ಣ ಪ್ರಾಯದಲ್ಲೇ ತೀರಿಕೊಂಡರು. ಅವರು ತೀರಿಕೊಂಡ ಮೇಲೆ ನನಗೆ ಪ್ರಸಂಗ ರಚನೆಗೆ ಉತ್ಸಾಹವೇ ಇಲ್ಲದಂತಾಗಿದೆ" ಎನ್ನುತ್ತಾರೆ. ಮಹಾ ಮೇಧಾವಿಯಾದ ಅವರು ಯಕ್ಷಗಾನ ಸಾಹಿತ್ಯಕ್ಕೆ ಮೆರಗು ನೀಡಲೆಂದೇ ಜನಿಸಿದವರೆಂದು ನನಗೆ ಕಾಣುತ್ತದೆ. ಇದು ನಮ್ಮೆಲ್ಲರ ಭಾಗ್ಯವೇ ಸರಿ.

ಕಂದಾವರದವರು ಒಳ್ಳೆಯ ಭಾಷಣಕಾರರು ಹೌದು. ಹೇಳಬೇಕಾದ ಮಾತುಗಳನ್ನು ಕೆಲವೇ ವಾಕ್ಯಗಳಲ್ಲಿ ಹೇಳಿ ಮುಗಿಸುತ್ತಾರೆ. ಮುಂದೆ ಮಾತಾಡುವವರಿಗೆ ಅವಕಾಶವನ್ನು ಕಲ್ಪಿಸಿಕೊಡುತ್ತಾರೆ. ಪ್ರೇಕ್ಷಕರಿಗೆ ಇನ್ನೂ ಇವರ ಮಾತುಗಳನ್ನು ಕೇಳಬೇಕೆಂಬ ಆತುರದಲ್ಲಿರುವಾಗಲೇ ಇವರ ಮಾತು ಮುಗಿದು ಹೋಗುತ್ತದೆ. ಉದಾಹರಣೆಗೆ ದೂರದರ್ಶನದಲ್ಲಿ ಇವರ ಒಂದು ಸಂದರ್ಶನ ಇತ್ತೀಚೆಗೆ ಬಂದಿತ್ತು. ಅದರಲ್ಲಿ ಇವರ ಸ್ವಾರಸ್ಯಕರ ಹಾಗೂ ಅನುಭವ ಪೂರ್ಣವಾದ ಮಾತುಗಳನ್ನು ಕೇಳಿದ ಶ್ರೋತೃಗಳು ಪುನಃ ಅವರ ಸಂದರ್ಶನ ಮಾಡಿಸಿ ಅವರಿಂದ ಇನ್ನೂ ಹೆಚ್ಚಿನ ಅನುಭವದ ಮಾತುಗಳನ್ನು ಕೇಳುವ ಅವಕಾಶ ಮಾಡಿಕೊಡಬೇಕೆಂದು ದೂರದರ್ಶನ ಕಾರ್ಯನಿರ್ವಾಹಕರನ್ನು ಕೇಳಿಕೊಂಡಿದ್ದರಾಗಿ ತಿಳಿದುಬರುತ್ತದೆ.

ಕಂದಾವರದವರನ್ನು ನಾನು ಪ್ರಥಮ ನೋಡಿದ್ದು 1980ರಲ್ಲಿ ಆನಗಳ್ಳಿಯ ನನ್ನ ಕುಟುಂಬಿಕರ ಮನೆಯಲ್ಲಿ ನಡೆದ ತಾಳಮದ್ದಳೆಯಲ್ಲಿ. ಅಂದಿನ ಕೂಟದಲ್ಲಿ ಅವರ ಅರ್ಥ ಕೇಳಲು ತುಂಬಾ ಪ್ರೇಕ್ಷಕರು ನೆರೆದಿದ್ದರು. ಸುಧನ್ವನ ಅರ್ಥದಲ್ಲಿ ಪ್ರೇಕ್ಷಕ ಸಮುದಾಯವನ್ನು ಸಂತೃಪ್ತಿಗೊಳಿಸಿದ್ದರು. ನನ್ನ ಅಜ್ಜ ಹಿಲಿಯಾಣ ಸಂಜೀವ ಹೆಗ್ಡೆಯವರಿಗೆ ಕಂದಾವರದವರು ಬಹಳ ಆತ್ಮೀಯರಾಗಿದ್ದರು.

ಕಂದಾವರದವರು ಬಹಳ ಸರಳ ಸ್ವಭಾವದವರು. ಜನಪ್ರಿಯತೆಯಿಂದ ಹಿಗ್ಗಿದವರಲ್ಲ. ಹೊಗಳಿಕೆಯಿಂದ ಉಬ್ಬಿದವರಲ್ಲ. ನಾನು ಅಂದು ನೋಡಿದ ಕಂದಾವರದವರಿಗೂ ಈಗ ನೋಡುವ ಕಂದಾವರದವರಿಗೂ ಯಾವ ವ್ಯತ್ಯಾಸವೂ ಇಲ್ಲ. 80ರ ಈ ಪ್ರಾಯದಲ್ಲೂ ಎಳೆಯರಂತೆ ಉತ್ಸಾಹಿತರಾಗಿಯೇ ಇರುತ್ತಾರೆ. ಸದಾ ಹಸನ್ಮುಖರಾಗಿಯೇ ಶೋಭಿಸುತ್ತಾರೆ. ಹಿರಿಯ- ಕಿರಿಯ ಮಿತ್ರರೊಂದಿಗೆ ಉತ್ತಮ ಬಾಂಧವ್ಯದಿಂದಲೇ ವ್ಯವಹರಿಸುತ್ತಾರೆ. ಅವರು ಆಯುರಾರೋಗ್ಯ ಐಶ್ವರ್ಯ ಹೊಂದಿ ಇನ್ನಷ್ಟು ಕೃತಿಗಳನ್ನು ರಚಿಸಲಿ. ನಮಗೆಲ್ಲರಿಗೂ ಬಹುಕಾಲ ಮಾರ್ಗದರ್ಶಕರಾಗಿರಲಿ ಎಂದು ಶ್ರೀ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ನನ್ನ ಪ್ರೀತಿಯ ಅಜ್ಜ

ಅಕ್ಷತಾ ಶೆಟ್ಟಿ
ಅಂತಿಮ ಎಮ್.ಎಸ್.ಸಿ.,
ಕೃಷಿ ವಿಶ್ವವಿದ್ಯಾಲಯ, ಧಾರವಾಡ

"ವಿದ್ವಾನ್ ಸರ್ವತ್ರ ಪೂಜ್ಯತೆ" ಎಂಬ ಸುಭಾಷಿತಕ್ಕೆ ಜೀವಂತ ನಿದರ್ಶನದಂತಿದ್ದಾರೆ ನನ್ನ ಅಜ್ಜ. ಅವರು ಹೋದ ಕಡೆಗಳಲೆಲ್ಲಾ ಆದರದಿಂದ ಆಮಂತ್ರಿಸುತ್ತಾರೆ. ಗೌರವದ ಸ್ಥಾನ-ಮಾನವನ್ನಿತ್ತು ಉಪಚರಿಸುತ್ತಾರೆ. ಇದನ್ನು ಕಣ್ಣಾರೆ ಕಂಡು ಪುಳಕಿತಗೊಂಡಿದ್ದೇನೆ. ಕಿವಿಯಾರೆ ಕೇಳಿ ಆನಂದ ಹೊಂದಿದ್ದೇನೆ. ಇಂತಹ ಗೌರವಾನ್ವಿತ ವ್ಯಕ್ತಿ ನನ್ನಜ್ಜನೆಂದು ಹೆಮ್ಮೆಯಿಂದ ಬೀಗಿದ್ದೇನೆ.

ನನ್ನ ಅಜ್ಜ ಆದರ್ಶ ಅಧ್ಯಾಪಕರಾಗಿ, ಶ್ರೇಷ್ಠ ಹಾಸ್ಯ ನಟರಾಗಿ, ಉತ್ತಮ ಅರ್ಥದಾರಿಯಾಗಿ, ಸಮರ್ಥ ಪ್ರಸಂಗಕರ್ತೃರಾಗಿ ಸಮಾಜದಲ್ಲಿ ಮಾನ್ಯರಾದವರು. ಅವರು ಸಹನಾಮೂರ್ತಿ, ಸದಾಹಸನ್ಮುಖಿ. ಅವರು ಸಿಟ್ಟುಗೊಂಡುದನ್ನು ನಾನು ಕಂಡುದೇ ಇಲ್ಲ. ನನಗಾಗಲೀ, ಮನೆಯ ಇತರರಿಗಾಗಲಿ ಬೈದದ್ದೇ ಇಲ್ಲ. ಹೊಡೆದದ್ದಂತೂ ಇಲ್ಲವೇ ಇಲ್ಲ. ನನ್ನನ್ನು ಹೆಚ್ಚಾಗಿ ಪ್ರೀತಿಸಿದ್ದೂ ಮಾತ್ರವಲ್ಲ, ನಾನು ಮಾಡಿದ ಎಲ್ಲಾ ಕೆಲಸಗಳಿಗೆ ಸ್ಫೂರ್ತಿದಾಯಕರಾಗಿ, ಬೆನ್ನೆಲುಬಾಗಿ ನಿಂತವರು ಅವರು. ನನ್ನ ಅಜ್ಜ ನನಗಾಗಿ ಪಟ್ಟ ಶ್ರಮ, ಮಾಡಿದ ತ್ಯಾಗವನ್ನು ನಾನು ನೆನಪು ಮಾಡಿಕೊಳ್ಳಲೇಬೇಕು.

ಮೂಲತಃ ಹಠ ಸ್ವಭಾವದವಳಾದ ನಾನು ಎಸ್.ಎಸ್.ಎಲ್.ಸಿ. ಮುಗಿದಾಕ್ಷಣ ಮೂಡುಬಿದಿರೆಯ ಆಳ್ವಾಸ್ ಕಾಲೇಜಿಗೆ ಸೇರಬೇಕೆಂದು ಹಠಮಾಡಿದೆ. ಆಗ ನಮಗೆ ಆರ್ಥಿಕವಾಗಿ ಸ್ವಲ್ಪ ಕಷ್ಟದ ದಿನಗಳೇ ಆಗಿದ್ದುವು. ಬೇರೆ ಕಡೆ ಸೇರಬಹುದಲ್ಲಾ ಎಂದು ಮನೆಯವರೆಲ್ಲಾ ಹೇಳಿದಾಗ ನಿರಾಶೆಗೊಂಡ ನನ್ನ ಕಣ್ಣುಗಳಿಂದ ಕಂಬನಿ ಹರಿಯಿತು. ಇದನ್ನು ಕಂಡ ನನ್ನಜ್ಜ ಅನಾರೋಗ್ಯದಲ್ಲಿದ್ದರೂ ಕೂಡಾ ಅದಾವುದನ್ನು ಗಣಿಸದೆ, ತಕ್ಷಣವೇ, ಅದೇ ದಿನವೇ ಹಣದ ವ್ಯವಸ್ಥೆ ಮಾಡಿಕೊಂಡು

ಆಳ್ವಾಸ್ ಕಾಲೇಜಿಗೆ ಸೇರಿಸಲು ಹೊರಟೇ ಬಿಟ್ಟರು. ಅವರನಾಮದ ಬಲದಿಂದ ನನಗೆ ಅಲ್ಲಿ ಸೀಟು ಸಿಕ್ಕಿತು. ಮಾತ್ರವಲ್ಲ ಹಲವಾರು ಅನುಕೂಲತೆಗಳೂ ದೊರೆತವು.

ನನ್ನ ಅಜ್ಜನ ಕಲೆ ಹಾಗೂ ಕಲಾಭಿಮಾನ ಸ್ವಲ್ಪ ಮಟ್ಟಿಗೆ ನನಗೂ ಹರಿದು ಬಂದಿತ್ತು. ನಾಟಕ, ಏಕ ಪಾತ್ರಾಭಿನಯ ಹೀಗೆ ನನ್ನ ಕಲೆಗೆ ಒಂದು ರೂಪ ಕೊಟ್ಟವರು ನನ್ನ ಅಜ್ಜ. ಅವರ ಸಲಹೆ ಹಾಗೂ ಮಾರ್ಗದರ್ಶನ ನನ್ನನ್ನು ಏಕ ಪಾತ್ರಾಭಿನಯದಲ್ಲಿ ಎಲ್ಲರೂ ಗುರುತಿಸುವಂತೆ ಹಾಗೂ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಪದಕ ವಿಜೇತೆಯಾಗುವಂತೆ ಮಾಡಿತು. ನನ್ನ ಏಕ ಪಾತ್ರಾಭಿನಯದ ಕಥೆ ಮತ್ತು ಸಂಭಾಷಣೆಗಳು ಸಂಪೂರ್ಣ ನನ್ನ ಅಜ್ಜನದೇ. ಪಾಪ! ಅದೆಷ್ಟು ತೊಂದರೆ ಕೊಟ್ಟಿದ್ದೆನೋ ನಾನು ಅವರಿಗೆ. ಅದರ ಮಾತುಗಳನ್ನು ನಾನು ದೂರವಾಣಿಯ ಮೂಲಕ ಕೇಳಿದಾಗ ಅವರು ಸಹನೆಯಿಂದ ಹೇಳುತಿದ್ದರು. ಅವರು ಮಾತಿನ ಏರಿಳಿತ ಆಧಾರದ ಮೇಲೆಯೇ ಅದರ ನಟನೆ ನನಗೆ ತಿಳಿಯುವಂತಿತ್ತು. ಮೂಲತಃ ಅವರು ಶ್ರೇಷ್ಠ ನಟರಾಗಿರುವುದರಿಂದಲೇ ಅವರಿಗೆ ಅದು ಸಾಧ್ಯವಾಗಿತ್ತು. ಕಾಲೇಜಿನಲ್ಲಿ ಏನೇ ಸಾಂಸ್ಕೃತಿಕ ಕಾರ್ಯಕ್ರಮಗಳಿರಲಿ, ಮೊದಲು ಕೈಯೆತ್ತುವ ಜಾಯಮಾನ ನನ್ನದು. ಅಜ್ಜ ಇದ್ದಾರಲ್ಲಾ ಎಂಬ ಹುಂಬು ಧೈರ್ಯ ನನ್ನದು.

ಒಮ್ಮೆ ಹಾಸನದ ಕಾಲೇಜಿನಲ್ಲಿ ವ್ಯಾಸಂಗ ಮಾಡುವಾಗ ಯಕ್ಷಗಾನ ನೃತ್ಯ ಪ್ರದರ್ಶಿಸುತ್ತೇನೆ ಎಂದು ಹೇಳಿಕೊಂಡೆ. ಅಧ್ಯಾಪಕರು ಧಾರವಾಡದ ಕಾರ್ಯಕ್ರಮದಲ್ಲಿ ಅದನ್ನು ಪ್ರದರ್ಶಿಸುವಂತೆ ಅವಕಾಶ ನೀಡಿದರು. ಇದನ್ನು ನನ್ನ ಅಜ್ಜನಲ್ಲಿ ಹೇಳಿಕೊಂಡಾಗ ಶ್ರೇಷ್ಠ ಭಾಗವತರಾದ ಹೆರಂಜಾಲು ಗೋಪಾಲ ಗಾಣಿಗರನ್ನು ಮನೆಗೆ ಕರೆಸಿಕೊಂಡು ಶ್ರೀ ಕೃಷ್ಣನ ಒಡ್ಡೋಲಗ ನೃತ್ಯದ ತರಬೇತಿ ಕೊಡಿಸಿದರು. ಇದಕ್ಕೆ ಬೇಕಾದ ಇತರ ಸಾಮಾಗ್ರಿಗಳನ್ನು ಒದಗಿಸಿದರು. ಇದಕ್ಕೆಲ್ಲಾ ಅವರು ತುಂಬಾ ಶ್ರಮ ಪಡಬೇಕಾಯಿತು. ಒಂದಿಷ್ಟು ಬೇಸರ ತೋರಿಸದೆ ಕಾರ್ಯಕ್ರಮದ ಯಶಸ್ವಿಗಾಗಿ ಸಹಕರಿಸಿದರು.

ನನ್ನ ಆರೋಗ್ಯದ ಬಗ್ಗೆ ನನ್ನಜ್ಜನಿಗೆ ಎಲ್ಲಿಲ್ಲದ ಕಾಳಜಿ. ನನಗೆ ಇಲ್ಲಿ ಜ್ವರ ಬಂದರೆ ನನ್ನಜ್ಜನಿಗೆ ಬಿ.ಪಿ. ಏರುತಿತ್ತು. ನಾನು ಬಸ್ಸಿನಲ್ಲೋ, ರೈಲಿನಲ್ಲೋ ಪ್ರಯಾಣಿಸುತಿದ್ದರೆ ಮನೆಗೆ ಸೇರುವವರೆಗೆ ಅವರಿಗೆ ನಿದ್ರೆ ಹತ್ತುತ್ತಿರಲಿಲ್ಲ. ನಾನಿಂದು ಸ್ನಾತಕೋತ್ತರ ಪದವಿಗೆ ವ್ಯಾಸಂಗ ಮಾಡುತಿದ್ದರೆ ಅದಕ್ಕೆ ದೇವರ ಅನುಗ್ರಹಕ್ಕಿಂತ

ಅಜ್ಜನ ಆಶೀರ್ವಾದವೇ ಹೆಚ್ಚು ಕಾರಣವೆಂದು ನನ್ನ ಅಭಿಪ್ರಾಯ. ನನ್ನ ಪಾಲಿಗೆ ಅವರೇ ಕಣ್ಣಿಗೆ ಕಾಣುವ ದೇವರು. ನನ್ನ ಮನದಾಳದ ಮಾತು ಲೇಖನಿಯ ಅಂಚನ್ನು ತಾಕಿ ಈ ಲೇಖನ ಹೊರಹೊಮ್ಮಿದೆ. ಇಂತಹ ಅಸಾಮಾನ್ಯ ವ್ಯಕ್ತಿತ್ವ ಹೊಂದಿದ ಅಜ್ಜನನ್ನು ಪಡೆದ ನಾನೇ ಭಾಗ್ಯಶಾಲಿ. ನನ್ನ ಪ್ರೀತಿಯ ಅಜ್ಜನಿಗೆ ಆಯುರಾರೋಗ್ಯ ನೆಮ್ಮದಿಯನ್ನು ದಯಪಾಲಿಸಿ, ಅವರ ಸೇವೆಯನ್ನು ಮಾಡುವ ಅವಕಾಶ ನಮಗೆ ಕರುಣಿಸಲೆಂದು ಶ್ರೀ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ತಂದೆಯವರ ಕುರಿತಾಗಿ..........

ಡಾ। ಮನೋಜಕುಮಾರ ಶೆಟ್ಟಿ
ಶ್ರೀ ದುರ್ಗಾ ಕ್ಲಿನಿಕ್, ಗುರುಪುರ, ಶಿವಮೊಗ್ಗ

ನಮ್ಮ ತಂದೆಯವರ 80ನೇ ಜನ್ಮದಿನದಂದು ಅವರ ಅಭಿಮಾನಿ ಮಿತ್ರರೂ ಹಾಗೂ ವಿದ್ಯಾರ್ಥಿವೃಂದದವರೂ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಂಡು ಅವರನ್ನು ಆದರ ಪೂರ್ವಕವಾಗಿ ಅಭಿನಂದಿಸುವ ಹಾಗೂ ಅದೇ ಸಂದರ್ಭದಲ್ಲಿ ಅಭಿನಂದನಾ ಗ್ರಂಥ ಸಮರ್ಪಿಸುವ ವಿಚಾರ ತಿಳಿದು ತುಂಬಾ ಸಂತಸಗೊಂಡೆ. ಅವರ ಅಭಿನಂದನಾ ಗ್ರಂಥಕ್ಕೆ ನನ್ನ ಒಂದು ಚಿಕ್ಕ ಲೇಖನ ಪೋಣಿಸಬೇಕೆಂಬ ಆಸೆ ನನ್ನದು. ಆದರೆ ಆಸೆಗೆ ತಕ್ಕ ಭಾಷೆ ನನ್ನಲಿಲ್ಲ. ಅಂದರೆ ಬರವಣಿಗೆಯ ಬಲ ನನಗಿಲ್ಲ. ವೈದ್ಯನಾದ ನನಗೆ ರೋಗಿಗಳಿಗೆ ಔಷಧಿ ಚೀಟಿ ಮಾತ್ರ ಬರೆದು ಗೊತ್ತು. ಕೊನೆಗೆ ಹೇಗಾದರೂ ಇರಲಿ; ನನ್ನದೊಂದು ಲೇಖನ ಅದರಲ್ಲಿ ಬರಲಿ ಎಂಬ ತೀರ್ಮಾನಕ್ಕೆ ಬಂದು ಬರೆಯಲು ಪ್ರಯತ್ನಿಸುತಿದ್ದೇನೆ.

ನಮ್ಮ ತಂದೆಯವರು ಅಧ್ಯಾಪನದಲ್ಲಿ ತುಂಬಾ ಸಿದ್ಧಿ ಪಡೆದವರು. ಅವರ ಚೇತೋಹಾರಿ ಹಾಗೂ ಪರಿಣಾಮಕಾರಿ ಪಾಠದ ಬಗ್ಗೆ ಅವರ ವಿದ್ಯಾರ್ಥಿಗಳು ಹೊಗಳಿಕೆಯ ಮಾತಾಡುವುದನ್ನು ನಾನು ಕೇಳಿದ್ದೇನೆ. ನಾನು 1 ಮತ್ತು 2 ನೇ ತರಗತಿಗಳನ್ನು ಅವರ ಶಾಲೆಯಲ್ಲೇ ಕಲಿತವನಾದರೂ ಅವರ ಪಾಠ ಬೋಧನೆ ಕೇಳುವ ಅವಕಾಶ ನನಗೆ ಸಿಕ್ಕಿರಲಿಲ್ಲ. ಆದರೆ ಅವರು ಪದ್ಯಪಾಠವನ್ನು ಬೇರೆ ತರಗತಿಯಲ್ಲಿ ರಾಗಬದ್ಧವಾಗಿ, ಲಯಬದ್ಧವಾಗಿ ಹಾಡುವಾಗ ಇತರ ತರಗತಿಗಳಲ್ಲಿ ಪಾಠ ಮಾಡುತ್ತಿರುವ ಅಧ್ಯಾಪಕರು ತಮ್ಮ ಪಾಠ ನಿಲ್ಲಿಸಿ, ಅದನ್ನು ಕೇಳಿ ಆನಂದಿಸುತ್ತಿರುವುದನ್ನು ಕಂಡಿದ್ದೇನೆ. ಇವರ ಬೋಧನೆಯನ್ನು ಪರೀಕ್ಷಾಧಿಕಾರಿಗಳೂ, ವಿದ್ಯಾಧಿಕಾರಿಗಳೂ ಮೆಚ್ಚಿಕೊಂಡುದರಿಂದ ವಿದ್ಯಾ ಇಲಾಖೆಯವರು "ಮಾದರಿ ಶಿಕ್ಷಕ" ಪ್ರಶಸ್ತಿಯನ್ನಿತ್ತು ಗೌರವಿಸುವಂತಾಯಿತು. ಸಮಾಜದಲ್ಲಿ ಉತ್ತಮ ಶಿಕ್ಷಕರೆಂದು ಸನ್ಮಾನಿಸಲ್ಪಡುವಂತಾಯಿತು.

ನಮ್ಮ ತಂದೆಯವರ ಮುಖ್ಯ ಹವ್ಯಾಸವೆಂದರೆ ನಾಟಕ ಮತ್ತು ಯಕ್ಷಗಾನ. ನಾಟಕದಲ್ಲಿ ಹಾಸ್ಯ ನಟರಾಗಿ ಹೆಸರು ಮಾಡಿದವರು. ಹೆಚ್ಚಿನ ಹಾಸ್ಯ ನಟರು ನಟನೆಯಲ್ಲಿ ಮಿತಿ ಮೀರುವುದೇ ಜಾಸ್ತಿ. ಆದರೆ ಇವರದು ಹಿತ-ಮಿತವಾದ ಅಭಿನಯ. ತಮ್ಮ ಮುಖಭಾವದಿಂದ, ಚಲನೆಯಿಂದ ವಿಶಿಷ್ಠ ಶೈಲಿಯ ಮಾತಿನಿಂದ ಪ್ರೇಕ್ಷಕರನ್ನು ನಗಿಸುತಿದ್ದರು. ಇವರ ನೈಜ ಅಭಿನಯಕ್ಕಾಗಿಯೇ ಕಂಪೆನಿ ನಾಟಕದವರು ಕೂಡಾ ಇವರನ್ನು ಗೌರವ ನಟರಾಗಿ ಕರೆಸಿಕೊಳ್ಳುತಿದ್ದರು.

ತಾಳಮದ್ದಳೆ ಕೂಟದಲ್ಲಿ ಇವರು ಓರ್ವ ಉತ್ತಮ ಅರ್ಥಧಾರಿ. ತಾನು ವಹಿಸುವ ಪಾತ್ರದ ಚಿತ್ರಣ ನೀಡುವುದೇ ಇವರ ಮುಖ್ಯಗುರಿ. ತಾಳಮದ್ದಳೆ ವಾದ ಭೂಮಿಕೆಯಾದರೂ ವಾದವೇ ಇವರಿಗೆ ಮುಖ್ಯವಲ್ಲ. ಅಗತ್ಯವೆನಿಸಿದ ಕಡೆಗಳಲ್ಲಿ ತನ್ನ ಪಾತ್ರದ ಸಮರ್ಥನೆಗೆ ಬೇಕಾದ ವಾದ ಮಾಡಿಯಾರು. ಪ್ರತಿ ವಾದ ಖಂಡಿಸಿಯಾರು. ವಾದದಿಂದಲೇ ಕೂಟ ಕೆಡಿಸುವ ಜಾಯಮನ ಇವರದ್ದಲ್ಲ. ಹೆಚ್ಚಿನ ಪ್ರಸಿದ್ಧ ಅರ್ಥಧಾರಿಗಳೊಂದಿಗೆ ಅರ್ಥ ಹೇಳಿ ಸೈ ಎನಿಸಿಕೊಂಡಿದ್ದಾರೆ.

ಪ್ರಸಂಗಕರ್ತೃರಾಗಿ ಇವರದು ದೊಡ್ಡ ಸಾಧನೆ ಎನ್ನಬಹುದು. ವೈವಿಧ್ಯಮಯ ಪ್ರಸಂಗ ರಚಿಸಿದ್ದಾರೆ. ಸರಳ ಶಬ್ಧಗಳಿಂದ ಸಾಹಿತ್ಯಪೂರ್ಣವಾದ, ಛಂದೋಬದ್ಧವಾದ ಪದ್ಯ ರಚನೆ ಇವರಿಗೆ ಸಿದ್ಧಿಸಿದೆ. ರಂಗಧರ್ಮವನ್ನು, ಕಲಾಸ್ವರೂಪವನ್ನೂ ಗಮನದಲ್ಲಿರಿಸಿಕೊಂಡು ಪ್ರಸಂಗ ರಚನೆ ಮಾಡುತ್ತಾರೆ. ಹಾಗಾಗಿ ಇವರ ಹೆಚ್ಚಿನ ಪ್ರಸಂಗಗಳು ಜನಪ್ರಿಯವಾಗಿ ಇಂದಿಗೂ ಪ್ರಸ್ತುತವಿವೆ. ಮುದ್ದಣನಂತೆ ಇವರು ಪ್ರಾಸಪ್ರಿಯರು. ಆದರೆ ಪ್ರಾಸಕ್ಕಾಗಿ ತ್ರಾಸ ಪಟ್ಟವರಲ್ಲ. ಆದಿ ಪ್ರಾಸ, ಅಂತ್ಯ ಪ್ರಾಸದೊಂದಿಗೆ ಅಗತ್ಯವೆನಿಸಿದೆಡೆಯಲ್ಲಿ ಅನುಪ್ರಾಸ ಸೇರಿಸಿ ಪದ್ಯದ ಸೊಗಸನ್ನು ಹೆಚ್ಚಿಸುತ್ತಾರೆ. ರಸ, ಭಾವ ಕೆಡದಂತೆ ಜಾಗ್ರತೆ ವಹಿಸುತ್ತಾರೆ. ಇದು ಅವರ ಪ್ರಸಂಗದ ವೈಶಿಷ್ಟ್ಯ.

ಇಷ್ಟೆಲ್ಲಾ ಹೇಳಿದ ಮೇಲೆ ಮನೆಯ ಯಜಮಾನರಾಗಿ, ಮಕ್ಕಳ ತಂದೆಯಾಗಿ ಅವರು ಹೇಗಿದ್ದರೆಂದು ಹೇಳದೇ ಇದ್ದರೆ ಲೇಖನ ಪೂರ್ತಿಯಾದಂತೆ ಆಗಲಾರದೆಂದು ನನ್ನ ಭಾವನೆ. ಮಕ್ಕಳನ್ನು ಅಕ್ಕರೆಯಿಂದಲೇ ಬೆಳೆಸಿದವರು. ಎಂಥ ಸಂದರ್ಭದಲ್ಲೂ ಕೆಟ್ಟ ಬೈಗುಳವನ್ನು ಹೇಳಿದ್ದಾಗಲೀ, ಪೆಟ್ಟುಕೊಟ್ಟು ಶಿಕ್ಷಿಸಿದ್ದಾಗಲೀ ಇಲ್ಲವೇ ಇಲ್ಲ. ನಮ್ಮಿಂದ ಏನಾದರೂ ತಪ್ಪಾಗಿದ್ದಲ್ಲಿ ಸಮಾಧಾನದಿಂದಲೇ ತಿಳಿಸಿ ಹೇಳಿ ಸರಿಪಡಿಸುತಿದ್ದರು. ನನ್ನ ಆಸಕ್ತಿಯನ್ನು ತಿಳಿದು ನನ್ನನ್ನು ಆಯುರ್ವೇದ ಕಾಲೇಜಿಗೆ ಸೇರಿಸಿ, ಆ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಅವಕಾಶ ಮಾಡಿಕೊಟ್ಟಿದ್ದಾರೆ. ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕೆಂದು ನಮಗೆ ತಿಳಿಸುವುದರೊಂದಿಗೆ ಅವರು ಕೂಡಾ ಹಾಗೆ ನಡೆದುಕೊಳ್ಳುತ್ತಾರೆ. ಉದಾತ್ತ ಚಿಂತನೆಯೊಂದಿಗೆ ಸರಳ ಜೀವನ ಅವರ ಸಿದ್ಧಾಂತ.

ಇಂಥಾ ಪ್ರತಿಭಾವಂತ, ಸದ್ಗುಣವಂತ ತಂದೆಯನ್ನು ಪಡೆದ ನಾವೇ ಧನ್ಯರು. ಮುಂದಕ್ಕೂ ಕೂಡಾ ಕಲಾಕ್ಷೇತ್ರಕ್ಕೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಅವರಿಂದ ಹೆಚ್ಚಿನ ಸೇವೆ ಸಲ್ಲಿಸುವ ಶಕ್ತಿಯನ್ನೂ ಅವರ ಸೇವೆ ಮಾಡುವ ಅವಕಾಶ ನಮಗೆ ಬಹುಕಾಲ ದೊರಕುವಂತೆಯೂ ಶ್ರೀ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇವೆ.

ಬಹುಮುಖ ಪ್ರತಿಭೆಯ ಕಲಾವಿದ

ಅಮೃತ ಸೋಮೇಶ್ವರ
ಯಕ್ಷಗಾನ ವಿದ್ವಾಂಸರು, ಮಂಗಳೂರು

ಕಂದಾವರ ರಘುರಾಮ ಶೆಟ್ರನ್ನು ನಾನು ಪ್ರಥಮವಾಗಿ ನೋಡಿದ್ದು ಹಾಗೂ ಮಾತಾಡಿದ್ದು ಸಾಧಾರಣ 25 ವರ್ಷಗಳ ಹಿಂದೆ ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ. ಆ ಸಂಸ್ಥೆಯವರು ತಮ್ಮ ವಿಂಶತಿ ಉತ್ಸವದ ಅಂಗವಾಗಿ ಯಕ್ಷಗಾನ ಕುರಿತಾಗಿ ಒಂದು ವಿಚಾರಗೋಷ್ಠಿ ಹಮ್ಮಿಕೊಂಡಿದ್ದರು. ಅದರ ಅಧ್ಯಕ್ಷತೆ ವಹಿಸುವ ಅವಕಾಶ ನನಗೊದಗಿ ಬಂದಿತ್ತು. ಅಂದಿನ ಗೋಷ್ಠಿಯಲ್ಲಿ ಕಂದಾವರದವರು ಯಕ್ಷಗಾನ ವೇಷಭೂಷಣಗಳ ಕುರಿತಾಗಿ ವಿಚಾರಪೂರಿತವಾದ ಉಪನ್ಯಾಸ ನೀಡಿದ್ದರು. ಯಕ್ಷಗಾನ ವೇಷಗಳ ವೈಶಿಷ್ಟ್ಯತೆ, ತೆಂಕು – ಬಡಗುತಿಟ್ಟಿನ ವೇಷಗಳಲ್ಲಿರುವ ಸಾಮ್ಯತೆ – ಭಿನ್ನತೆ ಹಾಗೂ ವೇಷಗಾರಿಕೆಯಲ್ಲಿ ಮಾಡಿಕೊಳ್ಳಬಹುದಾದ ಆವಿಷ್ಕಾರಗಳ ಕುರಿತು ಸ್ವಾರಸ್ಯ ಪೂರ್ಣವಾದ ಹಾಗೂ ಅರ್ಥಪೂರ್ಣವಾದ ಭಾಷಣ ಅದಾಗಿತ್ತು. ಅದುವರೆಗೆ ಅವರೊಬ್ಬ ಉತ್ತಮ ಅರ್ಥಧಾರಿ ಹಾಗೂ ಪ್ರಸಂಗಕರ್ತೃರೆಂದು ಕೇಳಿ ತಿಳಿದಿದ್ದ ನನಗೆ ಅವರ ಇನ್ನೊಂದು ಮುಖದ ಪರಿಚಯವಾಯ್ತು. ಅವರ ಭಾಷಣದ ಪ್ರಬುದ್ಧತೆ, ಕ್ರಮ ಬದ್ಧತೆಯಿಂದ ಅವರೊಬ್ಬ ಶ್ರೇಷ್ಠವುಟ್ಟದ ಭಾಷಣಕಾರರೆಂದು ತಿಳಿಯುವಂತಾಯ್ತು. ಸಭಾ ಕಾರ್ಯಕ್ರಮ ಮುಗಿದ ಮೇಲೆ ನನ್ನನು ಭೇಟಿಯಾಗಿ, ನಮಸ್ಕರಿಸಿ ಪರಿಚಯಿಸಿಕೊಂಡರು. ಅವರ ಸರಳತೆ, ಸಜ್ಜನಿಕೆಗೆ ನಾನು ಮಾರು ಹೋದೆ.

ಶ್ರೀಯುತ ರಘುರಾಮ ಶೆಟ್ಟರು ಅನೇಕ ಉತ್ತಮ ಪ್ರಸಂಗ ರಚಿಸಿರುವ ವಿಚಾರ ಬೇರೆ ಬೇರೆ ಮೂಲಗಳಿಂದ ಕೇಳಿದ್ದೆ. ಆದರೆ ಅವರ ಪ್ರಸಂಗ ನೋಡುವ ಅವಕಾಶ ನನಗೆ ದೊರೆತಿರಲಿಲ್ಲ. ಮುಂದೊಂದು ದಿನ ಪುತ್ತೂರಿನಲ್ಲಿ ಅವರ 'ವಸುವರಾಂಗಿ' ಪ್ರಸಂಗವನ್ನು ಸಾಲಿಗ್ರಾಮ ಮೇಳದವರು ಆಡುವ ವಿಚಾರ ತಿಳಿದು

ಆಟ ನೋಡಲು ಹೋದೆ. ಅದ್ವಿತೀಯ ಯುವ ಭಾಗವತ ಶ್ರೀ ಕಾಳಿಂಗ ನಾವಡರ ನಿರ್ದೇಶನ ಹಾಗೂ ಹಾಡುಗಾರಿಕೆ ಆಟದ ಮುಖ್ಯ ಆಕರ್ಷಣೆಯಾಗಿತ್ತು. ಹೆಸರೇ ಸೂಚಿಸುವಂತೆ ಅಷ್ಟವಸುಗಳಲ್ಲಿ ಕೊನೆಯವನಾದ ಪ್ರಭಾಸ(ದ್ಯೂ) ಹಾಗೂ ಆತನ ಮಡದಿ ವರಾಂಗಿಯರ ಜನ್ಮಾಂತರದ ವೃತ್ತಾಂತ ಆ ಪ್ರಸಂಗದ ಕಥಾವಸ್ತು. ಪ್ರಭಾಸನು ಭೀಷ್ಮನಾಗಿ ಜನಿಸಿದರೆ ವರಾಂಗಿ ಅಂಬೆ ಹಾಗೂ ಶಿಖಂಡಿಯಾಗಿ ಜನಿಸಿ ಭೀಷ್ಮನ ಅವಸಾನಕ್ಕೆ ಕಾರಣಳಾಗುತ್ತಾಳೆ. ಹೀಗಾಗಿ ಅದರಲ್ಲಿ ಶಿಖಂಡಿ ವಿವಾಹದ ಸನ್ನಿವೇಶವನ್ನು ಸಂದರ್ಭೋಚಿತವಾಗಿ ಸೇರಿಸಿದ್ದರು. ಭಾಗಶಃ ಆಟ ನೋಡಿ ಹೋಗಬೇಕೆಂದಿದ್ದ ನಾನು ಕುತೂಹಲಕಾರಿಯಾಗಿ ಸಾಗುವ ಕಥೆಯನ್ನು ಬೆಳಗಿನ ತನಕ ನೋಡುವ ಮನ ಮಾಡಿದೆ. ಮುಖ್ಯವಾಗಿ ಶಿಖಂಡಿ ವಿವಾಹ ನನ್ನನ್ನು ಅತಿಯಾಗಿ ಆಕರ್ಷಿಸಿತು. ಹೆಣ್ಣು ತನ್ನ ವೈವಾಹಿಕ ಜೀವನದ ಬಗ್ಗೆ, ಪತಿಯಿಂದ ಪಡೆಯಬಹುದಾದ ಸುಖದ ಬಗ್ಗೆ ನೂರಾರು ಕನಸು ಕಾಣುತ್ತಿರುತ್ತಾಳೆ. ಅಂತಹ ಸಂದರ್ಭದಲ್ಲಿ ತಾನು ಮದುವೆಯಾದವನು ಗಂಡುರೂಪದ ಹೆಣ್ಣೆಂದು ತಿಳಿದಾಗ ಆ ಹೆಣ್ಣಿನ ಸ್ಥಿತಿ ಹೇಗಿದ್ದೀತು? ತನ್ನ ಬಾಳನ್ನೇ ಅಂಧಕಾರದ ಕೂಪಕ್ಕೆ ತಳ್ಳಿದ ತನ್ನ ಪತಿಯ ಬಗ್ಗೆ ಆಕ್ರೋಶಗೊಳ್ಳುತ್ತಾಳೆ, ಸಿಡಿದೇಳುತ್ತಾಳೆ. ಆವೇಶ ಭರಿತಳಾಗಿ ಆತನನ್ನು ಜರೆಯುತ್ತಾಳೆ. ಸಾಲದ್ದಕ್ಕೆ ಪ್ರತೀಕಾರ ಎಸಗುವುದಕ್ಕಾಗಿ ತನ್ನ ತಂದೆಗೆ ಪತ್ರದ ಮೂಲಕ ವಿಚಾರ ತಿಳಿಸುತ್ತಾಳೆ. ಆ ಸನ್ನಿವೇಶವನ್ನು ಪ್ರಸಂಗಕರ್ತೃರು ತಮ್ಮ ಅರ್ಥಪೂರ್ಣವಾದ, ರಸವತ್ತಾದ ಪದ್ಯಗಳಿಂದ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದರು. ಅಂತೆಯೇ ತಂದೆ–ತಾಯಿಯರ ಒತ್ತಾಯಕ್ಕೆ ಕಟ್ಟುಬಿದ್ದು ತಾನು ಒಂದು ಹೆಣ್ಣಿನ ಬಾಳನ್ನೇ ಬಲಿತೆಗೆದುಕೊಂಡೆನೆಂದು ಪರಿತಪಿಸುತ್ತಾ ಪುರವನ್ನೇ ತೊರೆದು ಕಾಡಿಗೆ ಹೊರಟ ಶಿಖಂಡಿಯ ಚಿತ್ರಣವು ಕೂಡಾ ಅಷ್ಟೇ ಸಮರ್ಥವಾಗಿ ಮೂಡಿ ಬಂದಿತ್ತು. ಒಟ್ಟಾರೆಯಾಗಿ ಆ ಪ್ರಸಂಗವು ದೃಶ್ಯಮಾಧ್ಯಮಕ್ಕೆ (ಆಟಕ್ಕೆ) ಸರ್ವರೀತಿಯಲ್ಲೂ ಹೊಂದಿಕೆಯಾಗಿತ್ತು. ಸ್ಥಾಲೀ ಪುಲಾಕ ನ್ಯಾಯದಂತೆ ಕಂದಾವರದವರ ಎಲ್ಲಾ ಪ್ರಸಂಗಗಳ ಗುಣಮಟ್ಟ ಇದರಿಂದ ತಿಳಿಯುವಂತಾಯ್ತು. ಯಕ್ಷರಂಗದಲ್ಲಿ ಸಮರ್ಥ ಕವಿಯೊಬ್ಬರು ಉದಯಿಸಿದ್ದಾರೆ ಎಂಬ ಸಂತೋಷ ನನ್ನದಾಯಿತು.

ಒಂದು ವರ್ಷದ ಹಿಂದೊಂದು ದಿನ ಆಕಾಶವಾಣಿಯ ಮೂಲಕ ಕಂದಾವರದವರ ಮಾತು ಕೇಳುವ ಮತ್ತೊಂದು ಅವಕಾಶ ನನಗೆ ದೊರೆಯಿತು.

ವಾರದ ವ್ಯಕ್ತಿಯಾಗಿ ಅವರು ತನ್ನ ವಿಚಾರ ಧಾರೆಯನ್ನು ಹರಿಯಬಿಟ್ಟಿದ್ದರು. ಶಿಕ್ಷಣ, ನಾಟಕ, ಯಕ್ಷಗಾನ, ಸಾಹಿತ್ಯರಂಗದಲ್ಲಿ ಅವರ ಸಾಧನೆಯನ್ನು ಸಮಗ್ರವಾಗಿ ತಿಳಿಯುವಂತಾಯಿತು. ಅವರು ಕೈಯಾಡಿಸಿದ ಪ್ರತಿಯೊಂದು ಕ್ಷೇತ್ರದಲ್ಲೂ ಸಾಕಷ್ಟು ಸಾಧನೆ ಮಾಡಿದ್ದಾರೆ. ಸಾಪಲ್ಯವನ್ನು ಹೊಂದಿದ್ದಾರೆ. ಅಂದಿನ ಸಂದರ್ಶನದಲ್ಲಿ ನಿರೂಪಕರ ಆಶಯದಂತೆ ಸತಿ–ಸೀಮಂತಿನಿ ಪ್ರಸಂಗದ ಒಂದು ಪದ್ಯವನ್ನು ಹಾಡಿ ತೋರಿಸಿದ್ದರು. ಕಣ್ಮರೆಯಾದ ಕಾಳಿಂಗ ನಾವಡರೇ ಹಾಡಿದ ಅನುಭವ ನನಗಾಯಿತು. ಕಾಳಿಂಗ ನಾವಡರ ಪ್ರಭಾವಲಯದಲ್ಲಿದ್ದ ಶೆಟ್ಟರು ಅವರನ್ನೇ ಅನುಕರಿಸಿ ಹಾಡಿದ್ದರು. ಕಂದಾವರದವರು ಕೇವಲ ಪ್ರಸಂಗಕರ್ತೃರು ಆಗಿರದೆ ಉತ್ತಮ ಹಾಡುಗಾರರೂ ಆಗಿದ್ದಾರೆಂದು ತಿಳಿಯುವಂತಾಯಿತು. ಇದನ್ನು ಕೇಳಿದ ನಾನು ನನ್ನ ಅಭಿಪ್ರಾಯವನ್ನು ಪತ್ರ ಮೂಲಕ ಆಕಾಶವಾಣಿಯವರಿಗೆ ತಿಳಿಸಿಯೂ ಇದ್ದೆ.

ಇಂತಹ ಪ್ರತಿಭಾವಂತ ಕವಿಯನ್ನು ಅವರ 80ರ ಇಳಿವಯಸ್ಸಿನಲ್ಲಿ ಅಭಿನಂದಿಸುವ, ಗ್ರಂಥ ಸಮರ್ಪಣೆ ಮಾಡುವ ಅಭಿನಂದನಾ ಸಮಿತಿಯವರನ್ನು ಹೃತ್ಪೂರ್ವಕವಾಗಿ ಅಭಿವಂದಿಸುತ್ತೇನೆ. ಕಂದಾವರದವರಿಂದ ಇನ್ನೂ ಹೆಚ್ಚಿನ ಮೌಲಿಕ ಕೃತಿಗಳು ಬರುವಂತಾಗಲೆಂದು ಆಶಿಸುತ್ತೇನೆ. ಸಮಾರಂಭವು ಸಕಲ ಸಡಗರ, ಸಂಭ್ರಮದಿಂದ ಜರಗುವಂತಾಗಲೆಂದು ಮನಸಾರೆ ಹಾರೈಸುವುದು ನನ್ನ ಹಾಗೂ ಸರ್ವಯಕ್ಷಗಾನ ಕಲಾವಿದರ ಆದ್ಯ ಕರ್ತವ್ಯವಾಗಿದೆ.

ಗುರುದೇವರಿಗೆ ಗೌರವದ ನಮನ

ಎಚ್. ಸುಲೋಚನಾ ಎಸ್. ಶೆಟ್ಟಿ
ನಿವೃತ್ತ ಮುಖ್ಯ ಶಿಕ್ಷಕಿ
ನೇತಾಜಿ ಹಿ.ಪ್ರಾ. ಶಾಲೆ, ಕಂಡ್ಲೂರು

ಆರು ದಶಕಗಳ ಹಿಂದಿನ ನೆನಪು - ಖಾದಿ ಬಟ್ಟೆ ಚೀಲದಲ್ಲಿ ಒಂದೇ ಒಂದು ಕಡ್ಡಿ, ಪಾಟಿ, ಪುಸ್ತಕ ತುಂಬಿಸಿಕೊಂಡು, ಓಲಿಕೊಡೆ ಹಿಡಿದು ಭತ್ತ ಬೆಳೆವ ಬಯಲು, ಗೆಣಸು ಮೆಣಸಿನ ಗದ್ದೆ, ಕಾಡು ತೋಡು ದಾಟುತ್ತಾ, ಹಾರಾಡುವ ಹಕ್ಕಿಗಳು, ತೂಗಾಡುವ ಗೂಡುಗಳು, ಬೇಲಿ ಮೇಲಿನ ಹೂಗಳನ್ನು ನೋಡುತ್ತಾ, ಬೆಟ್ಟ ಗುಡ್ಡಗಳಲ್ಲಿ ಗುಂಪು ಗುಂಪಾಗಿ ಮೇಯುವ ಹಸು ಮಂದೆಗಳನ್ನು ಕಾಣುತ್ತಾ, ಗೋವಿನ ಗೀತೆ ಗುನುಗುತ್ತಾ, ಅಣ್ಣ ಅಕ್ಕಂದಿರ ಹಿಂದೆ ಹೆಜ್ಜೆ ಹಾಕುತ್ತಾ, ಗೆಳೆಯರ ಕೈ ಹಿಡಿದು ಸಾಗುತ್ತಾ, ಗೇರು ಮರದ ಬೀಜ ಕೊಯ್ದು, ಮಾವಿನ ಮರಕ್ಕೆ ಕಲ್ಲು ಹೊಡೆದು, ದಾರಿ ಮೇಲೆ ಕಬಡ್ಡಿ ಆಡಿದರೂ ಮಕ್ಕಳಾಟ ಮುಗಿಯದಾಗಿತ್ತು.

ಮಾರ್ಗದ ಇಕ್ಕೆಲಗಳಲ್ಲಿದ್ದ ನೇರಳೆ, ಪೇರಳೆ, ಕೇಪಳ, ಬಾಗಾಳ, ಗರಚ ಹಣ್ಣು ತಿಂದು, ಕಬ್ಬಿನಾಲೆ ಹೊಕ್ಕು ಕಬ್ಬು ಬೆಲ್ಲ ತಿಂದು ಶಾಲೆಗೆ ಹೋಗಿ ಗುರುಗಳಿಂದ ಛಡಿ ತಿಂದು, ಒಂಟಿ ಕಾಲಿನಲ್ಲಿ ನಿಲ್ಲುವುದರ ಅಂತ್ಯ ಕಾಲ. ಮನೆಯವರಿಗೆ ಗೊತ್ತಾದರೆ "ಅವನಿಗೆ ನಾಲ್ಕು ಬಾರ್ಸಿ ಮಾಸ್ಟ್ರೆ" ಅನ್ನುವುದೇ ಹೆಚ್ಚು. ಆದರೂ ಮಕ್ಕಳಿಗೆ ಗುರುಗಳಲ್ಲಿ ಅದೆಷ್ಟು ಭಕ್ತಿಯೋ, ಗುರುಗಳಿಗೆ ಮಕ್ಕಳ ಮೇಲೆ ಅದೇನು ಮಮತೆಯೋ ನಾನರಿಯೆ. ಆ ಮೊದಲ ಮಳೆ ಬಿದ್ದು ದುಂಡು ಮಲ್ಲಿಗೆ ಅರಳುವ ಕಾಲ ಮತ್ತೆ ಬಂದೀತೇ?

ಅಂದು ಒಂದರಿಂದ ಐದು ಕಿ.ಪ್ರಾ. ಶಾಲೆ ಹಾಗೂ ಆರು, ಏಳು, ಎಂಟು ತರಗತಿ ಹಿ.ಪ್ರಾ. ಶಾಲೆ ಎನಿಸಿತ್ತು. ನಾನು ಒಂದರಿಂದ ಐದನೇ ತರಗತಿ ವಿದ್ಯಾಭ್ಯಾಸವನ್ನು ನನ್ನೂರಾದ ಹಳನಾಡಿನ ಮಹಾಗಣಪತಿ ದೇವಸ್ಥಾನದ

ಬಳಿ ಇದ್ದ ನೇತಾಜಿ ಕಿ.ಪ್ರಾ ಶಾಲೆಯಲ್ಲಿ ದಿ. ಪದ್ಮನಾಭ ಭಟ್, ದಿ. ಚಿಕ್ಕಯ್ಯ ಶೆಟ್ಟಿ ಮತ್ತು ಈಗ ಮುಸ್ಸಂಜೆಯ ಹೊತ್ತಿನಲ್ಲಿರುವ ಶ್ರೀಮತಿ ಶಾರದಾ ಶೆಟ್ಟಿಯವರಿಂದ ಕಲಿತು ಮುಗಿಸಿದೆ.

1962 ರಲ್ಲಿ ನಾನು ಕಂಡ್ಲೂರಿನಲ್ಲಿರುವ ನೇತಾಜಿ, ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರನೇ ತರಗತಿಗೆ ದಾಖಲಾದೆ. ಕುಂದಾಪುರ, ಬಸ್ರೂರು ಬಿಟ್ರೆ ಅಲ್ಲೊಂದು ಇಲ್ಲೊಂದು ಹಿ.ಪ್ರಾ.ಶಾಲೆಗಳಿರುವ ಕಾಲದಲ್ಲಿ 'ವಿದ್ಯೆಯೇ ಸರ್ವರೋಗಕ್ಕೂ ಮದ್ದು' ಎಂದು ತಿಳಿದ ಸ್ವಾತಂತ್ರ್ಯ ಹೋರಾಟಗಾರ ಕೊಳ್ಕೆಬೈಲ್ ದಿ. ಮಹಾಬಲ ಶೆಟ್ಟಿಯವರು ಕಂಡ್ಲೂರಿನ ಪರಿಧಿಯಲ್ಲಿರುವ ಗ್ರಾಮೀಣ ಪ್ರದೇಶದ ಮಕ್ಕಳಿಗಾಗಿಯೇ 1947ರಲ್ಲಿ ಈ ಶಾಲೆಯನ್ನು ಸ್ಥಾಪಿಸಿದ್ದರು. ವಿದ್ಯಾದೇಗುಲಕ್ಕೆ ಕಳಶವಿಟ್ಟಂತೆ ಪ್ರಭಾವಿ, ಪ್ರತಿಭಾನ್ವಿತ, ಜನಾನುರಾಗಿಗಳಾಗಿದ್ದ ಶ್ರೀ ಬಿ. ಸುಬ್ರಾಯ ಉಡುಪರು ಮುಖ್ಯೋಪಾಧ್ಯಾಯರಾಗಿಯೂ ಕಂದಾವರ ದಿ। ಕೊರಗಯ್ಯ ಶೆಟ್ಟಿ ಹಾಗೂ ನಮ್ಮ ನಿಮ್ಮ ಎಲ್ಲರ ಅಭಿಮಾನ ಅಭಿನಂದನೆಗೆ ಪಾತ್ರರಾದ "ಖ್ಯಾತ ನಾಟಕಕಾರ ಯಕ್ಷಗಾನ ಪ್ರಸಂಗ ಕರ್ತೃ " ಶ್ರೀಯುತ ಕಂದಾವರ ರಘುರಾಮ ಶೆಟ್ಟಿಯವರು ಸಹಶಿಕ್ಷಕರಾಗಿಯೂ ಸೇವೆ ಸಲ್ಲಿಸುತ್ತಿದ್ದ ಸುವರ್ಣಕಾಲ. ಅಂದು ಗುರುಗಳ ಬೋಧನೆಯ ಸೌರಭ ಎಲ್ಲಾ ಕಡೆಗೆ ಪಸರಿಸಿತ್ತು. ಇದರಿಂದಾಗಿ ಬೇರೆ ಬೇರೆ ಊರುಗಳಿಂದ ಬಂದ ವಿದ್ಯಾಕಾಂಕ್ಷಿಗಳು ನಮ್ಮ ಶಾಲೆಯ ಸುತ್ತ ಮುತ್ತಲಿರುವ ತಮ್ಮ ನೆಂಟರಿಷ್ಟರ ಮನೆಯಲ್ಲಿದ್ದು ಕಲಿತು ತಮ್ಮ ಜೀವನ ಸಾರ್ಥಕಪಡಿಸಿಕೊಂಡಿದ್ದರು.

ಕೃಷಿ ಪ್ರಧಾನ ಗ್ರಾಮೀಣ ಪ್ರದೇಶದಲ್ಲಿ ಬಿಳಿ ಉಡುಪು ಧರಿಸುತ್ತಿದ್ದವರು ಬಹಳ ವಿರಳ. ಸಹೋದರ ಸಂಬಂಧಿಗಳಾದ ದಿ. ಕೊರಗಯ್ಯ ಶೆಟ್ಟಿ ಹಾಗೂ ಕಲಾಕೋವಿದ ನಿವೃತ್ತ ಮುಖ್ಯೋಪಾಧ್ಯಾಯ ಕಂದಾವರ ರಘುರಾಮ ಶೆಟ್ಟಿಯವರು ಶ್ವೇತ ವರ್ಣದ ಅಂಗಿ ಪಂಚೆ ತೊಟ್ಟು, ಗಂಭೀರ ನಡಿಗೆಯಲ್ಲಿ ಕಂಡ್ಲೂರು ಪೇಟೆಯಿಂದ ನಮ್ಮ ಶಾಲೆಗೆ ನಡೆದು ಬರುವಾಗ ಇಡೀ ರಸ್ತೆಯೇ ಬೆಳಕಾದಂತೆ. ದೂರದಿಂದ ಬರುವ ಗುರುಗಳನ್ನು ನೋಡಿ ನನ್ನ ಸಹಪಾಠಿ ಸೋದರರು ಅವರಷ್ಟಕ್ಕೆ "ನಾನು ಮುಂದೆ ಮಾಸ್ಟ್ರು ಆಗಬೇಕು ಮಾರಾಯ" ಅಂದದ್ದನ್ನು ನನ್ನ ಕಿವಿಯಾರೆ ಕೇಳಿದ್ದೇನೆ. ನನಗಂತೂ ಅವರ ಸಹೋದ್ಯೋಗಿಯಾಗಿ ಸೇವೆ ಸಲ್ಲಿಸುವ ಸುಯೋಗ ಲಭಿಸಿದರೆ, ಅವರ ಹೆಚ್ಚಿನ ಶಿಷ್ಯರು ಅಧ್ಯಾಪನ ವೃತ್ತಿಯಲ್ಲೇ ಯಶಸ್ಸನ್ನು ಕಂಡಿದ್ದಾರೆ.

ಅಲ್ಲದೇ ಬೇರೆ ಬೇರೆ ಪದವಿ, ಉನ್ನತ ಹುದ್ದೆಗಳನ್ನು ಪಡೆದು ಸ್ವದೇಶ ವಿದೇಶಗಳಲ್ಲಿಯೂ ಹೆಸರು ಗಳಿಸಿದ್ದಾರೆ.

ಅಧ್ಯಾಪಕರಾದವರು "ಸಂಭಾರ ಬಟ್ಟಲು" ಇದ್ದಂತೆ ಇರಬೇಕು ಎಂದು ಬಲ್ಲವರು ಹೇಳಿದ್ದಾರೆ. ಇದಕ್ಕೆ ನಿದರ್ಶನ ನಮ್ಮ ಗುರುಗಳಾದ ಕಂದಾವರ ರಘುರಾಮ ಶೆಟ್ಟಿಯವರು. ಸಂಗೀತ, ಅಭಿನಯ, ನಾಟಕ, ಚಿತ್ರಕಲೆ, ಆಟ, ಪಾಠ ಎಲ್ಲದರಲ್ಲೂ ಎತ್ತಿದ ಕೈ, ಮೇಲಾಗಿ ಸುಪ್ರಸಿದ್ಧ 'ಯಕ್ಷಗಾನ ಪ್ರಸಂಗಕರ್ತೃ, ಇವರು ಬಿಡಿಬಿಡಿಯಾಗಿ ಬಿಡಿಸಿ ಹೇಳಿ ಕಲಿಸುವ ಗಣಿತ, ವಿಜ್ಞಾನ, ಇಂಗ್ಲೀಷ್, ಸಮಾಜ ಎಲ್ಲಾ ಪಾಠಗಳು ಅಧ್ಯಾಪಕರಿಗೆ ಮಾದರಿ. 'ಕನ್ನಡ ಪಂಡಿತ' ಎಂದೇ ಹೆಸರಾಗಿ ತಾಲೂಕಿನ 'ಕನ್ನಡ ಸಾಹಿತ್ಯ ಪರಿಷತ್ತಿ'ನ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಇವರ ಕನ್ನಡ ಪಾಠ ಎಂದರೆ ವಿದ್ಯಾರ್ಥಿಗಳಿಗೆ ರಸದೌತಣ. ಪದ್ಯಪಾಠವಂತೂ 'ಗಂಧರ್ವಲೋಕ' ಚಂದ್ರಮತಿ ಪ್ರಲಾಪ, ಅಭಿಮನ್ಯುವಿನ ಪರಾಕ್ರಮ, ಹಳೆಗನ್ನಡ ಕಾವ್ಯ, ನವ್ಯ ಕವಿತೆಗಳನ್ನು ಹಾಡುವುದರ ಜೊತೆಗೆ ಮನಮುಟ್ಟುವಂತೆ ವರ್ಣಿಸಿ ವಿವರಿಸುವುದರಲ್ಲಿ ನಿಸ್ಸೀಮ. ಇನ್ನೂ ಮುಖ್ಯವಾದದ್ದು ವಿದ್ಯಾರ್ಥಿಗಳಿಗೆ ತಲೆನೋವೆನಿಸಿದ ವ್ಯಾಕರಣ. ಆದರೆ ಮಾಂತ್ರಿಕ ಶಕ್ತಿಯುಳ್ಳ ನಮ್ಮ ಗುರುಗಳು ಸಂಧಿ, ಸಮಾಸ, ಛಂದಸ್ಸು, 'ತ್ಸ' 'ದ್ಧ' ಹೇಳುವ ರೀತಿಯೇ ಅದ್ಭುತ. ಅವರ ಪಾಂಡಿತ್ಯ ನಮ್ಮ ಮೇಲೆ ಎಷ್ಟು ಪ್ರಭಾವ ಬೀರಿತ್ತೆಂದರೆ, ಅವರ ಎಲ್ಲಾ ಶಿಷ್ಯರು ಹೇಳುವಂತೆ – 'ಮುಂದಿನ ವಿದ್ಯಾಭ್ಯಾಸದಲ್ಲಿ ನಮ್ಮ ಶಾಲೆಯಿಂದ ಹೋದವರೇ ವ್ಯಾಕರಣದಲ್ಲಿ ಮುಂದು. 'ತ್ಸ' 'ದ್ಧ' ಅಂತೂ ತುದಿನಾಲಗೆಯಲ್ಲಿತ್ತು. ಯಾರು ಉತ್ತರಿಸದ ವ್ಯಾಕರಣಾಂಶಕ್ಕೆ ಉತ್ತರಿಸಿ. 'ನೀವು ಯಾವ ಶಾಲೆಯಿಂದ ಬಂದವರು" ? ಎಂಬ ಪ್ರಶ್ನೆಗೆ ಭಾಜನರಾಗಲು ಕಾರಣವೇ ನಮ್ಮ ಗುರುಗಳ ಕೃಪೆ ಎಂದರೂ ತಪ್ಪಾಗಲಾರದು.

ಇನ್ನು ಗುರುಗಳ ಕಲಾಪ್ರೌಢಿಮೆಯನ್ನು ನನ್ನ ತಿಳುವಳಿಕೆಯಂತೆ ಹೇಳುವುದಿದ್ದರೆ, ಆ ನನ್ನ ಬಾಲ್ಯದಲ್ಲಿ ಹಳ್ಳಿಗಳಲ್ಲಿ ಮನೋರಂಜನೆ ಅಂದರೆ ಕಂಬಳ, ಕೋಳಿಪಡೆ, ಹಬ್ಬಜಾತ್ರೆ ಅಷ್ಟೆ. ಬೆಳಕಿನಲ್ಲಿ ಯಾವುದೋ ಊರಿನ ಮೂಲೆಯಲ್ಲೊಂದು ಬಯಲಾಟ, ಹಾರಾಡಿ ರಾಮರು ಭೀಮನ ಪಾತ್ರದಲ್ಲಿ ಹಿಡಿಂಬನನ್ನು ಕೊಂದದ್ದು ನನಗಿನ್ನೂ ನೆನಪಿದೆ. ಕುಂದಾಪುರದಲ್ಲಿ ಓಡಿಸುತ್ತಿದ್ದ ಕಪ್ಪು ಬಿಳುಪು ಚಲನಚಿತ್ರ, ನಮ್ಮಂಥ ಹಳ್ಳಿ ಜನರಿಗೆ ದೂರದ ಮಾತು. ಆಗಾಗ ಬಸ್ರೂರು, ಕಂಡ್ಲೂರು ಕಡೆ ಬರುತ್ತಿದ್ದ ನಾಟಕ ಕಂಪೆನಿಗಳಲ್ಲಿ ನಮ್ಮ ಗುರುಗಳು ಅತಿಥಿ ಕಲಾವಿದರಾಗಿ ನಟಿಸುತ್ತಿದ್ದರೆಂದು ಕೇಳಿದ್ದೆ.

ಮುಂದೆ ಬಿಡಿ – ನೇತಾಜಿ ಶಾಲೆಯಲ್ಲಿ ಗುರುಗಳ ನೇತೃತ್ವದಲ್ಲಿ ಯುವಕರ ನಾಟಕ – ಮಿಲ್ ಮೆನೇಜರ್, ಪುತ್ಥಳಿ, ಅಣ್ಣ – ತಮ್ಮ ಒಂದೇ ಎರಡೇ! ಎಲ್ಲದರಲ್ಲೂ ಗುರುಗಳ ಹಾಸ್ಯ ಪಾತ್ರ. ಇಷ್ಟೇ ಅಲ್ಲ ಬೇರೆ ಬೇರೆ ಶಾಲೆಗಳಲ್ಲಿ ನಾಟಕ ತರಬೇತಿ ಮತ್ತು ಪಾತ್ರಧಾರಿಕೆ. ಒಟ್ಟಿನಲ್ಲಿ 'ರಘು ಮಾಸ್ಟ್ರು ಅಂದ್ರೆ ನಾಟಕ' 'ನಾಟಕ ಅಂದ್ರೆ ರಘು ಮಾಸ್ಟ್ರು' ಅನ್ನುವಂತೆ ಹೆಸರಿತ್ತು. ನಾಟಕದ ಕಥೆ ಇಲ್ಲಿಗೆ ಮುಗಿಯಲಿಲ್ಲ – ಶಾಲೆಯಲ್ಲಿ ವಿದ್ಯಾರ್ಥಿಗಳನ್ನು ಸಂಗೀತ, ನಾಟಕ, ನೃತ್ಯಗಳಲ್ಲಿ ತರಬೇತುಗೊಳಿಸಿ ಪ್ರದರ್ಶಿಸುವದರ ಮೂಲಕ ನೇತಾಜಿ ಶಾಲೆ ಅಂದರೆ 'ಒಂದು ರಂಗಭೂಮಿ ವಿದ್ಯಾಲಯ' ಎಂಬಂತೆ ಬಿಂಬಿಸಿದರು. ಶಾಲೆಯ ವಾರ್ಷಿಕೋತ್ಸವಕ್ಕೆ ಹರಿದು ಬರುವ ಜನ ನೋಡಿದರೆ ಇದೇನು ನಾಟಕವೋ, ಜಾತ್ರೆಯೋ ಅನ್ನುವ ಹಾಗಿತ್ತು. ಗುರುತ್ವವುಳ್ಳ ಗುರುಗಳು ಪಾಠದ ಜೊತೆಯಲ್ಲಿ ವಿದ್ಯಾರ್ಥಿಗಳಿಗೆ ಕಲಾಕೌಶಲ್ಯಕ್ಕೂ ತಳಪಾಯ ಹಾಕಿದ್ದರು. ಬಾಲಸಭೆ, ಚರ್ಚಾಕೂಟ, ಭಾಷಣ, ಅಭಿನಯ, ಭಜನೆ, ನೃತ್ಯ, ಸಂಗೀತ ವಿವಿಧ ಕಾರ್ಯಕ್ರಮಗಳನ್ನು ನಡೆಸಿ ಮಕ್ಕಳ ಪ್ರತಿಭೆಯನ್ನು ಹೊರ ತರುತ್ತಿದ್ದರು. ಇದರಿಂದ ಹುಟ್ಟು ಕಲಾಸಕ್ತಳಾದ ನನ್ನನ್ನು ನೀರೆರೆದು ಪೋಷಿಸಿದಂತಾಯಿತು.

1964ರಲ್ಲಿ ನಾನು 7ನೇ ತರಗತಿ ಉತ್ತೀರ್ಣಳಾದಾಗ, ಪೋಷಕರು ನನ್ನ ವಿದ್ಯಾಭ್ಯಾಸ ಮುಂದುವರಿಸುವ ಯೋಚನೆಯಲ್ಲಿ ಇರಲಿಲ್ಲ. ಹತ್ತಿರದ ಬಸ್ರೂರು ಹೈಸ್ಕೂಲಿಗೆ ಹೋಗಲು ಸೇತುವೆ ಇರಲಿಲ್ಲ. ದೋಣಿ ದಾಟಿ ಹೋಗಬೇಕಿತ್ತು. ಅಲ್ಲದೇ ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಅಷ್ಟೊಂದು ಕಾಳಜಿ ಇಲ್ಲದ ಕಾಲ ಅದು. ಆದರೆ ನಮ್ಮ ಗುರುಗಳು ನನ್ನ ತಂದೆಯವರಿಗೆ ಸಲಹೆ ನೀಡಿದುದರಿಂದ, ನಾನು ಶಾರದಾ ಹೈಸ್ಕೂಲು ಚೇರ್ಕಾಡಿ ಹಾಗೂ ಉಡುಪಿಯಲ್ಲಿ ಅಧ್ಯಾಪನ ವೃತ್ತಿ ತರಬೇತಿ ಪಡೆಯುವಂತಾಯಿತು ಮಾತ್ರವಲ್ಲ 1969ರಿಂದ 1991 ರ ವರೆಗೆ ನೇತಾಜಿ ಶಾಲೆಯಲ್ಲಿಯೇ ಗುರುಗಳ ಸಹೋದ್ಯೋಗಿಯಾಗಿಯೂ ಸೇವೆ ಸಲ್ಲಿಸುವ ಸದವಕಾಶ ನನ್ನ ಪಾಲಿಗೆ ದೊರಕಿತು. 'ಊರಿಗೆ ಅರಸನಾದರೂ ತಾಯಿಗೆ ಮಗ' ಎಂಬಂತೆ ಶಾಲೆಯಲ್ಲಿ ಮಕ್ಕಳಿಗೆ ನಾನು ಗುರುವಾಗಿದ್ದರೂ, ನನ್ನ ಗುರುಗಳಿಗೆ ನಾನು ಶಿಷ್ಯೆಯಾಗಿಯೇ ಇದ್ದೆ. ನನ್ನ ಮತ್ತು ಗುರುಗಳ ಸಂಬಂಧ – " ತಂದೆ –ಮಕ್ಕಳು, ಗುರು–ಶಿಷ್ಯರು, ಒಡಹುಟ್ಟಿದವರು, ಒಡನಾಡಿಗಳು" ಅಂದರೆ ಉತ್ಪ್ರೇಕ್ಷೆಯಲ್ಲ. ಈ ತನ್ಮಧ್ಯೆ ದಿ। ಜುಲಿಯಾನ ಡ'ಲೀಮಾ ಹಾಗೂ ಗುರುಗಳ ಇನ್ನೋರ್ವ ಶಿಷ್ಯ ಹಳನಾಡು ಚಂದ್ರಶೇಖರ ಶೆಟ್ಟಿ ಕೂಡ ಗುರುಗಳ ಜೊತೆಯಲ್ಲಿ ಸೇವೆಸಲ್ಲಿಸಿದ್ದರು.

ಇಂತಿರುವಾಗಲೇ ನಮ್ಮ ಗುರಗಳಿಂದ ರಚಿತವಾದ 'ಚೆಲುವೆ ಚಿತ್ರಾವತಿ, ಶೂದ್ರ ತಪಸ್ವಿನಿ, ಬನಶಂಕರಿ' ಮುಂತಾದ ನವರಸಗಳನ್ನೊಳಗೊಂಡ ನವ್ಯ ಪ್ರಸಂಗಗಳು ಎಲ್ಲಾ ಕಡೆ ರಂಗಸ್ಥಳದಲ್ಲಿ ರಂಗೇರಿದ್ದವು. ನನಗೆ ಯಕ್ಷಗಾನ ನೋಡುವ ಗೀಳೂ ಇತ್ತು. ಯಕ್ಷಲೋಕವನ್ನೇ ಭೂಲೋಕಕ್ಕೆ ತಂದು ಜನಮೆಚ್ಚುಗೆ ಪಡೆದ ಗುರುಗಳ ಕುರಿತು ನಮಗೆಷ್ಟು ಹೆಮ್ಮೆ ಎಂದು ಅಳತೆ ಮಾಡಲಾಗದು. 'ಯಕ್ಷಗಾನ ಪ್ರಸಂಗಕರ್ತ ರಘು ಮಾಸ್ಟ್ರು' ಎಂದೇ ಜನಜನಿತರಾಗಿ ಕಂಡ್ಲೂರು ಪರಿಸರದಲ್ಲಿ ಇಂದಿಗೂ ಮನೆಮಾತಾಗಿದ್ದಾರೆ. ಮುಂದೆ ಶ್ರೀ ಬಿ. ಸುಬ್ರಾಯ ಉಡುಪ ನಿವೃತ್ತಿಯ ಬಳಿಕ ಮುಖ್ಯ ಶಿಕ್ಷಕರಾಗಿಯೂ ಶಾಲೆಯ ಅಭಿವೃದ್ಧಿಗಾಗಿ ದುಡಿದಿದ್ದಾರೆ. 'ನೇತಾಜಿ' ಶಾಲೆಯಲ್ಲಿದ್ದು ಗುರುಗಳ ಗೌರವ ಹೆಚ್ಚಿದೆ; ರಘು ಮಾಸ್ಟರಿಂದ ನೇತಾಜಿ ಶಾಲೆಗೆ ಹಿರಿಮೆಯ ಗರಿ ಮೂಡಿದೆ. ಆ ಶಾಲೆಗೆ ಸಂಬಂಧಪಟ್ಟ ನಮ್ಮೆಲ್ಲರಿಗೂ ನಾವು ನೇತಾಜಿ ಶಾಲೆಯವರು, ರಘು ಮಾಸ್ಟ್ರ ಶಿಷ್ಯರೆಂಬುವುದೇ ಹೆಗ್ಗಳಿಕೆ.

1991 ರಲ್ಲಿ ಗುರುಗಳ ನಿವೃತ್ತಿಯ ಬಳಿಕ ನಾನು ಮುಖ್ಯ ಶಿಕ್ಷಕಿಯಾಗಿ 2008 ರ ವರಗೆ ಕಾರ್ಯನಿರ್ವಹಿಸಿದೆ. ಗುರುಗಳ ಗರಡಿಯಲ್ಲಿ ಪಳಗಿದ ನನಗೆ ಶಾಲೆಯನ್ನು ಮುನ್ನಡೆಸುವಲ್ಲಿ ಅಷ್ಟೇನು ಕಷ್ಟವಾಗಲಿಲ್ಲ. ಜೊತೆಯಲ್ಲಿ ಗುರುಗಳು ಆಗಾಗ ಶಾಲೆಗೆ ಬಂದು ಮಾರ್ಗದರ್ಶನ ನೀಡುತ್ತಿದ್ದರು. ಈ ಸಂದರ್ಭದಲ್ಲಿ ಎಲ್ಲರಿಗೂ ಬೆನ್ನೆಲುಬಾಗಿ ನಿಂತ ಶಾಲಾ ಅಧ್ಯಕ್ಷೆಯಾಗಿದ್ದ ದಿ। ರುದ್ರಮ್ಮ ಮಹಾಬಲ ಶೆಟ್ಟಿ ಹಾಗೂ ಇವರ ಸುಪುತ್ರ ಇಂದಿನ ಶಾಲಾಧ್ಯಕ್ಷರಾದ ಶ್ರೀಯುತ ಸೌಕೂರು ಸುಭಾಶ್ಚಂದ್ರ ಶೆಟ್ಟಿಯುವರನ್ನು ನೆನಪಿಸುತ್ತೇನೆ. ಅಲ್ಲದೆ ನನ್ನ ಕಿರಿಯ ಸಹೋದ್ಯೋಗಿಗಳಾದ ವೈ. ಪ್ರಕಾಶ ಶೆಟ್ಟಿ, ಕೆ. ಜಯಕರ ಶೆಟ್ಟಿ, ರಘುನಾಥ ಶೆಟ್ಟಿ, ರಮೇಶ ಜಿ. ಲಮಾಣಿಯವರ ತುಂಬು ಸಹಕಾರ ಮರೆಯಲಾರೆ. ಅಂತೆಯೇ ನನ್ನ ಶಿಷ್ಯವೃಂದದ ಪ್ರೀತಿ ಹಾಗೂ ಪ್ರೋಷಕರ ಹುರಿದುಂಬಿಸುವಿಕೆ ಕೂಡ ಅನನ್ಯ.

ಈ ತನ್ಮಧ್ಯೆ ಗುರುಗಳು ತಮ್ಮ ಸೇವಾವಧಿಯಲ್ಲಿ ಅಸೌಖ್ಯದ ಕಾರಣ ಸ್ವಲ್ಪ ಕಾಲ ಸಕುಟುಂಬ ಸಮೇತರಾಗಿ ಕಂಡ್ಲೂರಿನಲ್ಲಿ ವಾಸ್ತವ್ಯ ಹೂಡಿದ್ದರು. ಇದರಿಂದಾಗಿ ನಮ್ಮ ಶಾಲೆಗೆ ಸೇರಿದ ಅವರ ಮೂವರು ಮಕ್ಕಳಿಗೂ ಅಲ್ಪಕಾಲ ವಿದ್ಯೆ ನೀಡಿ, ನಾನೂ ಅವರ 'ಶಿಕ್ಷಕಿ' ಎನಿಸಿಕೊಂಡ ಸಂತಸ ನನಗಿದೆ. ಇದರೊಂದಿಗೆ ಮಾತೃ ಸಮಾನರಾದ ಗುರುಪತ್ನಿಯರನ್ನು ಹತ್ತಿರದಿಂದ ನೋಡುವ ಅವಕಾಶ ದೊರೆತು ಬಾಂಧವ್ಯ ಬೆಳೆಯಿತು.

ನಾನಿಂದು ನನ್ನ ಮಗಳ ಜೊತೆ ಅಮೇರಿಕಾದಲ್ಲಿ ಇದ್ದೇನೆ. ಇಲ್ಲಿಯೂ ಹೋದಲ್ಲಿ ಬಂದಲ್ಲಿ ಗುರುಗಳ ನೆನಪಾಗುವುದು. ಕಾರಣ ಅವರ ಸಮಾಜಾಭ್ಯಾಸ ಪಾಠ. ಪ್ರಪಂಚದ ರಾಷ್ಟ್ರಗಳ ಕುರಿತು ಬೋಧಿಸುವಾಗ 'ಅಮೇರಿಕಾ ಶ್ರೀಮಂತ ರಾಷ್ಟ್ರ, ಅಲ್ಲಿ ಕೃಷಿ ಕಾರ್ಮಿಕನಿಂದ ಹಿಡಿದು ಆಗರ್ಭ ಶ್ರೀಮಂತರವರೆಗೆ ಎಲ್ಲರೂ ಕೋಟು ಬೂಟು ಧರಿಸಿ ಕಾರಿನಲ್ಲೇ ಓಡಾಡುತ್ತಾರೆ. ಶಿಸ್ತು ಮತ್ತು ಸ್ವಚ್ಛತೆಯೇ ಪ್ರಧಾನ. ಹೆಚ್ಚಿನ ಕೆಲಸಗಳು ಯಂತ್ರಗಳ ಮೂಲಕವೇ ಸಾಗುತ್ತದೆ. ಸಾಗರಗಳಲ್ಲಿ ಅತೀ ದೊಡ್ಡದಾದ ಫೆಸಿಫಿಕ್ ಸಾಗರ ಅಮೇರಿಕಾವನ್ನು ಸುತ್ತುವರಿದಿದೆ ಅಂದಿದ್ದರು. ' ಇವುಗಳನ್ನೆಲ್ಲ ಕಣ್ಣಾರೆ ಕಾಣುವಾಗ ಎಳವೆಯಲ್ಲಿ ಗುರುಗಳು ತರಗತಿಯಲ್ಲಿ ಕಣ್ಣ ಮುಂದೆ ನಿಂತು ಹೇಳುವಂತೆ ಭಾಸವಾಗುತ್ತಿತ್ತು. ಮಾತ್ರವಲ್ಲ ಅವರ ಒಂದಿಬ್ಬರು ಶಿಷ್ಯರೂ ನನಗೆ ಸಿಕ್ಕಿದ್ದಾರೆ. ಅವರ ಮೊದಲ ಮಾತೇ " ನಮ್ಮ ಗುರುಗಳು ಹೇಗಿದ್ದಾರೆ ? " ಎನ್ನುವುದೇ ಆಗಿರುತ್ತದೆ. ಒಟ್ಟಾರೆ ಸಾರ್ವತ್ರಿಕವಾಗಿ ಅವರ ಎಲ್ಲಾ ಶಿಷ್ಯರು ಹೇಳುವುದೊಂದೇ ಆಗಿದೆ, " ನಮ್ಮ ಗುರುಗಳ ಜ್ಞಾನ ಅಪಾರ, ನೆನಪು ಆಗಾಧ, ನಮ್ಮನ್ನು ಎಲ್ಲಿಯೇ ನೋಡಲಿ ಗುರುತಿಸಿ ಯೋಗಕ್ಷೇಮ ವಿಚಾರಿಸುವರು, ತಕ್ಕಂತೆ ಮಾರ್ಗದರ್ಶನ ನೀಡುವರು" ಹೀಗೆ ಗುರು ಶಿಷ್ಯರ ಅವಿನಾಭಾವ ಸಂಬಂಧಕ್ಕೆ ಸಾಟಿ ಉಂಟೇ ? ಗುರುಗಳ ಗುಣಗಾನ ಮಾಡಿ ಮುಗಿಸಲುಂಟೆ ?

ನಾ ಕಂಡಂತೆ ಅಂದಿನಿಂದ ಇಂದಿನವರೆಗೂ ಅದೇ ನಡೆ, ಅದೇ ನುಡಿ, ಅದೇ ಉಡುಗೆಯಲ್ಲಿ ಸಜ್ಜನಿಕೆಯಿಂದ ತಮ್ಮ ದಿನಚರಿಯನ್ನು ಕಳೆಯುವ ಗುರುಗಳಿಗೆ ಎಂಟು ದಶಕಗಳ ಸಂಭ್ರಮ ಎಂದರೆ ಒಂದೆಡೆ ಸಂತೋಷ, ಇನ್ನೊಂದೆಡೆ ಆಶ್ಚರ್ಯ ಎನಿಸುವುದು. ಹೀಗೆ ನನ್ನ ನೆಚ್ಚಿನ ಗುರುಗಳ ಕುರಿತು ಬರೆಯುತ್ತಾ ಹೋದರೆ ಈ ಲೇಖನ ಕೊನೆ ಕಾಣದು. ಗುರುಗಳ ಕುರಿತಾದ 'ಅಭಿನಂದನಾ ಗ್ರಂಥ'ದಲ್ಲಿ ನನ್ನ ಎರಡು ಅಕ್ಷರಗಳು ಮೂಡುವಂತಾದದ್ದೆ ನನಗೆ ಹೆಮ್ಮೆ. ಅದೇ ನನ್ನ ಅವರ ಭಾವನಾತ್ಮಕ ಬಂಧುತ್ವಕ್ಕೆ ತೆರೆದಿಟ್ಟ ಕನ್ನಡಿ. ನಾನೆಲ್ಲೇ ಇದ್ದರೂ, ನೆನೆಯುದೆನ್ನ ಮನ ಆ ನಮ್ಮ ಗುರುಗಳು, ಆ ಶಾಲೆ, ಶಿಷ್ಯರು, ನನ್ನೂರು, ಕಳೆದ ಆ ದಿನಗಳು, ನಡೆದು ಬಂದ ದಾರಿ.

ಸದ್ಗುರುವಾಗಿ ಸಮಾಜಕ್ಕೆ ದಾರಿದೀಪವಾಗಿ ಬೆಳಗುವ ಗುರುಗಳಿಗೆ ಶಿಷ್ಯವೃಂದದವರ ಪರವಾಗಿ ನಮಿಸುತ್ತಾ, ಆ ದೇವನು ತಮಗೆ ಆಯುರಾರೋಗ್ಯ ಕರುಣಿಸಲೆಂದು ಬೇಡುತ್ತಾ, ಮುಗಿಸುವೆ ಈ ಗುರು ಶಿಷ್ಯರ ಬೆಸುಗೆಯ ಕಥನ.

ಯಕ್ಷಪ್ರವರ್ತಕ ಶ್ರೀ ಕಂದಾವರ ರಘುರಾಮ ಶೆಟ್ಟಿ

ಸಾಲಿಗ್ರಾಮ ಗಣೇಶ್ ಶೆಣೈ
ಸಂಸ್ಥಾಪಕರು,
ಯಕ್ಷರಂಗ ಯಕ್ಷಗಾನ ಸಂಸ್ಥೆ, ದಾವಣಗೆರೆ

ಶ್ರೀ ಕಂದಾವರ ರಘುರಾಮ ಶೆಟ್ಟಿಯವರ ಅಭಿನಂದನಾ ಗ್ರಂಥ ಪ್ರಕಟಣೆಯಾಗುವ ವಿಷಯ ತಿಳಿದು ತುಂಬಾ ಸಂತೋಷವಾಯಿತು. ತಡವಾಗಿ ಆದರೂ ಕರ್ನಾಟಕ ಕರಾವಳಿ ಜಿಲ್ಲೆಗಳ ಒಬ್ಬ ಶ್ರೇಷ್ಠ ಯಕ್ಷಗಾನ ವಿದ್ವಾಂಸರನ್ನು ಗುರುತಿಸುವ ಕಾರ್ಯಕ್ಕೆ ಈ ಸಮಿತಿಗೆ ಕೃತಜ್ಞತೆ ಸಲ್ಲಿಸುತ್ತೇವೆ.

ಪ್ರಸ್ತುತ ದೈವಿಕ ಹಿನ್ನೆಲೆಯ ಆರಾಧನಾ ಕಲೆ ಯಕ್ಷಗಾನವು ನವ ಯುವ ಪೀಳಿಗೆಗಳಿಂದ ದೂರವಾಗುತ್ತಿರುವುದು ವಿಷಾದದ ಸಂಗತಿ. ವಿಖ್ಯಾತವಾದ ಈ ಪುರಾತನ ಅಪ್ಪಟ ಜನಪದ ಕಲಾಪ್ರಕಾರಕ್ಕೆ ತನ್ನ ಜನ್ಮ ಸ್ಥಳಗಳಲ್ಲಿಯೂ ಪ್ರೇಕ್ಷಕರ ಕೊರತೆ ಎಂದು ಕೇಳಿ ನೋವಾಗುತ್ತಿದೆ. ಸಂಘಟಕರು ಶ್ರೋತೃಗಳನ್ನು ಸೇರಿಸಲು ತಿಂಡಿ, ಊಟ, ಚಹಾದ ವ್ಯವಸ್ಥೆಯೊಂದಿಗೆ ಹರಸಾಹಸದ ಸಂದಿಗ್ಧ ಪರಿಸ್ಥಿತಿಯಲ್ಲೂ ಶ್ರೀ ಕಂದಾವರ ರಘುರಾಮ ಶೆಟ್ಟಿಯವರು ತಮ್ಮ ಸಂಪ್ರದಾಯದ ಶೈಲಿಯಲ್ಲಿ ಹಳೆ ಪ್ರಸಂಗಗಳನ್ನು ರಚಿಸಿ, ಆಧುನಿಕರಣದ ಒತ್ತಡವಿದ್ದರೂ ಪುರಾತನ ಪರಂಪರೆಗಳನ್ನು ಉಳಿಸುವ, ಬೆಳೆಸುವ ನಿಟ್ಟಿನಲ್ಲಿ ತಮ್ಮ ಜೀವ, ಜೀವನ ಸವೆಸಿದ್ದಾರೆ. ಇಂತಹ ಹಿರಿಯ ಯಕ್ಷಗಾನ ದಿಗ್ಗಜರನ್ನು ಅಕಾಡೆಮಿ, ಸರಕಾರಗಳು ಇನ್ನೂ ಗುರುತಿಸದೇ ಇರುವುದು ವಿಪರ್ಯಾಸ.

ದಾವಣಗೆರೆಯ ನಮ್ಮ ಸಂಸ್ಥೆಗೆ ಪ್ರಾರಂಭದಿಂದಲೂ ಜತೆಗಿದ್ದು ನಮ್ಮ ಹಳೇ ಚೌಕಟ್ಟಿನ ಹೊಸ ಅವಿಷ್ಕಾರದ ನೂತನ ಪ್ರಯೋಗಗಳಿಗೆ ಸಲಹೆ, ಸೂಚನೆ, ಮಾರ್ಗದರ್ಶನ ನೀಡುತ್ತಾ ದಾವಣಗೆರೆಯ ಯಕ್ಷರಂಗದ ಎಲ್ಲಾ ಕಾರ್ಯಕ್ರಮಗಳಲ್ಲಿ

ಭಾಗವಹಿಸುತ್ತಾ ನಮ್ಮ ಸಂಸ್ಥೆಯ ಬಗ್ಗೆ ಅಪಾರವಾದ ಕಾಳಜಿ, ಪ್ರೀತಿ, ವಿಶೇಷ ಅಭಿಮಾನವಿಟ್ಟಿರುವ ಅಜಾತಶತ್ರು ಶ್ರೀ ಕಂದಾವರ ರಘುರಾಮ ಶೆಟ್ಟಿಯವರಿಗೆ ನಮ್ಮ ಬಳಗದ ಪರವಾಗಿ ಅಭಿನಂದನೆ ಸಲ್ಲಿಸುತ್ತಾ, ತನ್ನ ಜೀವನಾಡಿಗಳಲ್ಲಿ, ಉಸಿರಿನಲ್ಲೂ ಯಕ್ಷಗಾನದ ಮಜಲುಗಳಲ್ಲಿ ಕೃಷಿಯೊಂದಿಗೆ ಸಾಧನೆಗೈದ ಶ್ರೀ ಕಂದಾವರದವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗೌರವ ಡಾಕ್ಟರೇಟ್ ಹಾಗೂ ಮಾನ, ಸಮ್ಮಾನಗಳು ವಿತರಿಸಿದರೆ ಆ ಪ್ರಶಸ್ತಿಗಳಿಗೆ ಇನ್ನೂ ಹೆಚ್ಚು ಗೌರವ ಧಕ್ಕಿದಂತಾಗುತ್ತದೆ.

ದಾವಣಗೆರೆ ಯಕ್ಷರಂಗ ಸಮಿತಿಯ ಸರ್ವ ಸದಸ್ಯರ ಪರವಾಗಿ
ಶುಭ ಹಾರೈಕೆಗಳು

ಯಕ್ಷಗಾನ ಮಾರ್ಗದರ್ಶಿ ಕಂದಾವರ ಮೇಸ್ಟ್ರು

ನೀಲಾವರ ಭಾಸ್ಕರ ನಾಯಕ್
ದಾವಣಗೆರೆ

ಸುಮಾರು ಮೂವತ್ತೈದು ವರ್ಷಗಳ ಹಿಂದೆ ನನ್ನ ಆತ್ಮೀಯರಾದ ನಾಗೇಶಣ್ಣನವರೊಂದಿಗೆ ಸಾಲಿಗ್ರಾಮ ಡೇರೆ ಮೇಳದ ಆಟ ನೋಡಲು ಹೋದ ಸಂದರ್ಭ ಈಗಲೂ ನೆನಪಿದೆ. ಅಂದಿನ ಪ್ರಸಂಗ ಚೆಲುವೆ ಚಿತ್ರಾವತಿ. ಅಂದಿನ ಶ್ರೀ ಕಾಳಿಂಗ ನಾವಡರ ಇಂಪಾದ ಹಾಡುಗಾರಿಕೆ ಇನ್ನೂ ನನ್ನ ಕಿವಿಯಲ್ಲಿ ರಿಂಗಣಿಸುತ್ತದೆ. ಆಗ ನನ್ನ ಮನಸ್ಸಿನಲ್ಲಿ ಪಡಿಮೂಡಿದ ಸನ್ನಿವೇಶಗಳಾದ ಮದನಾಂಗಿ ಪಾತ್ರದ ವಿವಿಧ ಮಜಲುಗಳನ್ನು ಹೆಣೆದ ಕವಿಯ ಜಾಣ್ಮೆ ಹಾಗೂ ಮುಂದೆ ತಾಯಿ ಮತ್ತು ಮಗನನ್ನು ಸೇರಿಸುವ ಸಂದರ್ಭಗಳನ್ನು ಹೊಸ ಪ್ರಸಂಗವಾದರೂ ಯಕ್ಷಗಾನ ಚೌಕಟ್ಟಿನಲ್ಲೇ ರಚಿಸಿದ ಪ್ರಸಂಗಕರ್ತೃರ ಬಗ್ಗೆ ನಾನು ನಾಗೇಶಣ್ಣನವರಲ್ಲಿ ವಿಚಾರಿಸಿದಾಗ ಓ! ಅದು ಕಂದಾವರ ಮೇಸ್ಟು ಅಂದಾಗ ಮನಸ್ಸಿನಲ್ಲೇ ಒಂದು ತರಹ ಆನಂದ ಹಾಗೂ ಕುತೂಹಲ ಪ್ರಸಂಗ ಬರೆದವರ ಬಗ್ಗೆ.

ನಮ್ಮ ಜೀವನೋಪಾಯ ನಿಮಿತ್ತ ದಾವಣಗೆರೆಗೆ ಬಂದು ನೆಲಸಿ, ಯಕ್ಷಗಾನಾಸಕ್ತರು ಎಲ್ಲಾ ಸೇರಿ ಯಕ್ಷರಂಗ ಎಂಬ ಸಂಸ್ಥೆಯನ್ನು ಕಟ್ಟಿ, ಸದಾ ಚಟುವಟಿಕೆಯಿಂದ ಸಂಸ್ಥೆ ಇರುವಲ್ಲಿಗೆ ಸಂಸ್ಥೆಗೆ ದಶಮಾನೋತ್ಸವ ಆಚರಿಸುವ ಸುಯೋಗ ಬಂತು. ಆಗ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಸಾಲಿಗ್ರಾಮ ಗಣೇಶ ಶೆಣೈಯವರು ಕಾರ್ಯಕ್ರಮದ ಮುಖ್ಯ ಅತಿಥಿಗಳನ್ನು ಕರೆತರುವ ವಿಚಾರ ಶ್ರೀ ಹೆಮ್ಮಾಡಿ ರಾಮಚಂದ್ರ ಭಟ್ಟರಲ್ಲಿ ಪ್ರಸ್ತಾಪಿಸಿದಾಗ ಅಂದು ಅವರು ಸೂಚಿಸಿದ ಹೆಸರು ಶ್ರೀ ಕಂದಾವರ ರಘುರಾಮ ಶೆಟ್ಟರದು. 2000ನೇ ಇಸವಿಯ ಜುಲೈ ತಿಂಗಳಲ್ಲಿ ಜರಗಿದ ಕಾರ್ಯಕ್ರಮದ ದಿನ ಬೆಳಿಗ್ಗೆ ಕುಂದಾಪುರದಿಂದ ಬಸ್ಸಿನ ಮೂಲಕ ದಾವಣಗೆರೆಗೆ ಹೆಮ್ಮಾಡಿ ಭಟ್ಟರೊಂದಿಗೆ ಕಂದಾವರದವರು ಬಂದಾಗ ಅವರನ್ನು

ನಮ್ಮ ಮನೆಗೆ ಕರೆ ತಂದು ಸತ್ಕರಿಸುವ ಸೌಭಾಗ್ಯ ನಮ್ಮ ಪಾಲಿಗಾದುದು ಒಂದು ಸುಯೋಗವೆಂದೇ ಭಾವಿಸುತ್ತೇನೆ. ಅಂದಿನಿಂದ ಇಂದಿನವರೆಗೆ ನಮ್ಮ ಯಕ್ಷರಂಗದ ಯಾವತ್ತೂ ಕಾರ್ಯಕ್ರಮಗಳಿಗೆ ಆಗಮಿಸಿ, ಭಾಗವಹಿಸುವ ಮೂಲಕ ಯೋಗ್ಯ ಸಲಹೆ-ಸೂಚನೆ, ಮಾರ್ಗದರ್ಶನವನ್ನು ನೀಡುತ್ತಾ ಬಂದಿದ್ದಾರೆ. ಇನ್ನು ವ್ಯಕ್ತಿಗತವಾಗಿ ಅವರು ನಮ್ಮ ಮನೆಯವರಿಗೆ ಒಬ್ಬ ಹಿರಿಯರೋಪಾದಿಯಾಗಿ ಆದರಣೀಯರು. ಸರಳ, ನೇರನಡೆ ನುಡಿಯ ಅವರ ವ್ಯಕ್ತಿತ್ವ ನಮ್ಮನ್ನು ತುಂಬಾ ಆಕರ್ಷಿಸಿದೆ.

ಶ್ರೀಯುತರು ಸ್ವತಃ ಕವಿ, ನಾಟಕಕಾರ, ಬಾಲಕನಾಗಿದ್ದಾಗ ಭಾಗವತರೂ, ಬರಹಗಾರರು, ತಾಳಮದ್ದಳೆಯ ಸೊಗಸಾದ ಮಾತುಗಾರರು, ಕಲಾವಿದರು. ಆದರೂ ಸಹ ಇತರ ಕಲಾವಿದರ ಬಗ್ಗೆ ತುಂಬಾ ಗೌರವ. ನಿದರ್ಶನವಾಗಿ ಮಂದಾರ್ತಿ ಮೇಳದ ಮಹಾನ್ ಕಲಾವಿದರಾದ ರಾಷ್ಟ್ರ ಪ್ರಶಸ್ತಿ ವಿಜೇತ ಶ್ರೀ ಹಾರಾಡಿ ರಾಮ ಗಾಣಿಗರ ಜೀವನ ಚರಿತ್ರೆಯನ್ನು ಸೊಗಸಾಗಿ ಪುಸ್ತಕರೂಪಕ್ಕೆ ತಂದಿರುವುದು ಒಂದು ಮಹತ್ಕಾರ್ಯ. ಅವರೇ ಸ್ಥಾಪಿಸಿರುವ ಶ್ರೀ ಕಂದಾವರ ರಘುರಾಮ ಶೆಟ್ಟಿ ಪ್ರತಿಷ್ಠಾನದ ಮೂಲಕ ಪ್ರತಿವರ್ಷ ಯಕ್ಷಗಾನದಲ್ಲಿ ಸಾಧನೆ ಮಾಡಿರುವ ಕಲಾವಿದರನ್ನು ಸನ್ಮಾನಿಸಿ ಪ್ರೋತ್ಸಾಹಿಸುವುದು ಅವರಿಗೆ ಕಲಾವಿದರ ಬಗೆಗೆ ಇರುವ ಗೌರವ ಹಾಗೂ ಕಾಳಜಿಯನ್ನು ಎತ್ತಿ ತೋರಿಸುವಂತಿದೆ.

ತಮ್ಮಲ್ಲಿ ಆಗಾಧ ಪುರಾಣ ಜ್ಞಾನ, ವಿಷಯ ಸಂಗ್ರಹವಿದ್ದರೂ ಸಹಾ ನಮ್ಮ ಯಕ್ಷರಂಗದ ದಶಮಾನೋತ್ಸವ ಸಂದರ್ಭದ ತಾಳಮದ್ದಳೆಯಲ್ಲಿ ಪರ್ವದ ಭೀಷ್ಮನ ಪಾತ್ರವನ್ನು ನಿರ್ವಹಿಸಲು ಕೇಳಿಕೊಂಡಾಗ " ನಾನು ಇಲ್ಲಿಯವರೆಗೆ ಆ ಪಾತ್ರ ನಿರ್ವಹಣೆ ಮಾಡಿಲ್ಲ; ಅದರಲ್ಲಿ ಏನೇನೂ ಹಿಡಿತ ನನಗಿಲ್ಲ. ಶ್ರೀ ಕೃಷ್ಣನ ಪಾತ್ರ ನಿರ್ವಹಿಸುವೆ" ಎಂದರು. ಆದರೆ ನಾವೆಲ್ಲರೂ ಅವರ ಭೀಷ್ಮನ ಅರ್ಥ ಕೇಳುವ ಆಸೆಯನ್ನು ತೋಡಿಕೊಂಡಾಗ ಒಪ್ಪಿಕೊಂಡರು. ಅಂದಿನ ಅವರ ಭೀಷ್ಮನ ಪಾತ್ರ ತುಂಬಾ ಸೊಗಸಾಗಿ ಮೂಡಿ ಬಂದು ಇಂದಿಗೂ ಅವರ ಅರ್ಥ ಮೆಲಕು ಹಾಕುವಂತಾಗಿದೆ. ತನ್ನ ಕುಲದಲ್ಲಿ ನಡೆಯುತ್ತಿರುವ ಅಂತಃಕಲಹ, ಪರಿಣಾಮವಾಗಿ ನಡೆಯಲಿರುವ ದುರಂತದ ಬಗ್ಗೆ ದುಃಖಿಸುವ ಭೀಷ್ಮನ ಚಿತ್ರಣ ಸಭಿಕರ ಮೇಲೆ ಗಾಢ ಪರಿಣಾಮ ಬೀರಿತ್ತು. ಶ್ರೀಯುತರು ರಚಿಸಿರುವ ಪ್ರಸಂಗಗಳು ಬರೀ ಪದ್ಯಗಳಿಂದ ಕೂಡಿದ ಕೃತಿಗಳಾಗಿರದೆ ನಮ್ಮ-ನಿಮ್ಮ ಜೀವನದಲ್ಲಿ ಮೌಲ್ಯಗಳನ್ನು ಬಿಂಬಿಸುವ ಮಹಾನ್ ಕೃತಿಗಳಾಗಿವೆ.

ಇತ್ತೀಚಿನ ಹತ್ತಾರು ವರ್ಷಗಳ ಅವರೊಂದಿಗಿನ ನಮ್ಮ ಒಡನಾಟವಾದರೂ ಸಹಾ ನಮ್ಮನ್ನು ಪ್ರೀತಿಪೂರ್ವಕವಾಗಿ ನೋಡಿಕೊಂಡಿದ್ದಾರೆ. ನಾವು ಕೇಳುವ ಯಕ್ಷಗಾನ ಸಾಹಿತ್ಯ ಹಾಗೂ ಇತರ ವಿಷಯಗಳ ಬಗ್ಗೆ ಸಂಪೂರ್ಣ ಮಾಹಿತಿ ಹಾಗೂ ಮಾರ್ಗದರ್ಶನಗಳನ್ನು ನೀಡುತ್ತಾ ನಮಗೆ ಗುರುಗಳಾಗಿ ಅದರಣೀಯರಾಗಿರುತ್ತಾರೆ. ಶ್ರೀಯುತರ ಬಗ್ಗೆ ಅಭಿನಂದನಾ ರೂಪವಾಗಿ ಬರಹಗಳನ್ನು ಸಂಗ್ರಹಿಸಿ ಗ್ರಂಥವನ್ನು ಪ್ರಕಟಿಸುವ ಸಮಿತಿಯವರಿಗೆ ನಮ್ಮ ದಾವಣಗೆರೆಯ ಯಕ್ಷಗಾನ ಕಲಾಭಿಮಾನಿಗಳೆಲ್ಲರ ಅಭಿನಂದನಾ ಪೂರ್ವಕ ವಂದನೆಗಳು.

ಕಂದಾವರದವರ 'ದಶಮಿ'ಯ ಕುರಿತು ನಾಲ್ಕು ಮಾತುಗಳು

ಗುಂಡ್ಮಿ ಸದಾನಂದ ಐತಾಳ
ಯಕ್ಷಗಾನ ವಿದ್ವಾಂಸರು

ಕೃತಿಕಾರನಿಗೆ ತನ್ನ ಕೃತಿ ಜನಪ್ರಿಯಗೊಂಡು ಬಹುಕಾಲ ಉಳಿಯುವಂತಾಗಬೇಕೆಂಬ ಆಸೆ ಸಹಜವಾದುದೇ ಆಗಿದೆ. ಇದಕ್ಕೆ ಪ್ರಸಂಗಕರ್ತೃರಾದ ಕಂದಾವರ ರಘುರಾಮ ಶೆಟ್ಟರು ಹೊರತಲ್ಲ. ಅವರಿಗೆ ತಮ್ಮ ಕೆಲವು ಕೃತಿಗಳನ್ನಾದರೂ ಮುದ್ರಿಸಬೇಕೆಂಬ ಅಪೇಕ್ಷೆ ಇರುವುದಾದರೂ ಮುದ್ರಣ ವೆಚ್ಚವಾದರೂ ಬರಬಹುದೆಂಬ ಭರವಸೆಯಿಲ್ಲದ ಈ ಕಾಲದಲ್ಲಿ ಮುದ್ರಿಸುವ ಧೈರ್ಯವಿಲ್ಲದೆ ಕೈಚೆಲ್ಲಿ ಕುಳಿತಿದ್ದರು. ಆಗ ಅವರ ಆಸೆಗೆ ಆಸರೆಯಾಗಿ ಬಂದವರು ಉಪ್ಪುಂದ ಮಾದಯ್ಯ ಶೆಟ್ರಮನೆ ಧಾರ್ಮಿಕ ಪ್ರತಿಷ್ಠಾನದವರು. ಇಂತಹ ಮೌಲ್ಯಾಧಾರಿತ ಪ್ರಸಂಗಗಳು ರಂಗಸ್ಥಳದಲ್ಲೇ ಮಾಯವಾಗಿ ಹೋಗಬಾರದೆಂಬ ಸದುದ್ದೇಶದಿಂದ ಕೃತಿಯ ಪ್ರಕಾಶನಕ್ಕೆ ಮುಂದಾಗಿ ಕಂದಾವರದವರ ಆಯ್ದ ಹತ್ತು ಪ್ರಸಂಗಗಳ ಸಂಕಲನವನ್ನು 'ದಶಮಿ' ಎಂಬ ಹೆಸರಿನಿಂದ ಕ್ರಿ.ಶ. 2001ರಲ್ಲಿ ಮುದ್ರಣಗೊಳಿಸಿದರು.

'ದಶಮಿ' ಎಂಬ ಈ ಹೊತ್ತಗೆಯಲ್ಲಿ 5 ಪೌರಾಣಿಕ 1 ಜಾನಪದ ಹಾಗೂ 4 ಕಾಲ್ಪನಿಕ ಕಥಾವಸ್ತುಗಳುಳ್ಳ ಪ್ರಸಂಗಗಳಿವೆ. ಇವುಗಳಲ್ಲಿ ಸತಿಸೀಮಂತಿನಿ ಪ್ರಸಂಗಕರ್ತೃರ ಪ್ರಥಮ ಕೃತಿ. ಇದನ್ನು ವ್ರತ ರತ್ನಾಕರ ಎಂಬ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ. ಇದು ಸೋಮವಾರ ವ್ರತ ಮಹಾತ್ಮೆಯ ಕುರಿತಾದ ಕಥೆಯಿಂದ ಕೂಡಿದೆ. ಸೀಮಂತಿನಿ ಎನ್ನುವ ರಾಜ ಕುಮಾರಿ ಈ ವ್ರತಾಚಾರಣೆಯಿಂದ ತನ್ನ ವೈಧವ್ಯ ದುರ್ಯೋಗವನ್ನು ಕಳೆದುಕೊಳ್ಳುವ ವೃತ್ತಾಂತವಿದೆ. ಇದರ ಪದ್ಯಗಳು ಉತ್ಕೃಷ್ಟವಾಗಿದ್ದು ಹಾಡಲು ತುಂಬಾ ಸೊಗಸಾಗಿ ಒದಗುವುದರಿಂದ ಜನಪ್ರಿಯ ಯುವ ಭಾಗವತರಾದ ದಿ| ಕಾಳಿಂಗ ನಾವಡರು ಇದನ್ನು ಭಾಗವತರ ಪ್ರಸಂಗವೆಂದು ಮಾನಿಸಿದ್ದಾಗಿ ತಿಳಿದು ಬರುತ್ತದೆ.

ಅನಂತರದ 2 ಪೌರಾಣಿಕ ಪ್ರಸಂಗಗಳಾದ ನಾಗನಂದನೆ ಮತ್ತು ವಧುಮಾಧವಿ ಹೆಚ್ಚು ಪ್ರಚಾರವಿಲ್ಲದ ಕಥಾವಸ್ತುಗಳಿಂದ ಕೂಡಿದೆ. ನಾಗನಂದನೆ ಮಾರ್ಕಾಂಡೇಯ ಪುರಾಣದಿಂದ ಆಯ್ಕೆಯಾಗಿದ್ದು ವಧೂಮಾಧವಿ ಮಹಾಭಾರತದಲ್ಲಿ ಅಂತರ್ಗತವಾಗಿರುವ ಕಥಾನಕ. ನಾಗನಂದನೆಯಲ್ಲಿ ಉತ್ಥಾನಪಾದರಾಯನ ಕಿರಿಯ ಹೆಂಡತಿಯ ಮಗನಾದ ಉತ್ತಮನ ಜೀವನ ವೃತ್ತಾಂತ ಹೇಳಲಾಗಿದೆ. ಇದರಲ್ಲಿ ದಾಂಪತ್ಯ ಧರ್ಮ ಹಾಗೂ ಜೀವನದ ಸಂತೋಷ-ಸಂಕಷ್ಟಗಳಿಗೆ ಗ್ರಹಗಳ ಪ್ರಭಾವವೇ ಕಾರಣವೆಂದು ಹೇಳಲಾಗಿದೆ. ಯಯಾತಿ ಮಹಾರಾಜನ ಹಿರಿಯ ಹೆಂಡತಿಯ ಮಗಳಾದ ಮಾಧವಿಯ ಬಾಳಿನ ದುರಂತಕಥೆಯನ್ನು ಒಳಗೊಂಡ ಪ್ರಸಂಗ ವಧೂ-ಮಾಧವಿ. ಇದರಲ್ಲಿ ಪುರಾತನಕಾಲದಲ್ಲೂ ಸ್ತ್ರೀಶೋಷಣೆ ನಡೆದ ವೃತ್ತಾಂತವಿದೆ. ಪ್ರಸಂಗಕರ್ತೃರು ಪ್ರಸಿದ್ಧ ಕಾದಂಬರಿ ಕರ್ತೃಯರಾದ ಅನುಪಮಾ ನಿರಂಜನರ 'ಮಾಧವಿ' ಎನ್ನುವ ಕಾದಂಬರಿಯ ಪ್ರೇರಣೆಯಿಂದ ಇದನ್ನು ಬರೆದುದಾಗಿ ತಿಳಿದುಬರುತ್ತದೆ.

ಸೀತಾಪಾರಮ್ಯ ರಾವಣವಧೆಯ ಬಳಿಕ ನಡೆದ ಉತ್ತರ ರಾಮಾಯಣದ ಕಥೆ ಇದರಲ್ಲಿ ಸೀತೆಯ ಅಗ್ನಿಪರೀಕ್ಷೆ, ಸೀತೆಯ ಪರಿತ್ಯಾಗ, ಸೀತೆಯ ನಿರ್ಯಾಣದ ಕಥೆಗಳನ್ನು ಏಕ ಸೂತ್ರದಲ್ಲಿ ಹೆಣೆಯಲಾಗಿದೆ. ಲವಣಾಸುರನ ವೃತ್ತಾಂತ, ಕುಶಲವರ ಕಾಳಗ ಮುಖ್ಯ ಕಥೆಗೆ ಹಾಸು ಹೊಕ್ಕಾಗಿ ಬಂದಿದೆ. ಅದರಂತೆ ವಸುವರಾಂಗಿ ಪ್ರಸಂಗದಲ್ಲಿ ಭೀಷ್ಮ ಹಾಗೂ ಅಂಬೆಯರ ಜನ್ಮಾಂತರಗಳ ವೃತ್ತಾಂತವನ್ನು ಏಕ ಸೂತ್ರದಲ್ಲಿ ಹೆಣೆಯಲಾಗಿದೆ. ಕೊನೆಯ ವಸುವಾದ ಪ್ರಭಾಸನು ಭೀಷ್ಮನಾಗಿಯೂ ಆತನ ಹೆಂಡತಿಯಾದ ವರಾಂಗಿ ಅಂಬೆ ಮತ್ತು ಶಿಖಂಡಿಯಾಗಿ ಹುಟ್ಟಿ ಪತಿಯ ಮರಣಕ್ಕೆ ಕಾರಣಳಾಗುವ ರಹಸ್ಯ ಇದರಲ್ಲಿ ವರ್ಣಿತವಾಗಿದೆ. ಶ್ರೀದೇವಿ ಬನಶಂಕರಿಯು ಜಾನಪದ ಕಥೆಯಾಧರಿಸಿದ ಪ್ರಸಂಗವಾದರೂ ಇದರಲ್ಲಿ ಶ್ರೀದೇವಿ ಬನಶಂಕರಿಯ ಮಹಾತ್ಮೆ ವರ್ಣಿತವಾಗಿರುವುದರಿಂದ ಪೌರಾಣಿಕ ಪ್ರಸಂಗವೆಂದೇ ಸ್ವೀಕರಿಸಲಾಗಿದೆ.

ಅನಂತರದ 4 ಪ್ರಸಂಗಗಳಾದ ಚೆಲುವೆ ಚಿತ್ರಾವತಿ, ಶೂದ್ರತಪಸ್ವಿನಿ, ರತಿರೇಖಾ ಹಾಗೂ ಮಂತ್ರ ಮಾಣಿಕ್ಯ ಪ್ರಸಂಗಗಳು ಶುದ್ಧ ಕಾಲ್ಪನಿಕ ಕಥಾವಸ್ತುಗಳಿಂದ ಕೂಡಿದ ಪ್ರಸಂಗಗಳು. ಇವುಗಳ ರಚನೆಗೆ ಬೇರೆ ಬೇರೆ ಕಥೆ, ನಾಟಕ, ಸತ್ಯ ಘಟನೆಗಳು ಪ್ರೇರಣೆಯಾಗಿ ಒದಗಿದ್ದರೂ ಸನ್ನಿವೇಶಗಳ ಸೃಷ್ಟಿ, ಪಾತ್ರಚಿತ್ರಣ,

ಕಥಾಸಂವಿಧಾನವೆಲ್ಲವೂ ಪ್ರಸಂಗಕರ್ತೃರ ಸ್ವಂತ ರಚನೆಗಳಾಗಿವೆ. ಇವುಗಳಲ್ಲಿ ಪ್ರಸಂಗಕರ್ತರ ಸ್ವಯಂ ಪ್ರತಿಭೆಯನ್ನು ಕಾಣುವ ಹಲವು ಸಂಗತಿಗಳಿವೆ. ಪ್ರೀತಿ, ದಯೆ ಕರುಣೆಯಲಿ, ಉಪಕಾರ ಸ್ಮರಣೆಯಲಿ ಪ್ರಾಣಿಗಳೆ ಬಹುಮೇಲು ಮಾನವನು ಬಲುಕೀಳು ಎಂಬ ತತ್ವವನು ಸಾರುವ ಕೆಲವು ಸನ್ನಿವೇಶಗಳನ್ನು ಕಾಣಬಹುದಾಗಿದೆ. ಜ್ಯೋತಿಷ್ಯ ಹಾಗೂ ವೈದ್ಯಕೀಯ ವೃತ್ತಿಯ ಸಿದ್ಧಾಂತವನ್ನು ಹೇಳಲಾಗಿದೆ. ಯಕ್ಷಗಾನ ರಂಗಕ್ಕೆ ಅಪರೂಪವೆನ್ನಬಹುದಾದ ಪುಣ್ಯಕೋಟಿಯ ಕಥೆ, ಕಣಿ ಹೇಳುವ ಹಾಗೂ ಅಂಜನ ಹಾಕುವ ಸನ್ನಿವೇಶಗಳ ರೂಪಕಗಳು ಬಂದಿವೆ. ಹೀಗೆ ಇವರ ಪ್ರಸಂಗಗಳು ವೈವಿಧ್ಯಮಯವಾಗಿಯೂ ವೈಶಿಷ್ಟ್ಯಪೂರ್ಣವಾಗಿಯೂ ರಚನೆಗೊಂಡಿವೆ.

ಹಿಂದಿನ ಕವಿಗಳಂತೆ ಪ್ರಸಂಗಕರ್ತೃರು ತನ್ನ ಹೆಸರನ್ನು ಪ್ರತಿಯೊಂದು ಪ್ರಸಂಗದಲ್ಲಿ ಸೂಚಿಸಲಿಲ್ಲ. ಹತ್ತು ಪ್ರಸಂಗಗಳ ಕೊನೆಯಲ್ಲಿ ಸೂಕ್ಷ್ಮವಾಗಿ, ಸೂಚ್ಯವಾಗಿ ನಿರೂಪಿಸಿದ್ದಾರೆ. ಆ ಪದ್ಯ ಹೀಗಿದೆ :- (ಭಾಮಿನಿ) ಪರಶುಧರ ಕ್ಷೇತ್ರದೊಳು ಕಂದಾವರದಿ ಬಂಟರ ಕುಲದಿ ಜನಿಸಿದ। ತರಳನಹ ರಘುರಾಮ ಕುಲದೇವತೆಯ ಕರುಣದಲಿ॥ ವಿರಚಿಸಿದ ಕೃತಿ ದೋಷಗಳ ಕಂಡರಿತ ವಿದ್ವಜ್ಜನರು ಮನ್ನಿಸಿ। ಮೆರೆಸಬೇಕೆಂದೆರಗಿ ವಾಣಿಯ ಮಡಿಲಿನಲ್ಲಿಡುವೆ ॥

ಹೀಗೆ ಕರ್ನಾಟಕ ಕರಾವಳಿಗೆ ಸೇರಿದ ಕಂದಾವರದಲ್ಲಿ ಬಂಟರ ಮನೆತನದಲ್ಲಿ ಜನಿಸಿದ ರಘುರಾಮನ ಕೃತಿಯಿದು ಎಂದು ತಿಳಿಯುವಂತಾಗಿದೆ. ಸತಿಸೀಮಂತಿನಿ ಪ್ರಸಂಗದಲ್ಲಿ ಗೂಡಾರ್ಥದಲ್ಲೂ ಕವಿಗಳು ತಮ್ಮ ಹೆಸರನ್ನು ಸೂಚಿಸಿದ್ದಿದೆ. ಆ ಪದ್ಯ ಹೀಗಿದೆ :- (ಕೇದಾರಗೌಳ ಅಷ್ಟ) ಗುರುನಿರೂಪಣೆಯನ್ನು ಮೀರಲಾಗದು ಕಂದಾ। ವರ ಋಷಿ ಕೌಶಿಕರೆಂದಾ॥ ತೆರನಂತೆ ರಘುರಾಮ ಅಸುರೆಯ ವಧಿಸುತ್ತ। ಗುರುಭಕ್ತಿಯಲಿ ಶ್ರೇಷ್ಠಿಯಾದ ॥

ಇಲ್ಲಿ ತೋರಿಕೆಗೆ ಗುರುಗಳಾದ ವಿಶ್ವಾಮಿತ್ರರ ಅಣತಿಯಂತೆ ಶ್ರೀರಾಮನು ತಾಟಕಿಯನ್ನು ಕೊಂದು ಗುರುಭಕ್ತಿ ಮೆರೆದಿದ್ದಾನೆ ಎಂದು ಹೇಳಿದ್ದಾದರೂ ಇದರಲ್ಲಿ ಬಂದಿರುವ ಅಡಿಗೆರೆಯ ಶಬ್ದಗಳನ್ನು ಜೋಡಿಸಿದರೆ ಕಂದಾವರ ರಘುರಾಮ (ಶ್ರೇಷ್ಠಿ) ಶೆಟ್ಟಿ ಎಂದು ಸೂಚಿತವಾಗಿದೆ.

ದಶಮಿ ಎನ್ನುವ ಈ ಕೃತಿಯನ್ನು ಪ್ರಸಂಗಕರ್ತೃರು ತಮ್ಮ ಗುರುಗಳಿಗೆ ಶ್ರದ್ಧಾಭಕ್ತಿಯಿಂದ ಅರ್ಪಣೆ ಮಾಡಿ ತಮ್ಮ ಗುರುಭಕ್ತಿಯನ್ನು ಮೆರೆದಿದ್ದಾರೆ. ಆ ಪದ್ಯ ಹೀಗಿದೆ :-

(ವಾರ್ಧಿಕ) ತಾಳಗಳ ಕೈಗಿತ್ತು ಯಕ್ಷಗಾನದ ಪದವ । ಹೇಳಿಸಿ ತದೇವ ಕಲೆಯಲಿ ಎನ್ನ ತೊಡಗಿಸಿದ। ಮೂಲಗುರು ಬಸರೂರಿನಲಿ ಜನಿಸಿ ಶಿಕ್ಷಕರ ಓಳಿಯಲಿ ಖ್ಯಾತಿ ಪಡೆದ॥

ಮೇಲೆನಿಪ ವಂಶಜ ರಮಾನಾಥ ನಾಯಕರ। ಮೇಲಿನಭಿಮಾನದಿಂದೀ ಕೃತಿಯನವರ ಪದ। ಮೂಲಕರ್ಪಿಸಿ ಬೇಡಿಕೊಳುವೆ ದಿಯಾತ್ಮಕ್ಕೆ ಚಿರಶಾಂತಿ ದೊರಕಲೆಂದು ॥

(ಬಸರೂರಿನ ರಮಾನಾಥ ನಾಯಕರು ತಮ್ಮ ಯಕ್ಷಗಾನಕ್ಕೆ ಮೂಲ ಗುರುವೆಂದು ಹೇಳಿ ಕೃತಿಯನ್ನು ಭಕ್ತಿಯಿಂದ ಸಮರ್ಪಿಸಿ ಅವರ ಆತ್ಮಕ್ಕೆ ಶಾಂತಿ ಕೋರಿದ್ದಾರೆ)

ಸ್ನೇಹಶೀಲರೂ, ವಿನಯವಂತರೂ ಆದಕವಿ ಕಂದಾವರರ ಬಾಳು ಬಂಗಾರವಾಗಲಿ, ಅವರಿಂದ ಇನ್ನೂ ಅನೇಕ ಕೃತಿಗಳು ಬರುವಂತಾಗಲೆಂದು ಹಾರೈಸುತ್ತೇನೆ.

ವಿನಯ ಸಂಪನ್ನ ಸಜ್ಜನ

ಡಾ। ಕನರಾಡಿ ವಾದಿರಾಜ ಭಟ್
ನಿವೃತ್ತ ಉಪನ್ಯಾಸಕರು

ವಿದ್ಯಾವಂತರಾದವರು ಸಹಜವಾಗಿ ವಿನಯ ಸಂಪನ್ನರಾಗಿರುತ್ತಾರೆ. ವಿದ್ಯೆ ಎಂದರೆ ಜ್ಞಾನ. ನಿಜವಾದ ಜ್ಞಾನವುಳ್ಳವರು ಜ್ಞಾನಾನ್ವೇಷಣಾಬುದ್ಧಿವುಳ್ಳವರು. ಜ್ಞಾನ ಲಭ್ಯವಾಗುವ ಗುಣದಲ್ಲೂ ಶೋಭಿಸುತ್ತಾರೆ. 'ವಿದ್ಯಾದಧಾತಿ ವಿನಯಂ' ಎಂಬ ಸುಭಾಷಿತಕ್ಕೆ ಉದಾಹರಣೆ ಮೂರ್ತಿಗಳಾಗಿರುತ್ತಾರೆ. ಅವರಲ್ಲಿ ಲೋಕಜ್ಞಾನ, ವ್ಯವಹಾರ ಜ್ಞಾನ, ಪಾರಮಾರ್ಥಿಕ ಜ್ಞಾನವು ಸಮ್ಮಿಳಿತವಾಗಿರುತ್ತದೆ. ದುರಹಂಕಾರ ಲವಲೇಶವೂ ಅವರ ಹತ್ತಿರ ಸುಳಿಯುವುದಿಲ್ಲ. ಹೊರ ನೋಟಕ್ಕೆ ಸರಳ ನಡೆ-ನುಡಿಯಿದ್ದರೂ ಅಂತರಂಗದಲ್ಲಿ ಸಹಜ ಸ್ವಾಭಿಮಾನಿಯಾಗಿರುತ್ತಾರೆ. ಅವರ ಮಾತು, ಕರ್ಮ, ವ್ಯವಹಾರಗಳಲ್ಲಿ ಅನ್ಯರಿಗೆ ಅಹಂಕಾರವು ಕಂಡು ಬರುವುದಿಲ್ಲ. ಅವರು ಸಜ್ಜನರ ಸ್ನೇಹ, ಸದಾ ಸತ್ಸಂಗ ಬಯಸುವ ಸಜ್ಜನರಾಗಿರುತ್ತಾರೆ. ಉಳಿದವರ ಭಿನ್ನ ಗುಣಗಳ ಬಗ್ಗೆ ವಿರೋಧ, ತಿರಸ್ಕಾರ ನಿಂದನೆಗಳಿಲ್ಲದೆ ತಟಸ್ಥರಾಗಿರುತ್ತಾರೆ. ಇತರರಿಗೆ ಸದಾ ಒಳಿತನ್ನೇ ಬಯಸುತಿರುತ್ತಾರೆ. ಇಂತಹ ವಿನಯ ಸಂಪನ್ನ ಸಜ್ಜನ ನಮ್ಮ ಆತ್ಮೀಯ ರಘುಮಾಸ್ಟ್ರು (ಕಂದಾವರ ರಘುರಾಮ ಶೆಟ್ಟರು)

ಕಂದಾವರ ರಘುರಾಮ ಶೆಟ್ಟರು ಉನ್ನತ ವಿದ್ಯಾಭ್ಯಾಸ (ಕಾಲೇಜು ಶಿಕ್ಷಣ) ಹೊಂದಿರದಿದ್ದರೂ ವಿಶಾಲ ಅನುಭವ ಸಂಪನ್ನರು. ಸಂಸ್ಕೃತ ಶಾಸ್ತ್ರಾಧ್ಯಯನ ಮಾಡದಿದ್ದರೂ ಅದರಲ್ಲಿರುವ ಸಾರಸರ್ವಸ್ವವನ್ನು ಬಲ್ಲವರು. ಭಾರತೀಯ ಧರ್ಮ, ಸಂಸ್ಕೃತಿ ವಿಚಾರಗಳಿಗೆ ಪೂರಕವಾದ ಪುರಾಣ, ಸಾಹಿತ್ಯ, ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಿದವರು. ತುಂಬಾ ತಿಳಿದಿದ್ದರೂ ಇನ್ನೂ ತಿಳಿಯಬೇಕೆಂಬ ಜ್ಞಾನ ತೃಷೆವುಳ್ಳವರು. ಇಂತಹ ವಿಶೇಷತೆಗಳಿಗೆ ಇವರ ಹಿರಿಯರ ಹಿನ್ನೆಲೆಯೇ ಕಾರಣ. ಸುಮಾರು 1976-77 ರಲ್ಲಿರಬೇಕು. ಒಂದು ಆಕಸ್ಮಿಕ ದುರಂತ ಘಟನೆ ನಡೆಯಿತು.

ಇವರ ಸಹೋದರ ಸುಮಾರು 18 ವರ್ಷದ ಗೋಪಾಲಕೃಷ್ಣ ನಮ್ಮ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿ ಆಕಸ್ಮಿಕವಾಗಿ ತೀರಿಹೋದ ಸಂದರ್ಭ ಕುಟುಂಬದ ಸದಸ್ಯರಿಗೆ ದೊಡ್ಡ ಆಘಾತವಾಗುವ ವಿಷಯ. ನಾನು ಬಸ್ರೂರು ಶ್ರೀ ಶಾರದಾ ಕಾಲೇಜಿಗೆ ಸೇರಿದ ಪ್ರಾರಂಭದ ವರ್ಷಗಳು. ಆಸುಪಾಸಿನಲ್ಲಿ ಹೆಚ್ಚು ಪರಿಚಯವಿಲ್ಲದಿದ್ದರೂ ಪ್ರತಿಭಾವಂತ ವಿದ್ಯಾರ್ಥಿಯನ್ನು ಕಳೆದುಕೊಂಡ ಕಳಕಳಿಯಲ್ಲಿ ಮನೆಯವರನ್ನು ಮಾತಾಡಿಸಿ ಬರುವ ಎಂದು ಅವನ ಮನೆಗೆ ಹೋದೆವು. ಶೋಕವನ್ನು ಹಂಚಿಕೊಳ್ಳುವ, ಸಾಂತ್ವನಗೊಳಿಸುವ, ಮಾತನಾಡುತ್ತಿರುವಾಗ ಇವರ ತಂದೆ ಕರ್ಕಿ ಸದಿಯಣ್ಣ ಶೆಟ್ಟರು ವಿದುರನೀತಿಯ ಷಟ್ಪದಿಗಳನ್ನು ಉದ್ಧರಿಸುತ್ತಾ ನಮ್ಮನ್ನೇ ಸಾಂತ್ವನಗೊಳಿಸಿದರು. ಅವರು ಕೃಷಿಕರು; ಉನ್ನತ ಸಂಸ್ಕಾರವಂತರು ಎಂದು ಅವರ ಮಾತುಗಳಿಂದ ತಿಳಿಯಿತು. ಅಂತಹ ಶೋಕದ ಸಂದರ್ಭದಲ್ಲೂ ಸಹನಾ ಮೂರ್ತಿಯಾಗಿದ್ದರು ಶಾಂತಸ್ಥಿತಿಯಲ್ಲಿದ್ದರು. ಕಾರಣ ಗದುಗುಭಾರತ, ತೊರವೆ ರಾಮಾಯಣ ಮೊದಲಾದ ಕಾವ್ಯಗಳನ್ನು ಬಲ್ಲವರಾಗಿದ್ದರು. ಅವರು ಪಡೆದ ಶಿಕ್ಷಣ, ಕಲಿಕೆ ತೀರಾ ಸಾಮಾನ್ಯವಾಗಿದ್ದರೂ ಜೀವನ ಧರ್ಮ, ಪಾರಮಾರ್ಥಿಕ ವಿಷಯಗಳಲ್ಲಿ ಜ್ಞಾನಿಗಳಾಗಿದ್ದರು. ಪ್ರಜ್ಞಾವಂತರಾಗಿದ್ದರು. ಇಂತಹ ಕುಟುಂಬದ ಸದಸ್ಯರಾಗಿದ್ದ ಶ್ರೀ ರಘುರಾಮ ಶೆಟ್ಟರು ಉತ್ತಮ ಶಿಕ್ಷಕರಾಗಿ, ತಾಳಮದ್ದಳೆ ಅರ್ಥಧಾರಿಯಾಗಿ, ಯಕ್ಷಗಾನ ಪ್ರಸಂಗಕರ್ತರಾಗಿ, ಶ್ರೇಷ್ಠ ರಂಗ ನಟರಾಗಿ ಎಲ್ಲಕ್ಕಿಂತ ಮುಖ್ಯವಾಗಿ ಅನೇಕರಿಗೆ ಉತ್ತಮ ಸಂಸ್ಕಾರ ನೀಡುವ ಆತ್ಮೀಯ ಬಂಧುವಾಗಿ ಪ್ರಸಿದ್ಧರಾಗಿದ್ದಾರೆ.

ನಮ್ಮಲ್ಲಿ ಸಮಾನ ಗುಣ- ವ್ಯಸನಗಳಿದ್ದುದರಿಂದಲೋ ಏನೋ ನಮ್ಮೊಳಗೆ ಸ್ನೇಹ ಒಡನಾಟ ಬೆಳೆಯಿತು. ಒಂದೆರಡು ನಾಟಕ ಯಕ್ಷಗಾನಗಳಲ್ಲಿ ಅವರೊಂದಿಗೆ ಪಾತ್ರಗಳನ್ನು ನಿರ್ವಹಿಸಿದ್ದೆ. ಒಮ್ಮೆ ಜನ್ಸಾಲೆಯಲ್ಲಿ ನಡೆದ ತಾಳಮದ್ದಳೆ ಕೂಟಕ್ಕೆ ನನ್ನನ್ನು ಆತ್ಮೀಯವಾಗಿ ಆಹ್ವಾನಿಸಿದ್ದರು. ತಮ್ಮ ಸಮಾನ ಅರ್ಥಧಾರಿಯನ್ನಾಗಿ ಮಾಡಲು ಪ್ರೇರೇಪಿಸಿದರು. ಸಜ್ಜನರು ತಮ್ಮ ಸ್ನೇಹಿತರನ್ನು ತಮ್ಮ ಸಮಾನ ಮಾಡಿಕೊಳ್ಳುವ ಶುಭ ಸಂಕಲ್ಪ ಮಾಡುತ್ತಾರಲ್ಲವೇ? ಅವರದು ಸಜ್ಜನ ಕೂಟ. ಒಳ್ಳೆಯ ಹೊಂದಾಣಿಕೆ, ರಸಭರಿತವಾದ ಅರ್ಥಗಾರಿಕೆ. ಪಾಂಡಿತ್ಯ ಪ್ರದರ್ಶನವಿಲ್ಲ. ಸನ್ನಿವೇಶಕ್ಕೆ, ಪಾತ್ರಕ್ಕೆ ತಕ್ಕ ಭಾವಪೂರ್ಣ ಮಾತುಗಾರಿಕೆ ಕಥಾ ವಸ್ತುವಿನ ಮೂಲಕ ಎಲ್ಲರನ್ನೂ ಮುಗ್ಧಗೊಳಿಸುವ ಮೋಡಿ. ಪೌರಾಣಿಕ ಕಥಾನಕಗಳಿಂದ ಜೀವನ

ಧರ್ಮದ ಬೋಧೆ. ಒಂದು ಮಾದರಿ ಕೂಟವಾಗಿ ಬೆಳೆಸಿದವರು ಸಜ್ಜನ ರಘು ಮಾಸ್ಟ್ರು. ಅವರು ಉತ್ತಮ ಹಾಸ್ಯ ನಟರು ಕೂಡಾ ಒಮ್ಮೆ ನಮ್ಮ ಕಾಲೇಜಿನಲ್ಲಿ ಅವರ ಗುರುಗಳ ಸಹಾಯಾರ್ಥ ಒಂದು ನಾಟಕವಾಡಿದ್ದರು. ಅದರಲ್ಲಿ ಅವರದ್ದು ಮುಖ್ಯ ಹಾಸ್ಯ ಪಾತ್ರಕ್ಕೆ ಮಾರು ಹೋಗಿ ಅಂದು ನಡೆದ ಎರಡೂ ಪ್ರದರ್ಶನಗಳನ್ನೂ ನೋಡಿ ಆನಂದಿಸಿದೆ.

ಶ್ರೀಯುತ ರಘುರಾಮ ಶೆಟ್ಟರು ಪ್ರಸಂಗಕರ್ತೃರಾಗಿ ನೂತನ ಪ್ರಸಂಗಳನ್ನು ಬರೆಯುವಾಗ ಪರಂಪರೆಯ ಪ್ರಜ್ಞೆವುಳ್ಳವರು. ಯಕ್ಷಗಾನ ಬಯಲಾಟದ ಚೌಕಟ್ಟಿನೊಳಗೆ ಆಧುನಿಕ ಪ್ರಯೋಗಗಳನ್ನು ನಡೆಸಿದವರು. ಅವರ ವಧೂ-ಮಾಧವಿ ಎನ್ನುವ ಪ್ರಸಂಗದ ಆಟವನ್ನು ಬೆಳಗಿನ ತನಕ ಕೂತು ನೋಡಿ ಆನಂದಿಸಿದ್ದೇನೆ. ಕೆಲವು ಸಂದರ್ಭಗಳಲ್ಲಿ ಪೌರಾಣಿಕ ಘಟನೆಗಳ ಕುರಿತು, ಶಾಸ್ತ್ರ ಸಮ್ಮತವಾದ ವಿಚಾರಗಳ ಕುರಿತು ನನ್ನೊಡನೆ ಸಮಾಲೋಚನೆ ಮಾಡಿದ್ದೂ ಇದೆ. 'ಎಲ್ಲ ಬಲ್ಲವರಿಲ್ಲ' ಎಂದು ಅವರು ತಮ್ಮ ಬಗ್ಗೆ ಹೇಳಿಕೊಳ್ಳುವುದನ್ನು ನಾನು ಕೇಳಿದ್ದಿದೆ. ಅಷ್ಟೊಂದು ವಿನಯಸಂಪನ್ನರು ನಮ್ಮ ರಘು ಮಾಸ್ಟ್ರು.

ಕುಂದಾಪುರ ತಾಲೂಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗಲೂ ತನ್ನ ಇತಿ ಮಿತಿಯನ್ನು ಹೇಳಿಕೊಳ್ಳುವಾಗಲೂ ಅವರ ವಿನಯ ಸಂಪನ್ನತೆಯೇ ಶೋಭಿಸುತಿತ್ತು. ಕನ್ನಡ ಸಾಹಿತ್ಯದ ಬಗ್ಗೆ ನೈಜ ಪ್ರೇಮದಿಂದಲೇ ಸಾಹಿತ್ಯ ಚಟುವಟಿಕೆಗಳನ್ನು ನಡೆಸುತಿದ್ದರು.

ಶ್ರೀಯುತರ ವಿನಯ ಸಂಪನ್ನತೆ ಕೆಲವು ಸಂದರ್ಭಗಳಲ್ಲಿ ಸಜ್ಜನಿಕೆಯಾಗಿ ಹೊರಹೊಮ್ಮಿದರೆ ಕೆಲಮೊಮ್ಮೆ ಆತ್ಮೀಯತೆಯಾಗಿ ಕಂಡು ಬರುತ್ತದೆ. ಮಗದೊಮ್ಮೆ ಸ್ನೇಹಸಂಬಂಧವನ್ನು ಬೆಳೆಸುತ್ತದೆ ಹಾಗೂ ಬೆಸೆಯುತ್ತದೆ. ವಿನಯ ಸಂಪನ್ನತೆಯೇ ಜ್ಞಾನದ ತೃಷೆಯಾಗಿ ಕಂಡು ಬರುತ್ತದೆ. ಜನಪ್ರಿಯತೆಗೆ ಕಾರಣವಾಗುತ್ತದೆ. ಅನೇಕ ಗೌರವ - ಸನ್ಮಾನಗಳಿಗೆ ಮೆರಗನ್ನು ತಂದುಕೊಟ್ಟಿದೆ. ಸಮಾಜದಲ್ಲಿ ಚೆನ್ನಾಗಿ ಬದುಕುವವರಿಗೆ ಉನ್ನತವಾದ ಮಾದರಿ ವ್ಯಕ್ತಿಯಾಗುತ್ತಾರೆ. ಕಂದಾವರ ರಘುರಾಮ ಶೆಟ್ಟರ ಸದ್ಗುಣ ಸಂಪನ್ನ ವ್ಯಕ್ತಿತ್ವವು ಶಾಶ್ವತವಾಗಿ ಅಭಿನಂದನೀಯವಾಗಿದೆ. ಶ್ರೀಯುತರಿಗೆ ಗೌರವಾದರಪೂರ್ವಕ ಅಭಿನಂದನೆಗಳು.

ಸ್ನೇಹ ಜೀವಿ ಕಂದಾವರದವರು

ಕುಂಬ್ಳೆ ಸುಂದರ ರಾವ್
ಯಕ್ಷಗಾನ ಕಲಾವಿದರು, ಮಂಗಳೂರು

ನನಗೆ 75 ಸಮೀಪಿಸುತ್ತಿರುವಾಗ ಕೆಲವು ಅಭಿಮಾನಿ ಮಿತ್ರರು ಅಭಿನಂದನಾ ಸಮಾರಂಭ ಹಾಗೂ ಅಭಿನಂದನಾ ಗ್ರಂಥ ಸಮರ್ಪಣೆ ಮಾಡಬೇಕೆಂದು ಸಂಕಲ್ಪಿಸಿ, ಕಾರ್ಯತತ್ಪರರಾದರು. ಈ ವಿಚಾರ ಯಾರಿಂದಲೋ ನನ್ನ ಸನ್ಮಿತ್ರ ಕಂದಾವರ ರಘುರಾಮ ಶೆಟ್ಟರಿಗೆ ತಿಳಿದು ಹೋಯಿತು. ಮರುದಿನವೇ ಶೆಟ್ರಿಂದ ನನಗೊಂದು ದೂರವಾಣಿಯ ಕರೆ, ಕ್ಷೇಮ ಸಮಾಚಾರ ಕೇಳಿದ ಮೇಲೆ " ನಿಮ್ಮ ಅಭಿನಂದನಾ ಗ್ರಂಥ ಎಲ್ಲಿಯವರೆಗೆ ಬಂತು?" ಎಂಬ ಪ್ರಶ್ನೆಗೆ " ಈಗಷ್ಟೆ ಆರಂಭವಾಗುತ್ತಿದೆ" ಎಂದೆ. ಆಗ ಅವರು ನಗಾಡುತ್ತಾ " ನಾನೊಂದು ಲೇಖನ ಕಳುಹಿಸಿದರೆ ಗ್ರಂಥದಲ್ಲಿ ಸೇರಿಸುವಿರಾ?" ಎಂದಾಗ ನನಗೂ ನಗು ಬಂತು. " ನಾನೇ ಕೇಳಬೇಕೆಂದಿದ್ದೆ. ಕೂಡಲೇ ಕಳುಹಿಸಿಕೊಡಿ" ಎಂದೆ. "ಎಲ್ಲರೂ ನಿಮ್ಮನ್ನು ಹೊಗಳಿ ಹೊಗಳಿ ಅಟ್ಟಕೇರಿಸಿಯಾರು. ಆದರೆ ನಾನು ನಿಜವಾಗಿ ಸುಂದರರಾಯರು ಏನು ಎಂದು ಬರೆಯುತ್ತೇನೆ "ಒಪ್ಪಿಗೆಯಾ ಎಂದಾಗ" ಒಪ್ಪಿದೆ ; ಕೂಡಲೆ ಕಳುಹಿಸಿ ಎಂದು ಮಾತು ಮುಗಿಸಿದೆ. ಒಂದು ವಾರದಲ್ಲೇ ಲೇಖನ ಬಂತು. ಲೇಖನದ ಉದ್ದಕ್ಕೂ ನನ್ನ ಬಗ್ಗೆ ಅವರ ಮೆಚ್ಚುಗೆ, ಆತ್ಮೀಯತೆ ಹೊರ ಹೊಮ್ಮುವಂತಿತ್ತು. ಗ್ರಂಥದ ಹಿರಿಮೆಯನ್ನು ಹೆಚ್ಚಿಸುವಂತಿತ್ತು. ನಮ್ಮಿಬ್ಬರ ಗಾಢ ಮೈತ್ರಿಗೆ ಇದೊಂದು ನಿದರ್ಶನ.

ಕಂದಾವರದ ಶೆಟ್ಟರಿಗೂ ಕುಂಬಳೆಯ ಸೆಟ್ಟಿಗಾರರಿಗೂ ಇಷ್ಟೊಂದು ಗೆಳೆತನ ಹೇಗೆ ಉಂಟಾಯಿತೆಂದು ನಿಮಗೆ ಆಶ್ಚರ್ಯವಾಗಬಹುದು. ಈ ನಂಟು ಉಂಟಾದುದು, ಅಳಿಯಲಾರದಷ್ಟು ಭದ್ರವಾಗಿ ಉಳಿಯುವಂತಾದುದು ಯಕ್ಷಗಾನದಿಂದ (ಕೆಲವು ಕಡೆ ನಾನಿದನ್ನು ಮೂಲವ್ಯಾಧಿ ಎಂದಿದ್ದೆ) ಧರ್ಮಸ್ಥಳ ಮೇಳದ ಹೆಚ್ಚಿನ ಆಟಗಳು ಆಗುತಿದ್ದುದು ಕುಂದಾಪುರ ವಲಯದಲ್ಲಿ.

ಆ ಮೇಳದ ಕಲಾವಿನಾದ ನನಗೆ ಇಲ್ಲಿ ದೊಡ್ಡದಾದ ಒಂದು ಅಭಿಮಾನಿ ಬಳಗವಿದೆ. ಅವರಲ್ಲಿ ಡಾ। ಕಲ್ಕೂರರು, ಹೊಳೆ ಬದಿ ಕಾರಂತರು, ಡಾ। ಅತಿಕಾರಿಯವರು ಹಾಗೂ ಕಂದಾವರ ಶೆಟ್ಟರು ಮುಖ್ಯರು ಇವರೆಲ್ಲಾ ನನಗೆ ಮೆಚ್ಚಿನವರು. ಅದರಲ್ಲೂ ಕಂದಾವರದವರು ಸ್ವಲ್ಪ ಹೆಚ್ಚಿನವರು. ಕಾರಣ ಇವರ ಸ್ನೇಹ ಸಂಪಾದನೆಯಿಂದ ಇವರ ಮಿತ್ರವಲಯದ ಅನೇಕರ ಸ್ನೇಹ ಲಾಭ ನನಗಾಯಿತು. ವಿಜಯಾ ಬ್ಯಾಂಕಿನ ವೆಂಕಪ್ಪ ಶೆಟ್ಟರು, ಕಂಡ್ಲೂರಿನ ಉತ್ಸಾಹಿ ಯುವಕ ಚಂದ್ರಶೇಖರ ನಾಯಕರು, ಸಂಕಾಪುರದ ಶಿವರಾಮ ಶೆಟ್ಟರು ಹಾಗೂ ಇವರ ಅಳಿಯ ವಿಜಯಕುಮಾರ ಶೆಟ್ಟರು ಮತ್ತು ಮಗ ಡಾ। ಮನೋಜಕುಮಾರ ಶೆಟ್ಟರು ನನ್ನ ಮಿತ್ರ ಮಂಡಳಿಯ ಖಾಯಂ ಸದಸ್ಯರಾದರು. ಕಂದಾವರದವರು ಕೇವಲ ಮಿತ್ರರಾಗಿರದೆ ಆಪ್ತಮಿತ್ರರಾದರು. ಅಂದು ಬೆಸೆದ ಮಿತ್ರತ್ವ ಒಂದಿಷ್ಟು ನಶಿಸದೆ ಇಂದಿಗೂ ಭದ್ರವಾಗಿ ಬೇರೂರಿ ನಿಂತಿದೆ.

ಇತ್ತೀಚೆಗೆ ನಾನೊಂದು ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಮನೆಯಲ್ಲಿ ವಿಶ್ರಾಂತಿಯಲ್ಲಿದ್ದೆ. ಆಗ ಕಂದಾವರದವರಿಂದ ಒಂದು ದೂರವಾಣಿ ಕರೆ. ಮಾಮೂಲಿನಂತೆ ಕ್ಷೇಮ ಸಮಾಚಾರದ ಬಗ್ಗೆ ಕೇಳಿದ್ದರು. ನನ್ನ ಅಸೌಖ್ಯದ ವಿಚಾರ ತಿಳಿದು ಬಹುವಾಗಿ ನೊಂದರು. ಸ್ವಲ್ಪ ಹೊತ್ತಿನ ಬಳಿಕ ತಮ್ಮ ಬಗ್ಗೆ ತಯಾರಾಗುತ್ತಿರುವ ಅಭಿನಂದನಾ ಗ್ರಂಥದ ವಿಚಾರ ಪ್ರಸ್ತಾಪಿಸುತ್ತಾ "ರಾಯರೇ, ನನ್ನ ಅಭಿನಂದನಾ ಗ್ರಂಥಕ್ಕೆ ನಿಮ್ಮದೊಂದು ಲೇಖನ ಇಲ್ಲದಿದ್ದರೆ ಅದು ಅಪೂರ್ಣವೇ ಸರಿ. ಆರೋಗ್ಯ ಸುಧಾರಿಸಿದ ಮೇಲೆ ಚಿಕ್ಕದಾದರೂ ಒಂದು ಲೇಖನ ಬರೆದು ಕಳಿಸಿ, ಎಂದಾಗ ನನಗೆ ಹಿಂದಿನ ಘಟನೆ ನೆನಪಾಯಿತು ನಾನು ಕೇಳುವ ಮೊದಲೇ ಲೇಖನ ಬರೆಯಲು ಮುಂದಾದ ಮಿತ್ರನ ಗ್ರಂಥಕ್ಕೆ ನಾನು ಬರೆಯದೇ ಹೋದರೆ ಕೃತಘ್ನನೇ ಸರಿ. ಅದಕ್ಕಾಗಿ ಮರುಮಾತಾಡದೆ ಒಪ್ಪಿಕೊಂಡೆ. ಲೇಖನ ಬರೆಯದೆ ಬಹಳ ದಿನಗಳಾಗಿದ್ದವು, ಬರವಣಿಗೆಯ ಬಲ ಕುಂದಿದೆ. ಆದರೆ ಬರೆಯಬೇಕೆಂಬ ಬಯಕೆ ಮುಂದಿದೆ. ಹೇಗಿದ್ದರೂ ನಮ್ಮಿಬ್ಬರ ಆತ್ಮೀಯತೆಗೆ ಭಂಗ ಬರಲಾರದೆಂಬ ಭರವಸೆಯಿಂದ ಬರೆಯಲು ತೊಡಗಿದ್ದೇನೆ.

ಧರ್ಮಸ್ಥಳ ಮೇಳ ಕುಂದಾಪುರದ ಕಡೆ ಬಂದಾಗ ಒಂದಲ್ಲ ಒಂದು ಕ್ಯಾಂಪಿಗೆ ಕಂದಾವರದವರು ಬಂದೇ ಬರುತ್ತಾರೆಂಬುದು ಶತಸ್ಸಿದ್ಧ. ಯಾಕೆಂದರೆ ಅವರಿಗೆ ಆಟ ಮಾತ್ರ ಮುಖ್ಯವಲ್ಲ. ಆಟದವರೂ ಅಷ್ಟೇ ಮುಖ್ಯ. ಅವರು ಆಟಕ್ಕೆ

ಬಂದರಾದರೆ ಆಟ ನೋಡುವುದು ಕೇವಲ 3-4 ಗಂಟೆಗಳಷ್ಟು ಮಾತ್ರ ಉಳಿದಂತೆ ಹೆಚ್ಚಿನ ಕಾಲ ಅವರ ಹಾಜರಿ ಚೌಕಿಯಲ್ಲೇ. ತನ್ನ ಪರಿಚಿತ ಹಾಗೂ ಸ್ನೇಹಿತ ಕಲಾವಿದರ ಕ್ಷೇಮ ಸಮಾಚಾರದೊಂದಿಗೆ ಇನ್ನಿತರ ವಿಚಾರಗಳ ಕುರಿತು ಮಾತಾಡುವುದು ಅವರ ಅಭ್ಯಾಸ. ತಾವು ನೋಡಿದಷ್ಟು ಆಟದಲ್ಲಿ ಕಂಡ ಉತ್ತಮಾಂಶಗಳ ಬಗ್ಗೆ ಮೆಚ್ಚುಗೆ, ಪ್ರಮಾದವಶಾತ್ ಆಗಿ ಹೋದ ತಪ್ಪುಗಳ ಬಗ್ಗೆ ಎಚ್ಚರಿಕೆಯ ನುಡಿ. ಇಷ್ಟೆಲ್ಲಾ ಮುಗಿದ ಮೇಲೆ ಅಗತ್ಯವೆನಿಸಿದರೆ ಚೌಕಿಯ ಒಂದು ಬದಿಯಲ್ಲಿ ಸಣ್ಣದೊಂದು ನಿದ್ದೆ. ಆಟ ಮುಗಿದ ಮೇಲೆ ಕಲಾವಿದರೊಂದಿಗೆ ಸುಖ ಕಷ್ಟಗಳ ಕುರಿತು ಸಂಭಾಷಿಸುತ್ತಾ ಉಪಹಾರ ಸ್ವೀಕಾರ. ಮೇಳದ ಬಸ್ಸಿನಲ್ಲೇ ಕಲಾವಿದರೊಂದಿಗೆ ಸ್ವಲ್ಪ ದೂರದವರೆಗೆ ಬಂದು, ಆತ್ಮೀಯವಾಗಿ ಎಲ್ಲರನ್ನೂ ನಮಸ್ಕಾರದೊಂದಿಗೆ ಬೀಳ್ಕೊಂಡು ಹೊರಟು ಹೋಗುವುದು ಅವರ ಪದ್ಧತಿ. ಕಲಾವಿದರೊಂದಿಗೆ ಹಿರಿ-ಕಿರಿಯರೆಂಬ ಭೇದವಿಲ್ಲದೆ ಸಮರಸವಾಗಿ ಬೆರೆಯುವ ಹಿತೈಷಿ ಮಿತ್ರ ಕಂದಾವರದವರನ್ನು ಯಾವ ಕಲಾವಿದ ಮರೆಯಲು ಸಾಧ್ಯ ?

ಕಂದಾವರದವರು ಓರ್ವ ಉತ್ತಮ ಅರ್ಥಧಾರಿ. ತಾವು ವಹಿಸುವ ಪಾತ್ರದ ಸ್ಪಷ್ಟ ಚಿತ್ರಣ ನೀಡುವುದೇ ಅವರ ಮುಖ್ಯಗುರಿ. ಸರಳ ಶಬ್ದಗಳಿಂದ ಚೊಕ್ಕದಾಗಿ ಅರ್ಥವಿವರಣೆ. ಎದುರು ಪಾತ್ರಧಾರಿಗಳೊಂದಿಗೆ ಸುಸಂಬದ್ಧವಾದ ಹೊಂದಾಣಿಕೆ. ವಾದ ಮಂಡಿಸುವ ಹಾಗೂ ಖಂಡಿಸುವ ಸಂದರ್ಭಗಳಲ್ಲಿ ಕೂಟ ಕೆಡದಂತೆ ಎಚ್ಚರ. ಹಲವಾರು ಕೂಟಗಳಲ್ಲಿ ಅವರೊಂದಿಗೆ ಅರ್ಥ ಹೇಳಿದ ಅನುಭವ ನನ್ನದು. ನಮ್ಮಿಬ್ಬರ ಕೃಷ್ಣ ಸಂಧಾನದ ಶ್ರೀಕೃಷ್ಣ - ವಿಧುರ, ಭೀಷ್ಮ ಪರ್ವದ ಭೀಷ್ಮ-ಧರ್ಮರಾಯ, ಕರ್ಣಾರ್ಜುನ ಕಾಳಗದ ಶ್ರೀಕೃಷ್ಣ-ಅರ್ಜುನ, ವಾಲಿವಧೆಯ ಶ್ರೀರಾಮ-ಹನುಮಂತ ಉತ್ತಮ ಹೊಂದಾಣಿಕೆಯ ಅರ್ಥಗಳು. ತಾಳಮದ್ದಳೆ ಕೂಟದ ಪ್ರಸಿದ್ಧ ಅರ್ಥಧಾರಿಗಳೆಲ್ಲರೊಂದಿಗೂ ಸಮರ್ಥ ರೀತಿಯಲ್ಲಿ ಅರ್ಥ ಹೇಳಿ ಸೈಎನಿಸಿಕೊಂಡ ಮಾದರಿ ಅರ್ಥಧಾರಿ ನಮ್ಮ ಕಂದಾವರದವರು.

ಉತ್ತಮ ಅರ್ಥಧಾರಿಯಾಗಿದ್ದ ಕಂದಾವರದವರು ಒಮ್ಮಿಂದೊಮ್ಮೆಗೆ ಪ್ರಸಿದ್ಧ ಪ್ರಸಂಗಕರ್ತೃರಾಗಿ ಹೊರಹೊಮ್ಮಿದರು. ನಾನಿರುವ ಧರ್ಮಸ್ಥಳ ಮೇಳದವರು ಸೀಮಂತಿನಿ ಕಥೆಯನ್ನೇ ಸತಿ- ಸುಮಂಗಲಿ ಎಂಬ ಹೆಸರಿನಿಂದ ಆಡುತ್ತಿರುವ ಸಮಯದಲ್ಲೇ ಇವರ ಪ್ರಥಮ ಪ್ರಸಂಗ ಸತಿ-ಸೀಮಂತಿನಿ ಸಾಲಿಗ್ರಾಮ ಮೇಳದಲ್ಲಿ

ಜಯಭೇರಿ ಬಾರಿಸಿತ್ತು. ಅದ್ವಿತೀಯ ಯುವ ಭಾಗವತ ದಿ। ಕಾಳಿಂಗ ನಾವಡರ ಕಂಠಶ್ರೀಯಿಂದ ಆ ಪ್ರಸಂಗದ ಪದ್ಯಗಳು ಕೇಳುಗರ ಮನಸೂರೆಗೊಂಡಿದ್ದವು. ಆ ಸಮಯ ದಿ। ನಾವಡರು ನನಗೆ ಸಿಕ್ಕಿದಾಗ ಪ್ರಸಂಗದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ್ದಲ್ಲದೆ ಪದ್ಯಗಳ ಗುಣಮಟ್ಟವನ್ನು ಅನುಲಕ್ಷಿಸಿ " ಇದು ಭಾಗವತರ ಪ್ರಸಂಗ" ಎಂದು ಪ್ರಶಂಸಿದರು. ಮುಂದೆ ಹಲವಾರು ಉತ್ತಮ ಪ್ರಸಂಗಗಳು ಶೆಟ್ಟರಿಂದ ರಚಿತವಾದುವು. ಅವರ ಶ್ರೀದೇವಿ ಬನಶಂಕರಿ, ಚೆಲುವೆ ಚಿತ್ರಾವತಿ, ಶೂದ್ರ ತಪಸ್ವಿನಿ, ವಸುವರಾಂಗಿ, ನಾಗನಂದನೆ, ಸೀತಾಪಾರಮ್ಯ ಇಂದಿಗೂ ಪ್ರಸ್ತುತವೆ. ಇವರ ಚೆಲುವೆ ಚಿತ್ರಾವತಿ ನೋಡಿದ ನನ್ನ ಯಕ್ಷಗಾನ ವಿಮರ್ಷಕ ಮಿತ್ರರೊಬ್ಬರು ಆ ಪ್ರಸಂಗದ ಪದ್ಯದ ಬಗ್ಗೆ, ಕಥೆಯ ಬಗ್ಗೆ ಅದರಲ್ಲೂ ಮುಖ್ಯ ಕಥೆಗೆ ಗೋವಿನ ಹಾಡನ್ನು ಸುಸಂಬದ್ಧವಾಗಿ ಹೊಂದಿಸಿದ ಬಗ್ಗೆ ಬಹಳ ಮೆಚ್ಚುಗೆ ಸೂಚಿಸಿದ್ದರು. ಅವರನ್ನು ಪ್ರೇಕ್ಷಕ ವರ್ಗ ಪ್ರತಿಭಾವಂತ ಕವಿ ಎಂದು ಹೊಗಳುವಾಗ ನನ್ನನ್ನೇ ಹೊಗಳಿದಷ್ಟು ಸಂತೋಷ ನನಗಾಗುತ್ತಿತ್ತು. ಮುಂದೆ ನನಗೂ ಕೂಡಾ ಅವರ ಒಂದೆರಡು ಪ್ರಸಂಗಗಳಲ್ಲಿ ಪಾತ್ರ ನಿರ್ವಹಿಸುವ ಅವಕಾಶ ಒದಗಿ ಬಂದಿತ್ತು. ಶ್ರೀದೇವಿ ಬನಶಂಕರಿಯಲ್ಲಿ ಕಲ್ಯಾಣಪುರದ ರಾಜ ಗುಣಸೇನ, ವಸುವರಾಂಗಿಯ ಪರಶುರಾಮ, ಶಿಖಂಡಿ ಸ್ವಯಂವರದ ದ್ರುಪದರಾಜನ ಪಾತ್ರ ನಿರ್ವಹಿಸಿದ್ದೆ. ಆಕಸ್ಮಿಕವಾಗಿ ಒದಗಿದ ಆ ಸನ್ನಿವೇಶದಲ್ಲಿ ಕೇವಲ ಪದ್ಯಗಳ ಆಧಾರದ ಮೇಲೆ ಪಾತ್ರ ನಿರ್ವಹಿಸಿದ್ದೆ. ಅವರ ಪದ್ಯಗಳೇ ಕಲಾವಿದರಿಗೆ ಮಾರ್ಗದರ್ಶನ ನೀಡುವಂತಿದೆ. ಪ್ರತಿ ಪದ್ಯದಲ್ಲೂ ಮಾತಾಡಲು ಸಾಕಷ್ಟು ವಿಷಯ ಸಿಗುವಂತಿವೆ. ಪಾತ್ರದ ಸ್ವಭಾವವನ್ನು ಬಿಂಬಿಸುತ್ತವೆ. ಇದು ಅವರ ಪ್ರಸಂಗದ ವೈಶಿಷ್ಟ್ಯತೆ. ಅವರ ಪ್ರಸಂಗಗಳನ್ನು ತೆಂಕು-ಬಡಗು ಭೇದವಿಲ್ಲದೆ ಹೆಚ್ಚಿನ ಮೇಳದವರು ಆಡುತಿದ್ದಾರೆ. ಆಡಿ ಯಶಸ್ವಿಗೊಳಿಸಿದ್ದಾರೆ.

ಸಾಧಾರಣ ಅರ್ಧಶತಮಾನಕ್ಕೂ ಹಿಂದೆ ಬೆಸೆದ ನಮ್ಮೊಳಗಿನ ಮೈತ್ರಿ ಇಂದಿಗೂ ಅಳಿಯದೆ ಉಳಿದುಕೊಂಡಿದೆ. ಮಾತ್ರವಲ್ಲ ಬಲವಾಗಿ ಬೇರೂರಿ ಭದ್ರಗೊಂಡಿದೆ. ಇದು ನಮ್ಮ ಜೀವನದ ಕೊನೆಯವರೆಗೂ ಉಳಿಯಬೇಕೆಂಬ ಬಯಕೆ ನಮ್ಮುಭಯರದ್ದೂ ಕೂಡಾ. ಅವರ ಅಭಿನಂದನಾ ಸಮಾರಂಭ ಸಂಭ್ರಮದಿಂದ ಜರಗುವಂತಾಗಬೇಕು ; ಅಭಿನಂದನಾ ಗ್ರಂಥ ಅರ್ಥಪೂರ್ಣವಾಗಿ ಮೂಡಿಬರಬೇಕು; ಅವರು ಆರೋಗ್ಯವಂತರಾಗಿ ಶತಸಂವತ್ಸರ ಬಾಳಿಬದುಕಬೇಕು; ಯಕ್ಷಗಾನ ಕ್ಷೇತ್ರಕ್ಕೆ ಅವರಿಂದ ಇನ್ನೂ ಹೆಚ್ಚಿನ ಸೇವೆ ಸಲ್ಲಬೇಕು ; ಈ ಎಲ್ಲಾ ನನ್ನ ಬಯಕೆಯ ಬೇಡಿಕೆಗಳು ಬಗೆಗೂಡುವಂತೆ ಪರಮಾತ್ಮನು ಅನುಗ್ರಹಿಸಬೇಕೆಂಬುದೇ ನನ್ನ ಪ್ರಾರ್ಥನೆ.

ಕಂದಾವರದ ಕವಿಚೇತನ

ಯಕ್ಷಾನಂದ ಕುತ್ಪಾಡಿ
"ಯಕ್ಷಶಿಖರ" ಬಿರುದಾಂಕಿತ ಯಕ್ಷಕವಿ

ಬಹಳ ವರ್ಷಗಳ ಹಿಂದೆ ನನ್ನ ವಿದ್ಯಾರ್ಥಿದೆಸೆಯ ಕಾಲ ತೆಂಕು - ಬಡಗು ತಿಟ್ಟು ವೃತ್ತಿ ಮೇಳಗಳ ಸುವರ್ಣಯುಗ. ಶ್ರೀ ಪಂಚಲಿಂಗೇಶ್ವರ ಕೃಪಾಪೋಷಿತ ಯಕ್ಷಗಾನ ಮೇಳ, ಶಿರಸಿ ಎಂಬ ವೃತ್ತಿ ಮೇಳಕ್ಕೆ ನನ್ನ "ಸುವರ್ಣರೇಖಾ" ಕೃತಿಯನ್ನು ನೀಡುವುದರ ಮೂಲಕ ವ್ಯವಸಾಯೀ ಮೇಳಕ್ಕೆ ಕೃತಿ ನೀಡಿದ ಅತ್ಯಂತ ಕಿರಿಯ ಕವಿ ಎಂಬ ಹೆಗ್ಗಳಿಕೆಯೊಂದಿಗೆ ಪದ್ಮಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ ಸಹಿತ ಬಡಗು ತಿಟ್ಟಿನ ಅಗ್ರಮಾನ್ಯ ಕಲಾವಿದರ ಒಕ್ಕೂಟದಲ್ಲಿ ಯಶಸ್ವೀ ಪ್ರದರ್ಶನ ಕಂಡ ಈ ಕೃತಿ ಉಪ್ಪುಂದ ಜಾತ್ರೆಯಲ್ಲಿ ಐದು ವೃತ್ತಿ ಮೇಳಗಳ ಯಕ್ಷಗಾನ ಪ್ರದರ್ಶನ ಸಂದರ್ಭ ತುಂಬು ಡೇರೆಯಲ್ಲಿ ನನ್ನ " ಸುವರ್ಣರೇಖಾ" ಅನಾವರಣಗೊಳ್ಳುತ್ತಿರುವ ಹೊತ್ತಿಗೆ ನಮ್ಮ ಮೇಳದ ಚೌಕಿಗೆ ಬಂದು ಕಲಾವಿದರೊಂದಿಗೆ ಮಾತಾಡುತ್ತಾ ಈ ಕಿರಿಯ ಕವಿಯನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಹಿರಿಯ ಚೇತನವೇ ಶ್ರೀ ಕಂದಾವರ ರಘುರಾಮ ಶೆಟ್ಟಿಯವರು.

"ಚೆಲುವೆ ಚಿತ್ರಾವತಿ", "ಶ್ರೀ ದೇವಿಬನಶಂಕರಿ". "ಶೂದ್ರತಪಸ್ವಿನಿ", "ಸೀತಾಪಾರಮ್ಯ", "ರತಿರೇಖಾ" ಮುಂತಾದ ಪ್ರಸಿದ್ಧ ಕೃತಿಗಳನ್ನು ಯಕ್ಷಗಾನ ಪ್ರಪಂಚಕ್ಕೆ ನೀಡಿದ ಇವರು ಗುಣಕ್ಕೆ ಮತ್ಸರವಿಲ್ಲ ಎಂಬ ಧೋರಣೆಯನ್ನು ಸದಾ ಪಾಲಿಸಿದವರು. ಇವರ ಸ್ನೇಹ ಸಂಪರ್ಕ ನನಗೆ ಸಿಕ್ಕಿರುವುದಕ್ಕೂ ಒಂದು ಸಕಾರಣವಿದೆ. ಇವರ ಬಹು ಪ್ರಸಿದ್ಧ ಕೃತಿ "ಶೂದ್ರ ತಪಸ್ವಿನಿ"ಯು ಪೆರ್ಡೂರು ಮೇಳದಲ್ಲಿ ಪ್ರದರ್ಶನಗೊಳ್ಳುತ್ತಿರುವ ಹೊತ್ತಿಗೆ ಇದರ ಪ್ರದರ್ಶನ ಕಂಡ ಪ್ರೇಕ್ಷಕರೋರ್ವರು ಇದು ಮಾಸ್ತಿಯವರ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕೃತಿ "ಚಿಕವೀರ ರಾಜೇಂದ್ರ" ಕಾದಂಬರಿ ಆಧಾರಿತ ಎಂದೂ, ಅವರ ಹೆಸರನ್ನು ಪ್ರಕಟಣೆಯಲ್ಲಿ ಬಳಸಿಕೊಂಡಿಲ್ಲ

ಎಂಬ ಕಾರಣ ನೀಡಿ ಉದಯವಾಣಿಯಲ್ಲಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದರು. ಹಾಗೇ ಇದಕ್ಕೆ ಬಹಳಷ್ಟು ಮಂದಿ ವೀಕ್ಷಕರು ಪತ್ರಿಕೆಗೆ ಪ್ರತಿಕ್ರಿಯಿಸತೊಡಗಿದಾಗ "ಹೆರಿಗೆಯ ಬೇನೆಯನ್ನು ಬಂಜೆ ಅರಿಯಲು ಸಾಧ್ಯವೇ" ಎಂಬ ಸಾಮಾನ್ಯ ಪ್ರಜ್ಞೆಯಿಲ್ಲದವರ ಮುಂದೆ ಕವಿಹೃದಯದ ನೋವನ್ನು ಕಂಡು ನಾನು ಇದಕ್ಕೆ ಸೂಕ್ತವಾದ ಪತ್ರವನ್ನು ಉದಯವಾಣಿಗೆ ಬರೆದು ಈ ವಿವಾದಕ್ಕೆ ಮಂಗಳ ಹಾಡಿದೆ. ಈ ವಿವಾದದಿಂದ ಕೃತಿಯ ಪ್ರಸಿದ್ಧಿ ಹೆಚ್ಚಿರುವುದಂತೂ ಸತ್ಯ. ಇದೇ ಕಾರಣಕ್ಕೆ ನನ್ನ ಮೇಲಿನ ಅಭಿಮಾನದಿಂದ ಶ್ರೀಯುತರು ಪತ್ರಮುಖೇನ ನನ್ನನ್ನು ಸಂಪರ್ಕಿಸಿ ನಮ್ಮೀರ್ವರ ಸ್ನೇಹ-ಬಾಂಧವ್ಯಕ್ಕೆ ಮುನ್ನುಡಿ ಹಾಕಿದರು.

ಮುಂದೆ ನನ್ನ ಕೃತಿರಚನೆಗೆ ಬೇಕಾದ ಸಲಹೆ ಸೂಚನೆಗಳನ್ನು ಅಪೇಕ್ಷಿಸಿ ಅವರ ನೂಜಾಡಿಯ ಮನೆಗೆ ಹೋದಾಗ ಯಾವುದೇ ಬಿಗುಮಾನವಿಲ್ಲದೆ ಪ್ರೋತ್ಸಾಹಿಸಿದ ಶ್ರೀಯುತರು ನನ್ನ "ಕುತ್ಪಾಡಿ ಕ್ಷೇತ್ರ ಮಹಾತ್ಮೆ" ಕೃತಿ ರಚನಾ ಸಂದರ್ಭ ಬಹಳಷ್ಟು ಸಹಕಾರ ನೀಡಿದ್ದಾರೆ. ಅವರು ಆದರ್ಶ ಅಧ್ಯಾಪಕರಾಗಿ ಕಂಡ್ಲೂರಿನ ನೇತಾಜಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇರುವ ಹೊತ್ತಿಗೆ ನಾನು ಸಮಯ-ಸಂದರ್ಭ ಸಿಕ್ಕಾಗ ಅಲ್ಲಿಗೆ ಹೋಗಿ ಮಧ್ಯಾಹ್ನ ಕಂಡ್ಲೂರಿನ ಅವರ ಮನೆಯಲ್ಲಿ ಊಟ ಮಾಡಿ ಅಲ್ಲಿಯೇ ವೈದ್ಯ ವೃತ್ತಿ ಮಾಡುತ್ತಿದ್ದ ಇನ್ನೋರ್ವ ಪ್ರಸಂಗಕರ್ತೃ ಡಾ। ವೈ. ಚಂದ್ರಶೇಖರ ಶೆಟ್ಟರೊಂದಿಗೂ ನಿಕಟ ಸಂಪರ್ಕ ಹೊಂದಿದ್ದೆ. ಒಮ್ಮೆ ಹೀಗೇ ಊಟ ಮಾಡಿ ಶೆಟ್ಟರು ಬೀಡಿ ಹೊತ್ತಿಸಿ ಹೊಗೆ ಬಿಡುತ್ತಾ ನನಗೊಂದು ಬೀಡಿ ನೀಡಲು ಮುಂದೆ ಬಂದಾಗ ನಾನು ಸೇದುವುದಿಲ್ಲ ಅಂತ ಹೇಳಿದ್ದಕ್ಕೆ "ಮತ್ತೆ ಹೇಗೆ ಬರೀತೀರಪ್ಪಾ" ಎಂದು ಹಾಸ್ಯ ಚಟಾಕಿ ಹಾರಿಸಿದ್ದರು.

ಯಕ್ಷಗಾನ ಸಾಹಿತ್ಯ ವಲಯದಲ್ಲಿ ಡಾ॥ ಅಮೃತ ಸೋಮೇಶ್ವರ ಶ್ರೀ ಅಂಬಾತನಯ ಮುದ್ರಾಡಿಯವರಂತೆಯೇ ನೀಡಲ್ಪಟ್ಟ ಹೃದಯ ಸಂಪನ್ನರಾದ ಶ್ರೀಯುತ ಶೆಟ್ಟರು ಭಾವುಕಜೀವಿ. ನೂಜಾಡಿಯಂತಹ ಕುಗ್ರಾಮದಲ್ಲಿ ನೆಲೆ ನಿಂತು ಯಕ್ಷ ಪ್ರಪಂಚಕ್ಕೆ ಅದ್ವಿತೀಯ ಕಾಣಿಕೆ ನೀಡಿ 79ರ ಹೊಸ್ತಿಲಿನಿಂದ 80 ರ ಅಂಗಣಕ್ಕೆ ಕಾಲಿಡುತ್ತಿರುವ ಈ ಹೊತ್ತಿನಲ್ಲಿ ಮುಂದೆ ಶತ ಸಂವತ್ಸರ ಕಂಡು ನಮ್ಮ ಮುಂದೆ ಬಾಳಿ-ಬೆಳಗಲಿ ಎಂಬುದೇ ನನ್ನ ಹೃದಯಪೂರ್ವಕ ಆಶಯ - ಸದಾಶಯ.

ಕಂದಾವರದವರ ಅರ್ಥವೈಭವ

ವಾಸುದೇವ ರಂಗಾ ಭಟ್
ಯಕ್ಷಗಾನ ಅರ್ಥಧಾರಿ, ಮಧೂರು

ಸುಮಾರು 7–8 ವರ್ಷಗಳ ಹಿಂದಿನ ಅನುಭವ; ವಿಟ್ಲ ಶಂಭು ಶರ್ಮರ ಅಪೇಕ್ಷೆಯಂತೆ ಹೆರಂಜಾಲು ಗೋಪಾಲ ಗಾಣಿಗರ ಸಂಯೋಜನೆಯ 2 ತಾಳಮದ್ದಳೆಯಲ್ಲಿ ಭಾಗವಹಿಸಲು ಬೆಂಗಳೂರಿಗೆ ತೆರಳಿದ ಸಂದರ್ಭ. ಸಣ್ಣ ಪುಟ್ಟ ಪಾತ್ರಗಳನ್ನು ನಿರ್ವಹಿಸುತ್ತಾ, ತಾಳಮದ್ದಳೆಯಲ್ಲಿ ಹಿರಿಯ ಅರ್ಥಧಾರಿಗಳ ಪಾತ್ರ ನಿರ್ವಹಣೆಯನ್ನು ತೀವ್ರ ಕುತೂಹಲದಿಂದ ಗಮನಿಸುತ್ತಾ, ಆಸ್ವಾದಿಸುತಿದ್ದ ನನಗೆ ಅಲ್ಲಿ ಸಿಕ್ಕ ಒಂದು ವಾಲಿವಧೆಯ ರಾಮ, ಶರಸೇತು ಬಂಧನದ ವೃದ್ಧ ಬ್ರಾಹ್ಮಣ, ಈ ಎರಡು ಪಾತ್ರಗಳನ್ನು ನಿರ್ವಹಿಸುತಿದ್ದ ವ್ಯಕ್ತಿ ನೋಡಲು ಎಷ್ಟು ಸರಳವಾಗಿ ಕಾಣಿಸುತಿದ್ದರು ಎಂದರೆ ಈ ಪಾತ್ರಗಳನ್ನು ನಿರ್ವಹಿಸುತಿದ್ದ ಉಳಿದ ಕೆಲವು ಖ್ಯಾತನಾಮರನ್ನು ಕಂಡು ಕೇಳಿದ್ದ ನನಗೆ ಇವರ ನಿರ್ವಹಣೆ ಕೇಳಿ ಎಲಾ .... ಈ ಪಾತ್ರ ಇಷ್ಟು ಸರಳವಾಗಿ, ಪಾತ್ರ ಘನತೆಗೆ ಒಂದಿಷ್ಟೂ ಚ್ಯುತಿಬಾರದೆ ಹೀಗೂ ನಿರ್ವಹಿಸಲು ಸಾಧ್ಯವೇ? ಎಂದು ವಿಸ್ಮಿತವಾಗುವಷ್ಟು ಅಚ್ಚುಕಟ್ಟಾಗಿ, ಪೌರಾಣಿಕ ಆವರಣಗಳನ್ನು ಭಂಗಿಸದೆ ಸುಸ್ಪಷ್ಟವಾಗಿ ಮೂಡಿ ಬಂದಿತ್ತು. ಹೌದು, ಶ್ರೀಯುತ ಕಂದಾವರ ರಘುರಾಮ ಶೆಟ್ಟರು ನನ್ನ ಮೇಲೆ ಮೊದಲ ಬಾರಿಗೆ ತನ್ನ ಅರ್ಥದಿಂದ ಮಾಡಿದ ಪರಿಣಾಮ ಹೀಗಿತ್ತು. ವಾಲಿವಧೆಯ ರಾಮನಾಗಿ ಕೊನೆಯ ಭಾಗದ ವಾಲಿವಧೆಯ ಸಮರ್ಥನೆಯನ್ನು ಸರಳ ವಾಕ್ಯಗಳಲ್ಲಿ ಸಭಾರಂಜನೆಯನ್ನು ಮಾಡುತ್ತಾ ವಾಲಿಯನ್ನೂ ಸಭೆಯನ್ನೂ ತಮ್ಮ ಉತ್ತರಗಳಿಂದ ಮೆಚ್ಚಿಸುತ್ತಾ ಅವರು ಸಾಗಿದ ವಿಧಾನ ಅನನ್ಯ. ಪ್ರಮಾಣ ವಾಕ್ಯಗಳ ಅತಿಭಾರವನ್ನು ಅವಲಂಬಿಸದೆ ಯುಕ್ತಿ, ಯುಕ್ತವಾದ ಮಂಡನೆ ನನ್ನಲ್ಲಿ ಆಗ ಮನೆ ಮಾಡಿದ್ದ ಕೆಲವು ಭ್ರಮೆಗಳನ್ನು ದೂರೀಕರಿಸಿ ಕಣ್ಣು ತೆರೆಯುವಂತೆ ಮಾಡಿತ್ತು.

ಆ ಬಳಿಕ ಕುಂದಾಪುರ ಕಡೆಯ ಬಹುತೇಕ ಎಲ್ಲಾ ಕೂಟಗಳಲ್ಲೂ ಶ್ರೀಯುತರು ಕಾಣ ಸಿಗುತಿದ್ದರು. ಬಹುತೇಕ ಎಲ್ಲಾ ತಾಳಮದ್ದಳೆಗಳ ಸಂಯೋಜಕರಾಗಿ, ತಾನೂ ಸಣ್ಣ-ಪುಟ್ಟ ಅರ್ಥಗಳನ್ನು ಸಂದರ್ಭೋಚಿತವಾಗಿ ಹೇಳುತ್ತಾ, ಪರಿಚಯವಾಗುತ್ತಾ ಹೋದಂತೆ ತಿಳಿಯಿತು ರಘು ಮಾಸ್ಟ್ರ ಪ್ರಸಂಗಕರ್ತೃರೂ ಹೌದೆಂದು, ಕಲಾವಿದ ವರ್ಗದೊಳಗೆ ಅಪಾರ ಗೌರವಾದರಗಳನ್ನು ತನ್ನ ಸರಳತೆ, ಪಾಂಡಿತ್ಯಗಳಿಂದ ಗಳಿಸಿರುವ ಅನುಭವ ಸಂಪನ್ನರೂ ಹೌದೆಂದು. ಹಾಗೆಂದು ಇವರು ಎಲ್ಲೂ ತನ್ನ ಹಿರಿತನವನ್ನು ಮಾನದಂಡವಾಗಿಸಿ ತನಗೆ ಇಂತಹ ಪಾತ್ರವೇಬೇಕೆಂಬ ಆಗ್ರಹವನ್ನು ತೋರಿದವರಲ್ಲ. ಆ ಧೋರಣೆಯಿಂದ ಕಾರ್ಯಕ್ರಮ ಸಂಯೋಜಿಸಿದವರೂ ಅಲ್ಲ. ಪ್ರಸಿದ್ಧರ ಜೊತೆ ತಾರೆ, ಹಂಸಧ್ವಜ, ಕೃಷ್ಣ, ಸೀತೆ, ಹನುಮಂತ ಹೀಗೆ ಅನೇಕ ನಗಣ್ಯವೆನಿಸುವ ಅರ್ಥಗಳನ್ನು ಸೊಗಸಾಗಿ ನಿರ್ವಹಿಸುತ್ತಾ ತನ್ನ ಗುಣದಿಂದಲೇ ಆಪ್ತರಾಗುವುದು ಇವರ ಸಿದ್ಧಿ. ಭರತಾಗಮನದ ಇವರ ಒಂದು ಸೀತೆ ನನಗೆ ಅವಿಸ್ಮರಣೀಯ. ಗುರುಗಳಾದ ಕೊರ್ಗಿ ವೆಂಕಟೇಶ ಉಪಾಧ್ಯಾಯರ ರಾಮನನ್ನೂ ಭಾವ ಪರವಶರಾಗುವಂತೆ 'ಇನ್ನಾರೆನ್ನನು ಗುಣದಲಿ ಮನ್ನಿಸಿ ....' ಎಂಬ ಪಾರ್ತಿಸುಬ್ಬನ ಮೂರು ಪದ್ಯಗಳಿಗೆ ಇವರು ಕಣ್ಣೀರ್ಗರೆಯುತ್ತಾ ಅರ್ಥ ಹೇಳಿದ ಬಗೆ ನನ್ನನ್ನು ಬೆರಗಾಗಿಸಿತ್ತು. ಸಾಮಾನ್ಯವಾಗಿ ನಾವು ತಾಳಮದ್ದಳೆಗಳಲ್ಲಿ ಆಯ್ದುಕೊಳ್ಳದ ಭಾಗ ಇದು. ಆದರೆ ಅಂದು ಮನೆಯ ಸೊಸೆ ಒಬ್ಬಾಕೆ ತನ್ನ ಮಾವನ ನಿಧನದ ವಾರ್ತೆ ತಿಳಿದು ಭಾವುಕಳಾಗಿ ಅವರ ಗುಣಗಾನ ಮಾಡುತ್ತಾ, ಪಾತ್ರದ ಅಂತರಂಗದ ಅನಾವರಣ ಮಾಡಿದ ವಿಧಾನ ನನಗೆ ಅನುಸರಣೀಯವೆನಿಸಿತು. ಆ ಬಳಿಕ ಕೊರ್ಗಿ ಗುರುಗಳು ಕಂದಾವರದವರ ನಿರ್ವಹಣೆಯಿಂದ ಪ್ರಭಾವಿತರಾಗಿ ಬೇರೆ ಕಡೆಗಳಲ್ಲಿ ಆ ಪಾತ್ರ ಬಿಡಕೂಡದು ಎಂದು ಆಗ್ರಹಿಸುತಿದ್ದುದು ಕಂದಾವರದವರ ಸಾಮರ್ಥ್ಯಕ್ಕೆ ದೃಷ್ಟಾಂತವಾಗಿ ನಿಲ್ಲುತ್ತದೆ.

ಕಂದಾವರದವರ ಭಾವುಕತೆಯ ಪರಿಧಿಯೊಳಗೆ ನಾನೂ ಸಿಲುಕಿ ಭಾವ ಪರವಶನಾದುದೂ ಇದೆ. ಅವರ ವಾಲಿವಧೆಯ ಹನುಮಂತನಿಗೆ, ಕೃಷ್ಣ ಸಂಧಾನದ ವಿದುರನಿಗೆ ಆರಾಧ್ಯದೈವವಾದ ರಾಮ, ಕೃಷ್ಣರ ಪಾತ್ರ ನಿರ್ವಹಿಸಿದ್ದೆ. ಶ್ರೀಯುತರು ತಮ್ಮ ಪಾತ್ರಗಳಲ್ಲಿ ಭಕ್ತಿಯ ಪರಾಕಾಷ್ಠತೆಗೇರಿ, ಭಾವಪರವಶರಾಗಿ ಅರ್ಥವಿಸುತಿದ್ದರು.

ಆ ಸಮಯ ಅವರ ಮಾತಿನ ಮಧ್ಯದಲ್ಲಿ ಬಾಯಿ ಹಾಕಿದರೆ ಅವರ ಭಾವುಕತೆಗೆ ಎಲ್ಲಿ ಭಂಗ ಬಂದು ನೋಯಬಹುದೆಂದು ಮಾತಾಡದೆ ಸುಮ್ಮನಿರುತಿದ್ದೆ. ಅವರ ಮಾತು ಮುಗಿದ ಮೇಲೆ ನಾನು ಮಾತನ್ನು ಆರಂಭಿಸುತಿದ್ದೆ. ಹೀಗೆ ಅವರ ಪಾತ್ರದೊಂದಿಗೆ ನಾನೂ ಲೀನನಾಗಿ ಆನಂದಿಸುತಿದ್ದೆ. ಇದು ಅವರ ಅರ್ಥಗಾರಿಕೆಯ ವೈಖರಿ.

ನಿಗರ್ವಿಯಾಗಿ ಎಲ್ಲರೊಂದಿಗೂ ಬೆರೆತು ವಿನೋದದ ಸಂವಾದದಿಂದ ಆಪ್ತರಾಗುತಿದ್ದ ರಘುರಾಮ ಶೆಟ್ರು ನಾನು ತಿಳಿದಂತೆ ಅಜಾತಶತ್ರುವೆನಿಸಿದ ಸಾತ್ವಿಕ ಸಜ್ಜನ. ನನ್ನಂತಹ ಎಳೆಯುನ ಜೊತೆ ಅವರು ವರ್ತಿಸುವಾಗಲೂ ಗೌರವಯುತವಾಗಿರುತಿದ್ದ ಅವರ ನಡೆ–ನುಡಿಗಳು, ನಗು ಮುಖದಲ್ಲೇ ಹರಿದು ಬರುತಿದ್ದ ಘಾಸಿ ಮಾಡದೆ, ಎಚ್ಚರ ಮೂಡಿಸುತಿದ್ದ ಅವರ ವಿಮರ್ಶಾ ವಾಕ್ಯಗಳು ನನ್ನಂತಹವರಿಗೆ ಯಾವತ್ತೂ ಮಾರ್ಗದರ್ಶಕ.

ಕಲೆಯ ಕುರಿತಾದ ಸುಸ್ಪಷ್ಟ ಧಾರಣೆ–ಧೋರಣೆಗಳನ್ನು ಹೊಂದಿದ ಸರ್ವಾಂಗಗಳ ಜ್ಞಾನ ಹೊಂದಿರುವ ಕಂದಾವರ ರಘುರಾಮ ಶೆಟ್ಟರು ಅತ್ಯಂತ ಮೆಚ್ಚುಗೆಗೆ ಪಾತ್ರರಾಗುವುದು ತನ್ನ ರುಚಿಶುದ್ಧಿಯಿಂದ. ಅಗ್ಗದ ಜನಪ್ರಿಯ ತಂತ್ರಗಳನ್ನು ಪ್ರಸಂಗದಲ್ಲೂ ಇವರು ಬಳಸಿದ್ದಿಲ್ಲ. ತನ್ನ ಅರ್ಥಗಾರಿಕೆಯಲ್ಲೂ ಅಂಥವುಗಳನ್ನು ಒಗ್ಗಿಸಿಕೊಂಡದ್ದೂ ಇಲ್ಲ. ಪಾತ್ರಕ್ಕೆ, ಪ್ರಸಂಗಕ್ಕೆ ಘನತೆಯನ್ನು ಹೆಚ್ಚಿಸುವ ವಿಧಾನದ ನಿರ್ವಹಣೆಯನ್ನು ಸದಾ ಬಯಸುವ ಶೆಟ್ಟರು ತಾನು ಅ ಮಾರ್ಗದಲ್ಲೇ ಸಾಗುತ್ತಾ, ಎಲ್ಲಾ ಹಿರಿ–ಕಿರಿಯರನ್ನು ಹಾರ್ದಿಕವಾಗಿ ಮೆಚ್ಚಿ, ಮುಚ್ಚಟೆಯಿಲ್ಲದೆ ಪ್ರಶಂಸಿಸುವ ಉದಾರ ಚರಿತರು. ಇವರ ಉಪಸ್ಥಿತಿ ತಾಳಮದ್ದಳೆಯ ಉಳಿದ ಅರ್ಥಧಾರಿಗಳನ್ನು ಒಳ್ಳೆಯ ನಿರ್ವಹಣೆ ಮಾಡಲು ಪ್ರಚೋದಿಸುತ್ತಿರುವುದನ್ನು ಗಮನಿಸಿದ ನನಗೆ ಅನಿಸಿದ್ದು ಒಬ್ಬಾತ ಹಿರಿಯ ತನ್ನ ವ್ಯಕ್ತಿತ್ವದಿಂದಗಳಿಸಬಹುದಾದ ಶ್ರೇಷ್ಠ ಗೌರವ ಇದೆಂದು.

ನನಗೆ ಕಂದಾವರದವರ ಕುರಿತಾದ ಗೌರವ ಹೆಚ್ಚಾಗುವಂತೆ ಮಾಡಿದ ಇನ್ನೊಂದು ಅಂಶ ಅವರಲ್ಲಿನ ನಿಸ್ಪ್ರಹತೆ. ತನ್ನ ಜ್ಞಾನ, ಅನುಭವಗಳಿಂದ ಯಾವ ಪಾತ್ರವನ್ನೂ ಸುಲಲಿತವಾಗಿ, ಸುಂದರವಾಗಿ ನಿರ್ವಹಿಸಬಲ್ಲಷ್ಟು ಪ್ರೌಢತೆ, ಯೋಗ್ಯತೆಗಳು ತನಗಿದ್ದರೂ ಇವರಿಗೆ ಅಂತಹ ಅಪೇಕ್ಷೆಯೇ ಇಲ್ಲದಿರುವುದು

ಒಟ್ಟು ತಾಳಮದ್ದಳೆ ಒಳ್ಳೆಯದಾಗಲು ಯಾವ ಕಲಾವಿದರು ಅಗತ್ಯ ಅಂತ ತನಗನಿಸಿತೋ ಅಂತವರನ್ನು ಸಂಪರ್ಕಿಸಿ, ಆಹ್ವಾನಿಸಿ, ತಾನು ಕಾರ್ಯಕರ್ತನಂತೆ ಎಲ್ಲ ವ್ಯವಸ್ಥೆಗಳನ್ನು ಮಾಡಿಕೊಡುತ್ತಾ ಅವರ ನಿರ್ವಹಣೆಯನ್ನು ಮುಂದೆ ಕುಳಿತು ಕೇಳಿ ಆನಂದಿಸುವಲ್ಲಿ ಇವರಿಗೆ ಅತ್ಯಾಸಕ್ತಿ. ಇವರ ಈ ಗುಣವೇ ಯಕ್ಷಗಾನದ ಹಿಮ್ಮೇಳ-ಮುಮ್ಮೇಳಗಳ ಕಲಾವಿದರ ವರ್ಗದವರೊಳಗೆ ಇವರನ್ನು ಸರ್ವಾದರಣೀಯರನ್ನಾಗಿಸಿದೆ.

ಪ್ರಸಂಗಕರ್ತೃ, ಅರ್ಥಧಾರಿ, ವಿದ್ವಾಂಸ, ವಿಮರ್ಶಕ, ಸಹೃದಯಿ ಕಲಾಸ್ವಾದಕ ಎಂಬ ನೆಲೆಗಳಲ್ಲಿ ಹಿರಿತನವನ್ನು ಹೊಂದಿದ ಶ್ರೀ ಕಂದಾವರ ರಘುರಾಮ ಶೆಟ್ಟರು ನನ್ನ ಪಾಲಿಗೆ ಸದಾ ಮಾರ್ಗದರ್ಶಕರಾದ ಹಿರಿಯರು. ಅವರು ನನ್ನನ್ನು ಸನ್ಮಿತ್ರ ಎಂಬ ನೆಲೆಯಲ್ಲಿ ಗುರುತಿಸಿ, ಗೌರವದಿಂದ ಕಾಣುತ್ತಿರುವುದು ನನಗಂತೂ ಈ ಕ್ಷೇತ್ರದಲ್ಲಿ ವಿಶೇಷವಾಗಿ ಲಭ್ಯವಾದ ಪ್ರಾಪ್ತಿ. ವಯಸ್ಸಿನಿಂದ, ಅನುಭವದಿಂದ, ಜ್ಞಾನದಿಂದ ವೃದ್ಧರಾದ ಶ್ರೀಯುತರು ಹೀಗೆ ಮಾರ್ಗದರ್ಶಕರಾಗಿ, ಜೊತೆಯಲ್ಲಿ ಅರ್ಥಹೇಳುತ್ತಾ ನೂರ್ಕಾಲ ಆರೋಗ್ಯ ಪೂರ್ಣರಾಗಿ ಇರುವಂತಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಬೇಕಾದುದು ಎಳೆಯವನಾಗಿ ನನ್ನ ಕರ್ತವ್ಯ.

ಸ್ವಾನುಭವಿ ಪ್ರಸಂಗಕರ್ತರು

ಕೆ. ಗೋವಿಂದ ಭಟ್ಟ
ಯಕ್ಷಗಾನ ಕಲಾವಿದರು, ಸಫಲಾಪುರ

ಯಕ್ಷಗಾನ ಪ್ರಸಂಗಕರ್ತೃರು ಇತ್ತೀಚೆಗೆ ಹೆಚ್ಚಾಗುತ್ತಿರುವುದು, ವಿಮರ್ಶಕರು, ಅಭಿಮಾನಿಗಳು, ಆಸಕ್ತರು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ನಮಗೆ ಗೋಚರ. ಕೆಲವು ಪ್ರಸಂಗಗಳು ರಂಗ ಪ್ರಯೋಗಕ್ಕೆ ಹೊಂದಿಕೆಯಾಗುವಂತಹದ್ದು. ಕೆಲವು ಓದಲು ಮಾತ್ರ. ಕೆಲವು ಸಾಹಿತ್ಯ ಪ್ರಧಾನ. ಕೆಲವು ದೃಶ್ಯ ಪ್ರಧಾನ. ಕೆಲವು ವರ್ಣನಾ ವೈಖರಿಗಳಿಂದ ಕೂಡಿದವುಗಳು, ಕೆಲವು ಸ್ಥಳ ಪುರಾಣಗಳು. ಅಂದರೆ ಕ್ಷೇತ್ರ ಮಹಾತ್ಮೆಗಳು, ಯಕ್ಷಗಾನ ಪ್ರಸಂಗಗಳಿಗೆ ಯಾವ ವಸ್ತುವನ್ನೂ ತೆಗೆದುಕೊಳ್ಳಬಹುದು, ಒಂದು ಪ್ರಸಂಗವಾದರಾಯಿತು ಎಂಬ ದೋರಣೆ ಇತ್ತೀಚೆಗೆ ಕಾಣಿಸಿಕೊಂಡಿದೆ.

ಕಂದಾವರ ರಘುರಾಮ ಶೆಟ್ಟರು ಬರೆದ ಪ್ರಸಂಗಗಳನ್ನು ರಂಗದಲ್ಲಿ ಪ್ರದರ್ಶಿಸಿದಾಗ ಆಗುವ ಪರಿಣಾಮಗಳು ಏನೆಂದು ತಿಳಿದುಕೊಳ್ಳಬೇಕಾದರೆ ; ಪ್ರೇಕ್ಷಕನಿಗೆ, ಶೋತೃವಿಗೆ ; ಅವರಿಗಿರುವ ಜೀವನಾನುಭವ, ತಿಳಿದುಕೊಳ್ಳಬೇಕೆಂಬ ಆಸಕ್ತಿ. ಯಕ್ಷಗಾನದ ಸ್ವರೂಪ, ರಂಗ ಪ್ರಯೋಗ, ವಾಚಿಕದ ಸರಿಯಾದ ಅರಿವು ಇವುಗಳೆಲ್ಲ ಅಗತ್ಯ ಎನಿಸುತ್ತದೆ. ಛಂದೋ ಬದ್ಧವಾಗಿ ಶ್ರುತಿ ಕರ್ಕಶವಲ್ಲದ ಪದ ಸಂಯೋಜನೆಯಿಂದ ಪೌರಾಣಿಕ ಪಾತ್ರಗಳ ಸ್ವರೂಪವನ್ನು ಬಿಂಬಿಸುವ ರಚನೆಗಳು ಇವರದ್ದಾಗಿದೆ.

ರಂಗ ಭೂಮಿಯ ಪೂರ್ವ ಪರಂಪರೆ ಏನು? ಹೊಸ ಕಾಲದ ಸಾಧನೆ ಎಷ್ಟು? ಎಂಬುದನ್ನು ಮೊದಲರಿತರೆ ಪ್ರಸಂಗಕರ್ತೃನಿಗೆ ಕೃತಿ ನಿರ್ಮಾಣ ಸುಲಭ. ಹಾಗೆಯೇ ಹಿನ್ನೋಟವನ್ನು ಪ್ರಾಚೀನ ರಂಗ ಭೂಮಿಯ ಕಡೆ ಹರಿಸಿದರೆ ನಮಗೆ ತಿಳಿದಿರುವುದು ಅತ್ಯಲ್ಪವೆಂದು ತೋರುವುದು ಪ್ರಸಂಗಗಳು ಕನ್ನಡ ಸಾಹಿತ್ಯ ಪ್ರಕಾರದ

ಅಂಶ, ಕನ್ನಡ ಸಾಹಿತ್ಯ ಕನಿಷ್ಠ ಸಾವಿರ ವರುಷಗಳಷ್ಟು ಹಳೆಯದಾದ ದೊಡ್ಡ ಕಣಜ. ಅದರಲ್ಲಿ ಸಾಹಿತ್ಯದ ವಿವಿಧ ರೂಪಗಳ ಸುಗ್ಗಿಯಿರುವುದೂ ನಿಜ. ಆದರೆ ತೀರಾ ಹಳೆಯ ಪ್ರಸಂಗ ಲಿಖಿತ ರೂಪದಲ್ಲಿರುವುದು ಯಾವುದು ? ರಂಗ ಪ್ರಯೋಗದ ಬಗ್ಗೆ ನಮ್ಮ ತಿಳಿವು, ಕಲ್ಪನೆಯ ಕುದುರೆ ಸವಾರಿಯಾಗಿದೆ. ಕನ್ನಡ ರಂಗಭೂಮಿ ದೃಶ್ಯ ಸ್ವರೂಪದಲ್ಲಿ ಪ್ರಾಚೀನ ಆಧಾರಗಳ ಅಂಕೆಗೆ ಸಿಲುಕಿಲ್ಲ. ಕನ್ನಡ ನಟರ ವೇಷ-ಭೂಷಣ, ನೋಟ- ಭೇಟ, ನೃತ್ಯ-ಗಾನಗಳ ಸ್ಫುಟವಾದ ವರ್ಣನೆ ಇದೆ "ಶಿಲಪ್ಪದಿಗಾರಂ" ಎಂಬ ತಮಿಳು ಗ್ರಂಥದಲ್ಲಿ. ಇದನ್ನು ಕ್ರಿಸ್ತ ಶಕಾರಂಭದ ಗ್ರಂಥವೆಂದು ವಿಮರ್ಶಕರು, ವಿದ್ವಾಂಸರು ಒಪ್ಪಿದ್ದಾರೆ.

ರಂಗಭೂಮಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು, ರಂಗ ಕಲಾವಿದರ ಜೀವನ ವಿಧಾನ, ಸ್ವಭಾವ, ಸಂಸ್ಕಾರಗಳನ್ನು ಪರಿಶೀಲಿಸಿ, ಈ ಕಾಲ ಘಟ್ಟದ ಸಾಮಾಜಿಕ ರೀತಿ, ನೀತಿಗಳನ್ನೂ ನೋಡಿ, ಅನುಭವಿಸಿ, ಯಕ್ಷಗಾನ ಪ್ರಸಂಗ ರಚಿಸುವ ರಘುರಾಮ ಶೆಟ್ಟರ ಕೃತಿಗಳು ಶ್ರಾವ್ಯ-ದೃಶ್ಯಗಳಿಗೆ ಹೊಂದಿಕೆಯಾಗುವ ಕೃತಿಗಳು. ಪುರಾಣ ಪ್ರಪಂಚದ ಪಾತ್ರಗಳನ್ನು ಒಳಹೊಕ್ಕು ಅಲ್ಲಿರುವ, ತುಮುಲಗಳನ್ನು ಘರ್ಷಣೆಗಳನ್ನು ದುಃಖ, ದುಮ್ಮಾನಗಳನ್ನು ಸೆರೆ ಹಿಡಿದು ಕೃತಿಗಳಲ್ಲಿ ವ್ಯಕ್ತಗೊಳಿಸುವ ಪ್ರಸಂಗ ರಚನಾ ವಿಧಾನ ಅನುಕರಣೀಯ. ಅಧ್ಯಾಪಕರಾಗಿ ಸಾವಿರಾರು ಮಕ್ಕಳಿಗೆ ಉಪದೇಶ ನೀಡಿ, ತಿದ್ದಿ, ತೀಡಿ ಋಜುಮಾರ್ಗದಲ್ಲಿ ನಡೆವಂತೆ ಮಾಡಿದವರು, ಎಳೆಯರಲ್ಲಿರುವ ಪ್ರತಿಭೆಯನ್ನು ಗುರುತಿಸಿ ಸಾಮಾಜಿಕ ನೆಲೆಯಲ್ಲಿ ಹೇಗಿರಬೇಕೆಂದು ತಿಳಿಸಿಕೊಟ್ಟವರು. ಅರ್ಥಧಾರಿಯಾಗಿ, ಪಾತ್ರಧಾರಿಯಾಗಿ, ಕವಿಯಾಗಿ, ಯಕ್ಷಕಲಾ ಸ್ನೇಹಿಯಾಗಿ ದೀರ್ಘಕಾಲ ಕಳೆದವರು ಜೀವನದಲ್ಲಿ ಸಾರ್ಥಕತೆಯನ್ನು ಕಂಡವರು.

ಪ್ರಕೃತಿ ದೇವಿ ತರತರದ ಬಣ್ಣದ, ಬೆಡಗಿನ ಚಿಟ್ಟೆಗಳನ್ನು ಹುಟ್ಟಿಸಿ ಹಾರ ಬಿಟ್ಟಂತೆ ಪ್ರಸಂಗ ರಚಿತರು ಹಲವು ತೆರದ ನಾಟ್ಯ ರೂಪಗಳನ್ನು ನಿರ್ಮಾಣ ಮಾಡಿ ಜನತೆಯ ಮುಂದಿಟ್ಟಿದ್ದಾರೆ. ಆದರೆ ಅವುಗಳ ಗುಣವೇನು? ಕಲಾ ದೃಷ್ಠಿಯಿಂದ ಅಳೆದರೆ ಅವುಗಳ ತೂಕವೇನು ? ಪತಂಗಗಳಂತೆ ಕ್ಷಣಿಕ ಸೌಂದರ್ಯದ ಮಾಯೆ ಬೀರಿ ಅವು ಮಾಯವಾಗಬಹುದೇ ? ಈ ಪ್ರಶ್ನೆ ಕಲಾ ರಸಿಕ ಧರ್ಮಕ್ಕೆ ಉಚಿತವಾದುದು. ಪ್ರತಿ ಬಾರಿಯೂ ನಿಮ್ಮದೇನು ಹೊಸತು? ಈ ವರ್ಷದ ಪ್ರಯೋಗವೇನು? ಕೇಳುವ ಯಕ್ಷಗಾನ ರಸಿಕ, ಅಭಿಮಾನಿ ವರ್ಗ ಇದೆ.

ರಸಕ್ಕಿಂತ ಕಸ ಹೆಚ್ಚಾಗಿರಬಹುದು. ಕಲಾ ಪೂರ್ಣತೆಗಿಂತ ಅಭಿವ್ಯಕ್ತಿಯ ಆತುರ, ಉತ್ಸಾಹ ಹೆಚ್ಚಿರಬಹುದು. ಆದರೆ ಇಂತಹ ಕಾಲದಲ್ಲಿಯೂ ರಘುರಾಮ ಶೆಟ್ರಂತಹ ಉನ್ನತ ಪ್ರತಿಭಾಶಾಲಿಗಳಾದ ಯಕ್ಷ ಕವಿಗಳಿದ್ದಾರೆ ಎಂಬುದನ್ನು ಮರೆಯಕೂಡದು. ಉತ್ತಮವೆಂದು ಗುರುತಿಸಲ್ಪಟ್ಟ ಅನೇಕ ಕೃತಿಗಳು ಕಂಡು ಬರುತ್ತವೆ. ಕಲಾವಿದ ಪ್ರಸಂಗ ರಚನಾ ವಿಧಾನ, ಕವಿಯ ಆಶಯ, ಜನರ ಮೇಲಾಗುವ ಪರಿಣಾಮ ಪ್ರತಿ ಪಾತ್ರಗಳ ಸ್ವರೂಪ ಇತ್ಯಾದಿಗಳನ್ನು ತಿಳಿದು ಕೊಂಡಿರಲೇಬೇಕು. ಆಗ ಮಾತ್ರವೇ ಪ್ರಸಂಗ ಯಶಸ್ವಿಯಾಗುತ್ತದೆ. ಈಗಾಗಲೇ ಹಲವು ಪ್ರಸಂಗ ರಚನೆ ಮಾಡಿ ಸಾರಸ್ವತ ಲೋಕಕ್ಕೆ ನೀಡಿದ, ಕಂದಾವರ ರಘುರಾಮ ಶೆಟ್ಟರು ನೂರುಕಾಲ ಬಾಳಲಿ. ಇನ್ನಷ್ಟು ಕೃತಿಗಳು ಹೊರಬರಲಿ. ಅವರ ಪ್ರಸಂಗಗಳಲ್ಲಿ ಅರ್ಥ ಹೇಳುವ, ಪಾತ್ರಧರಿಸುವ ಅವಕಾಶ ಸಿಗಲಿ ಎಂದು ಆಶಿಸುತ್ತೇನೆ.

ಮಾನಸ ಗುರುವರ – ಕಂದಾವರ

ಪ್ರಸಾದ್ ಕುಮಾರ್, ಮೊಗೆಬೆಟ್ಟು
ಪ್ರಸಂಗಕರ್ತೃಗಳು

ಅಲೌಕಿಕ ಭವ್ಯತೆಯ ಪ್ರತಿಮಾಸೃಷ್ಟಿಯೆನಿಸಿದ ಯಕ್ಷಗಾನ ರಂಗಭೂಮಿಯ ಸಾರಸ್ವತಲೋಕವನ್ನು ಬೆಳಗಿ ಮೇರು ಕವಿಗಳ ಪಂಕ್ತಿಯಲ್ಲಿ ವಿರಾಜಮಾನರಾದ ಶ್ರೇಷ್ಠ ಪ್ರಸಂಗಕರ್ತೃಗಳು ನಮ್ಮ ಕಂದಾವರದ ಮಾನ್ಯ ರಘುರಾಮ ಶೆಟ್ಟರು.

ಉತ್ತಮ ಶಿಕ್ಷಕರಾಗಿ, ವಾಗ್ಮಿಯಾಗಿ, ಲೇಖಕರಾಗಿ, ನಾಟಕಕಾರರಾಗಿ, ಅರ್ಥಧಾರಿಯಾಗಿ ವೇಷಧಾರಿಯಾಗಿ ವರ್ಣರಂಜಿತ ಕಲಾವ್ಯಕ್ತಿತ್ವದ ಪ್ರತಿಭಾ ಪ್ರಭಾವಳಿಯಲ್ಲಿ ಸಿದ್ಧಿಯ ಶಿಖರವೇರಿದ ಅವರು ನನ್ನ ಮಾನಸ ಗುರು.

ಬಾಲ್ಯದಿಂದಲೇ ನನಗೆ ಅಂಟಿಕೊಂಡ ಪ್ರಸಂಗ ರಚನೆಯ ಹವ್ಯಾಸಕ್ಕೆ ಅವರ ಪ್ರಸಂಗಗಳೇ ಪ್ರೇರಣೆ. ಕಾವ್ಯ ಸೃಷ್ಟಿಗೆ ಕಂದಾವರರು ನನಗೆ ಯಾವತ್ತೂ ಸ್ಫೂರ್ತಿಯ ಮೂರ್ತಿ. ಈವರೆಗಿನ ನನ್ನ ವಿಂಶತಿ ಕಥಾನಕಗಳ ಸರಮಾಲೆಗೂ ಈ ಗುರುವರ್ಯರ ಯಕ್ಷ ಕುಸುಮಗಳ ಶೈಲೀಕೃತ ಸೊಗಸಿನ ನರುಗಂಪು ಬಿಡದೆ ತಾಗಿದೆ ಎಂಬುದಕ್ಕೆ ಬಹಳ ಹೆಮ್ಮೆಯೆನಿಸುತ್ತದೆ. ಇಂದಿಗೂ ಪ್ರಸಂಗ ನಾಂದಿಯ ತಾಳ, ವಿತಾಳಗಳ ಸ್ತುತಿ ಗೀತೆಯಲ್ಲಿ ಗಣೇಶ, ಸರಸ್ವತಿ ಮೊದಲಾದ ಅಕ್ಷರ – ವಿದ್ಯಾ ದೇವತೆಗಳನ್ನು ನುತಿಗೈಯ್ಯುವಂತೆ ಮನೋಭೂಮಿಕೆಯಲ್ಲಿ ಗುರು ಕಂದಾವರರನ್ನು ಧ್ಯಾನಿಸಿಯೇ ನಾನು ಪದ್ಯ ರಚನೆಗೆ ಮುಂದುವರಿಯುತ್ತೇನೆ; ಹೀಗೆ ಆದಿಯಿಂದಲೇ ಮನಸ್ಸು, ಕೃತಿಯನ್ನು ಆವರಿಸಿಕೊಳ್ಳುವ ಅವರು ಪ್ರಸಂಗ ಪರಿಸಮಾಪ್ತಿಯವರೆಗೂ ಭಾವ ಕೋಶದಲ್ಲಿ ಲೀನವಾಗಿಯೇ ಇರುತ್ತಾರೆ ಎಂಬುದು ನನ್ನ ಆತ್ಮ ಅನಿಸಿಕೆಯಾಗಿದೆ.

ಶಾಲಾ ದಿನಗಳಲ್ಲಿ ಕಾಳಿಂಗನಾವಡರು, ಧಾರೇಶ್ವರರ ಕಂಠಸಿರಿಯಲ್ಲಿ ಕೇಳಿ ಬರುತ್ತಿದ್ದ ಧ್ವನಿ ಮುದ್ರಿಕೆಯ ಚೆಲುವೆ ಚಿತ್ರಾವತಿ, ಶೂದ್ರ ತಪಸ್ವಿನಿ, ಸತೀ ಸೀಮಂತಿನಿ,

ರತಿರೇಖಾ....... ಮೊದಲಾದ ಪ್ರಸಂಗಗಳ ಪದ್ಯಗಳು ನನ್ನನ್ನು ಹುಚ್ಚುಗಟ್ಟುವಂತೆ ಮಾಡಿದ್ದು ಈಗಲೂ ನೆನಪಿನಂಗಳದಿಂದ ಜಾರಿಲ್ಲ. ಆ ಅರ್ಥಪೂರ್ಣ ಹಾಡುಗಳನ್ನು ಬರೆದ ಕವಿವರೇಣ್ಯನ ಕುರಿತು ಯೋಚಿಸುವ ಪ್ರಾಯವೂ ಅದಾಗಿರಲಿಲ್ಲ. ಕಾಲ ಸರಿದಂತೆ ಇಂತಹ ಸಿರಿಕಂಠವನ್ನು ಶ್ರೀಮಂತಗೊಳಿಸಿದ ಆ ಕಾವ್ಯ ನಾಯಕನ್ಯಾರು? ಎಂಬ ಕುತೂಹಲ ಮನದಲ್ಲಿ ಮೂಡಿದ್ದು ಸುಳ್ಳಲ್ಲ. ವೃತ್ತಿ ಮೇಳಗಳ ಯಕ್ಷಗಾನ ಪ್ರದರ್ಶನಗಳ ಭಿತ್ತಿ ಪತ್ರ, ಅರಿವೆ ಬ್ಯಾನಾರುಗಳಲ್ಲಿ ಕಂದಾವರ ರಘುರಾಮ ಶೆಟ್ಟಿ ವಿರಚಿತ...' ಎಂಬ ಸಾಲುಗಳು ನನ್ನನ್ನು ಹೆಚ್ಚು ಆಪ್ತವಾಗಿಸಿದ ಪರಿ ಮರೆಯುವಂತಿಲ್ಲ. ಅವರಂತೆ ನಾನಾಗಬೇಕೆಂಬ ಹುಚ್ಚು ಕನಸು ಕಂಡ ಪರಮ ಸತ್ಯವನ್ನು ಹೇಳಲೇಬೇಕಲ್ಲ!

ಉಡುಪಿಯಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಅವರು ತನ್ನ ಹತ್ತು ಪ್ರಸಂಗಗಳ ಸಂಕಲಿತ ಕೃತಿ 'ದಶಮಿ' ಯನ್ನು ನನಗೆ ನೀಡಿದ್ದರು. ಆ ಎಲ್ಲಾ ಪ್ರಸಂಗ ಪದ್ಯಗಳನ್ನು ಬಾಯ್ತುಂಬಾ ಓದಿ, ಕಂಠಪೂರ್ತಿ ಹಾಡಿ, ಪುಸ್ತಕದಿಂದ ಮಸ್ತಕಕ್ಕೆ ಇಳಿಸಿಕೊಂಡ ಮೇಲಂತೂ ರಘುರಾಮ ಶೆಟ್ಟರು ಮನಸ್ಸಿನಲ್ಲಿ ಶಾಶ್ವತ ಸ್ಥಾನ ಪಡೆದುಕೊಂಡು ಆರಾಧ್ಯರಾಗಿಯೇ ಬಿಟ್ಟರು.

ಸೂಡದಲ್ಲಿ ಜರುಗಿದ ಯಕ್ಷಗಾನ ಕವಿ ಸಮ್ಮೇಳನ ಹಾಗೂ ಉಡುಪಿ ಎಂ.ಜಿ.ಎಂ. ರವೀಂದ್ರ ಮಂಟಪದಲ್ಲಿ ನಡೆದ ಅಮೃತ ಸೋಮೇಶ್ವರರ ಅಭಿನಂದನಾ ಸಮಾರಂಭದ ಕವಿಗೋಷ್ಠಿಯಲ್ಲಿ ಗುರುಗಳಾದ ಕಂದಾವರರೊಂದಿಗೆ ಸಾಹಿತ್ಯಾತ್ಮಕ ವೇದಿಕೆ ಹಂಚಿಕೊಳ್ಳುವ ಅದೃಷ್ಟವೂ ನನ್ನ ಪಾಲಿಗೆ ಒದಗಿ ಬಂದಿತ್ತು. ಅಂತೆಯೇ ನನ್ನ ಯಕ್ಷಗಾನ ಪ್ರಸಂಗಗಳ ಲೋಕಾರ್ಪಣೆ, ಶತಕ ಸಂಭ್ರಮಗಳಲ್ಲೂ ಅವರು ಅತಿಥಿಯಾಗಿ ಕಾರ್ಯಕ್ರಮಗಳನ್ನು ಚಂದಗಾಣಿಸಿ, ಆಶೀರ್ವದಿಸಿದ ಬಗೆ ನನಗೆ ಸುಯೋಗವಾಗಿಯೇ ಪ್ರಾಪ್ತಿಸಿತು.

ಹೀಗೊಂದು ಪ್ರಸಂಗ: ಹತ್ತಾರು ವರ್ಷಗಳ ಹಿಂದೆ ನನ್ನ ಹೊಸ ಪ್ರಸಂಗ ವೊಂದರ ಪ್ರಯೋಗ. ದಿ. ಅರಾಟೆಯವರು ಅಂದು ವೇಷ ಮಾಡುವವರಿದ್ದರು, ಅವರಿಗೊಂದು ಸಮ್ಮಾನ, ಆ ಕಾರ್ಯಕ್ರಮಕ್ಕೆ ಕಂದಾವರರು ನಮ್ಮ ಕೋರಿಕೆಯಂತೆ ಆಗಮಿಸಿದ್ದರು. ಸಭಾ ಕಾರ್ಯಕ್ರಮದ ಬಳಿಕ ಆರಂಭವಾದ ಪ್ರಸಂಗ ಪ್ರದರ್ಶನವನ್ನು ರಘುರಾಮ ಮಾಸ್ಟರರು ವೀಕ್ಷಿಸುತ್ತಾ ನಿಂತರು. 'ಈ ಹುಡುಗ, ಏನು ಬರೆದಿದ್ದಾನೆ ನೋಡೋಣ...' ಎಂಬಂತೆ ಕುತೂಹಲದಿಂದ ಪದ್ಯಗಳನ್ನು ಕೇಳಿಸಿಕೊಳ್ಳುತ್ತಿದ್ದರು. ಅಂತಹ ವರಕವಿಯ ಸನಿಹದಲ್ಲಿಯೇ ನಾನಿದ್ದೆ. ಭಾಗವತರು ಅದೊಂದು ಪದ್ಯ ಹಾಡಿಯೇ ಬಿಟ್ಟರು; 'ಬೆಳ್ಳಿ ನಡುವಿನ ಬಾಲೆ ಕೇಳೆ....' ಕೂಡಲೇ ಮಾಸ್ಟರರು ಕೇಳಿದರು; ಪ್ರಸಾದ, ಏನಪ್ಪಾ....' ಬೆಳ್ಳಿ ನಡುವಿನ ಬಾಲೆ!? ಯಾಕೆ ಆ ಸಾಹಿತ್ಯ,

ನಾನು ಮೆಲುಧ್ವನಿಯಲ್ಲಿ ಹೇಳಿದೆ-' ಸರ್... ಅದು ಬೆಳ್ಳಿ ನಡುವಿನ ಬಾಲೆಯಲ್ಲ.... 'ಬಳ್ಳಿ' ನಡುವಿನ ಬಾಲೆ ಆಗಬೇಕಿತ್ತು, ಭಾಗವತರ ದೃಷ್ಟಿಯಲ್ಲಿ ಅಕ್ಷರ ವ್ಯತ್ಯಾಸವಾಗಿ ಹಾಡು ಹೀಗಾಗಿದೆ. "ಹ್ಹ...ಹ್ಹ...ಹ್ಹ.. ನಾನು ಯೋಚಿಸಿದೆ, ನೀನು ಹಾಗೆ ತಪ್ಪುವವನಲ್ಲ" ಎಂದರು.

ಕೋಟದ ಶ್ರೀ 'ಅಮೃತೇಶ್ವರಿ ಮಹಾತ್ಮೆ' ಯಕ್ಷಗಾನ ಪ್ರಸಂಗವನ್ನು ನಾನು ಬರೆಯಬೇಕೆಂದು, ಮೊದಲಿದ್ದ ಕ್ಷೇತ್ರ ಮಹಾತ್ಮೆಯ ಪ್ರಸಂಗದ ಕತೆ, ಪದ್ಯಗಳೆಲ್ಲವನ್ನು ಬದಲಾಯಿಸಿ ಹೊಸತಾಗಿ ರಚಿಸಬೇಕೆಂದು ದೇವಳದ ಆಡಳಿತ ಮಂಡಳಿ ಕೇಳಿಕೊಂಡಾಗ "ಹಿರಿಯರ್‍ಯಾರೋ ಬರೆದ ಹಳೆಯ ಪ್ರಸಂಗವನ್ನು ಅಷ್ಟೇ ಮೌಲ್ಯಪೂರ್ಣವಾಗಿ ಪುನರ್ ಸೃಷ್ಟಿಸುವುದಕ್ಕೆ ಹಿರಿತನದ ಕವಿಗಳೇ ಆಗಬೇಕು, ಅಂತಹ ಹಿರಿಮೆ ಉಳ್ಳವರು ನನ್ನ ಗುರುಗಳಾದ ಕಂದಾವರ ರಘುರಾಮ ಶೆಟ್ಟರು, ಅವರಿಂದಲೇ ನೀವಿದನ್ನು ಬರೆಸುವುದು ಸೂಕ್ತ..." ಎಂದೆ, ಹಾಗೆಯೇ ಆಯಿತು.

ಕಂದಾವರರ ದೂರವಾಣಿ ಕರೆ ಬಂದಿತು. 'ನಾನು ಬರೆಯುವಂತೆ ನೀನೇ ಸೂಚಿಸಿದ್ದಂತಲ್ಲ, ಯಾಕೆ, ನೀನೇ ಬರೆಯಬಹುದಿತ್ತಲ್ಲ. ನಿಮ್ಮಂತಹ, ಯುವಕರು ಬರೆಯುತ್ತಾ ಇರಬೇಕು....' ಎಂದರು. ನಿಜಕ್ಕೂ ಅವರು ಪರರ ಪರಮಾಣು ಗುಣವನ್ನು ಪರ್ವತವೆಂದೇ ಪರಿಭಾವಿಸುವ ಪರಿಶುದ್ಧ ಗುಣದವರು.

ಯಕ್ಷಗಾನ ಸಾಹಿತ್ಯ ಸರಸ್ವತಿಯ ಕೊರಳ ಮುತ್ತಿನ ಹಾರದ ಮಣಿಪದಕವಾಗಿ ಕಂಗೊಳಿಸುವ ಕಂದಾವರ ರಘುರಾಮ ಶೆಟ್ಟರು ಸಾರಸ್ವತ ಶಕ್ತಿಯಾಗಿ, ಧ್ವನಿಯಾಗಿ, ಮೌಲ್ಯವಾಗಿ, ವಿಶ್ವಾಸವಾಗಿ, ವಿರಾಡುಪವಾಗಿ ರೂಪಾಂತರಗೊಂಡವರು. ಗಟ್ಟಿ ಕತೆ, ಶಿಷ್ಟ ಸಾಹಿತ್ಯ ಶೈಲಿಯ ಶ್ರೇಷ್ಠ ಕಾವ್ಯಾಧಿನಾಯಕನಾಗಿ ಶೃಂಗಸಾರ್ಥಕ್ಯವನ್ನು ಪಡೆದು ಕುಂದನಾಡಿನ ಮಣ್ಣಿನಲ್ಲಿ ಸಾಹಿತ್ಯ ಸಿರಿಗಂಧವನ್ನು ರಸಾತ್ಮಕವಾಗಿ ಪಸರಿಸಿದವರು.

ಯಕ್ಷಗಾನ ಎಂಬ ದೃಶ್ಯಕಾವ್ಯದಲ್ಲಿ ಪ್ರಸಂಗ ಕಾವ್ಯಕ್ಕೆ ಮಹತ್ವದ ಸ್ಥಾನವಿದೆ. ಯಕ್ಷಗಾನ ಕಲೆಯೊಂದು 'ಆಟ' ಎಂದು ಕರೆಸಿಕೊಳ್ಳಬೇಕಾದರೆ ಪ್ರಮುಖವಾಗಿ ಬೇಕಾಗಿರುವುದು ಪ್ರಸಂಗ. ಇಂತಹ ಪ್ರಸಂಗ ಸೃಷ್ಟಿಗೆ ಅತೀ ಅಗತ್ಯವಾದ ಮೂಲ ಧಾತುವೆಂದರೆ ಛಂದಸ್ಸು. ಛಂದೋಗುಣ ಕಾವ್ಯ ಶರೀರದ ಜೀವಾಭರಣ, ಸಾಹಿತ್ಯ ಸೌಂದರ್ಯದ ಭಾವಾವರಣ, ಇದು ರಂಗ-ಪ್ರಸಂಗದಲ್ಲಿ ಸಾಂಗತ್ಯ ಹೊಂದುವ ಹಿಮ್ಮೇಳ-ಮುಮ್ಮೇಳದ ನಿಜವಾದ ಪ್ರಾಣ, ಅಂತಹ ಛಂದೋ ಲಕ್ಷಣಗಳನ್ನು ತನ್ನೆಲ್ಲಾ

ಆಖ್ಯಾನಗಳಲ್ಲಿ ಸತ್ವಪೂರ್ಣವಾಗಿ ಕಾಣಿಸಿದ ಯೋಗ್ಯ ಪ್ರಸಂಗಕರ್ತರಿವರು.

ಛಂದೋ ಸಮನ್ವಿತವಾದ ಯಕ್ಷಗಾನ ಪದ್ಯ ಸೃಷ್ಟಿಗೆ ಅಕ್ಕಿಯ ಮೇಲೆ ಅಕ್ಷರ ಬರೆಯುವಂತಹ ತಾದಾತ್ಮ್ಯ ಬೇಕೆಂಬುದು ಅನುಭವಿಸಿದ ಮಾತು. ವಾಣಿಜ್ಯಾತ್ಮಕವಾದ ಯಕ್ಷ ಸುವರ್ಣಯುಗದಲ್ಲಿ ಕಲಾ ವೈಭವಪೂರ್ಣತೆಗೆ ಕಣ್ ಸಾಕ್ಷಿಯಾದ ಕಂದಾವರರ ಕಥಾನಕಗಳು, ಪದ್ಯಗಳು ಯಾವತ್ತೂ ಛಂಧೋಸಂಹಿತೆಯನ್ನು ಮೀರಿ ನಡೆದದ್ದಿಲ್ಲ. ಅವರ ಪ್ರತಿಭಾಗ್ನಿಯಲ್ಲಿ ಪ್ರಕಟಗೊಂಡು ಪುತ್ಥಳಿಯಾಗುವ ಕತೆ, ಪದ್ಯಗಳು ಯಕ್ಷಗಾನ ರಂಗಧರ್ಮಕ್ಕೆ ವಿರುದ್ಧವಾಗಿ ಕಂಡದ್ದಿಲ್ಲ.

ಕಲಾತ್ಮಕತೆಯೆಂಬುದು ಕಂದಾವರರ ಯಕ್ಷಕಾವ್ಯದ ಸ್ಥಾಯೀಗುಣ. ಹೊಸಪ್ರಸಂಗವಾದರೂ ಅದರಲ್ಲಿ ಸಾಂಪ್ರದಾಯಿಕವಾದ ಸಂವಿಧಾನ, ಪೌರಾಣಿಕ ಆವರಣ ಇರಲೇಬೇಕೆಂಬ ಸಾತ್ವಿಕ ತಾತ್ವಿಕತೆ ಅವರದು. ಪ್ರೇಕ್ಷಕರ ಕ್ಷುದ್ರ ಅಭಿರುಚಿಗಳಿಗೆ ಸ್ಪಂದಿಸದೆ, ನವೀನವಾದಿಗಳ ಆಶಯಕ್ಕೆ ಮಣಿಯದೆ ಪಾರಂಪರಿಕ ರಂಗಭೂಮಿಯಲ್ಲಿ ವಿನೂತನವನ್ನು ಸನಾತನವಾಗಿಯೇ ಕಾಣಿಸಬೇಂಬ ಅವರ ನಡೆ, ನಿಲುವು ಕೃತಿಗಳಲ್ಲಿ ನಿಚ್ಚಳವಾಗಿ ಪಡಿಮೂಡಿವೆ.

ಕತೆಯೊಂದನ್ನು ರಸಾತ್ಮಕ ಕಥಾನಕವಾಗಿಸುವ ಕಲಾ ಕೌಶಲ ಅವರಿಗೆ ಲೀಲಾಜಾಲ. ವಸ್ತು ವೈಚಿತ್ರ್ಯ, ಪಾತ್ರ ವೈವಿಧ್ಯ, ಭಾವ ಸಂಪತ್ತು, ರಸಪ್ರವಾಹ, ಜೀವನ ವಿಮರ್ಶೆ, ನೈತಿಕ ಮೌಲ್ಯ .... ಮೊದಲಾದ ಗುಣಾಂಶಗಳು ರಘುಮಾಸ್ಟರರ ಎಲ್ಲಾ ಪ್ರಂಸಗಗಳಲ್ಲಿ ಹಾಸು ಹೊಕ್ಕಾಗಿವೆ. ಹಿಮ್ಮೇಳ-ಮುಮ್ಮೇಳದ ಕಸುವಿನ ಕಸುಬಿಗೆ ಅಸು ನೀಡುವ ಪದ್ಯಗಳು ಕಸವಿರದ ರಸಗವಳವೇ ಸರಿ.

ಕಂದಾವರರು ಕಲೆಗಾಗಿ ಕಥಾನಕ ಬರೆಯುವವರೇ ಹೊರತು ಕಲಾವಿದರಿಗಾಗಿ ಅಲ್ಲ. ತಾನು ಪ್ರಸಂಗ ನೀಡುವ ಮೇಳಗಳ ಆ ತಿರುಗಾಟದ ಕಲಾವಿದರನ್ನು ಅನುಲಕ್ಷಿಸಿ ಪಾತ್ರವನ್ನು ಸೃಷ್ಟಿಸುವವರಲ್ಲ. ಪಾತ್ರಧಾರಿಗಳನ್ನು ಗಮನೀಕರಿಸಿ ಪ್ರಸಂಗವನ್ನು ನಿರ್ಮಿಸಿದರೆ ಆ ತಿರುಗಾಟ, ಆ ಕಲಾವಿದರ ಒಕ್ಕೂಟಕ್ಕೆ ಸೂಕ್ತವಾದೀತು, ಆದರೆ ಅದೇ ಪ್ರಸಂಗವನ್ನು ಬೇರೆ ಮೇಳದವರು ಪ್ರದರ್ಶಿಸುವ ಸಂದರ್ಭ ಒದಗಿದಾಗ ಕೃತಿ ಕುಸುಮ ಬಾಡಿ ಹೋಗುತ್ತದೆ, ಪರಿಣಾಮ ನೀರಸವಾಗುತ್ತದೆ ಎಂಬ ಪ್ರಜ್ಞಾವಂತಿಕೆ ಅವರಿಗಿರುವುದರಿಂದಲೇ ಅಂತಹ 'ಹೊಂದಾಣಿಕೆ' ಗೆ ಕಂದಾವರರು ಮುಂದಾಗಿಲ್ಲ. ಹೀಗಾಗಿ ಅವರ ಪ್ರಸಂಗಗಳಿಗೆ ಈಗಿನ ವೃತ್ತಿ ಮೇಳಗಳ ಕೆಲವು ತಿರುಗಾಟದ

ಪ್ರಸಂಗಗಳಿಗಿರುವಂತೆ ಒಂದೇ ವರ್ಷದ ಆಯಸ್ಸಲ್ಲ!

ರಘುರಾಮ ಶೆಟ್ಟರು ಬರೆದ ಚೆಲುವೆ ಚಿತ್ರಾವತಿ, ಶೂದ್ರ ತಪಸ್ವಿನಿ, ಸತೀ ಸೀಮಂತಿನಿ, ವಧು ಮಾಧವಿ, ವಸುವರಾಂಗಿ, ನಾಗನಂದನೆ .... ಮೊದಲಾದ ಮಹೋನ್ನತ ಪ್ರಸಂಗಗಳು ಎಂದೋ ರಚಿತವಾಗಿದ್ದರೂ ಇಂದಿಗೂ ಅಮರ ಕೃತಿಗಳಾಗಿಯೇ ಜನಜನಿತವಾಗಿವೆ. ಮೇಳಗಳಲ್ಲಿ, ಹವ್ಯಾಸೀ ಸಂಘಗಳಲ್ಲಿ ಸಹಸ್ರ-ಸಹಸ್ರ ಸಂಖ್ಯೆಗಳಲ್ಲಿ ಪ್ರದರ್ಶನ ಕಂಡಿವೆ. ನವ್ಯ ಪ್ರಸಂಗ ಪ್ರಯೋಗಗಳಲ್ಲಿ ದಾಖಲೆ ನಿರ್ಮಿಸಿವೆ. ಎಲ್ಲಾ ಮೇಳಗಳಿಗೂ, ಎಲ್ಲಾ ಕಲಾವಿದರಿಗೂ, ಎಲ್ಲಾ ವರ್ಗದ ಪ್ರೇಕ್ಷಕರಿಗೂ, ಎಲ್ಲಾ ಕಾಲಮಾನಕ್ಕೂ ಆ ಕೃತಿಗಳು ಸೂಕ್ತ ಹೊಂದಿಕೆಯಾಗುವುದರಿಂದ ಚಿರಂತನವಾಗಿ ಉಳಿದು ಬಾಳಿಕೆ ಹೊಂದಿವೆ. ಇಂತಹ ಪ್ರಸಂಗಗಳನ್ನು ಆಯೋಜಿಸುವ ಸಂಘಟಕರಿಗೆ ಯಾವತ್ತೂ ನಷ್ಟವಿಲ್ಲ. ಗಲ್ಲಾ ಪೆಟ್ಟಿಗೆಯ ಸೂತ್ರಕ್ಕೆ ಇವುಗಳ ಪಾತ್ರ ಅತ್ಯಂತ ಹಿರಿದಾಗಿ ಕಂಡಿದೆ. ಅಂತಾದರೆ ಕಂದಾವರರ ಕಾವ್ಯ ಶ್ರೀಮಂತಿಕೆ, ಪ್ರಸಂಗಗಳ ಧೀಮಂತಿಕೆ ಎಷ್ಟು, ಎತ್ತರ ಎಂಬುದನ್ನು ಊಹಿಸಬಹುದಾಗಿದೆ.

ಆಖ್ಯಾನಗಳಲ್ಲಿ ಅರ್ಥಪೂರ್ಣ ಪದ್ಯ ಸಾಹಿತ್ಯವಿದ್ದಾಗ ಗಾಯಕರ ರಸಗಾಯನ ಶ್ಲಾಘ್ಯ, ಪ್ರೇಕ್ಷಕರಿಗೂ ಶ್ರವಣ ಸೌಭಾಗ್ಯ. ಹಾಗೆಯೇ ನಟನ ನಟನಾಭಿವ್ಯಕ್ತಿಗೆ ಸೂಕ್ತವಾದ ಸೊಲ್ಲುಗಳು, ರಂಗಮಂಚದಲ್ಲಿ ಅಂತರ್ಗತ ಪ್ರತಿಭೆಯನ್ನು ಅನಾವರಣಗೊಳಿಸುವುದಕ್ಕೆ ಅವಕಾಶ ನೀಡುವ ಪಾತ್ರಗಳು ಪಾತ್ರಧಾರಿಯನ್ನು ಸಿದ್ಧಿಯ ಸೀಮೆಗೆ ಒಯ್ದು ಬಿಡಬಲ್ಲವು ಎಂಬುದಕ್ಕೆ ರಘು ಮಾಸ್ಟರರ ಕಥಾನಕಗಳು ಹಾಗೂ ಅವುಗಳಲ್ಲಿ ಹೆಸರಾಂತ ಕಲಾವಿದರ ಪಡೆಯೂ ಸಾಕ್ಷಿಯಾಗುತ್ತದೆ.

'ವಿದ್ಯೆಗೆ ವಿನಯವೇ ಭೂಷಣ' ಎಂಬುದನ್ನು ಬದುಕಿನುದ್ದಕ್ಕೂ ಕಾಣಿಸಿದ ಸಹೃದಯಿ ಕಂದಾವರ ರಘುರಾಮ ಶೆಟ್ಟರು ಮೇರು ಸದೃಶ ಪ್ರತಿಭಾ ಖನಿಯಾಗಿದ್ದರು' ತನಗಿಂತ ಕಿರಿಯರಿನ್ನಿಲ್ಲ' ಎಂಬ ಬಸವವಾಣಿಗೆ ಅವರು ಸದಾಬದ್ಧರು.' ತುಂಬಿದ ಕೊಡ ತುಳುಕುವುದಿಲ್ಲ' ಎಂಬ ಮಾತಿಗೆ ಈಗಲೂ ಕನ್ನಡಿಯಾಗುವವರು. ನಾಮಧೇಯದಂತೆಯೇ ಅವರ ಗುಣ, ಸ್ವಭಾವ ಎಲ್ಲವೂ ಆದರ್ಶಪೂರ್ಣ. ಸಮಗ್ರ ಯಕ್ಷಗಾನ ಕಲಾಭಿಮಾನಿಗಳ ಅಭಿಮಾನದ ಮೂರ್ತರೂಪವಾಗಿ ಬೆಳಗಿದ ನಿರಾಡಂಬರ ವ್ಯಕ್ತಿತ್ವದ, ನಿರಹಮಿಕೆಯ, ಶಿಸ್ತು, ಸೌಜನ್ಯದ ರಘುರಾಮ ಶೆಟ್ಟರ ಯಕ್ಷಸಾರಸ್ವತ ಕೈಂಕರ್ಯ ಅನುಕರಣೀಯ, ಅನುಸರಣೀಯ, ವರಣೀಯ, ಸ್ಮರಣೀಯ, ಗಣನೀಯ, ಮನನೀಯ, ಪ್ರಶಂಸನೀಯ. ದಿನಕರನಿಗೆ ದೀಪಾರತಿ ಬೆಳಗುವಂತೆ

ಗುರುದೇವನ ಪಾದಗಳಿಗೆ ಕಿರಿಯನ ಕಿರಿದಾದ ಅಕ್ಷರ ಮಾಲಿಕೆಯಿದು. ಕಂದಾವರರ ಯಕ್ಷಕಾವ್ಯಸರಸ್ವತಿ ಅನವರತವೂ ನವೋಲ್ಲಾಸದ ನಾಟ್ಯವಾಡುತ್ತಿರಲಿ. ನೂರ್ಗಾಲದಾಚೆಗೂ ಅವರು ನಮ್ಮೊಂದಿಗಿದ್ದು ಹರಸುವಂತಾಗಲಿ. ಕಲಾಮಾತೆಯ ದಿವ್ಯಾನುಗ್ರಹವಿರಲಿ.

ಸಾಹಿತ್ಯ ಪರಿಚಾರಕರು

ಉಪ್ಪುಂದ ಚಂದ್ರಶೇಖರ ಹೊಳ್ಳ
ಮಾಜಿ ಅಧ್ಯಕ್ಷರು,
ಕನ್ನಡ ಸಾಹಿತ್ಯ ಪರಿಷತ್ತು, ಉಡುಪಿ ಜಿಲ್ಲೆ

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕುಂದಾಪುರ ತಾಲೂಕು ಅಧ್ಯಕ್ಷನಾಗಿ 1997 ರಿಂದ 2004 ರ ವರೆಗೆ 2 ಅವಧಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾಗ ಕುಂದಾಪುರ ಪರಿಸರದ ಎಲೆ ಮರೆಯ ಕಾಯಿಯಂತೆ ಸಾತ್ವಿಕ ಬದುಕನ್ನು ಬದುಕುತ್ತಿರುವ ಅನೇಕರ ಪರಿಚಯವಾಯ್ತು. ಅಂಥವರಲ್ಲಿ ಹೆಸರು ಕೇಳಿ ನಾನು ಗುರುತು ಹಾಕಿಕೊಂಡಿದ್ದವರಲ್ಲಿ ಕಂದಾವರ ರಘುರಾಮ ಶೆಟ್ಟರು ಒಬ್ಬರು.

2004 ರಲ್ಲಿ ನಾನು ಉಡುಪಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಘಟಕದ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಗೊಂಡಾಗ ತಾಲೂಕು ಅಧ್ಯಕ್ಷರನ್ನಾಗಿ ಮೂರು ಜನರನ್ನು ನೇಮಿಸುವ ಅವಕಾಶವಿತ್ತು.

ಹಲವು ಯಕ್ಷಗಾನ ಕೃತಿ ರಚನೆ ಮಾಡಿ ಸಾಹಿತ್ಯ ಹಾಗೂ ಯಕ್ಷಗಾನ ಕಲಾಕ್ಷೇತ್ರದಲ್ಲಿ ಎಲ್ಲರಿಂದ ಅದರಿಸ್ಪಡುತ್ತಿದ್ದ, ನಿವೃತ್ತ ಶಿಕ್ಷಕರಾಗಿದ್ದ ಕಂದಾವರ ರಘುರಾಮ ಶೆಟ್ಟರನ್ನು ಕುಂದಾಪುರ ತಾಲೂಕು ಅಧ್ಯಕ್ಷರನ್ನಾಗಿ ನೇಮಿಸಲು ಯೋಚಿಸಿ, ಗೆಳೆಯ ವಿಶ್ವೇಶ್ವರ ಅಡಿಗರ ಮೂಲಕ ಕಂದಾವರದವರನ್ನು ಸಂಪರ್ಕಿಸಿ ಅವರ ಸಮ್ಮತಿ ಪಡೆದು ತಾಲೂಕು ಸಮಿತಿಯ ರಚನೆಗೆ ಚಾಲನೆ ನೀಡಿದೆ.

ಸರಳ ಸಜ್ಜನರಾಗಿ, ನೇರ ನಡೆ-ನುಡಿಯ ಶೆಟ್ಟರು ಆ ಅವಧಿಯಲ್ಲಿ ಸಾಹಿತ್ಯ ಪರಿಷತ್ತಿನ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ಸಹಕರಿಸಿದರು.

ಅವರು ಸದಾ ಹಸನ್ಮುಖಿಗಳು. ಇದ್ದುದರಲ್ಲಿಯೇ ಸಂತೃಪ್ತರು. ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲರು. ಚರ್ಚೆ, ವಾಗ್ವಾದ, ಪ್ರತಿಷ್ಠೆಗಳಿಗೆ ವಿಮುಖರಾಗಿ ಹೊಂದಾಣಿಕೆ, ಸ್ನೇಹ, ಅನುಕಂಪಕ್ಕೆ ಸ್ಪಂದಿಸುವವರು.

ಯಕ್ಷಗಾನ ಕ್ಷೇತ್ರದಲ್ಲಿ ಮತ್ತು ಬಂಟರ ಸಮಾಜದಲ್ಲಿ ಅವರಿಗೆ ಬಹಳಷ್ಟು ಗೌರವ, ಆದರಗಳಿದ್ದವು. ಉಳಿದ ಸಮಾಜದವರ ಜೊತೆಗೂ ಅವರ ಧ್ಯೇಯಪೂರ್ಣ ನಡವಳಿಕೆಯಿಂದ 'ಧರ್ಮರಾಯ'ರು ಎಂಬ ಹೆಸರು ಪಡೆದಿದ್ದರು.

ತಾಲೂಕು ಅಧ್ಯಕ್ಷರಾಗಿ ಸಮಿತಿಯು ನೇತೃತ್ವ ವಹಿಸಿ, ಸಾಕಷ್ಟು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಅವರು ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಾಗಿ ತಮ್ಮ ನಿಷ್ಪಕ್ಷಪಾತೆಯಿಂದಾಗಿ ಮಾನ್ಯರಾಗಿದ್ದರು.

ನನಗಿಂತ 8-9 ವರ್ಷ ಹಿರಿಯರಾಗಿದ್ದರೂ ನನ್ನೊಂದಿಗೆ ಅವರು ಸ್ನೇಹ ಪೂರ್ಣವಾಗಿ ವರ್ತಿಸುತ್ತಿದ್ದರು. ಸಂಘಟನೆಯ ಒಟ್ಟು ಚಟುವಟಿಕೆಗಳಲ್ಲಿ ಅವರು ಎಲ್ಲಾ ಸಮಯದಲ್ಲೂ ಧನಾತ್ಮಕವಾಗಿ ಸಹಕರಿಸುತ್ತಿದ್ದರು. ಕಂದಾವರ ರಘುರಾಮ ಶೆಟ್ಟರು ಶಿಕ್ಷಕರಾಗಿ, ಯಕ್ಷಗಾನ ಪ್ರಸಂಗಕರ್ತೃರಾಗಿ, ಯಕ್ಷಗಾನ ತಾಳಮದ್ದಳೆಯ ಪಾತ್ರಧಾರಿಗಳಾಗಿ ಉತ್ತಮ ಹೆಸರು ಪಡೆದಿದ್ದಾರೆ.

2008 ರ ಬಳಿಕ ನಾನು ಸಾರ್ವಜನಿಕ ಚಟುವಟಿಕೆಗಳಿಗೆ ವಿರಾಮ ಹೇಳಿ ಉಪ್ಪುಂದದಲ್ಲಿಯೇ ಓದು-ಬರಹ, ಅಧ್ಯಯಗಳಲ್ಲಿ ನಿರತನಾಗಿ ಹೆಚ್ಚಿನವರ ಸಂಪರ್ಕದಿಂದ ದೂರವಾದರೂ ಕಂದಾವರರು ತಮ್ಮ ಸ್ನೇಹಾಚಾರವನ್ನು ವ್ಯಕ್ತ ಪಡಿಸುತ್ತ ತಮ್ಮ ಸಜ್ಜನಿಕೆಯಿಂದ ನನಗೆ ಪ್ರಿಯರಾಗಿದ್ದಾರೆ.

ಅವರಿಗೆ ಅರ್ಪಿಸಲಿರುವ ಅಭಿನಂದನಾ ಗ್ರಂಥಕ್ಕೆ ನನ್ನ 'ನಾಲ್ಕು ಸಾಲುಗಳು ಬೇಕು' ಎಂದಾಗ ಅತ್ಯಂತ ಪ್ರೀತಿ, ವಿಶ್ವಾಸ, ಅಭಿಮಾನದಿಂದ ಅವರಿಗೆ ಶುಭಾಶಯ ಕೋರುತ್ತೇನೆ.

ಸುಂದರ ಪದಗಳ ಸರದಾರ
ಸ್ಕಂದಪುರ ರಘುವರ

ಕುಮಾರ ಶಂಕರನಾರಾಯಣ
ಉಪನ್ಯಾಸಕರು, ಕೋಟೇಶ್ವರ

ಸಾಧನೆಗಳಿಂದ ವ್ಯಕ್ತಿಯನ್ನು ಪರಿಚಯಿಸಿಕೊಳ್ಳುವುದೊಂದು, ವ್ಯಕ್ತಿಯಿಂದ ಸಾಧನೆಗಳನ್ನು ತಿಳಿಯುವುದಿನ್ನೊಂದು. ಚೆಲುವೆ ಚಿತ್ರಾವತಿ, ರತಿರೇಖಾ, ಶ್ರೀದೇವಿ ಬನಶಂಕರಿ, ಶೂದ್ರ ತಪಸ್ವಿನಿ, ಶಾಪ ಸಂಯೋಗ ಮುಂತಾದ ಪ್ರಸಂಗಗಳನ್ನು ರಂಗದಲ್ಲಿ ಕಂಡು ಮನದುಂಬಿ, ಪ್ರಸಂಗಕರ್ತೃರನ್ನು ಮನಸಾರೆ ಮೆಚ್ಚಿ ಕೊಂಡಾಡಿಸಿಕೊಂಡ ವ್ಯಕ್ತಿಯ ಸಾಧನೆಯ ಪರಿಚಯ ಬಾಲ್ಯದಿಂದಲೂ ಇತ್ತು. ಆದರೆ ಆ ವ್ಯಕ್ತಿಯನ್ನು ಕಂಡುದು 1993ರ ಒಂದು ದಿನ ಹಕ್ಲಾಡಿಯಲ್ಲಿ. ಸಾಲಿಗ್ರಾಮ ಮೇಳದ ಆಟ. ಕ್ಯಾಂಪ್ ವಹಿಸಿಕೊಂಡವರು ನನ್ನ ಮಿತ್ರರು. ಪ್ರಸಂಗಕೃರ್ತರಿಗೆ ಸ್ಥಳೀಯರು ಹಿರಿಯರು ಎಂಬ ಕಾರಣಕ್ಕೆ ಸನ್ಮಾನ ಕಾರ್ಯವನ್ನಿರಿಸಿಕೊಂಡಿದ್ದರು. ಅನಿರೀಕ್ಷಿತವಾಗಿ ಸಭಾಕಾರ್ಯಕ್ರಮದ ನಿರ್ವಹಣೆಯ ಹೊಣೆ ನನ್ನ ಪಾಲಿಗೆ. ಪ್ರಸಂಗಕೃರ್ತರನ್ನು ಹತ್ತಿರದಿಂದ ಕಾಣುವ, ವೇದಿಕೆಗೆ ಆಹ್ವಾನಿಸುವ ಭಾಗ್ಯ ನನ್ನದಾದಾಗ ಪುಲಕಿತಗಾತ್ರನಾಗಿದ್ದೆ. ತ್ರಿವಿಕ್ರಮ ಸದೃಶ ಸಾಧನೆಗೈದ ವಾಮನಾಕಾರನನ್ನು ಕಂಡು ಚಕಿತಗೊಂಡಿದ್ದೆ. ನನಗವರ ಪರಿಚಯ ಅಂದಾಗಿದ್ದರೂ ಅವರ ನನ್ನ ಒಡನಾಟ ಆರಂಭವಾದದ್ದು ಶಂಕರನಾರಾಯಣದ ದಿ| ಶ್ರೀ ಸರ್ವೋತ್ತಮ ಶೇಟ್‌ರ ಮೂಲಕ. ಅವರೊಂದಿಗೆ ತಾಳಮದ್ದಳೆಗೆ ಹೋಗುವ ಹವ್ಯಾಸವನ್ನು ನಾನು ಹಚ್ಚಿಕೊಂಡ ಬಳಿಕ ಕ್ರಮೇಣ ಕಂದಾವರದವರಿಗೂ ನನ್ನ ಪರಿಚಯವಾಯ್ತು. ಆ ಬಳಿಕ ಹಲವು ಕಡೆಗಳಲ್ಲಿ ಅವರ ಸಂಯೋಜನೆಯ ತಾಳಮದ್ದಳೆಗಳಲ್ಲಿ ನನಗೂ ಅವಕಾಶ ಕಲ್ಪಿಸಿದರು. ನಮ್ಮ ಮನೆಯಲ್ಲಿ ನಾನು ನಡೆಸುವ ಕೂಟಗಳಿಗೂ ಅವರನ್ನು ಆಮಂತ್ರಿಸಿದೆ. ಇಂತಹ ಒಡನಾಟಗಳಿಂದ ಆತ್ಮೀಯತೆ ಬೆಳೆಯಿತು. ಕಿರಿಯನಾದರೂ, ಅನನುಭವಿಯಾದರೂ ಸಹೃದಯತೆಯಿಂದ ನನ್ನನ್ನು ಮನ್ನಿಸಿ ಹತ್ತಾರು ಕಡೆಗಳಲ್ಲಿ ಕೂಟಗಳಲ್ಲಿ

ಕಾಣಿಸುವ ಅವಕಾಶವೀಯುವುದರೊಂದಿಗೆ ಶಿಷ್ಯವಾತ್ಸಲ್ಯದೊಂದಿಗೆ ಅರ್ಥಗಾರಿಕೆಯ ಅದೆಷ್ಟೋ ಸೂಕ್ಷ್ಮಗಳನ್ನು ಒಳಸುಳಿಗಳನ್ನು ಇಂದಿಗೂ ನನಗವರು ಪರಿಚಯಿಸುತ್ತಿದ್ದಾರೆ. ನಾಟಕ ನಿರ್ದೇಶನ, ಅಭಿನಯ, ಯಕ್ಷಗಾನ ವೇಷ, ಅರ್ಥಗಾರಿಕೆ, ಪ್ರಸಂಗ ರಚನೆ, ವಿಮರ್ಶೆ, ತಾಳಮದ್ದಳೆಯ ಸಂಯೋಜನೆ, ಜೋಡಾಟದ ತೀರ್ಪುಗಾರಿಕೆ, ಹೀಗೆ ಬಹುಮುಖ ಪ್ರತಿಭೆ ಕಂದಾವರರದು. ಇವುಗಳಲ್ಲಿ ನನ್ನ ಅಭಿಮತದಂತೆ ಅಗ್ರಗಣ್ಯವಾದುದು ಪ್ರಸಂಗ ರಚನೆ. ಕಾರಣ ಇವರ ಪ್ರಸಂಗಗಳಲ್ಲಿ ಕಂಡುಬರುವ ಪೌರಾಣಿಕ ಆವರಣವನ್ನು ಮೀರದ ಕಥಾಹಂದರ, ಪ್ರಾಸಭರಿತ, ಛಂಧೋಬದ್ಧ, ಕಾವ್ಯಾತ್ಮಕ ಪದ್ಯರಚನೆ.

ವಾಸ್ತವವಾಗಿ ಯಕ್ಷಗಾನ ಪೌರಾಣಿಕ ಕಥಾಚೌಕಟ್ಟಿನ ರಮ್ಯ-ಅದ್ಭುತ ಭ್ರಮಾಲೋಕದ ರೂಪಕಗಳಾಟ. ಮನರಂಜಕ, ನೀತಿಭೋಧಕ ಅಂಶಗಳಿಂದ ಪರಿಪುಷ್ಟವಾದ ನವರಸಭರಿತ ಸನ್ನಿವೇಶಗಳನ್ನೊಳಗೊಂಡ ಕಥಾರಚನೆ ಪ್ರಸಂಗ ಕರ್ತೃನಿಗೊಂದು ಪಂಥಾಹ್ವಾನ. ಕಥೆ ಸಿದ್ಧಗೊಂಡ ಬಳಿಕ ಸಮಯ, ಸನ್ನಿವೇಶಗಳಿಗನುಗುಣವಾದ ನಿರ್ದಿಷ್ಟ ರಾಗಬಳಕೆಯೊಂದಿಗೆ ವೈವಿಧ್ಯಮಯ ಛಂದಸ್ಸನ್ನೊಳಗೊಂಡ ಪದ್ಯರಚನೆಗೆ ಅಪಾರ ಪ್ರತಿಭೆ, ಪಾಂಡಿತ್ಯ, ಚಿಂತನಶೀಲತೆ, ಸೃಜನಶೀಲತೆಗಳು ಅವಶ್ಯಕ. ಈ ಎಲ್ಲವುಗಳಲ್ಲಿ ಕಂದಾವರದವರದು ಪೂರ್ಣ ಅರ್ಹತೆ. ಶ್ರೀ ದೇವಿ ಬನಶಂಕರಿಯ ಕರಡಿಯ ಶಿಶುಪಾಲನೆ, ಶಾಪ ಸಂಯೋಗದ ನಾಗವರ್ಮನ ವ್ಯಗ್ರತೆ, ಚೆಲುವೆ ಚಿತ್ರಾವತಿಯ ಕಾಳಿಂಗನಲ್ಲಿ ಗೋವಿನ ಹಾಡಿನ ಬಳಕೆ, ಶೂದ್ರ ತಪಸ್ವಿನಿಯ ಚಂದ್ರಮತಿಯ ಚಾಣಕ್ಯತೆ, ರತಿರೇಖದ ಶ್ರೇಷ್ಠಿಯ ಜಿಪುಣತೆ, ಇವು ಒಂದೊಂದೂ ಅವರ ಕವಿತ್ವಕ್ಕೆ, ಸೃಜನಶೀಲತೆಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಮೇಲೆ ಉಲ್ಲೇಖಿಸಲ್ಪಟ್ಟ ಯಾವ ಆಯಾಮಗಳಿಂದ ಅವಲೋಕಿಸಿದರೂ ಲೇಶದೋಶವಿಲ್ಲದ ಪ್ರಸಂಗ ರಚನೆ ಕಂದಾವರದವರದು. ಈ ಪ್ರಾಂತ್ಯದ "ಸಮಕಾಲೀನ ಸರ್ವಶ್ರೇಷ್ಠ ಯಕ್ಷಕವಿ ಕಂದಾವರ ರಘುರಾಮ ಶೆಟ್ಟಿಯವರು". ಎಂಬಲ್ಲಿ ನೈಜ ಯಕ್ಷಪ್ರೇಮಿಗಳಲ್ಲಿ ಭಿನ್ನಾಭಿಪ್ರಾಯ ಶಕ್ಯವಿಲ್ಲ. ಸಾಧುವೂ ಅಲ್ಲ. ಯಾಕೆಂದರೆ ಯಾವುದೋ ಎರವಲು ಕಥೆಗೆ ತಮ್ಮ ನಾಲ್ಕು ವಾಕ್ಯಗಳನ್ನು ಸೇರಿಸಿ ಕಥೆ ರಚಿಸಿ, ಇನ್ಯಾರಿಂದಲೋ ಪದ್ಯ ಬರೆಯಿಸಿ, ಪ್ರಸಂಗ ಬಿಡುಗಡೆ ಮಾಡಿಸಿ ಅಂದೇ ತಮಗೊಂದು ಸನ್ಮಾನ ಮಾಡಿಸಿಕೊಂಡು ಬೀಗುವ ಕಥಾಕಥಿತ ಪ್ರಸಂಗಕರ್ತೃಗಳಿಂದಾಗಿ ಪ್ರಸಂಗ ರಚನೆಯೆಂಬುದು ಅಣಕು ದಾಟವಾಗುತ್ತಿರುವ ಈ ಕಾಲದಲ್ಲಿ ಕಂದಾವರದವರ

ಮೌಲಿಕ ಪ್ರಸಂಗಗಳು ನೇಪಥ್ಯಕ್ಕೆ ಸರಿಯುತ್ತಿರುವುದು ಕಾಲನ ಕುಲುಮೆಯ ವಿಪರ್ಯಾಸವೇ ಸರಿ. ದುರದೃಷ್ಟವಶಾತ್ ಸನ್ಮಾನ-ಪುರಸ್ಕಾರಗಳು ಅಂಥವರ ವಶವಾಗುತ್ತಿರುವುದು, ಪರಿಶ್ರಮ ಸಿದ್ಧ, ಪಾಂಡಿತ್ಯಭರಿತ ಪ್ರತಿಭೆಗೆ ಸಮಾಜವೆಸಗಿದ ಅವಮಾನವೆನಿಸದೇ? ಆದರೆ ಪ್ರಶಸ್ತಿಗಳನ್ನರಸಿ ಹೋದವರಲ್ಲ ಕಂದಾವರದವರು. ಆದರೂ ನೂರಾರು ಪುರಸ್ಕಾರಗಳು ಅವರನ್ನರಸಿ ಬಂದಿವೆ ಎನ್ನುವುದು ಸಮಾಧಾನದ ಸಂಗತಿ, ಅವರ ಪ್ರತಿಭೆಗೆ ಸಂದ ಗೌರವ.

ಶೂದ್ರ ತಪಸ್ವಿನಿ, ಶಾಪಸಂಯೋಗದಂತಹ ಉತ್ಕೃಷ್ಟ ಪ್ರಸಂಗಗಳು ಇನ್ನೂ ಹತ್ತಾರು ಅವರ ಅನುಭವಜನ್ಯ ಪ್ರತಿಭೆಯಿಂದ ಪ್ರಕಟಗೊಳ್ಳುವಂತಾಗಲಿ. ಎಂಭತ್ತರ ಈ ರಸಋಷಿ ಶತಾಯುಷಿಯಾಗಲಿ. ನಮ್ಮಂತಹ ಕಿರಿಯರಿಗೆ ನೂರ್ಕಾಲ ಮಾರ್ಗದರ್ಶನ ನೀಡುವಂತಾಗಲಿ, ಯಕ್ಷಕಲಾಮಾತೆ ಇಂತಹ ಹಿರಿಯರಿಂದ ರಚಿಸಲ್ಪಡುವ ಮುಕುಟಮಣಿಗಳೇ ಮುಂತಾದ ಆಭರಣಗಳಿಂದಲಂಕೃತಳಾಗಲಿ ಎಂಬ ಹಾರೈಕೆಯೊಂದಿಗೆ ಶ್ರೀಯುತರು ನನ್ನ ಮೇಲಿರಿಸಿದ ವಿಶ್ವಾಸಕ್ಕೆ ಸದಾ ಆಭಾರಿ ಎನ್ನುತ್ತಾ ಅವರೊಡನಾಟದ ರಸನಿಮಿಷಗಳ ಸವಿಸ್ಮರಣೆಗಳೊಂದಿಗೆ ಈ ಅಕ್ಷರ ನೆನಪುಗಳ ಸಮುಚ್ಚಯಕ್ಕೆ ಪೂರ್ಣವಿರಾಮವಿಡುವೆ.

ಯಕ್ಷ ಸರೋವರದ ಕೆಂದಾವರೆ

ಡಾ। ಬೆಳ್ಳಿಪ್ಪಾಡಿ ಸತೀಶ ರೈ
ಮಂಜುನಾಥ ಕ್ಲಿನಿಕ್, ಮೈಸೂರು

ಯಕ್ಷಗಾನ ವಲಯದಲ್ಲಿ ಕಂದಾವರದವರು ಎಂಬ ಹೆಸರಿನಿಂದಲೇ ಚಿರಪರಿಚಿತವಾಗಿರುವ ಶ್ರೀ ರಘುರಾಮ ಶೆಟ್ರರನ್ನು ಅರಿಯದವರು ನಮ್ಮ ರಾಜ್ಯದಲ್ಲಿ ಯಾರೂ ಇರಲಾರರು. ವೈದ್ಯವೃತ್ತಿಯಲ್ಲಿ ಕಳೆದ 50 ವರ್ಷಗಳಿಂದ ಮೈಸೂರಿನಲ್ಲಿ ನೆಲಸಿದ ನಾನು ಅವರನ್ನು ಪ್ರತ್ಯಕ್ಷ ಕಂಡುದಿಲ್ಲಾವಾದರೂ. ಅವರ ಕುರಿತಾಗಿ ಸಾಕಷ್ಟು ವಿಷಯಗಳನ್ನು ನಮ್ಮ ತಂದೆ ಹಾಗೂ ಇನ್ನಿತರ ನನ್ನ ಮಿತ್ರರಿಂದ ಕೇಳಿ ತಿಳಿದಿದ್ದೇನೆ. ಅವರ ಕೆಲವಾರು ಪ್ರಸಂಗಗಳನ್ನು ನೋಡಿ ಆನಂದಿಸಿದ್ದೇನೆ. ಅವರ ಸಾಹಿತ್ಯಪೂರ್ಣವಾದ ಯಕ್ಷಗಾನ ಪದ್ಯಗಳನ್ನು ಕೇಳಿ ಪುಲಕಿತನಾಗಿದ್ದೇನೆ. ಅವರು ಓರ್ವ ಆದರ್ಶ ಅಧ್ಯಾಪಕ ಹಾಗೂ ಪ್ರಸಿದ್ದ ಪ್ರಸಂಗಕರ್ತೃರೆಂದು ತಿಳಿದಿದ್ದೇನೆ. ಯಕ್ಷಗಾನ ಅಭಿಮಾನಿಯಾದ ನಾನು ಅವರ ಕುರಿತಾಗಿ ಪ್ರಕಟಣೆಗೊಳ್ಳುವ ಅಭಿನಂದನಾ ಗ್ರಂಥಕ್ಕೆ ನನ್ನದಾದ ಕಿರು ಲೇಖನವೊಂದನ್ನು ಪೋಣಿಸುವ ಮಹದಾಸೆಯಿಂದ ಈ ಲೇಖನಕ್ಕೆ ಉದ್ಯುಕ್ತನಾಗುತಿದ್ದೇನೆ.

ಶ್ರೀಯುತ ರಘುರಾಮ ಶೆಟ್ಟರು 35 ವರ್ಷಗಳ ಕಾಲ ಅಧ್ಯಾಪಕರಾಗಿ ದುಡಿದವರು. ತಮ್ಮ ಆಕರ್ಷಣೀಯ ಪಾಠಪ್ರವಚನಗಳಿಂದ ವಿದ್ಯಾರ್ಥಿಗಳ ಹಾಗೂ ಪರೀಕ್ಷಾಧಿಕಾರಿಗಳ ಮನಗೆದ್ದವರು. ನೂರಾರು ಶಿಶುಗೀತೆ, ಅಭಿನಯಗೀತೆಗಳನ್ನು ಬರೆದು ಅವುಗಳನ್ನು ವಿದ್ಯಾರ್ಥಿಗಳಿಂದ ಹಾಡಿಸಿ, ಕುಣಿಸಿ ನಲಿದವರು. ಏಳು ಕಿರುನಾಟಕಗಳನ್ನು ಬರೆದು ವಿದ್ಯಾರ್ಥಿಗಳನ್ನು ತರಬೇತುಗೊಳಿಸಿ ಆಡಿಸಿದವರು.ಅವರ ಅಧ್ಯಾಪನದ ಕೌಶಲವನ್ನು ಹಾಗೂ ಮಹತ್ವವನ್ನು ತಿಳಿದ ವಿದ್ಯಾ ಇಲಾಖೆಯವರು ಶಿಕ್ಷಕರ ದಿನಾಚರಣೆಯಂದು ಅವರಿಗೆ 'ಮಾದರಿ ಶಿಕ್ಷಕ' ನೆಂಬ ಪ್ರಶಸ್ತಿಯನ್ನಿತ್ತು ಸನ್ಮಾನಿಸಿ ಗೌರವಿಸಿದರು. ಇದರಿಂದಾಗಿ ತನ್ನ ವೃತ್ತಿ ಧರ್ಮವನ್ನು ಕಾಪಾಡಿಕೊಂಡು ಬಂದಿದ್ದೇನೆಂಬ ಆತ್ಮ ಸಂತೋಷ ಅವರದ್ದಾಗಿದೆ.

ಶ್ರೀಯುತರು ಮಕ್ಕಳ ಆಟಕ್ಕೆ ಭಾಗವತಿಕೆ ಮಾಡುವ ಮೂಲಕ ಯಕ್ಷರಂಗಕ್ಕೆ ಪಾದಾರ್ಪಣೆ ಮಾಡಿದವರು. ತನ್ನ ಹನ್ನೆರಡನೆ ವರ್ಷದಲ್ಲೇ ಭಾಗವತಿಕೆ ಮಾಡಿ ಸಹಪಾಠಿಗಳಿಂದ ಹಾಗೂ ಅಧ್ಯಾಪಕರಿಂದ 'ಬಾಲಭಾಗವತ'ನೆಂಬ ಪ್ರಶಂಸೆಗೆ ಪಾತ್ರರಾದವರು. ವೇಷಧಾರಿಯಾಗಿ, ಅರ್ಥಧಾರಿಯಾಗಿ ಯಕ್ಷರಂಗದಲ್ಲಿ ಕೆಲಸ ಮಾಡಿದ ಶೆಟ್ಟರು 1978 ರಿಂದ ಪ್ರಸಂಗಕರ್ತೃರಾಗಿ ಇದುವರೆಗೆ 33 ಪ್ರಸಂಗಗಳನ್ನು ಬರೆದು ಯಕ್ಷಗಾನ ಕ್ಷೇತ್ರಕ್ಕೆ ನೀಡಿದ್ದಾರೆ. ಅವುಗಳನ್ನು ಬಡಗುತಿಟ್ಟಿನ ಎಲ್ಲಾ ಮೇಳದವರು ಇಂದಿಗೂ ಆಡುತ್ತಿರುವುದು ಅವುಗಳ ಶ್ರೇಷ್ಠತೆಯನ್ನು ಸಾರುವಂತಿದೆ.

ಇವರ ಪ್ರಸಂಗಗಳ ಗುಣಮಟ್ಟವನ್ನು ತಮ್ಮ ಮೇಳದ ಕಲಾವಿದರಿಂದ ಕೇಳಿ ತಿಳಿದ ಧರ್ಮಾಧಿಕಾರಿಗಳಾದ ಡಾ. ವೀರೇಂದ್ರ ಹೆಗ್ಗಡೆಯವರು ಇವರ ವಸುವರಾಂಗಿ ಹಾಗೂ ವಧು-ಮಾಧವಿ ಪ್ರಸಂಗಗಳನ್ನು ತಮ್ಮ ಮೇಳಕ್ಕೆ ಆಯ್ಕೆಮಾಡಿಕೊಂಡು ಕ್ಷೇತ್ರದಲ್ಲೇ ಅದರ ಪ್ರಥಮ ಪ್ರದರ್ಶನವನ್ನು ಏರ್ಪಡಿಸಿ, ತಾವು ಖುದ್ದಾಗಿ ನೋಡಿ ತೃಪ್ತಿಪಟ್ಟರು. ಕಂದಾವರದವರನ್ನು ತಮ್ಮ ಬೀಡಿಗೆ ಕರೆಸಿಕೊಂಡು ಫಲ, ಪುಷ್ಪವನ್ನು ನೀಡಿ, ಸನ್ಮಾನಿಸಿ ಹರಿಸಿದ್ದಾರೆ. ಅಂತೆಯೇ ಹೊಸನಗರದ ರಾಮಚಂದ್ರಾಪುರದ ಮಠಾಧೀಶರಾದ ಶ್ರೀ ರಾಘವೇಂದ್ರ ಸ್ವಾಮೀಜೀಯವರು ಇವರ ಪದ್ಯಗಳ ಶ್ರೇಷ್ಠತೆಯನ್ನು ಕೇಳಿ ತಿಳಿದು ಅವರನ್ನು ತಮ್ಮ ಮಠಕ್ಕೆ ಕರೆಸಿ ಅವರಿಂದ ನಳಚರಿತ್ರೆಯನ್ನು ಹೊಸದಾಗಿ ಬರೆಯಿಸಿ, ಆಡಿಸಿ ಕೊನೆಯವರೆಗೆ ಆಟನೋಡಿ ಆನಂದಿಸಿದರು. ಶ್ರೀಯುತರನ್ನು ಶಾಲು ಹೊದಿಸಿ ಸನ್ಮಾನಿಸಿ ಆಶೀರ್ವದಿಸಿದರು. ಅಂತೆಯೇ ಬೇರೆ ಬೇರೆ ಸಂದರ್ಭಗಳಲ್ಲಿ ಎಡನೀರು ಮಠದ ಸ್ವಾಮಿಜೀಯವರು, ದಾವಣಗೆರೆಯ ವಿರಕ್ತ ಮಠದ ಸ್ವಾಮಿಜೀಯವರು, ಉಡುಪಿಯ ಪರ್ಯಾಯ ಮಠದ ಸ್ವಾಮಿಜೀಯವರು ಇವರನ್ನು ಸನ್ಮಾನಿಸಿ ಹರಸಿದ್ದಾರೆ. ಇವರೆಲ್ಲರ ಆಶೀರ್ವಾದದ ಬಲದಿಂದ ಶ್ರೀಯುತರು ಶತಾಯುಷಿಗಳಾಗಿ ಬಾಳಬೇಕೆಂಬುವುದು ಯಕ್ಷಗಾನ ಕಲಾಭಿಮಾನಿಗಳ ತುಂಬು ಹೃದಯದ ಹಾರೈಕೆಯಾಗಿದೆ.

ಕಂದಾವರ ರಘುರಾಮ ಶೆಟ್ಟರು ಕವಿ ಮುದ್ದಣನ ಪ್ರಸಂಗಗಳಿಂದ ಪ್ರೇರಿತರಾಗಿ ಪ್ರಸಂಗ ರಚನೆಯಲ್ಲಿ ತೊಡಗಿಸಿಕೊಂಡವರು. ಅವನ ಕೃತಿಗಳಂತೆ ಇವರ ಪ್ರಸಂಗಗಳಲ್ಲಿ ಶಬ್ಧಾಲಂಕಾರಗಳು, ಅರ್ಥಾಲಂಕಾರಗಳು, ಸಾಹಿತ್ಯಾಂಶಗಳು ನಿಬಿಡವಾಗಿ ಬಂದಿವೆ. ಇವರ ಪ್ರಸಂಗಗಳ ಮೌಲ್ಯವನ್ನು ಅರಿತ ಖ್ಯಾತ

ಪ್ರಸಂಗಕರ್ತೃರಾದ ಅಭಿನವ ಮುದ್ದಣನೆಂಬ ಖ್ಯಾತಿಗೆ ಭಾಜನರಾದ ಸೀತಾನದಿ ಗಣಪಯ್ಯ ಶೆಟ್ಟಿ ಪ್ರತಿಷ್ಠಾನದವರು ಅವರ ಹೆಸರಿಂದ ಕೊಡಮಾಡುವ ಪ್ರಥಮ 'ಸೀತಾನದಿ' ಪ್ರಶಸ್ತಿಯನ್ನು ಇವರಿಗಿತ್ತು ಸನ್ಮಾನಿಸಿದರು. ಅದು ಸಾಲದೆಂಬಂತೆ ಎರಡು ವರ್ಷಗಳ ಹಿಂದೆ ಸೂಡಾದಲ್ಲಿ ಜರುಗಿದ ಯಕ್ಷಕವಿ ಸಮ್ಮೇಳನದಲ್ಲಿ ಇವರಿಗೆ 'ಕವಿ ಮುದ್ದಣ' ಪ್ರಶಸ್ತಿಯನ್ನಿತ್ತು ಗೌರವಿಸಿದರು. ಈ ಎರಡು ಪ್ರಶಸ್ತಿಗಳು ಅರ್ಹವಾಗಿಯೇ ಇವರಿಗೆ ಸಂದಿವೆ ಎನ್ನುವುದು ನನ್ನ ಪ್ರಾಮಾಣಿಕ ಅನಿಸಿಕೆಯಾಗಿದೆ.

ಇಂತಹ ಓರ್ವ ಶ್ರೇಷ್ಠ ಹಾಗೂ ಹಿರಿಯ ಪ್ರಸಂಗಕರ್ತರನ್ನು ನಮ್ಮಲ್ಲಿಗೆ ಕರೆಸಿಕೊಂಡು ಗೌರವಿಸಬೇಕೆಂಬ ಬಯಕೆ ನಮಗೆ ಬಹುಕಾಲದಿಂದ ಇದ್ದಿತ್ತು. ಕಳೆದ ವರ್ಷ ನಮ್ಮ ಆಸೆ ಈಡೇರುವಂತಾಯಿತು. ನಿಡ್ಲೆ ಗೋವಿಂದ ಭಟ್ಟರ ಮೂಲಕವಾಗಿ ಅವರನ್ನು ಮೈಸೂರಿಗೆ ಕರೆಸಿಕೊಂಡು ನಿಡ್ಲೆ ಮಹಾಗಣಪತಿ ಯಕ್ಷಗಾನ ಮಂಡಳಿಯವರಿಂದ ಅವರ 'ಶ್ರೀದೇವಿ ಬನಶಂಕರಿ' ಪ್ರಸಂಗದ ಪ್ರದರ್ಶನ ಏರ್ಪಡಿಸಿ, ಶ್ರೀಯುತರನ್ನು ಪ್ರೀತ್ಯಾದರಗಳಿಂದ ಸನ್ಮಾನಿಸಿದೆವು. ಈ ಮೂಲಕವಾಗಿ ಅವರನ್ನು ಕಾಣುವ, ಅವರ ಸಾಹಿತ್ಯಪೂರ್ಣವಾದ ಮಾತುಗಳನ್ನು ಕೇಳುವ ಅವಕಾಶ ಮೈಸೂರಿನ ರಸಿಕ ವೃಂದದವರಿಗೆ ದೊರಕುವಂತಾಯಿತು. ನನ್ನ ಕೋರಿಕೆಯಂತೆ ನನ್ನ ಮನೆಯವರೆಗೂ ಬಂದು ನನ್ನ ಆತಿಥ್ಯವನ್ನು ಸ್ವೀಕರಿಸಿ, ನಮ್ಮನ್ನು ಸಂತೃಪ್ತಿಗೊಳಿಸಿದರೂ ನಿಜಾರ್ಥದಲ್ಲಿ ಇವರು ಯಕ್ಷಸರೋವರದ ಕೆಂದಾವರೆಯೇ ಆಗಿದ್ದಾರೆ. ಶ್ರೀಯುತರು ಬಹುಕಾಲ ನಮ್ಮೊಂದಿಗಿದ್ದು ಇನ್ನೂ ಅನೇಕ ಮೌಲ್ಯಾಧಾರಿತ ಪ್ರಸಂಗಗಳು ಅವರಿಂದ ಯಕ್ಷಗಾನ ಕ್ಷೇತ್ರಕ್ಕೆ ಬರುವಂತಾಗಲೆಂಬ ಮಹದಾಶಯದೊಂದಿಗೆ ಈ ಲೇಖನಕ್ಕೆ ಬೊಟ್ಟಿಕ್ಕುತ್ತೇನೆ.

ಕಂದಾವರದ ಅನರ್ಘ್ಯರತ್ನ ರಘುರಾಮ ಶೆಟ್ಟರು

ವಾಸ್ತು ತಜ್ಞ ಬಸವರಾಜ್ ಶೆಟ್ಟಿಗಾರ್
ಕೋಟೇಶ್ವರ

ಬ್ರಹ್ಮಾಂಡದಲ್ಲಿ ಮಧ್ಯೆ ಇರುವಂತದ್ದು ಕರ್ಮಭೂಮಿ. ಇದು ಧರ್ಮ ಅಧರ್ಮಗಳ ಸಂಗ್ರಾಮ ಕ್ಷೇತ್ರ. ಪ್ರತಿಯೋರ್ವನೂ ಧರ್ಮೋದ್ಧಾರಕ್ಕಾಗಿ ಸೈನಿಕರಂತೆ ಹೋರಾಡಿ ಭೂಮಿಯ ರಕ್ಷಣೆ ಮಾಡಬೇಕಾದ್ದು ಆತನ ಕರ್ತವ್ಯ. ಹಾಗೆಯೇ ಸಾಧನಾಶೀಲವಾದ ಕರ್ಮಭೂಮಿಯಲ್ಲಿ ಜನಿಸಿದ ಮೇಲೆ ಯಾವುದಾದರೂ ಒಂದು ರಂಗದಲ್ಲಿ ಸಾಧನೆ ಮಾಡಿ ತೋರಿಸಿದಾಗ ಮಾತ್ರ ಮಾನವನಾಗಿ ಹುಟ್ಟಿದ್ದಕ್ಕೆ ಸಾರ್ಥಕ್ಯ ಪಡೆದಂತಾಗುತ್ತದೆ. ಅಂತೆಯೇ ವೇಷಧಾರಿಯಾಗಿ, ಅರ್ಥಧಾರಿಯಾಗಿ, ನಾಟಕಕಾರರಾಗಿ, ನಟರಾಗಿ, ಜನಪ್ರಿಯ ಪ್ರಸಂಗಕರ್ತೃರಾಗಿ ಹಲವಾರು ರಂಗದಲ್ಲಿ ನಿರಂತರ ತನ್ನನ್ನು ತೊಡಗಿಸಿಕೊಂಡು ತನ್ನೂರಿನ ಕೀರ್ತಿ ಪತಾಕೆಯನ್ನು ದೇಶದೆಲ್ಲೆಡೆ ಹಾರಿಸಿದ ರಘುರಾಮ ಶೆಟ್ಟಿಯವರನ್ನು ಕಂದಾವರದ ಅನರ್ಘ್ಯರತ್ನವೆಂದು ಕರೆದರೆ ಅತಿಶಯೋಕ್ತಿಯಾಗಲಾರದು.

15–11–1936 ರಂದು ಸದಿಯಣ್ಣ ಶೆಟ್ಟಿ ಮತ್ತು ಪುಟ್ಟಮ್ಮ ಶೆಡ್ತಿಯವರ ಪುಣ್ಯಗರ್ಭದಲ್ಲಿ ಕಂದಾವರದಲ್ಲಿ ಬೆಳಕು ಕಂಡ ರಘುರಾಮ ಶೆಟ್ಟರು ಬಾಲ್ಯದಲ್ಲೇ ಯಕ್ಷಗಾನದ ಗೀಳನ್ನು ಇರಿಸಿಕೊಂಡ ಕಾರಣ ತಮ್ಮ 12 ನೇ ವರ್ಷದಲ್ಲಿ ಮಕ್ಕಳಮೇಳಕ್ಕೆ ಭಾಗವತರಾಗಿ ರಂಗಕ್ಕೆ ಅಡಿಯಿಟ್ಟವರು. ಓರ್ವ ಜನಪ್ರಿಯ ಗುರುಗಳಾಗಿ ಅದೆಷ್ಟೋ ರತ್ನಗಳನ್ನು ಸಿದ್ಧ ಪಡಿಸಿದವರು. ಅಂತೆಯೇ ಅತಿಶೀಘ್ರವಾಗಿ ತನ್ನೂರಿನ ಕೀರ್ತಿಯನ್ನು ಎಲ್ಲೆಡೆ ಸಾರಲು ಯಕ್ಷಕವಿಯಾಗಲು ಮುಂದಾಗಿ ಅದೆಷ್ಟೋ ಯಕ್ಷ ಕುಸುಮಗಳು ಸಹಸ್ರ ಸಂಖ್ಯೆಯ ಕಲಾಭಿಮಾನಿಗಳ ಹೃದಯಾಂಗಣ ಪ್ರವೇಶ ಮಾಡಿದವು.

ಕಂದಾವರದವರು ಸರ್ವರೀತಿಯಿಂದಲೂ ಸಮರ್ಥ ಪ್ರಸಂಗಕರ್ತರು. ಪೌರಾಣಿಕವಿರಲೀ ಕಾಲ್ಪನಿಕವಿರಲೀ, ರಂಗಕ್ರಿಯೆಗೆ ಸೂಕ್ತವಾದ ಉತ್ತಮ ಆಶಯವುಳ್ಳ ಕಥಾನಕಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಅದರಲ್ಲಿ ಬರುವ ಪಾತ್ರಗಳ, ಸನ್ನಿವೇಶಗಳ

ಸ್ಪಷ್ಟ ಚಿತ್ರಣವನ್ನು ನೀಡುತ್ತಾರೆ. ಸನ್ನಿವೇಶಕ್ಕೆ ಅನುಕೂಲಕರವಾದ, ವೈವಿಧ್ಯಮಯವಾದ ರಾಗ-ತಾಳಗಳಲ್ಲಿ ಪದ್ಯ ರಚಿಸುತ್ತಾರೆ. ತಾನು ರಚಿಸುವ ಪ್ರಸಂಗಗಳ ಕಥಾನಕದ ಬಗ್ಗೆ ಸಾಕಷ್ಟು ಅನುಭವ ಹೊಂದಿದ ಮೇಲೆಯೇ ಕೃತಿ ರಚನೆಗೆ ಮುಂದಾಗುತ್ತಾರೆ. ಹೀಗಾಗಿ ಇವರ ಪ್ರಸಂಗಗಳು ಯಶಸ್ವೀ ಕೃತಿಗಳಾಗಿಯೇ ಉಳಿದಿವೆ.

ಇವರ 33 ಕೃತಿಗಳಲ್ಲಿ ನಾಗವಂದನೆ ಒಂದು ಪೌರಾಣಿಕ ಪ್ರಸಂಗ. ಇದು ಮಾರ್ಕಾಂಡೇಯ ಪುರಾಣದಿಂದ ಆಯ್ದುಕೊಂಡದಾಗಿದೆ. ಇದರಲ್ಲಿ ಉತ್ಥಾನಪಾದರಾಯನ ಮಗ ಉತ್ತಮನ ಜೀವನ ವೃತ್ತಾಂತ ಸವಿವರವಾಗಿ ಕೊಡಲಾಗಿದೆ. ಇದರಲ್ಲಿ ದಾಂಪತ್ಯ ಜೀವನದಲ್ಲಿ ಬರುವ ಪ್ರತಿಯೊಂದು ಒಳಿತು ಕೆಡುಕುಗಳಿಗೆ ಗ್ರಹಗತಿಗಳೇ ಕಾರಣವೆಂದು ಹೇಳಲ್ಪಟ್ಟಿದೆ. ಮಾತ್ರವಲ್ಲ ಗೃಹಸ್ಥಾಶ್ರಮದಲ್ಲಿ ಹೆಂಡತಿಯ ಪಾತ್ರ ಎಷ್ಟೊಂದು ಮಹತ್ವದ್ದೆಂದು ತಿಳಿಯಬಹುದಾಗಿದೆ. ಇದಕ್ಕೆ ಕೆಲವು ಉದಾಹರಣೆಗಳನ್ನು ಗಮನಿಸಬಹುದು.

1) ಧ್ರುವನು ತನ್ನ ತಮ್ಮನಾದ ಉತ್ತಮನಿಗೆ ಸ್ವಯಂವರ ಮಂಟಪದಲ್ಲಿ ಹಾರಾರ್ಪಣೆಯಾದುದರಿಂದ ಲಗ್ನಮುಹೂರ್ತ ನೋಡದೆ ಮದುವೆ ಕಾರ್ಯ ನಡೆಸುತ್ತಾನೆ. ಇದರ ಪರಿಣಾಮವಾಗಿ ಅವರ ದಾಂಪತ್ಯದಲ್ಲಿ ಸಾಮರಸ್ಯ ಮೂಡುವುದಿಲ್ಲ. ಈ ವಿಷಯದ ಕುರಿತು ಓರ್ವಮುನಿ ಉತ್ತಮನಿಗೆ ತಿಳಿಸುವ ಸಂದರ್ಭವನ್ನು ನೋಡಿ.

ಬೇಗಡೆ ಅಷ್ಟ

ಧ್ರುವನು ಹಿಂದಕೆ ನಿನಗೆ ಪರಿಣಯವ। ಗಳಿಗೆಯನು ನೋಡದೆ। ತವಕದಲಿ ತಾಗೈದ
ಆ ಸಮಯ॥ ರವಿಯು, ಮಂಗಳ, ಶನಿಯು ನಿನ್ನಡೆ। ಕವಿ, ಬ್ರಹ್ಮಸ್ಮತಿ ಮಡದಿ
ಬಹುಳೆಗೆ। ಸವನಿಸಿಹರದರಿಂದಲಾಕೆಯು। ಧವಗೆ ತಾ ಪ್ರತಿಕೂಲೆಯಾದಳು॥೧॥

ಇದಕ್ಕೆ ಪರಿಹಾರವನ್ನು ಹೀಗೆ ಸೂಚಿಸುತ್ತಾರೆ

ಮಿತ್ರವಿಂದೇಷ್ಠಿಯನು ಮಾಡಲ್ಕೆ। ನಿನ್ನಲ್ಲಿ ಬಹುಳೆಗೆ। ಮಿತ್ರಭಾವವು ಮೂಡುವುದು
ನಿಜಕೆ ॥ ದೈತ್ಯನಾದ ಬಲಾಕ ಸೈನಿಕ। ಮೊತ್ತದೊಂದಿಗೆ ಪೋಗಿ ನಿನ್ನಯ ।
ಪತ್ನಿಯನು ತರಬಲ್ಲನೆನ್ನಲು । ಉತ್ತಮನು ಪದಕೆರಗಿ ಪೊರಟನು ॥ ೨॥

ಸಾಂಗತ್ಯರೂಪಕ

ಸ್ವಾಯಂಭುಮನುವಿನ ಪೌತ್ರಗೆ ಅರ್ಘ್ಯವು। ನ್ಯಾಯವೆ ಸಂಶಯವಿಲ್ಲಾ॥
ಜಾಯೆಯ ತ್ಯಜಿಸಿದವಗೆ ಮಧುಪರ್ಕವ।ನೀಯೆ ಅಧರ್ಮವು ಸಲ್ಲಾ ॥೧॥

ಈ ವಿಚಾರ ತಿಳಿದ ಉತ್ತಮ ಬಲಾಕನಿಂದ ಪತ್ನಿ ಬಗುಳೆಯನ್ನು ತರಿಸಿಕೊಂಡು, ಮಿತ್ರವಿಂದೇಷ್ಟಿಯಾಗ ಮಾಡಿ ಸುಖಸಂಸಾರ ನಡೆಸುತ್ತಾನೆ.

2) ಸುಶರ್ಮನೆಂಬ ಬ್ರಾಹ್ಮಣ ಬಲಾಕ ರಕ್ಕಸನಿಂದ ತನ್ನ ಪತ್ನಿಯನ್ನು ಕಳೆದುಕೊಳ್ಳುತ್ತಾನೆ. ಇದರಿಂದ ಆತನ ಅಗ್ನಿಕಾರ್ಯಕೆಟ್ಟು ಕಂಗಾಲಾಗುತ್ತಾನೆ ಆ ಸಂದರ್ಭದ ಪದ್ಯ ಹೀಗಿದೆ.

ದ್ವಿಪದಿ

ತನಗಿಂತು ಅವಮಾನ ಎಸಗಿದನು ವಿಪ್ರ ಜನುಮ ಹಾಳ್ಗೈದೆಯೆ ಬಿಡಲಾರೆಕ್ಷಿಪ್ರ ॥೧॥
ರಮಣಿಯಗಲಿದರೆ ನಿತ್ಯದ ಅಗ್ನಿಕರ್ಮ|ಕ್ರಮದಂತೆ ಎಸಗಲಾಗದು ಇದುವೆಧರ್ಮ॥೨॥

ಮುಂದೆ ಆತನು ಉತ್ತಮನಿಂದ ತನ್ನ ಮಡದಿಯನ್ನು ಪಡೆದು ಅಗ್ನಿಕಾರ್ಯ ಎಸಗುತ್ತಾನೆ.

3) ಒಬ್ಬ ರೈತನ ಮಡದಿ ಹುಚ್ಚಳಾಗಿ ತನ್ನ ಗಂಡನಿಗೆ ಹೊಡೆಯುತ್ತಿರುತ್ತಾಳೆ. ಗಂಡನು ಪೆಟ್ಟಿನ ನೋವನ್ನು ಸಹಿಸಿಕೊಂಡು ಉಪಚರಿಸುತ್ತಾನೆ. ಇದನ್ನು ಕಂಡ ರಾಜಾ ಉತ್ತಮ ನೀನೇಕೆ ಸುಮ್ಮನಿದ್ಧಿ ? ಎಂದು ಕೇಳಿದಾಗ ಆತನು ಕೊಡುವ ಉತ್ತರದ ಪದ್ಯನೋಡಿ :–

ಕೇದಾರಗೌಳ ಅಷ್ಟ

ಉತ್ತಮ : ಏನಿದು ಹೊಸಪರಿ ಬಯ್ಯುತ್ತ ಬಡಿದರೂ। ನೀನೇಕೆ ಸುಮ್ಮನಿಹೆ ॥
ಮಾನಿನಿಯರನು ಮರ್ದಿಸದಿರೆ ನಿಜಕಪ। ಮಾನವಲ್ಲವೆ ಯೋಚಿಸು ॥೧॥
ರೈತ : ಪತಿಯನ್ನು ಪರದೈವವೆಂದು ಪೂಜಿಸುವಾಕೆ। ಮತಿ ವಿಕಲತೆಗೊಂಡಿದೆ ॥
ಅತಿ ಕೆಟ್ಟ ಗ್ರಹಚಾರ ಗಡು ಮುಗಿದೊಡೆ ಮುಂದೆ । ಸತಿ ಮುನ್ನಿವಂತಹಳು ॥ ೨॥

ಇಲ್ಲಿ ಆಕೆಯ ದುಃಸ್ಥಿತಿಗೆ ಕೆಟ್ಟ ಗ್ರಹಗತಿಯೇ ಕಾರಣ ಎನ್ನುತ್ತಾನೆ. ಗಡುಮುಗಿದಾಗ ಆಕೆ ಸರಿ ಹೊಂದುತ್ತಾಳೆ ಎನ್ನುವ ಧೈರ್ಯ ಅವನದು. ಹೀಗೆ ಪ್ರಸಂಗದುದ್ದಕ್ಕೆ ನಮ್ಮ ಎಲ್ಲಾ ಸಂತೋಷ ಸಂಕಷ್ಟಗಳಿಗೆ ಗ್ರಹಗಳ ಗತಿಯೇ ಕಾರಣವೆಂದು ಹೇಳಲಾಗುತ್ತದೆ. ಇದರಂತೆ ಇವರ ಎಲ್ಲಾ ಕೃತಿಗಳು ವಿಚಾರಪ್ರದವಾಗಿಯೇ ರಚನೆಗೊಂಡಿವೆ.

ಬಹುಮುಖ ಪ್ರತಿಭೆವುಳ್ಳ ಕಂದಾವರದವರು ಸಾಹಿತ್ಯಲೋಕಕ್ಕೆ ನೀಡಿದ ಸೇವೆ ಗಣನೀಯವಾಗಿದ್ದು ಮನ್ಮಥ ನಾಮ ಸಂವತ್ಸರದಲ್ಲಿ ಸಹಸ್ರ ಚಂದ್ರ ದರ್ಶನ ಮಾಡುವ ಯೋಗವನ್ನು ಭಗವಂತನು ಕರುಣಿಸಿದ್ದು ನಮ್ಮೊಂದಿಗೆ ನೂರ್ಕಾಲ ಬಾಳಿ ಬೆಳಗಿ ಮತ್ತಷ್ಟು ಸಾಹಿತ್ಯ ಕೃತಿಗಳು ಸತ್ವಯುತವಾಗಿ ಮೂಡಿ ಬರಲೆಂದು ದೇವರಲ್ಲಿ ಸಂಪ್ರಾರ್ಥಿಸಿಕೊಳ್ಳುತ್ತೇನೆ.

ಜಂಜೂಟಿ ರೂಪಕ

ಧನ್ಯವಾಯ್ತು ನಿಮ್ಮ ಬಾಳು ಕಂದಾವರದವರೇಪುಣ್ಯವಂತರಹುದು ಯಕ್ಷಛಂದಗಾರರೇ ॥
ಸ್ವರ್ಣಕುಸುಮ ಬದುಕಿನಲ್ಲಿ ಬಂದು ಬೀಳಲಿ। ಪೂರ್ಣಕರುಣೆಯಿಂದ ದೈವ ನಿಮಗೆ ಒಲಿಯಲಿ ॥ ೧॥

ಆಪತ್ಬಾಂಧವ ಪ್ರಸಂಗಕರ್ತೃಗಳು

ಕಿಶನ್ ಹೆಗ್ಡೆ, ಬೈಲೂರು
ಯಜಮಾಜರು, ಶ್ರೀ ಸಾಲಿಗ್ರಾಮ ಮೇಳ

ನಮ್ಮ ಶ್ರೀ ಸಾಲಿಗ್ರಾಮ ಮೇಳಕ್ಕೆ ಮೌಲ್ಯಾಧಾರಿತ ಪ್ರಸಂಗಗಳನ್ನು ನೀಡಿದ ಪ್ರಸಿದ್ಧ ಪ್ರಸಂಗಕರ್ತೃರಲ್ಲಿ ಕಂದಾವರ ರಘುರಾಮ ಶೆಟ್ಟರು ಒಬ್ಬರು. ಕಾಳಿಂಗನಾವಡರು ನಮ್ಮ ಮೇಳಕ್ಕೆ ಪ್ರಧಾನ ಭಾಗವತರಾಗಿ ಸೇರ್ಪಡೆಗೊಂಡ ವರ್ಷವೇ ಕಂದಾವರದವರ ಪ್ರಥಮ ಪ್ರಸಂಗ ಸತಿಸೀಮಂತಿನಿ ಮೇಳದ ಮುಖ್ಯ ಪ್ರಸಂಗವಾಗಿ ಪ್ರದರ್ಶನಗೊಂಡಿತು. ಆ ವರ್ಷ ಕಂದಾವರದವರ ಸತಿಸೀಮಂತಿನಿ ಕಾಳಿಂಗ ನಾವುಡರ ನಾಗಶ್ರೀ ಶ್ರೇಷ್ಠ ಮಟ್ಟದ ಪ್ರದರ್ಶನವನ್ನು ನೀಡಿ ಮೇಳದ ಗೌರವವನ್ನು ಹೆಚ್ಚಿಸಿದ್ದುವು.

ಪ್ರಥಮ ಪ್ರಸಂಗವೇ ಯಶಸ್ಸುಗೊಂಡುದಲ್ಲದೆ ನಾವಡರು ಕಂದಾವರದವರ ಪ್ರಸಂಗವನ್ನೇ ಮುಂದಿನ ತಿರುಗಾಟಕ್ಕೆ ಬಯಸಿದರು. ಅವರ ಆಶಯದಂತೆ, ಅವರ ಪ್ರೋತ್ಸಾಹದಿಂದ ಕಂದಾವರದವರು ಸತತವಾಗಿ ಶ್ರೀ ದೇವಿ ಬನಶಂಕರಿ, ಚೆಲುವೆ ಚಿತ್ರಾವತಿ, ರತಿರೇಖಾ ಹಾಗೂ ವಸುವರಾಂಗಿ ಪ್ರಸಂಗಗಳನ್ನು ರಚಿಸಿ, ನಮಗಿತ್ತು ಸಹಕರಿಸಿದರು. ನಮ್ಮ ತಂದೆಯವರಿಗೆ ಶ್ರೀಯುತರ ಬಗೆಗೆ ತುಂಬಾ ಅಭಿಮಾನವಿತ್ತು. ಇವರಿಗೂ ಕೂಡಾ ಅವರ ಬಗ್ಗೆ ಅಪಾರ ಗೌರವವಿತ್ತು. ಕಂದಾವರದವರಿಗೆ ನಮ್ಮ ಮೇಳದ ಮೇಲಿರುವ ಅಭಿಮಾನ, ತಂದೆಯವರ ಮೇಲಿರುವ ಗೌರವ, ನಾವಡರ ಬಗೆಗಿರುವ ಸ್ನೇಹ ಸಂಬಂಧದಿಂದಾಗಿ ಅವರು ನಮ್ಮ ಮೇಳದ ಖಾಯಂ ಪ್ರಸಂಗಕರ್ತೃರಲ್ಲಿ ಒಬ್ಬರಾದರು.

ತಂದೆಯವರ ನಿಧನಾನಂತರ ಕಿರಿಯ ವಯಸ್ಸಿನವನಾದ ನಾನು ಅನಿವಾರ್ಯ ಸ್ಥಿತಿಯಲ್ಲಿ ಮೇಳದ ಚುಕ್ಕಾಣಿ ಹಿಡಿಯಬೇಕಾಯಿತು. ಆಗ ನಾವಡರ ಪ್ರೋತ್ಸಾಹ ಮತ್ತು ಬೆಂಬಲದಿಂದ ಮೇಳದ ಕೀರ್ತಿಗೆ ಚ್ಯುತಿಬಾರದಂತೆ ತಿರುಗಾಟ ನಡೆಸಲು ಸಾಧ್ಯವಾಯಿತು. ಆದರೆ ನನ್ನ ದುರಾದೃಷ್ಟವೋ ಎಂಬಂತೆ ಆಕಸ್ಮಿಕವಾಗಿ ನಾವಡರನ್ನು

ಕಳೆದುಕೊಂಡೆ. ಅದೇ ಹೊತ್ತಿಗೆ ಕಂದಾವರದವರು ಪೆರ್ಡೂರು ಮೇಳಕ್ಕೆ ಖಾಯಂ ಆಗಿ ಪ್ರಸಂಗ ನೀಡುತಿದ್ದರು. ಅಂತಹ ಸಂದರ್ಭದಲ್ಲಿ ನನ್ನ ಹಿತೈಷಿ ಮಿತ್ರರು ಮೇಳದ ಹಿತದೃಷ್ಟಿಯಿಂದ ಕಂದಾವರದವರ ಪ್ರಸಂಗದ ಅನಿವಾರ್ಯತೆಯನ್ನು ತಿಳಿಸಿದರು. ಅದು ಸೂಕ್ತವಾಗಿ ನನಗೆ ಕಂಡುದರಿಂದ ಅವರ ಪ್ರಸಂಗ ಪಡೆಯುವ ಮನಸ್ಸು ಮಾಡಿದೆ.

ಒಂದು ದಿನ ಸಂಜೆಯ ಹೊತ್ತು ಮಿತ್ರರಾದ ಸಿ.ಪಿ.ಅತಿಕಾರಿ ಹಾಗೂ ಗುಂಡ್ಮಿ ಕರುಣಾಕರರೊಂದಿಗೆ ಕಂದಾವರದವರ ಮನೆಗೆ ಹೋದೆ. ಪ್ರೀತಿಯಿಂದ ನಮ್ಮನ್ನು ಆದರಿಸಿದರು. ನಮ್ಮ ಕೋರಿಕೆಯನ್ನು ಕೇಳಿ ಸ್ವಲ್ಪ ಹೊತ್ತು ಸುಮ್ಮನಾದರು. ಅದಾಗಲೇ ಪೆರ್ಡೂರು ಮೇಳಕ್ಕೆ ಪ್ರಸಂಗ ನೀಡುವುದಾಗಿ ಒಪ್ಪಿದ್ದರು. ಗಡಿಬಿಡಿಯಲ್ಲಿ ಪ್ರಸಂಗ ರಚಿಸುವ ಜಾಯಮಾನ ಅವರದ್ದಲ್ಲ. ಹಾಗಾಗಿ ವರ್ಷಕ್ಕೊಂದೇ ಪ್ರಸಂಗವೆಂಬ ನಿರ್ಧಾರ ಅವರದ್ದಾಗಿತ್ತು. ಕೊನೆಗೇ ಅವರು ಹೇಳಿದ ಮಾತು ಈಗಲೂ ನನಗೆ ನೆನಪಿದೆ. "ನೋಡು ಕಿಶನ್ ! ಚಿಕ್ಕ ಪ್ರಾಯದಲ್ಲಿ ಬಹು ದೊಡ್ಡ ಜವಾಬ್ದಾರಿ ಹೊತ್ತಿದ್ದಿಯಾ. ಮೇಳಕ್ಕೆ ಆಧಾರ ಸ್ಥಂಭದಂತಿದ್ದ ನಾವಡರನ್ನು ಕಳೆದುಕೊಂಡಿದ್ದಿಯಾ. ಮನೆಯವರೆಗೆ ಬಂದು ವಿನಯದಿಂದ ಕೇಳುತಿದ್ದಿಯಾ. ಇಂತಹ ಸಂದರ್ಭದಲ್ಲಿ ನಿನ್ನ ಕೇಳಿಕೆಯನ್ನು ನಿರಾಕರಿಸುವ ಮನ ನನಗಿಲ್ಲ. ಆದರೆ ಒಮ್ಮೆಗೇ ಎರಡು ಪ್ರಸಂಗಗಳನ್ನು ರಚಿಸುವ ಶಕ್ತಿ ನನಗಿಲ್ಲ. ಆದರೂ ದೇವರ ಮೇಲೆ ಭಾರಹಾಕಿ ಒಪ್ಪಿಕೊಳ್ಳುತ್ತೇನೆ. ಮುಂದಿನದ್ದು ದೈವಚಿತ್ತ ಹೋಗಿ ಬನ್ನಿ, ಒಳ್ಳೆಯದಾಗಲಿ " ಎಂದು ನಮ್ಮನ್ನು ಬೀಳ್ಕೊಟ್ಟರು. ಹೇಳಿದಂತೆ ಸಾಧ್ವಿಸುನಂದೆ ಎಂಬ ಪ್ರಸಂಗ ನೀಡಿದರು. ಅದು ಯಶಸ್ವಿಯಾಗಿಯೇ ಪ್ರದರ್ಶನಗೊಂಡಿತು.

ಕಂದಾವರದವರು ಇದುವರೆಗೆ 33 ಪ್ರಸಂಗಗಳನ್ನು ರಚಿಸಿದ್ದಾರೆ. ಎಲ್ಲವೂ ಯಶಸ್ವೀ ಪ್ರಸಂಗಗಳೆ ಆಗಿವೆ. ಕಾರಣ ಅವರು ಪ್ರದರ್ಶನಕ್ಕೆ ಯೋಗ್ಯವಾದ ಕಥೆಯನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ. ಕಥೆಯು ಹಾಗೂ ಪಾತ್ರದ ಸ್ಪಷ್ಟ ಚಿತ್ರಣ ನೀಡುತ್ತಾರೆ, ಛಂದೋಬದ್ಧವಾಗಿ ಪದ್ಯ ರಚಿಸುತ್ತಾರೆ. ಹಾಡುವವರಿಗೆ, ಆಡುವವರಿಗೆ, ನೋಡುವವರಿಗೆ ಸುಲಭವಾಗಿ ಅರ್ಥವಾಗುವಂತೆ ಸರಳ ಶಬ್ದಗಳಿಂದ ಪದ್ಯ ರಚಿಸುತ್ತಾರೆ. ಕಲಾವಿದರೊಂದಿಗೆ

ಉತ್ತಮ ಸಂಬಂಧ ಹೊಂದಿದ್ದು ಚೆನ್ನಾಗಿ ತರಬೇತಿಗೊಳಿಸುತ್ತಾರೆ. ಹೀಗಾಗಿ ಯಶಸ್ವಿ ಪ್ರಸಂಗಗಳಾಗುತ್ತವೆ. ಆದರೆ ಇತ್ತೀಚೆಗೆ ಉಡುಪಿ ಚಾನಲಿನಲ್ಲಿ ಅವರ ಒಂದು ಸಂದರ್ಶನವನ್ನು ಕೇಳಿದಾಗ ಶ್ರೀಯುತರ ಮನಸ್ಸಿಗಾದ ನೋವು ತಿಳಿಯಿತು. ಇತ್ತೀಚೆಗೆ ತಾನು ರಚಿಸಿದ ಪ್ರಸಂಗವೊಂದು ಪ್ರಮುಖ ಕಲಾವಿದನೊಬ್ಬನ ಅಸಡ್ಡೆಯಿಂದ ಕಳಾಹೀನವಾದ ಬಗ್ಗೆ ತುಂಬಾ ಬೇಸರ ತೋಡಿಕೊಂಡರು. ಇದರಿಂದ ಶ್ರೀಯುತರು ಆಧೀರರಾಗದೆ, ಕಲೆಯ ಮೇಲಿನ ಅಭಿಮಾನದಿಂದ ಪ್ರಸಂಗ ರಚನೆ ಮಾಡಬೇಕು. ಇನ್ನೂ ಉತ್ತಮ ಕೃತಿಗಳು ಅವರಿಂದ ಬರಬೇಕೆಂದು ಆಶಿಸುತ್ತೇನೆ. ಶ್ರೀಯುತರು ಆರೋಗ್ಯವಂತರಾಗಿ ನೂರ್ಕಾಲ ಬಾಳಿ ನಮಗೆ ಮಾರ್ಗದರ್ಶಕರಾಗಿರಬೇಕೆಂದು ಶ್ರೀ ದೇವರಲ್ಲಿ ಬೇಡಿಕೊಳ್ಳುತ್ತೇನೆ.

ನೀತಿವಂತ ಹಾಗೂ ಹೃದಯವಂತ ಯಕ್ಷಕವಿ

ಸುಬ್ರಹ್ಮಣ್ಯ ಧಾರೇಶ್ವರ
ಖ್ಯಾತ ಭಾಗವತರು, ನಾಗೂರು

ಮಡಿವಂತ ಸಮಾಜದಿಂದ ಯಕ್ಷಗಾನ ದೂರವಿದ್ದ ಕಾಲ. ಆಟ–ಕೂಟವೆಂದರೆ ಕೇವಲ ಮನರಂಜನೆಗೆ. ಮರುದಿನ ಅಲ್ಲಲ್ಲಿ ಗುಂಪಾಗಿ ಕಥೆ, ಕಲಾವಿದರ ಕುರಿತು ಮಾತಾಡಿಕೊಳ್ಳುತ್ತಾ, ತಮ್ಮದೇ ತೀರ್ಮಾನ ಮಾಡಿಕೊಳ್ಳುವ ಒಂದೆರಡು ವರ್ಗದ ಜನರು ಮತ್ತು ಶ್ರಮಜೀವಿಗಳು, ಇವರೇ ಯಕ್ಷಗಾನದ ಆರ್ಥಿಕ ಹಾಗೂ ಬೌದ್ಧಿಕ ಆಸ್ತಿಯಾಗಿದ್ದ ಕಾಲ. ಅನಂತರ ಶೇಣಿ, ಸಾಮಗ ಬಂಧುಗಳು, ಡಾ। ಶಿವರಾಮ ಕಾರಂತರ ರಂಗಪ್ರಯೋಗ ಪ್ರದರ್ಶನಗಳು. ಚಿಟ್ಟಾಣಿ, ಗೋಡೆ, ಕೆರೆಮನೆ ಬಂಧುಗಳು ಇಂತಹ ದಿಗ್ಗಜರ ಪ್ರವೇಶ ವಿದ್ಯಾವಂತ ನಾಗರಿಕ ಸಮಾಜ ಯಕ್ಷಗಾನದತ್ತ ನೋಡುತ್ತಾ, ತಿಳಿಯಲೆತ್ನಿಸುತ್ತಾ, ವಿಚಾರ – ವಿಮರ್ಶೆ – ತಾರ್ಕಿಕ ಸಿದ್ಧಾಂತಗಳೆಡೆ ಧಾವಂತ ಪ್ರಾರಂಭವಾದರೂ ಯಕ್ಷಗಾನಕ್ಕೇ ತಮ್ಮನ್ನು ಅರ್ಪಿಸಿಕೊಂಡ ಅನೇಕ ಹಿರಿಯ ಕಲಾವಿದರ ಬದುಕು, ಸಂಸಾರ ಮಾತ್ರ ಆರ್ಥಿಕ ಹಿನ್ನೆಡೆಯಲ್ಲೇ ಕುಂಟುತಿತ್ತು. (ತಾರ್ಕಿಕ ಸಿದ್ಧಾಂತದ ವಿಚಾರ ವಿಮರ್ಶೆ ಇಂದಿಗೂ ನಡೆಯುತ್ತಲೇ ಇದೆ)

ನನಗೆ ತಿಳಿದಂತೆ 60–70 ದಶಕದಲ್ಲಿ ಹೊಸ ಕಥಾನಕದ ರಂಗ ಪ್ರವೇಶ ಆಗಿರಬಹುದು. ಗುಂಡೂ ಸೀತಾರಾಮಯ್ಯ, ಬೆಳಸಲಿಗೆ ಗಣಪತಿ ಹೆಗಡೆ, ಜಾನಕೈ ತಿಮ್ಮಪ್ಪ ಹೆಗ್ಡೆಯವರಂತವರು ಪುರಾಣದ ಎಳೆಯನ್ನಾಧರಿಸಿ, ತಮ್ಮ ಕಲ್ಪನೆಗಳನ್ನು ತುಂಬಿಸಿ, ಪೌರಾಣಿಕ ಆವರಣದಲ್ಲೇ ಸಾಮಾಜಿಕ ಪ್ರಸಂಗಗಳನ್ನು ರಚಿಸಿ ಪ್ರದರ್ಶನಗೊಳ್ಳುವ ಕಾಲ ಘಟ್ಟದಲ್ಲಿ ಪಳ್ಳಿ ಸೋಮನಾಥ ಹೆಗ್ಡೆಯವರ ನೇತೃತ್ವದಲ್ಲಿ ಸಾಲಿಗ್ರಾಮ ಮೇಳದಲ್ಲಿ ಹೊಸ ಪ್ರಸಂಗಗಳು ಸುದ್ಧಿ ಮಾಡುತಿದ್ದುವು. ಆಗಿನ ಯಶಸ್ವೀ ಪ್ರಸಂಗಕರ್ತೃರೇ ನಮ್ಮ ಕಂದಾವರ ರಘುರಾಮ ಶೆಟ್ಟರು. ಅಮೃತೇಶ್ವರಿ ಮೇಳದಲ್ಲಿ ನಾನು ಇದ್ದ ಕಾಲ. ಶ್ರೀ ರಘುರಾಮ ಶೆಟ್ಟರು ಒಮ್ಮೆ ಚೌಕಿಗೆ ಬಂದಾಗ ಗುರುನಾರಣಪ್ಪ

ಉಪ್ಪೂರರು ಶ್ರೀಯುತರನ್ನು ನನಗೆ ಪರಿಚಯಿಸಿದ ನೆನಪು. ಆಗ ಚೌಕಿಯಲ್ಲಿ ಯಜಮಾನರಾದ ಪಿ. ಶ್ರೀಧರ ಹಂದೆಯವರು "ನಮ್ಮ ಮೇಳಕ್ಕೆ ಒಂದು ಪ್ರಸಂಗ ಕೊಡಿ ಮಾಸ್ತರರೇ" ಎಂದು ಮಾತು ಮಾತಿಗೆ ಹೇಳಿದಾಗ ಮುಗ್ಧ ಮನದ ರಘು ಶೆಟ್ಟರು ಸ್ವಲ್ಪ ತಬ್ಬಿಬ್ಬಾಗಿ " ಹಾಂ ....ಹಾಂ.......... ಕಾಂಬಾ..... ಮುಂದೆ ದಿನ ಇತ್ತಲೆ" ಎಂದು ಮಾತು ಮುಗಿಸಿದ್ದರು. ಕಾರಣ ಶ್ರೀಯುತರು ಆಗಲೇ ಸಾಲಿಗ್ರಾಮ ಮೇಳಕ್ಕೆ ಪ್ರಸಂಗ ಕೊಡುತ್ತಾ, ಕೊಡುವ ಬದ್ಧತೆಗೆ ಒಳಪಟ್ಟಿದ್ದರು. ಇದು ಅವರ ಬದುಕಿನ ಸಂಸ್ಕಾರಕ್ಕೆ ಸಾಕ್ಷಿ.

ರಘು ಶೆಟ್ಟರು ಒಂದು ಪ್ರಸಂಗವನ್ನು ಬರೆಯುವ ಸಂಕಲ್ಪಕ್ಕೆ ಮೊದಲೇ ಅದರ ಕುರಿತು ಒಂದಿಷ್ಟು ಘಟನೆಗಳನ್ನು ತಮ್ಮ ಮನದಂಗಣದಲ್ಲಿ ಹರಡಿಕೊಳ್ಳುತ್ತಾರೆ. ಆ ಘಟನೆಗೆ ಸಂಬಂಧಿಸಿದ ಪಾತ್ರಗಳನ್ನು ಪುರಾಣಕ್ಕೂ, ವಾಸ್ತವಕ್ಕೂ ಒರೆ ಹಚ್ಚಿ ತೂಗುತ್ತಾ, ಪ್ರೇಕ್ಷಕರಲ್ಲೊಬ್ಬರಾಗಿ ತರ್ಕಿಸುತ್ತಾ ತಮ್ಮ ಸಂದೇಶದ ಕುರಿತು ಗಟ್ಟಿಯಾಗುತ್ತಾರೆ. ಆದರೂ ಕೆಲವೊಮ್ಮೆ ತಮ್ಮ ನಿಲುಮೆಯ ಗಟ್ಟಿತನದಲ್ಲೂ ಸಾಮಾಜಿಕ ಸ್ವಾಸ್ಥ್ಯದ ಕುರಿತು ಭೀತಿಯಿಂದ ಹೊಯ್ದಾಡುತ್ತಾರೆ. ಕಾರಣ ರಘುವಣ್ಣ ಕೇವಲ ಯಕ್ಷಕವಿ ಮಾತ್ರವಲ್ಲ ಶ್ರೇಷ್ಠ ಶಿಕ್ಷಕರೂ ಆಗಿದ್ದರು. ಎಳೆಯರಿಗೆ ಸನ್ಮಾರ್ಗದ ವಿದ್ಯೆ ಬೋಧಿಸಿ ಮುಂದಿನ ಬಲಿಷ್ಠ ಸಮಾಜದ ಸಂಸ್ಕಾರಯುತ ನಾಗರಿಕರನ್ನಾಗಿಸಲು ತಮ್ಮ ವೃತ್ತಿಯ ಕುರಿತಾಗಿ ಇರುವ ನಿಷ್ಠೆ ಹಾಗೂ ಕಾಳಜಿ ಉದಾ : ವಧು ಮಾಧವಿ ಕಥೆಯಲ್ಲಿ ಗಾಲವ ಋಷಿಕುಮಾರ ಗುರು ವಿಶ್ವಾಮಿತ್ರರ ಗುರುದಕ್ಷಿಣೆಗೆ ಬೇಕಾಗಿ ಯಯಾತಿ ಮಗಳಾದ ಮಾಧವಿಯನ್ನು ಪಡೆದು 3 ಮಂದಿ ರಾಜರಿಗೆ ಒಂದೊಂದು ಸಂತಾನಕ್ಕೆ ಮಡದಿಯಾಗಿ ಕೊಟ್ಟ 600 ಕುದುರೆಗಳನ್ನು ಪಡೆಯುತ್ತಾನೆ. 200 ಕುದುರೆಗಳಿಗಾಗಿ ವಿಶ್ವಾಮಿತ್ರನಿಗೆ ಆಕೆಯನ್ನು ಒಂದು ಸಂತಾನ ಪಡೆಯಲಿಕ್ಕಾಗಿ ನೀಡುತ್ತಾನೆ. ಗುರುದಕ್ಷಿಣೆ ಸಂದಾಯದ ಬಳಿಕ ಯಯಾತಿಗೆ ಆಕೆಯನ್ನು ಮರಳಿಸುತ್ತಾನೆ. ಈ ರೀತಿ ಒಬ್ಬಾಕೆ ಹೆಣ್ಣನ್ನು ತನ್ನ ಸ್ವಾರ್ಥಕ್ಕಾಗಿ 4 ಜನರಿಗೆ ಮಾರುವ ಕಥಾನಕ, ಇದನ್ನು ಸಮಾಜ ಒಪ್ಪುತ್ತದೆಯೆ ? ಪ್ರಾಜ್ಞರು ಸ್ವೀಕರಿಸಿಯಾರೆ ? ಪುರಾಣದ ಕೆಲವು ಘಟನೆಗಳು "ಕಾಕ ಮೈಥುನ" ದಂತೆ ಗೌಪ್ಯವಾಗಿರಿಸುವುದು ಶ್ರೇಷ್ಠ ಸಂಸ್ಕಾರದ ಪ್ರಜ್ಞಾವಂತರ ಕರ್ತವ್ಯ. ಇಂತಹ ಸರಿ-ತಪ್ಪುಗಳ ತಾಕಲಾಟದಲ್ಲಿ ರಘು ಮಾಸ್ತರರು ಸಿಲುಕುತಿದ್ದರು. ಆದರೆ ಆ ಕಥೆಯ ಬಲಿಷ್ಠತೆ ಅದಕ್ಕೆ ಉತ್ತರವಾಗಿತ್ತು. ಯಯಾತಿರಾಜ 'ಗೌ' ಎಂಬ ಅಪ್ಸರೆಯಿಂದ ಪಡೆದ ಮಗಳು ಮಾಧವಿ. ಇವಳಿಂದ ಹರ್ಯಾಶ್ವ ವಸುಮನಸ, ದಿವೋದಾಸರಾಜ ಪ್ರತರ್ಧನ, ಉಶೀನರರಾಜ ಶಿಬಿ, ವಿಶ್ವಾಮಿತ್ರ

ಅಷ್ಟಕ ಎಂಬ ಮಹಾಪುರುಷರನ್ನು ಪಡೆಯುತ್ತಾರೆ. ಅವರು ಒಂದೊಂದು ನೆಲೆಯಲ್ಲಿ ಪ್ರಸಿದ್ದರು. ಈ ವಿಚಾರವನ್ನು ಪ್ರಸಂಗಕರ್ತೃ ರಘು ಶೆಟ್ಟರು ಕೇವಲ ಅರ್ಧಭಾಮಿನಿಯಲ್ಲಿ ಸೆರೆ ಹಿಡಿದು ತಮ್ಮ ಜಾಣ್ಮೆಯನ್ನು ಮೆರೆದಿದ್ದಾರೆ. ಆ ಪದ್ಯ ಹೀಗಿದೆ. ವಸುಮನಸತ್ಯಾಗದಿಪ್ರತರ್ಧನ।ಜಸವಡೆದಶೌರ್ಯದಲಿಸತ್ಯದಿ।ಪೆಸರಪಡೆದನುಶಿಬಿಯು ಅಷ್ಟಕ ಯಜ್ಞಶೀಲನಲಾ॥ [ಇದು ಈ ಪ್ರಸಂಗದ ರಂಗ ಸಂದೇಶ]

ಶ್ರೀಯುತರು ಯಾವುದೇ ಕಥೆಗಾದರೂ ಅದಕ್ಕೆ ಬೇಕಾದ ಆಕರ ಗ್ರಂಥಗಳನ್ನು ಹರ ಸಾಹಸದಿಂದ ಸಂಗ್ರಹಿಸಿ ಓದಿಕೊಳ್ಳುತ್ತಾರೆ. ಇವರ ಪ್ರಸಂಗದಲ್ಲಿ ಕಲಾವಿದರನ್ನು ತಮ್ಮ ಪಾತ್ರದ ಯಶಸ್ಸಿನ ಬಗ್ಗೆ ಪೂರಕ ವಿಷಯಗಳನ್ನು ಸಂಗ್ರಹಿಸುವ ಕೆಲಸಕ್ಕೆ ಹಚ್ಚುತ್ತಾರೆ. ಇದು ಕಲಾವಿದರ ಆಲಸ್ಯ ತೊರೆಸಿ ಚುರುಕಾಗಿಸುವ ಸೂತ್ರ. ಅವರನ್ನು ಉತ್ತಮ ಕಲಾವಿದರನ್ನಾಗಿ ರೂಪಿಸುವ ಅವರ ಕಾಳಜಿಗೆ ಸಾಕ್ಷಿ ಉದಾ: ಸತಿ ಸೀಮಂತಿನಿಯಲ್ಲಿ ಸೋಮವಾರ ವ್ರತ ಕುರಿತು "ವಿವರದಲಿ ವ್ರತ ನಿಯಮ ಪೇಳಿದನು" ಇಷ್ಟನ್ನೇ ಹೇಳಿ ಮುಗಿಸುತ್ತಾರೆ. ವ್ರತ ನಿಯಮವೇನೆಂದು ಕಲಾವಿದ ಇತರ ಗ್ರಂಥಗಳಿಂದ ಅಥವಾ ಕಲಾವಿದರಿಂದ ತಿಳಿಯಬೇಕು (ಅದನ್ನು ಪುಸ್ತಕದ ಕೊನೆಯಲ್ಲಿ ಉಲ್ಲೇಖಿಸಿಯೂ ಇದ್ದಾರೆ.)

ಕಂದಾವರರು ಒಂದೇ ಪದ್ಯದಲ್ಲಿ ಚಕ್ರವರ್ತಿಯ ಓಡ್ಡೋಲಗ ಮಾಡಿಸಿ, ಆತನ ಕುರಿತಾದ ಮಾಹಿತಿಯನ್ನು ನೀಡುತ್ತಾರೆ. ಇದು ಕಥೆಯ ಮಧ್ಯದಲ್ಲಿ ಆಗುವ ಒಡ್ಡೋಲಗವಾದ್ದರಿಂದ ಹೆಚ್ಚು ಮಾತಾಡುವ ಅಗತ್ಯವಿಲ್ಲ. ಕಥೆಯ ತೀವ್ರತೆಗಾಗಿ ಈ ಸೂಚನೆ ಆ ಸಂದರ್ಭದ ಪದ್ಯವನ್ನು ಗಮನಿಸಿ.

ಕೇದಾರಗೌಳ ಝಂಪೆ

ಇತ್ತ ನಿಷದೇಶ ತಾನು।ಓಲಗವ। ನಿತ್ತ ನೃಳನ್ನಪನಸೂನು॥
ಭೃತ್ಯಸಾಮಂತರಿರಲು।ವೈಭವದಿ।ಸತ್ಯಾತ್ಮತಾನೆಸೆಯಲು ॥೧॥

ಪ್ರಾಸ ಅನುಪ್ರಾಸದಿಂದ ಚಿತ್ರ ಕಾವ್ಯ ರಚಿಸುವುದು ಕಂದಾವರರ ವೈಶಿಷ್ಟ್ಯ ನೈಪುಣ್ಯತೆ ಸತಿ ಸೀಮಂತಿನಿ ಪ್ರಸಂಗದಲ್ಲಿ ತನ್ನ ಪತಿ ಯಮುನೆಯಲ್ಲಿ ಮುಳುಗಿ ಕಾಣದಾದಾಗ ಸೀಮಂತಿನಿ ಆತ್ಮಹತ್ಯೆಗೆ ಮುಂದಾದಾಗ ಆಕೆಯ ತಂದೆ ನೀಡುವ ಸಾಂತ್ವನದ ಸಂದರ್ಭದ ಪದ್ಯ ನೋಡಿ :-

ದೇಶಿ ಅಷ್ಟ

ಚಂದ್ರಾಂಗದನ ಪರಿ ಅರಿತವರಿಲ್ಲ। ಚಂದ್ರವದನೆ ನೀ ದುಃಖಿಪುದಿದು ಸಲ್ಲ॥
ಚಂದ್ರವಾರದ ವ್ರತ ಬಿಡದೆ ಮುಂದರಿಸು। ಚಂದ್ರಶೇಖರ ಕಾಯುವನು ಶ್ರದ್ಧೆಯಿರಿಸು ॥೧॥

ಇಲ್ಲಿ ಆದಿ, ಅಂತ್ಯ ಪ್ರಾಸದೊಂದಿಗೆ ಚಂದ್ರ ಎಂಬ ಶಬ್ದವನ್ನು ಬೇರೆ ಬೇರೆ ಅರ್ಥದಲ್ಲಿ ನಾಲ್ಕು ಕಡೆ ಕೊಡಲಾಗಿದೆ. ಇದು ಚಿತ್ರ ಕಾವ್ಯದ ಪಾರಿಹಾರಿಕೆಯಾಗಿದೆ.

ಚೆಲುವಿಕೆಗೆ ಚಾಂಚಲ್ಯ ಸಹಜ ಹೆಣ್ಣು ಹೂ, ಪ್ರಕೃತಿ ಎಲ್ಲವೂ ಹೊರತಲ್ಲ ಇದನ್ನು ಚಿತ್ರಾವತಿ ಪ್ರಸಂಗದಲ್ಲಿ ಹೇಮಾಂಗದನ ಪಾತ್ರದಲ್ಲಿ ತುಂಬಿದ್ದಾರೆ. ಚೆಲುವೆ ನೀನಾದರೂ ಚಂಚಲೆ ಅಹುದಮ್ಮ" ಈ ಹಾಡನ್ನು ದಿ। ಕಾಳಿಂಗ ನಾವಡರು ದೇವ ಗಾಂಧಾರಿಯಲ್ಲಿ ಹಾಡಿದ್ದು ಅದ್ಭುತ ದಾಖಲೆ. ಇತಿಹಾಸ ಇಂತಹ ಸಾಹಿತ್ಯ ನೈಪುಣ್ಯ ನಮ್ಮ ರಘುವಣ್ಣನಿಗೆ ಕರಗತವಾದ ದೈವಾನುಗ್ರಹ. ಶ್ರೀಯುತರ ಪದ್ಯಕ್ಕೆ 1 ನಿಮಿಷದಿಂದ 1 ತಾಸಿನ ವರೆಗೂ ಅರ್ಥ ಹೇಳಬಹುದು. ಕ್ಲಿಷ್ಟತೆ, ಉಚ್ಚಾರದ ಪರದಾಟ, ಸಂಧಿ ವಿಂಗಡನೆ ಇದಾವುದರ ಗೊಂದಲವಿಲ್ಲದೆ ಭಾಗವತ – ಕಲಾವಿದನಿಗೆ ಅನುಕೂಲಿಸಿ ಕವಿ ಹೃದಯ ಭಾಷೆಯನ್ನು ಸುಲಭವಾಗಿ ಪ್ರೇಕ್ಷಕರಿಗೆ ತಲುಪಿಸುವ ಸಾಹಿತ್ಯ ರಸ ಪಾಕದಲ್ಲಿ ರಘು ಶೆಟ್ಟರು ಸಿದ್ಧ ಹಸ್ತರು.

ಸಂದರ್ಭಕ್ಕೆ ಸರಿಯಾಗಿ ಗಾದೆಮಾತು, ಲೋಕೋಕ್ತಿ, ಗೌಪ್ಯತೆ, ಮುಂತಾದುವುಗಳನ್ನು ಪ್ರಯೋಗಿಸುವಲ್ಲಿ ಕಂದಾವರದವರು ಅತಿ ಜಾಣರಾಗುತ್ತಾರೆ.

1) ಬನಶಂಕರಿಯಲ್ಲಿ "ಇದ್ದಿಲು ಮೃತ್ತಿಕೆ ಕದ್ದಾದರು ಅದು। ಮೆದ್ದುವಾಸೆ ತೀರ" ಗರ್ಭಿಣಿಯ ಗುಟ್ಟನ್ನು ತಿಳಿಸುತ್ತಾರೆ.

2) ಚಿತ್ತಾವತಿಯಲ್ಲಿ ಆಸೆಯಿಂದ ಕೆಡುಕನ್ನು ತಾನಾಗಿ ಆಹ್ವಾನಿಸುತ್ತಾರೆ ಎಂಬಲ್ಲಿ "ತಿನ್ನುವಾಸೆಯಿಂದ ಗಾಳವನ್ನು ನುಂಗಿ ಮತ್ಸ್ಯಪಡುವ।ಬನ್ನ" ವೆಂಬ ಉದಾಹರಣೆ ನೀಡುತ್ತಾರೆ.

3) ಶೂದ್ರ ತಪಸ್ವಿನಿಯಲ್ಲಿ ದುರಾಚಾರಿಯಾದ ಮಗನನ್ನು ದಾರಿಗೆ ತರಲು – "ಹರೆಯ ತುಂಬಿದ ಮೇಲೆ ತರವಲ್ಲ ಬಿಗುಮಾನ। ಸರಿದಾರಿಗಳ ತರಲು । ಪರಿಣಯವೇ ಸೂಕ್ತ" ಎಂಬ ಲೋಕೋಕ್ತಿ ಉದ್ದರಿಸುತ್ತಾರೆ.

ತಮ್ಮ ಪರಿಸರದಲ್ಲಿ ನಡೆದ ಸತ್ಯ ಘಟನೆಯನ್ನಾಧರಿಸಿ ಅವರು ರಚಿಸಿದ ಶಾಪ–ಸಂಯೋಗವೆಂಬ ಕೃತಿ ಗುಣಮಟ್ಟದಲ್ಲಿ, ರಂಗಪರಿಣಾಮದಲ್ಲಿ ಒಂದು ಶ್ರೇಷ್ಠ ಪ್ರಸಂಗವೆನ್ನಬಹುದು. ಅಲ್ಲಿಯೂ ಕೂಡಾ ಅವರ ಸಾಹಿತ್ಯ ಶಕ್ತಿ ಅಡಿಗಡಿಗೆ ಪ್ರಕಟವಾಗುತ್ತದೆ. ಯುದ್ಧದ ದೃಶ್ಯದಲ್ಲಿ ವಿದ್ಯುನ್ಮತಿ ಕಲ್ಯಾಣ ಹಾಗೂ ಚಿತ್ರಾಕ್ಷಿ ಕಲ್ಯಾಣದ ಉದಾಹರಣೆಗಳನ್ನು ನೀಡಿ ಕಲಾವಿದರು ಆ ಪ್ರಸಂಗಗಳನ್ನು ನೋಡುವಂತೆ ಮಾಡುತ್ತಾರೆ. ಕಥೆಯನ್ನು ತಿಳಿಯುವಂತೆ ಒತ್ತಾಸೆ ನೀಡುತ್ತಾರೆ. ಹಾಸ್ಯಪಾತ್ರಕ್ಕೆ ಸಾಕಷ್ಟು ಅನುವು ಮಾಡಿಕೊಡುತ್ತಾರೆ. ಯಕ್ಷಗಾನ ರಂಗಭೂಮಿಗೆ ಅನಿವಾರ್ಯವಾದ

ರಕ್ಕಸ, ಮುನಿ ಮುಂತಾದ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಸಾಮಾಜಿಕ ಕಥೆಯಾದರೂ ಅದನ್ನು ಪೌರಾಣಿಕ ಘಟನೆಗಳಂತೆ ಚಿತ್ರಿಸಿದ್ದಾರೆ. ಅದರಲ್ಲಿಯ ಒಂದು ಪದ್ಯ ಕವಿಗಳಿಗೂ ಸಾಹಿತ್ಯದ ಗ್ರಾಸವಾಗುತ್ತದೆ. ಭಾವ ಜೀವಿಗಳಿಗೆ ರೋಮಾಂಚನ. ಹೆಣ್ಣಿನ ಮನ-ಹೃದಯದ ಕೋಮಲತೆಗೆ ಸಾಕ್ಷಿಯಾಗುತ್ತದೆ. ತ್ಯಾಗ, ವಾತ್ಸಲ್ಯ, ಔದಾರ್ಯ, ಸೌಜನ್ಯ ಕರುಣೆಯ ಮಹಾಪೂರವಾಗಿಸುತ್ತಾ ಯಾಮಿನಿ ಪಾತ್ರ ಅನಾವರಣಗೊಳ್ಳುತ್ತದೆ. "ಮುಸುಕಿದಾ ಕತ್ತಲೆ ಕಳೆದು ತಂಪನ್ನೀವಾಶಶಿ ಉದಯಿಸಿ ಬರುವನಕ" ಎನ್ನುವಲ್ಲಿ ಕತ್ತಲೆ ಕಳೆದು ಸೂರ್ಯನ ಬೆಳಕು ಬಂದರೆ ಹಗಲಿನ ಬಿಸಿಲು, ತಾಪದಿಂದ ಬದುಕು ಬೇಯುತ್ತದೆ. ಬದಲಿಗೆ ಕತ್ತಲೆ ಕಳೆಯಲು ಚಂದ್ರ ಉದಯಿಸಿದರೆ ಬಾಳು ತಂಪಾಗುತ್ತದೆ. ಎಂಬ ಸೂಕ್ಷ್ಮತೆಯನ್ನು ಈ ಉದಾಹರಣೆಯಲ್ಲಿ ಸ್ಪಷ್ಟ ಪಡಿಸುತ್ತಾರೆ. ಇದು ಶ್ರೀಯುತರ ಮೃದು ಹೃದಯ ಹಾಗೂ ಶಾಂತ ಸ್ವಭಾವವನ್ನು ಸೂಚಿಸುತ್ತದೆ.

ಶ್ರೀಯುತರು ಪ್ರಸಂಗ ರಚನೆಯಲ್ಲಿ ಕಟ್ಟು ನಿಟ್ಟಾದ ನಿಯಮವನ್ನು ಪಾಲಿಸುವಲ್ಲಿ ಎಳ್ಳಷ್ಟು ಸಡಿಲಾಗಲಿಲ್ಲ. ಇವರ ರಚನೆಯ ಎಲ್ಲಾ ಪ್ರಸಂಗಗಳು ಪರಂಪರೆ. ಸಂಪ್ರದಾಯದಂತೆ ಪೀಠಿಕಾ ಪದ್ಯ ವಾರ್ಧಕ್ಯದಿಂದ ಪ್ರಾರಂಭವಾಗುತ್ತದೆ. ನಾಂದಿ ಪದ್ಯವು ಭಾಮಿನಿಯಾದರೆ ಓಲಗದ ಪದ್ಯ ಝುಂಪೆ ತಾಳದಲ್ಲಿ, ಕೆಲಮೊಮ್ಮೆ ನಾಂದಿ ಪದ್ಯವು ವಾರ್ಧಕ್ಯವಾದರೆ ಓಲಗದ ಪದ್ಯ ತ್ರಿವುಡೆ ತಾಳದಲ್ಲಿ ಈ ಬದಲಾವಣೆ ಅಪರೂಪಕ್ಕೊಮ್ಮೆ ಕಾಣಬಹುದು. ಇದು ಗಾಂಧಿತತ್ವವನ್ನು ಪ್ರತಿನಿಧಿಸುತ್ತದೆ. " ಆರಾಮ್ ಹರಾಮ್ ಹೈ" ಗಾಂಧಿಜೀಯವರ ಸಂದೇಶ. ವಿರಾಮವೆಂದರೆ ಒಂದು ಕೆಲಸದಿಂದ ಇನ್ನೊಂದು ಕೆಲಸಕ್ಕೆ ವರ್ಗಾಯಿಸಿಕೊಳ್ಳುವುದು. ಇಲ್ಲಿಯೂ ತಮ್ಮ ಶಿಕ್ಷಕ ವೃತ್ತಿಯ ಗಾಂಧೀವಾದ ಅಲಂಕರಿಸಿಕೊಳ್ಳುತ್ತಾ ಇಂದಿಗೂ ಬಿಳಿಪಂಚೆ, ಬಿಳಿ ಅಂಗಿ ಧರಿಸುತ್ತಾ ನುಡಿದಂತೆ ನಡೆ ಎಂಬುದಕ್ಕೆ ತಮ್ಮನ್ನೇ ಪ್ರತಿನಿಧಿಸಿಕೊಂಡ ಶ್ರೀ ರಘುರಾಮ ಶೆಟ್ಟರು ವಂದನಾರ್ಹರು. ನಿಷ್ಕಲ್ಮಷದ ಮನ-ಹೃದಯ-ಬುದ್ಧಿ-ನಡೆ-ನುಡಿಗಳ ಶುಭ್ರತೆ, ವಿದ್ಯೆ, ಸದ್ಗುಣ, ಸರಳತೆ, ಬದ್ಧತೆಗಳಿಂದ ಕೂಡಿದ ಈ ಯಕ್ಷಮಣಿಗೆ ಸಮಾಜದಿಂದ ಸಲ್ಲಬೇಕಾದ ಮಾನ್ಯತೆ, ಪುರಸ್ಕಾರಗಳು ಸಮ ಪ್ರಮಾಣದಲ್ಲಿ ದೊರೆಯಲಿಲ್ಲವೇನೋ ಎಂದು ಒಮ್ಮೊಮ್ಮೆ ಅನಿಸುತ್ತದೆ. ಪೈಸೆ ರೂಪಾಯಿ ಆದಾಗ (ಮಾಡಿದಾಗ) ರೂಪಾಯಿ ಮರೆಯಾಗುವುದು ಸಹಜವಲ್ಲವೇ ? ಧನದಾಸೆ - ಧನದಾಹ, ಕೀರ್ತಿಯ ಮೋಹ-ಕೀರ್ತಿಯ ಅಮಲು, ಅಹಂ ಇಲ್ಲದ ಇವರನ್ನು ಇವರ ಕುರಿತಾದ ಗ್ರಂಥ "ಕೆಂದಾವರೆ" ಅನಾವರಣಗೊಳ್ಳುವಾಗ ಕನಿಷ್ಠ ಪಕ್ಷ ರಘು ಶೆಟ್ಟರ ಹೆಸರನ್ನು ನೆನಪಿಸಿಕೊಳ್ಳದ ದುರ್ಘಟನೆಗಳಿಗೆ ನಮ್ಮ ರಘುವಣ್ಣ ಮೌನವಾಗಿ

ಮರಗುತ್ತಾರೆ. ಮತ್ತೊಮ್ಮೆ " ನನ್ನ ಮಗು ಎಲ್ಲಾದರೂ ಬೆಳೆಯಲಿ; ಕೀರ್ತಿ ಶಾಲಿಯಾದರೆ ಸಾಕು " ಎಂಬ ಉದಾತ್ತಭಾವದಿಂದ ತಮಗೆ ತಾವೇ ಸಮಾಧಾನಗೊಳ್ಳುತ್ತಾ ಆತ್ಮ ಸಂಯಮ ಶಕ್ತಿಯನ್ನು ಬೆಳೆಸಿಕೊಂಡದ್ದು ಶ್ರೀಯುತರ ಸಂಸ್ಕಾರದ ಹಿರಿಮೆಗೆ ಸಾಕ್ಷಿಯಾಗುತ್ತದೆ. ಪ್ರಸ್ತುತ ವರ್ಷದವರೆಗೂ ರಘು ಶೆಟ್ರನ್ನು ವಿಧಿ ನೋಯಿಸಿ, ಬೇಯಿಸಿ ಪಕ್ವವಾಗಿಸುತ್ತಲೇ ಇದೆ. ಎಲ್ಲಾ ನೋವನ್ನು ಮರೆತು ಮತ್ತೆ ನಗುತ್ತಾ ಮುಂದರಿಯುವುದು ಇವರಿಗೆ ಜನ್ಮಗುಣ. ಇವರ ಯಕ್ಷ ಪಯಣ ಪಥವನ್ನು ಅವಲೋಕಿಸಿದರೆ ರಾಮ ನಿರ್ಯಾಣದ ಪದ್ಯ ನೆನಪಾಗುತ್ತದೆ " ನೋವು, ನಲಿವುಗಳಿಂದ ಕೂಡಿದ। ಜೀವನವ ಕಂಡಾಯ್ತು............ ನೀತಿಯೊಂದೆ ದೇವನೆನಿಸಿತು" ಅಂತೆಯೇ ರಘುವಣ್ಣನ ಬದುಕಿನಲ್ಲಿ ಶಿಕ್ಷಕ ವೃತ್ತಿ ನೀತಿ, ಯಕ್ಷಕಾವ್ಯ ಕವಿ ನೀತಿ, ರಂಗದೇವತೆಗೆ ನ್ಯಾಯ ಒದಗಿಸುವ ನೀತಿ, ಮನುಷ್ಯ ಜನ್ಮದ ಮಾನವೀಯತೆಯ ನೀತಿ, ಸತ್ಪಥಾಚರಣೆಯ ನೀತಿ ಇವುಗಳೇ ಬದುಕಿನ ದಾರಿಯಾಗಿಸಿಕೊಂಡ ಶ್ರೀಯುತರಿಗೆ ಶ್ರೀದೇವರು ಸಕಲ ಸೌಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಕಂದದ ಕುಂದದ ಕಂದಾವರದವರು

ಭಾಸ್ಕರ ರೈ, ಕುಕ್ಕುವಳ್ಳಿ
ಯಕ್ಷಗಾನ ವಿದ್ವಾಂಸರು, ಮಂಗಳೂರು

ದಶಕದ ಹಿಂದೆ ಯಕ್ಷಗಾನ ಜಾನಪದ ಅಕಾಡೆಮಿಯೊಂದಿಗೆ ಸೇರಿದ್ದ ಕಾಲ ಡಾ. ಹಾ. ಶಿ. ರಾಮಚಂದ್ರೇ ಗೌಡರು ಅಧ್ಯಕ್ಷರಾಗಿದ್ದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಲ್ಲಿ ನಾನು ಸದಸ್ಯನಾಗಿದ್ದೆ. ಉಡುಪಿಯಿಂದ ಪ್ರೊ। ಎಂ.ಎಲ್. ಸಾಮಗರು ನನ್ನ ಓರಗೆಯ ಸದಸ್ಯ. ಆ ಸಮಯದಲ್ಲಿ ಮಂಗಳೂರಿನಲ್ಲಿ ಎರಡು ಐತಿಹಾಸಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿದ ಧನ್ಯತೆ ನನ್ನದು. ಒಂದು ಮಹಿಳಾ ಯಕ್ಷಗಾನ ಸಮ್ಮೇಳನ "ಯಕ್ಷ ಪ್ರಮೀಳಾ" ಕ್ಕೆ ಅಕಾಡೆಮಿಯ ಸಹಯೋಗವಿತ್ತು "ಬಂಟಕಲೋತ್ಸವ"ಕ್ಕೆ ನಾನು ಅಕಾಡೆಮಿ ಸದಸ್ಯನೆಂಬ ಸಂಬಂಧ ಬಿಟ್ಟರೆ ಅಕಾಡೆಮಿಯಿಂದಾಗಲೀ ಸರಕಾರದಿಂದಾಗಲೀ ಯಾವುದೇ ಆರ್ಥಿಕ ಸಂಪನ್ಮೂಲ ಇರಲಿಲ್ಲ. ಅದು ಸಂಪೂರ್ಣ ಖಾಸಗಿ. ಮಂಗಳೂರಿನ ಜೆಪ್ಪು ಬಂಟರ ಸಂಘದ ಆಶ್ರಯದಲ್ಲೇ ಸಮಗ್ರ ಕಲಾಪ ನಡೆದಿತ್ತು ಆದರೂ ಹೊಟ್ಟೆಗಾಗದ ಕೆಲವರು, ಅದರ ವಿರುದ್ಧ ಪತ್ರಿಕೆಯಲ್ಲಿ ಬರೆದು ತಮ್ಮ ಬಣ್ಣ ಬಯಲಾಗಿಸಿದ್ದರು. ನಾನದಕ್ಕೆ ಉತ್ತರಿಸುವ ಗೋಜಿಗೆ ಹೋಗಿಲ್ಲ ಎಂಬುದು ಬೇರೆ ಮಾತು. ಆದರೆ ಆ ಕಲೋತ್ಸವ ಯಕ್ಷಗಾನ ಕಲಾಪ್ರಕಾರಕ್ಕೆ ದೊಡ್ಡ ಸಮುದಾಯವೊಂದರ ಕೊಡುಗೆಯನ್ನು ಬೃಹತ್ ಪ್ರಮಾಣದಲ್ಲಿ ದಾಖಲಿಸಿದ ಹೆಗ್ಗಳಿಕೆಗೆ ಪಾತ್ರವಾಯಿತು.

ಕಂದಾವರ ರಘುರಾಮ ಶೆಟ್ಟರ ನಿಕಟ ಸಂಪರ್ಕ ನನಗಾದುದು ಮೇಲೆ ಉಲ್ಲೇಖಿಸಿದ "ಬಂಟಕಲೋತ್ಸವ"ದಲ್ಲಿ ನನ್ನ ಸಂಪಾದಕತ್ವದ "ಒಡ್ಡೋಲಗ" ಗ್ರಂಥಕ್ಕೆ ಅವರು ಎರಡು ಲೇಖನಗಳನ್ನು ಬರೆದು ಕೊಟ್ಟಿದ್ದರು. ಹಳೆ ತಲೆಮಾರಿನಲ್ಲಿ ಆಗಿ ಹೋದ ಬಡಗುತಿಟ್ಟು ಕಲಾವಿದರ ಬಗ್ಗೆ ಕೆಲವು ಉಪಯುಕ್ತ ಮಾಹಿತಿಗಳನ್ನು ನೀಡಿದ್ದರು. ಎರಡು ದಿನ ಮಂಗಳೂರಿನಲ್ಲೇ ಇದ್ದು ನಮ್ಮೊಂದಿಗೆ ಆತ್ಮೀಯವಾಗಿ ಬೆರೆತಿದ್ದರು. ತಾಳ ಮದ್ದಳೆಯೊಂದರಲ್ಲಿ ನನ್ನ "ಸುಧನ್ವ" ನಿಗೆ ಅವರು

"ಸುಗರ್ಭೆ" ಯಾಗಿ ಅರ್ಥ ಹೇಳಿದ್ದರು. ಆಗಿನ ಅವರ ಒಡನಾಟ, ಅನಂತರದ ಆತ್ಮೀಯತೆಗಳಿಂದ ಅವರ ವ್ಯಕ್ತಿತ್ವದ ಹಲವು ಮುಖಃಗಳನ್ನು ನಾನು ಪರಿಚಯಿಸಿ ಕೊಂಡಿದ್ದೇನೆ. ಅವರೊಬ್ಬ ಸಜ್ಜನ ವಿದ್ವಾಂಸ, ನಿಗರ್ವಿ, ಸದ್ದಿಲ್ಲದ ಸಾಧಕ, ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ ಕಬ್ಬಿಗರ ಓಟ.

ಕಲಾಕ್ಷೇತ್ರದಲ್ಲಿ ಕಂದಾವರರದು ಎಂದೆಂದೂ ಕಂದದ ಹಾಗೂ ಕುಂದದ ವ್ಯಕ್ತಿತ್ವ, ಎಳವೆಯಲ್ಲಿ ಅವರು ನೂರಾರು ನಾಟಕಗಳಲ್ಲಿ ಅಭಿನಯಿಸಿದ ಪ್ರಬುದ್ಧ ಕಲಾವಿದ 'ಕಂದ'ದ ಪ್ರತಿಭೆಯ ವರ ನಟ ಇಂದು ಎಂಭತ್ತರ ಹೊಸ್ತಿಲಲ್ಲೂ 'ಕುಂದ'ದ ಕಾವ್ಯಾಸಕ್ತಿಯ ಕವಿವರ. ಯಕ್ಷಲೋಕದಲ್ಲಿ ಅವರದು ರಘುವರ ರಾಮನ ನಡಿಗೆ, ಕಲೆ-ಸಂಸ್ಕೃತಿ ಸಾಹಿತ್ಯಗಳಿಂದ ಸಮ್ಮಿಲಿತವಾದ ಬಹುಮುಖೀ ವ್ಯಕ್ತಿತ್ವ ಅವರದು. ಕುಂದನಗರಿ ಕಂದಾವರದ ಅಭಿನವರಾಮ ರಘುರಾಮ ಶೆಟ್ಟರು. ಏಕ ಲಕ್ಷ್ಯವಿರಿಸಿ ಗುರಿತಲುಪಿದ ಅಪೂರ್ವ ಸಾಧಕರು.

ರಘುರಾಮ ಶೆಟ್ಟರು ಮೂಲತಃ ನಾಟಕ ಕಲಾವಿದರು. ಐವತ್ತರ ದಶಕದಲ್ಲಿ ಹಲವಾರು ಕನ್ನಡ ನಾಟಕಗಳಲ್ಲಿ ಅವರದು ಪ್ರಮುಖ ಹಾಸ್ಯ ಪಾತ್ರ. ಕುಂದಾಪುರದಾದ್ಯಂತ ಹಾಸ್ಯ ನಟರಾಗಿಯೇ ಅವರು ಜನಪ್ರಿಯರು. ಕೆಲವು ಹೆಸರಾಂತ ಕಂಪೆನಿ ನಾಟಕಗಳಲ್ಲೂ ಗೌರವ ನಟರಾಗಿ ಅಭಿನಯಿಸಿದ ಅನುಭವ ಅವರಿಗಿದೆ. ಸ್ವತಃ ಶಿಕ್ಷಕನಾಗಿ ತನ್ನ ವಿದ್ಯಾರ್ಥಿಗಳಲ್ಲಿ ನಟನಾ ಕೌಶಲ್ಯವನ್ನು ಬೆಳೆಸುವಲ್ಲಿಯೂ ಸಫಲರಾಗಿರುವುದಲ್ಲದೆ, ಶಾಲಾ ಮಕ್ಕಳಿಗೆ ಆಡಲು ಅನುಕೂಲವಾದ ಏಳು ಕಿರುನಾಟಕಗಳನ್ನು ಅವರು ರಚಿಸಿದ್ದಾರೆ. ಅನೇಕ ಕತೆ, ಕವನ, ಶಿಶು ಗೀತೆಗಳನ್ನೂ ಬರೆದಿದ್ದಾರೆ. ಅವುಗಳಲ್ಲಿ ಕೆಲವು ಬಹಳ ಹಿಂದೆ ಪ್ರಜಾಮತ, ನವಯುಗ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಹಳೆಯ ಕಾವ್ಯ ಗ್ರಂಥಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವ 'ಪುರಾಣವಾಚನ' ಪ್ರಕಾರದಲ್ಲೂ ರಘುರಾಮ ಶೆಟ್ಟರಿಗೆ ದಟ್ಟವಾದ ಅನುಭವವಿದೆ. ರಾಮಾಯಣ, ಮಹಾಭಾರತ ಭಾಗವತ ಮುಂತಾದ ಪ್ರಾಚೀನ ಗ್ರಂಥಗಳು, ತೊರವೆ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾದವರ ಮಹಾಕಾವ್ಯಗಳ ವಾಚನ ಮತ್ತು ಪ್ರವಚನಗಳೆರಡರಲ್ಲೂ ಪಳಗಿದ್ದು, ಹಲವೆಡೆ ಕಾರ್ಯಕ್ರಮ ನೀಡಿದ್ದಾರೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಆಸಕ್ತರಾದ ಅವರು ಹಲವು ಗೋಷ್ಠಿ, ಕಮ್ಮಟಗಳಲ್ಲಿ ಭಾಗವಹಿಸಿದ್ದಾರೆ. ಭಾಷಣ, ಲೇಖನ, ಪ್ರಬಂಧ ಮಂಡನೆಗಳಿಂದ ಗಮನ ಸೆಳೆದಿದ್ದಾರೆ.

ಕುಂದಾಪುರ ತಾಲೂಕು ಘಟಕದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಒಂದು ಅವಧಿಗೆ ಸೇವೆ ಸಲ್ಲಿಸಿದ್ದಾರೆ.

ಯಕ್ಷಗಾನ ರಘುರಾಮ ಶೆಟ್ಟರಿಗೆ ಬಹಳ ಆಪ್ತವಾದ ಕ್ಷೇತ್ರ. ಅದರ ಎಲ್ಲಾ ಅಂಗಗಳಲ್ಲೂ ಅವರು ಪರಿಣತರು. ಭಾಗವತಿಕೆ ಮತ್ತು ನೃತ್ಯಗಾರಿಕೆಯನ್ನು ವಿಧ್ಯುಕ್ತವಾಗಿ ಅಭ್ಯಸಿಸಿದ್ದಾರೆ. ತಾಳಮದ್ದಳೆ ಅರ್ಥಧಾರಿಯಾಗಿ ಹಲವು ಪ್ರಸಿದ್ಧರೊಂದಿಗೆ ಭಾಗವಹಿಸಿರುವುದಲ್ಲದೆ, ಸಂಘಟಕರಾಗಿಯೂ ದುಡಿದಿದ್ದಾರೆ. ಯಕ್ಷಗಾನ ಪ್ರಸಂಗ ರಚನೆಯಲ್ಲಂತೂ ಅವರದು ಎತ್ತಿದ ಕೈ.

ಅವರ ಪ್ರಸಂಗಗಳಲ್ಲಿ ನಮಗೆ ಇಷ್ಟವಾಗುವುದು ಕಥಾ ವಸ್ತುವಿನ ಕ್ರಮಬದ್ಧ ನಿರೂಪಣೆ, ಪದ್ಯಗಳಲ್ಲಿರುವ ಸುಲಲಿತ ಸಾಹಿತ್ಯ ಮತ್ತು ಗೇಯತೆ. ಕಾವ್ಯಾಲಂಕಾರ ಮತ್ತು ಛಂದೋ ಬದ್ಧತೆಯಲ್ಲೂ ಶೆಟ್ಟರು ಸಾಕಷ್ಟು ಪರಿಶ್ರಮ ವಹಿಸಿ ಪ್ರಸಂಗಗಳನ್ನು ಹೆಣೆದಿದ್ದಾರೆ. ಪಾತ್ರ ಕಲ್ಪನೆ ಮತ್ತು ದೃಶ್ಯ ಜೋಡಣೆಗಳ ನಾಟಕೀಯ ದೃಷ್ಟಿಯಿಂದಾಗಿ ಪೌರಾಣಿಕೇತರ ಪ್ರಸಂಗಗಳನ್ನೂ ರಂಗದಲ್ಲಿ ಗೆಲ್ಲಿಸುವಲ್ಲಿ ಅವರು ಸಫಲರಾಗಿದ್ದಾರೆ. ಆದ್ದರಿಂದಲೇ ರಘುರಾಮ ಶೆಟ್ಟರ ಪ್ರಸಂಗಗಳು ಯಾವತ್ತೂ ಯಕ್ಷಗಾನದ ಆವರಣದಿಂದ ಹೊರಬಂದಿಲ್ಲ. ಪ್ರೇಕ್ಷಕರ ಅಭಿರುಚಿಯನ್ನು ಕೆಡಿಸಿಲ್ಲ. ಇದರಿಂದಾಗಿಯೇ ವರ್ಷದಿಂದ ವರ್ಷಕ್ಕೆ ಯಕ್ಷ ರಸಿಕರು ಹೊಸ ಹೊಸ ಪ್ರಸಂಗಗಳನ್ನು ಅವರಿಂದ ನಿರೀಕ್ಷಿಸುವಂತಾಯಿತು. ಇಳಿ ವಯಸ್ಸಿನಲ್ಲೂ ಕುಂದದ ಉತ್ಸಾಹದಿಂದ ಅವರು ಬರೆಯುವಂತಾದದ್ದು ಈ ಕಾರಣದಿಂದಲೇ.

ಮಾನ-ಸಮ್ಮಾನಗಳು ಸಾಕಷ್ಟು ಸಂಖ್ಯೆಯಲ್ಲಿ ಶೆಟ್ಟರನ್ನರಸಿ ಬಂದಿವೆ. ಮುಂಬಯಿ, ಬೆಂಗಳೂರು, ಕಾಸರಗೋಡು, ಮೈಸೂರು, ದಾವಣಗೆರೆ, ಮಂಗಳೂರು, ಉಡುಪಿ, ಧಾರವಾಡ ಮೊದಲಾದ ಕಡೆ ಅಭಿಮಾನಿಗಳು ಕರೆಸಿ ಅವರನ್ನು ಗೌರವಿಸಿದ್ದಾರೆ. ನೂರಾರು ಸಂಘ- ಸಂಸ್ಥೆಗಳು ಸನ್ಮಾನಿಸಿವೆ. ಸೀತಾನದಿ ಪ್ರಶಸ್ತಿ, ಯಕ್ಷಸಾಹಿತ್ಯ ಶ್ರೀ ಪ್ರಶಸ್ತಿ, ಕಣಂಜಾರು ಪ್ರಶಸ್ತಿ, ಮಟ್ಟಿ ಮುರಳೀಧರ ಪ್ರಶಸ್ತಿ, ಕವಿಮುದ್ದಣ ಪ್ರಶಸ್ತಿಗಳು ಅವರಿಗೆ ಲಭಿಸಿವೆ. ಬಂಟರ ಯಾನೆ ನಾಡವರ ಮಾತೃ ಸಂಘವು ಚಿನ್ನದ ಪದಕದೊಂದಿಗೆ 'ಕಲಾಸಾಧಕ' ಬಿರುದನ್ನಿತ್ತು ಸತ್ಕರಿಸಿದೆ. ಸಾಹಿತ್ಯ ಸಮ್ಮೇಳನದಲ್ಲೂ ಅವರು ಗೌರವಿಸಲ್ಪಟ್ಟಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯವರು ಪ್ರಕಟಿಸಿದ 'ಇಂದಿನ ರಂಗ ಕಲಾವಿದರು' ಎಂಬ ಪುಸ್ತಕದಲ್ಲಿ ಅವರ ಹೆಸರು ದಾಖಲಾಗಿರುವುದು ಶೆಟ್ಟರ ಬಹುಮುಖೀ ಸಾಧನೆಗೆ ಹಿಡಿದ ಕನ್ನಡಿ.

ಕರಾವಳಿಯ ಯಕ್ಷಗಾನ ಮತ್ತು ಪ್ರಸಂಗ ಸಾಹಿತ್ಯಕ್ಕೆ ಕಂದಾವರ ರಘುರಾಮ ಶೆಟ್ಟರ ಕೊಡುಗೆ ಸಣ್ಣದೇನಲ್ಲ. ಹಳೆಯ ಮತ್ತು ಹೊಸ ತಲೆಮಾರಿನ ನಡುವೆ ಕೊಂಡಿಯಾಗಿ, ನೆಲದ ಸಂಸ್ಕೃತಿಯನ್ನು ಉಳಿಸುವಲ್ಲಿ ಹಾಗೂ ಪಾರಂಪರಿಕ ಕಲೆಯ ಸೊಗಡು ಆಧುನಿಕ ಸಮಾಜಕ್ಕೂ ರುಚಿಸುವಂತೆ ಮಾಡುವಲ್ಲಿ ಅವರ ಪರಿಶ್ರಮ ಸಾರ್ವಕಾಲಿಕ ಮಹತ್ವ ಪಡೆಯುತ್ತದೆ. ಇದು ಯಕ್ಷಗಾನ ಬೆಳವಣಿಗೆಯ ದಾರಿಯಲ್ಲಿ ಒಂದು ಮೈಲಿಗಲ್ಲಾಗಿ ನಿಲ್ಲುವುದಲ್ಲದೆ, ಈ ಕಲೆಯನ್ನರಸಿ ಬರುವವರಿಗೆ ಒಂದು ಮಾದರಿ ವ್ಯಕ್ತಿತ್ವವಾಗಿಯೂ ಕಂದಾವರದವರ ಹೆಸರು ಪ್ರಸ್ತುತವೆನಿಸುತ್ತದೆ.

ಕಂದಾವರದವರ ಕೃತಿಗಳು

ಪ್ರಸಂಗಗಳು

ಪೌರಾಣಿಕ : 1) ಸತಿ ಸೀಮಂತಿನಿ 2) ವಧೂಮಾಧವಿ 3) ನಾಗನಂದನೆ 4) ಸೀತಾಪಾರಮ್ಯ 5) ವಸುವರಾಂಗಿ 6) ಹಂಸ ದಮಯಂತಿ 7) ರಾಧೇಯ 8) ಗಂಗಾಶಾಪ 9) ಯೋಗ ಗುರುಪತಂಜಲಿ 10) ಇಚ್ಛಾಮರಣಿ ಭೀಷ್ಮ

ಕ್ಷೇತ್ರಮಹಾತ್ಮೆ : 1) ಪುರಿಕ್ಷೇತ್ರಮಹಾತ್ಮೆ 2) ಹರಿಹಳ್ಳಿ ಕ್ಷೇತ್ರ ಮಹಾತ್ಮೆ 3) ಆದಿಚುಂಚನಗಿರಿ ಮಹಾತ್ಮೆ 4) ರಕ್ತೇಶ್ವರಿ ಕ್ಷೇತ್ರ ಮಹಾತ್ಮೆ 5) ಬಾರಾಳಿ ಕ್ಷೇತ್ರ ಮಹಾತ್ಮೆ 6) ಶಿರಡಿ ಕ್ಷೇತ್ರ ಮಹಾತ್ಮೆ 7) ಅಮೃತೇಶ್ವರಿ ಕ್ಷೇತ್ರ ಮಹಾತ್ಮೆ 8) ಗೋಳಿಗರಡಿ ಕ್ಷೇತ್ರ ಮಹಾತ್ಮೆ

ಜಾನಪದ : 1) ಶ್ರೀ ದೇವಿ ಬನಶಂಕರಿ

ಕಾಲ್ಪನಿಕ : 1) ಚೆಲುವೆ ಚಿತ್ರಾವತಿ 2) ರತಿರೇಖಾ 3) ಸಾಧ್ವಿಸುನಂದೆ 4) ಶೂದ್ರ ತಪಸ್ವಿನಿ 5) ಚಾರುಚಂದ್ರಿಕೆ 6) ತ್ಯಾಗ ತಪಸ್ವಿ 7) ಸಮರ ಸಂಧಾನ 8) ವಿಜಯಕೇಸರಿ 9) ಪುಷ್ಪಾಂಜಲಿ 10) ಶಾಪ ಸಂಯೋಗ 11) ಕಲ್ಯಾಣಮಸ್ತು 12) ಗಿರಿಕನ್ಯೆ 13) ಮಾತೃದೇವೋಭವ

ಚಾರಿತ್ರಿಕ : ಮಹಿಮಾ ಮಾಧವ

ಆಯ್ದ ಹತ್ತು ಪ್ರಸಂಗಗಳ ಸಂಕಲನ 'ದಶಮಿ' (ಪ್ರಕಟಿತ)

ನಾಟಕಗಳು : 1) ಶ್ರೀ ಕೃಷ್ಣ ವಿಜಯ 2) ಭಾರ್ಗವ ವಿಜಯ 3) ಪುರಂದರದಾಸರು 4) ನಿಜಗಲ್ಲು ಗಿರಿಜವ್ವ 5) ನಾಗಾನಂದ 6) ಮಹಾದಾನಿ ಮಯೂರ 7) ಸೀತಾ ಪರಿತ್ಯಾಗ

ಜೀವನ ಚರಿತ್ರೆ : 1) ಯಕ್ಷಗಂಧರ್ವ ಹಾರಾಡಿ ರಾಮಗಾಣಿಗರು (ಪ್ರಕಟಿತ)

ಸಂಪಾದಿತ ಕೃತಿಗಳು : 1) ಮಂದಾರ್ತಿ ಮೇಳದಲ್ಲಿ ಹಾರಾಡಿ ರಾಮ ಗಾಣಿಗರು (ಪ್ರಕಟಿತ) 2) ಪೂರ್ಣಚಂದ್ರ (ಡಾ। ವೈ. ಚಂದ್ರಶೇಖರ ಶೆಟ್ರ ಸಂಸ್ಮರಣ ಗ್ರಂಥ)

ಕಂದಾವರ ರಘುರಾಮ ಶೆಟ್ಟಿಯವರು ಪಡೆದಿರುವ ಪ್ರಶಸ್ತಿಗಳು

1) ಸೀತಾನದಿ ಪ್ರಶಸ್ತಿ :– ಸೀತಾನದಿ ಗಣಪಯ್ಯ ಶೆಟ್ರ ಪ್ರತಿಷ್ಠಾನದಿಂದ

2) ಯಕ್ಷ ಸಾಹಿತ್ಯ ಶ್ರೀ ಪ್ರಶಸ್ತಿ :– ದಾವಣಗೆರೆ ವಿರಕ್ತ ಮಠದ ಸ್ವಾಮಿಗಳಿಂದ

3) ಕಣಂಜಾರು ಪ್ರಶಸ್ತಿ :– ಮುಂಬಯಿ ಬಂಟರ ಸಂಘದಿಂದ

4) ಕಲಾ ಸಾಧಕ ಪ್ರಶಸ್ತಿ :– ಬಂಟರ ಮಾತೃ ಸಂಘ, ಮಂಗಳೂರು, ಇವರಿಂದ – ಚಿನ್ನದ ಪದಕದೊಂದಿಗೆ

5) ಕವಿ ಮುದ್ದಣ ಪ್ರಶಸ್ತಿ : ಸೂಡದಲ್ಲಿ ಜರಗಿದ ಯಕ್ಷಕವಿ ಸಮ್ಮೇಳನದಲ್ಲಿ

6) ಮಾದರಿ ಶಿಕ್ಷಕ ಪ್ರಶಸ್ತಿ : ವಿದ್ಯಾ ಇಲಾಖೆಯಿಂದ

7) ಸಕ್ಕಟ್ಟು ಪ್ರಶಸ್ತಿ : ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ ಪ್ರತಿಷ್ಠಾನ ಇವರಿಂದ

ಸನ್ಮಾನಗಳು

1) ಹಲವಾರು ಸಂಘ–ಸಂಸ್ಥೆಗಳಿಂದ (ಯಕ್ಷಗಾನ ಮೇಳಗಳು, ಯಕ್ಷಗಾನ ಸಂಘಗಳು, ರೋಟರಿ, ಜೇಸಿ ಮುಂತಾದವು)

2) ಸಾಹಿತ್ಯ ಸಮ್ಮೇಳನಗಳಲ್ಲಿ :– ಕಾಂತಾವರ ಕನ್ನಡ ಸಂಘ, ಜಿಲ್ಲಾ ಮತ್ತು ತಾಲೂಕು ಮಟ್ಟದ ಸಮ್ಮೇಳನದಲ್ಲಿ

3) ಅಭಿಮಾನಿ ಬಳಗದವರಿಂದ :– ಮುಂಬಯಿ, ಕಾಸರಗೋಡು, ಬೆಂಗಳೂರು, ಮೈಸೂರು, ಧಾರವಾಡ, ದಾವಣಗೆರೆ, ಮಂಗಳೂರು, ಉಡುಪಿ ಮೊದಲಾದೆಡೆಗಳಿಂದ

ಕಂದಾವರ ರಘುರಾಮ ಶೆಟ್ಟಿ (ಸಂಕ್ಷಿಪ್ತ ಪರಿಚಯ)

1) ಜನನ ತಾರೀಕು :– 15–11–1936 (ಸರಕಾರಿ ದಾಖಲೆ 12–3–36)

2) ಹುಟ್ಟೂರು : ಕುಂದಾಪುರ ತಾಲೂಕು ಬಳ್ಕೂರು ಗ್ರಾಮದ ಕಂದಾವರ

3) ತಂದೆ : ಕರ್ಕಿ ಸದಿಯಣ್ಣ ಶೆಟ್ಟಿ

4) ತಾಯಿ : ಕಂದಾವರ ಪುಟ್ಟಮ್ಮ ಶೆಡ್ತಿ

5) ಪ್ರಾಥಮಿಕ ವಿದ್ಯಾಭ್ಯಾಸ : ಬಳ್ಕೂರು, ಹಟ್ಟಿಯಂಗಡಿ, ಬಸ್ರೂರು

6) ಪ್ರೌಢಶಿಕ್ಷಣ : ಬೋರ್ಡ್ ಹೈಸ್ಕೂಲು, ಕುಂದಾಪುರ

7) ಶಿಕ್ಷಕ ತರಬೇತಿ :– ಬುನಾದಿ ಶಿಕ್ಷಣ ತರಬೇತಿ ಶಾಲೆ, ಮಂಗಳೂರು

8) ಶಿಕ್ಷಕನಾಗಿ ದುಡಿದ ಸಂಸ್ಥೆ :– ನೇತಾಜಿ ಹಿರಿಯ ಪ್ರಾಥಮಿಕ ಶಾಲೆ, ಕಂಡ್ಲೂರು

9) ಸೇವಾ ಅವಧಿ :– ಸಹಾಯಕ ಶಿಕ್ಷಕನಾಗಿ 33 ವರ್ಷ
ಮುಖ್ಯ ಶಿಕ್ಷಕನಾಗಿ 2 ವರ್ಷ

10) ರಂಗಭೂಮಿ :– ನೂರಾರು ನಾಟಕಗಳಲ್ಲಿ ಹಾಸ್ಯ ನಟನಾಗಿ ಅಭಿನಯ
ಕಂಪೆನಿ ನಾಟಕಗಳಲ್ಲಿ ಗೌರವ ನಟನಾಗಿ ಅಭಿನಯ.

11) ಯಕ್ಷಗಾನ ರಂಗ : ಭಾಗವತನಾಗಿ, ಅರ್ಥಧಾರಿಯಾಗಿ,
ವೇಷಧಾರಿಯಾಗಿ, ಪ್ರಸಂಗಕರ್ತೃನಾಗಿ

12) ಸಾಹಿತ್ಯ ರಂಗ : ನಾಟಕ ಪ್ರಸಂಗ, ಶಿಶುಗೀತೆ,
ಅಭಿನಯಗೀತೆ ಕಥೆ, ಕವನಗಳು

13) ಇತರ ಸೇವೆ : ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ಅಧ್ಯಕ್ಷನಾಗಿ
ಒಂದು ಅವಧಿ ಸೇವೆ (3 ವರ್ಷ)

14) ಇತರ ಹವ್ಯಾಸಿ : ಪುರಾಣ ಪ್ರವಚನದಲ್ಲಿ ವಾಚಕನಾಗಿ ಹಾಗೂ
ಪ್ರವಚನಕಾರನಾಗಿ ಸೇವೆ.

ಕಂದಾವರ ರಘುರಾಮ ಶೆಟ್ಟಿ ಅಭಿನಂದನಾ ಸಮಿತಿ, ಬಸ್ರೂರು

ಗೌರವಾಧ್ಯಕ್ಷರು : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ, ಶಾಸಕರು, ಕುಂದಾಪುರ

ಅಧ್ಯಕ್ಷರು : ಶ್ರೀ ಬಿ. ಅಪ್ಪಣ್ಣ ಹೆಗ್ಡೆ, ಬಸ್ರೂರು

ಉಪಾಧ್ಯಕ್ಷರು : ಶ್ರೀ ಪೊಲ್ಯ ಉಮೇಶ ಶೆಟ್ಟಿ, ಮುಂಬಯಿ

ಕಾರ್ಯದರ್ಶಿ : ಡಾ॥ ಕಿಶೋರ ಕುಮಾರ ಶೆಟ್ಟಿ, ಹಕ್ಲಾಡಿ

ಜೊತೆ ಕಾರ್ಯದರ್ಶಿ : ಶ್ರೀ ಚಂದ್ರ ಬಿ., ಕಂಡ್ಲೂರು

ಕೋಶಾಧಿಕಾರಿ : ಡಾ॥ ಮನೋಜ ಕುಮಾರ ಶೆಟ್ಟಿ, ನೂಜಾಡಿ

ಅಭಿನಂದನಾ ಗ್ರಂಥ ಕೆಂದಾವರೆ ಪ್ರಕಾಶನ ಸಮಿತಿ:

ಗೌರವಾಧ್ಯಕ್ಷರು : ಶ್ರೀ ಜಯಪ್ರಕಾಶ ಹೆಗ್ಡೆ, ಮಾಜಿ ಸಂಸದರು, ಉಡುಪಿ

ಅಧ್ಯಕ್ಷರು : ಶ್ರೀ ಬಿ. ಎಂ. ಸುಕುಮಾರ ಶೆಟ್ಟಿ, ಬೆಳ್ವಾಲ

ಉಪಾಧ್ಯಕ್ಷರು : ಡಾ॥ ಬೆಳ್ಳಿಪಾಡಿ ಸತೀಶ ರೈ, ಮೈಸೂರು

ಕಾರ್ಯದರ್ಶಿ : ಶ್ರೀ ಪಿ. ಕಿಶನ್ ಹೆಗ್ಡೆ, ಬೈಲೂರು

ಜೊತೆ ಕಾರ್ಯದರ್ಶಿ : ಶ್ರೀ ದಿವಾಕರ ಶೆಟ್ಟಿ, ಬಸ್ರೂರು

ಕೋಶಾಧಿಕಾರಿ : ಶ್ರೀ ವಿಜಯ ಕುಮಾರ ಶೆಟ್ಟಿ, ನೂಜಾಡಿ

ಸಂಪಾದಕ ಮಂಡಳಿ ಸದಸ್ಯರು:

ಪ್ರೊ. ರಾಧಾಕೃಷ್ಣ ಶೆಟ್ಟಿ, ಬಸ್ರೂರು

ಪ್ರೊ. ಎಸ್. ವಿ. ಉದಯಕುಮಾರ ಶೆಟ್ಟಿ, ಮಣಿಪಾಲ

ಡಾ। ಶುಭಾ ಮರವಂತೆ, ಶಿವಮೊಗ್ಗ

ಶ್ರೀ ಸಿದ್ಧಕಟ್ಟೆ ವಿಶ್ವನಾಥ ಶೆಟ್ಟಿ



ಕಂದಾವರ –75 ರ ಸಂಭ್ರಮ






ಯಕ್ಷಗಾನ : ಭದ್ರಾಯು ಚರಿತ್ರೆಯಲ್ಲಿ ವೃದ್ಧ ಬ್ರಾಹ್ಮಣನಾಗಿ ಕಂದಾವರದವರು



ಕುಂದಾಪುರ ಯಕ್ಷಗಾನ ಸಪ್ತಾಹದಲ್ಲಿ



ತೋನ್ಸೆ ಕಾಂತಪ್ಪ ಮಾಸ್ತರ್ ಜನ್ಮಶತಾಬ್ದಿ ಕವಿ ಗಾಯನ ಗೋಷ್ಠಿಯಲ್ಲಿ
ಡಾ। ವೈ. ಚಂದ್ರಶೇಖರ ಶೆಟ್ಟಿಯವರೊಂದಿಗೆ



ಅಂಪಾರಿನಲ್ಲಿ ನಡೆದ ಯಕ್ಷಗಾನ ತಾಳಮದ್ದಲೆಯಲ್ಲಿ
ಜೋಷಿ, ಕುಂಬ್ಳೆಯವರೊಂದಿಗೆ ಕಂದಾವರದವರು



ಉಡುಪಿ ಪರ್ಯಾಯ ಮಠದವರಿಂದ ಸನ್ಮಾನ



ಕುಂದಾಪುರದಲ್ಲಿ ನಡೆದ “ಸಾಂಸ್ಕೃತಿಕ ಸೌರಭ”ದಲ್ಲಿ ಎಂ.ಎಂ.ಹೆಗ್ಡೆ, ಅರಾಟೆಯವರೊಂದಿಗೆ ಕಂದಾವರದವರು



ಕಂಡ್ಲೂರಿನಲ್ಲಿ ನಡೆದ ಕಂದಾವರ-75, ಸನ್ಮಾನ ಸಮಾರಂಭ



ಉಡುಪಿಯಲ್ಲಿ ನಡೆದ ತಾಳಮದ್ದಲೆ ಸಪ್ತಾಹದಲ್ಲಿ



ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಸನ್ಮಾನ



ಶ್ರೀರಾಮ ಕಾಂಚನಿ ಕಲಾಕೇಂದ್ರ ನಡೆಸಿಕೊಟ್ಟ ಸನ್ಮಾನ ಮತ್ತು ಬಗ್ವಾಡಿ ಮೇಳದ ಯಕ್ಷಗಾನದಲ್ಲಿ ಕಂದಾವರ, ವಾದಿರಾಜ ಭಟ್, ಕುಮುಟ ಹಾಗೂ ಆರಾಟೆ

"ಮುಂದಿನ ತಲೆಮಾರು"



ಕಂದಾವರ ರಘುರಾಮ ಶೆಟ್ಟರ ಪುತ್ರ ಡಾ। ಮನೋಜ್ ಕುಮಾರ್ ಹೇಮರಥ ಪಾತ್ರದಲ್ಲಿ



"ಕನ್ಯಾದಾನ" ಪುತ್ರಿ ಶೈಲಜಾ ವಿವಾಹ ಸಮಾರಂಭ

ಶುಭಾಶಯಗಳೊಂದಿಗೆ,



ಬಸ್ರೂರು ಶ್ರೀ ಗಣೇಶ್ ಪಡಿಯಾರ್

ಡೆಂಟಲ್ ಲ್ಯಾಬ್ & ಕ್ಲಿನಿಕ್

ಬೆಂಗಳೂರು

ಬಸ್ರೂರು ಶ್ರೀ ಹರೀಶ್ ಪಡಿಯಾರ್

ಬೆಂಗಳೂರು

ಹಾಗೂ **ಸಹೋದರರು**

ದಶಮಿ ಸಂಪುಟಕ್ಕೊಂದು ಸೇಸೆಯಿಂದ

ಕಂದಾವರ ರಘುರಾಮ ಶೆಟ್ಟರ ರಚನೆಗಳಲ್ಲಿ ರಂಗದೃಷ್ಟಿ ಸ್ಫುಟವಾಗಿದ್ದು ಇಡಿಯ ಪ್ರದರ್ಶನದ ಚೌಕಟ್ಟು, ಹಾಡುವಿಕೆ, ರಸವೈವಿಧ್ಯ, ವೇಷಗಳ ಅವಕಾಶ, ಒಟ್ಟು ಸಮತೋಲ, ನಾಟಕೀಯ ನಡೆ ಇವುಗಳನ್ನು ಗಮನಿಸಿ ಅವರು ರಚನೆಗಳನ್ನು ನೀಡಿದ್ದಾರೆ. ಪಾತ್ರ ಚಿತ್ರಣ, ಸನ್ನಿವೇಶ ಚಿತ್ರಣಗಳಿಗೆ ಗಮನವಿತ್ತಿದ್ದಾರೆ. ವಸ್ತುವಿನ ಸಾಮರ್ಥ್ಯ, ಶಕ್ತಿಗಳಿಗೆ ಹೊಂದಿಕೊಂಡು ಈ ಹತ್ತು ಪ್ರಸಂಗಗಳಲ್ಲಿ ತಾರತಮ್ಯವಿರುವುದು ಸಹಜ. ಚಿತ್ರಾವತಿ, ಶೂದ್ರತಪಸ್ವಿನಿ, ವಸುವರಾಂಗಿ, ಸೀತಾಪಾರಮ್ಯಗಳು ವಿಶಿಷ್ಟವಾದ ರಚನೆಗಳೆನ್ನಬಹುದು. ಆಧುನಿಕ ರಂಗದ ಅವಶ್ಯಕತೆಯಿಂದ ಪ್ರಸಂಗಕರ್ತನು ಹೇಗೆ ಒದ್ದಾಟಕ್ಕೊಳಗಾಗುತ್ತಾನೆ ಎಂಬುದಕ್ಕೂ ಇಲ್ಲಿಯ ರಚನೆಗಳಲ್ಲಿ ಪುರಾವೆಗಳಿವೆ. ಶೂದ್ರತಪಸ್ವಿನಿಯಲ್ಲಿ ರೂಪಕವೊಂದರಲ್ಲೂ, ಅಂಜನ ದೃಶ್ಯದಲ್ಲೂ ಸಾಂಪ್ರದಾಯಿಕ ಯಕ್ಷಗಾನದ ವಸ್ತು, ವೇಷಗಳನ್ನು ತಂದಿರುವ ರೀತಿ, ಹಾಗಾದರೂ ಅದನ್ನುಳಿಸುವ ಯೋಚನೆಗಳು, ರಂಗಭೂಮಿಯು ಓರ್ವ ಕವಿಯ ಮೂಲಕ ಕಂಡುಕೊಳ್ಳುವ ಹೊಸ, ಹೊಸ ದಾರಿಗಳಿಗೆ ಸಾಕ್ಷಿಯಾಗಿವೆ. ಇದೇ ರೀತಿ ಪಾತ್ರ ಕಲ್ಪನೆ, ಕಥಾಪರಿವರ್ತನೆಗಳಲ್ಲಿ ಪ್ರಸಂಗಕರ್ತರ ಪ್ರತಿಭೆ, ದೃಷ್ಟಿ ವೈಶಾಲ್ಯಗಳೂ ವ್ಯಕ್ತವಾಗಿವೆ.

ಸರಳತೆ ಇಲ್ಲಿಯ ರಚನೆಗಳ ಮುಖ್ಯ ಗುಣ. ಗೇಯವಾದ ಕಾವ್ಯವು ಸರಳವಾಗಿದ್ದು ಹಾಡಿದೊಡನೆ ಮನಸ್ಸಿಗೆ ಇಳಿಯುವಂತಿರಬೇಕು. ಅಂತೆಯೇ ಬಹುಪಾಲು ಸಾಮಾನ್ಯ ಮಟ್ಟದ ವಿದ್ಯೆಯಿರುವ ಕಲಾವಿದ, ಪ್ರೇಕ್ಷಕರಿಗೆ ಇದು ಸುಲಭವಾಗಿ ಅರ್ಥವಾಗಬೇಕು ಎಂಬ ಧೋರಣೆಯಿರಿಸಿ ರಚಿತವಾಗಿವೆ ಇಲ್ಲಿಯ ಪದ್ಯಗಳು. ಸರಳವಾಗಿ ಮನಮುಟ್ಟುವಂತೆ ಪದ್ಯರಚನೆ ಮಾಡುವುದು ಸುಲಭದ ಕೆಲಸವಲ್ಲ. ಈ ಕಠಿನ ಕಲೆ ಶ್ರೀ ಶೆಟ್ಟರಿಗೆ ಸಿದ್ಧಿಸಿದೆ. ಸರಳತೆ, ಕಾವ್ಯಸೌಂದರ್ಯ ಮೇಳೈಕೆಗೆ ಇವರ ಪದ್ಯಗಳು ಮಾದರಿಯಾಗಿವೆ.

ಡಾ| ಎಂ. ಪ್ರಭಾಕರ ಜೋಶಿ
ಯಕ್ಷಗಾನ ವಿದ್ವಾಂಸರು, ವಿಮರ್ಶಕರು
ಮಂಗಳೂರು